ಕರ್ನಾಟಕ ವಿಧಾನ ಪರಿಷತ್ತು

**ಶುಕ್ರವಾರ, 04 ನೇ ಮಾರ್ಚ್ 2016**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ *10 ಗಂಟೆ 25 ನಿಮಿಷಕ್ಕೆ* ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:–** ನನ್ನದೊಂದು ಅಧಿಕೃತ ಕೆಲಸ ಇದೆ. ಘನತೆವೆತ್ತ ರಾಜ್ಯಪಾಲರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರವು ಆಂಗ್ಲ ಭಾಷೆಯಲ್ಲಿದ್ದು, ಅದನ್ನು ಹಾಗೆಯೇ ಓದುತ್ತೇನೆ, ಅದು ಎಲ್ಲರಿಗೂ ಅರ್ಥವಾಗುತ್ತದೆಂದು ಭಾವಿಸುತ್ತೇನೆ.

Governor's letter dated 3rd March, 2016 was read as follows:-

*"Dear Chairman,*

*A factual error is identified in the Governor's Address held on 29-02-2016. The Government has sent a proposal for issue of a Corrigendum to the said error.*

*In the paragraph 35 of the Address, the following sentence needs correction:-*

***"From the time my Government took charge, we have provided individual toilets to 55 lakh families, of which 21 lakh toilets have been built this year."***

*To be corrected as follow:-*

***"When my Government took charge, we faced a challenge to provide individual toilets to 55 lakh families, of which a record 21 lakh toilets have been built till December 2015."***

*The same be announced and laid on the table for incorporating in the proceedings and official records of the House."*

ಈ ರೀತಿ ಪತ್ರವನ್ನು ಬರೆದಿದ್ದು, ಇದರ ಕಾಪಿಯನ್ನು ಎಲ್ಲರಿಗೂ ಒದಗಿಸುತ್ತೇನೆ. ಅವರು ಹೇಳುವಂತೆ 35ನೇ ಪ್ಯಾರಾಗ್ರಾಫ್‌ನಲ್ಲಿರುವ ತಪ್ಪನ್ನು ತಿದ್ದುಪಡಿ ಮಾಡಿಕೊಂಡು ಓದಿ ಅಧಿಕೃತವಾಗಿ ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಬೆಂಗಳೂರಿನಲ್ಲಿ ರೈತರ ಮೇಲೆ ಅಮಾನುಷವಾಗಿ ಲಾಠಿಚಾರ್ಜ್ ನಡೆದಿದ್ದು, ಅವರು ಕೈಕಾಲುಗಳನ್ನು ಮುರಿದುಕೊಂಡಿದ್ದಾರೆ. ರೈತರು ಏನು ಕೇಳುವುದಕ್ಕೆ ಬಂದಿದ್ದರು?

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಗಲಾಟೆ ಮಾಡಬೇಕೆಂಬ ಉದ್ದೇಶದಿಂದ ದಿನವೂ ಬರುತ್ತಾರೆ.

**ಶ್ರೀ ರಾಮಚಂದ್ರಗೌಡ:–** ಕೋಲಾರದ ಚಿಕ್ಕಬಳ್ಳಾಪುರದ ರೈತರು ಬೆಂಗಳೂರಿಗೆ ಬಂದರೆ ಲಾಠಚಾರ್ಜ್ ಮಾಡಿದರೆ ಸರ್ಕಾರ ಏನು......

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನನ್ನ ಕರ್ತವ್ಯ ಇದೆ, ನಾನು ಮಾಡಬೇಕು. ನಾನೂ ಹೇಳುತ್ತೇನೆ.

(ಗೊಂದಲ)

**ಸಭಾಪತಿಯವರು:–** ಆಯಿತು, ಸಭೆಯ ಗಮನಕ್ಕೆ ತಂದಿದ್ದೀರಿ. ನಿನ್ನೆ ದಿವಸ ಇದರ ಬಗ್ಗೆ ಮಾನ್ಯ ಗೃಹ ಸಚಿವರಿಂದ ಹೇಳಿಕೆ ಕೊಡಿಸುವ ಬಗ್ಗೆ ಮಾನ್ಯ ಸಭಾನಾಯಕರು ಹೇಳಿದ್ದರು. ಮಾನ್ಯ ಗೃಹ ಸಚಿವರು ಸದನದಲ್ಲಿದ್ದು, ಅವರು ತಯಾರಿದ್ದರೆ ಹೇಳಿಕೆ ನೀಡಬಹುದು.

**ಶ್ರೀ ಎಸ್.ಆರ್. ಪಾಟೀಲ್:–** ನಿನ್ನೆ ರೈತರ ಬಗ್ಗೆ ನಡೆದ ಘಟನೆ ಬಗ್ಗೆ ನಿನ್ನೆಯೇ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡಿದ್ದರಿಂದ ವಿಧಿವತ್ತಾಗಿ ಸಂಪೂರ್ಣವಾದ ಮಾಹಿತಿಗಳೊಂದಿಗೆ ಬೆಳಿಗ್ಗೆ ಸದನ ಪ್ರಾರಂಭವಾದ ತಕ್ಷಣ ಹೇಳಿಕೆ ಕೊಡಿಸುವ ಬಗ್ಗೆ ಹೇಳಿದ್ದೆನು. ಆ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಹೊರಟ್ಟಿಯವರು ಮಾತನಾಡುವಾಗ ಮಾತಿನ ಭರಾಟೆಯಲ್ಲಿ ನಾನೂ ಸ್ವಲ್ಪ ಜೋರಾಗಿ ಮಾತನಾಡಿದೆನು. ನಾನು ಸಭಾನಾಯಕನಾಗಿ ಟೆಂಪರ್ ಕಳೆದುಕೊಳ್ಳಬಾರದು. ತಾಳ್ಮೆ ಕಳೆದುಕೊಳ್ಳಬಾರದು.

**ಶ್ರೀ ರಾಮಚಂದ್ರಗೌಡ:-** ರೈತರಿಗೆ ಜೋರಾಗಿ ಹೊಡೆದು ಕೈಕಾಲು ಮುರಿದಿದೆ. ರಾತ್ರಿ ಟಿ.ವಿ ಯಲ್ಲಿ ನೋಡಿದರೆ ಗೊತ್ತಾಗುತ್ತಿತ್ತು. ರಾಜ್ಯದ ರೈತರ ಮೇಲೆ ಅಮಾನುಷವಾಗಿ ಪೊಲೀಸ್‌ರು ವರ್ತಿಸಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರು ಹಿರಿಯರು ಹಾಗೂ ಅವರ ಮೇಲೆ ಗೌರವ ನನಗೆ ಇದೆ. ನಾನು ಹೇಳುವುದಕ್ಕೆ ಅವಕಾಶ ಕೊಡಬೇಕು. ನಿನ್ನೆ ಮೇಲಿಂದ ಮೇಲೆ ಕೇಳಿದ ಸಂದರ್ಭದಲ್ಲಿ ನಾನು ಜೋರಾಗಿ ಮಾತನಾಡಿದೆ. ನನಗೂ ರೈತರ ಬಗ್ಗೆ ಕಳಕಳಿ, ಚಿಂತನೆ ಇದೆ. ಆದ್ದರಿಂದ ಇವತ್ತು ಸದನ ಪ್ರಾರಂಭವಾದ ತಕ್ಷಣ ಸಂಪೂರ್ಣವಾದ ಮಾಹಿತಿ ಕೊಡಿಸುತ್ತೇನೆ. ಅರ್ಧಂಬರ್ಧ ಮಾಹಿತಿ ಕೊಡುವುದರಿಂದ ತಪ್ಪು ಸಂದೇಶ ಹೋಗಬಾರದು. ಮತ್ತು ಹಕ್ಕುಚ್ಯುತಿ ಆಗುವ ಪ್ರಸಂಗ ಇರುತ್ತದೆ ಎನ್ನುವ ಸಂದರ್ಭದಲ್ಲಿ ನಾನು ಜೋರಾಗಿ ಮಾತನಾಡಿದೆ. ಆದರೂ ನನಗೆ ಸ್ವಲ್ಪ ಬೇಜಾರು ಅನಿಸಿ ನಿದ್ದೆಯೂ ಹತ್ತಲಿಲ್ಲ. ಅದಕ್ಕೆ ಆ ವಿಚಾರವಾಗಿ ನಾನು ವಿಷಾಧವನ್ನು ವ್ಯಕ್ತ ಮಾಡುತ್ತೇನೆ. ಮಾನ್ಯ ಗೃಹ ಸಚಿವರು ಸುಧೀರ್ಘವಾದ ವರದಿಯನ್ನು ನೀಡುತ್ತಾರೆ.

**ದಿನಾಂಕ 3/3/16ರಂದು ರೈತ ಸಂಘಟನೆಯ ವತಿಯಿಂದ ಹಮ್ಮಕೊಂಡಿದ್ದ ಪ್ರತಿಭಟನೆ ರ‍್ಯಾಲಿ ಸಂದರ್ಭದಲ್ಲಿ ನಡೆದ ಘಟನೆಯ ಕುರಿತು ಹೇಳಿಕೆ**

**ಶ್ರೀ ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಿನ್ನೆ ನಡೆದ ಘಟನೆ ಬಗ್ಗೆ ಈ ಸದನದಲ್ಲಿ ನಾನೊಂದು ಹೇಳಿಕೆಯನ್ನು ಕೊಡುತ್ತಿದ್ದು, ವಸ್ತುಸ್ಥಿತಿ ಏನು ನಡೆಯಿತು ಮತ್ತು ಏಕೆ ಇದು ನಡೆಯಿತು ಎಂದು ಹೇಳುತ್ತೇನೆ.

(ಹೇಳಿಕೆಯನ್ನು ಲಗತ್ತಿಸಿದೆ)

(ಮುಂದು)

(65) 04-03-2016 10.40 MD-VK

(ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ.ಪರಮೇಶ್ವರ್ (ಮುಂದು):-**

ಮಾನ್ಯ ಸಭಾಪತಿಯವರೆ, ಇದು ಆಗಬಾರದಾಗಿತ್ತು. ನಾವು ವಿಷಯವನ್ನು ತಿಳಿದ ತಕ್ಷಣ ಇದಕ್ಕೂ ಮೊದಲು ಶಾಶ್ವತ ನೀರಾವರಿ ಹೋರಾಟ ಸಮಿತಿಯವರು ಏನು ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದರು, ಮಾನ್ಯ ಮುಖ್ಯಮಂತ್ರಿಗಳೇ ಅಲ್ಲಿಗೆ ಹೋಗಿ ಅವರ ಜೊತೆಗೆ ಮಾತನಾಡಿಕೊಂಡು ಬಂದಿದ್ದಾರೆ ಮತ್ತು ನೀರಾವರಿ ಸಚಿವರು ಸಹ ಹೋಗಿ ಮಾತನಾಡಿಕೊಂಡು ಆ ಭಾಗದಲ್ಲಿ ಅವರಿಗೆ ನೀರನ್ನು ಕೊಡುವುದಕ್ಕೆ ಸರ್ಕಾರ ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎನ್ನುವುದರ ಬಗ್ಗೆಯೂ ಸಹ ಅವರಿಗೆ ವಿವರಣೆ ನೀಡಿ ಬಂದಿರುತ್ತಾರೆ. ಆದರೂ ಸಹ ಅವರು ಪುನಃ ಪ್ರತಿಭಟನೆಯನ್ನು ಮಾಡಬೇಕೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ನಾನು 6ನೇಯ ತಾರೀಖಿನಂದು ಸಭೆಯನ್ನು ಕರೆಯುತ್ತೇನೆ. ಈಗ ಅಧಿವೇಶನ ನಡೆಯುತ್ತಿದೆ, ಹಾಗಾಗಿ ನಾನು ತಮ್ಮೆಲ್ಲರನ್ನು ಕರೆಯುತ್ತೇನೆಂದು ಹೇಳಿದಾಗ್ಯೂ ಸಹ ಅವರು ಇಂತಹ ಒಂದು ಪ್ರತಿಭಟನೆಯನ್ನು ಮಾಡಿದ್ದಾರೆ. ಪ್ರತಿಭಟನೆ ಮಾಡತಕ್ಕಂಥಾದ್ದನ್ನು ನಾವು ಹತ್ತಿಕ್ಕುವ ಪ್ರಯತ್ನವನ್ನು ಮಾಡಲಿಲ್ಲ. ಆ ರೀತಿ ಇದ್ದರೆ ನಾವು ಅವರನ್ನು ದೇವನಹಳ್ಳಿಯ ಹತ್ತಿರವೇ ತಡೆಯಬಹುದಾಗಿತ್ತು ಮತ್ತು ಅವರನ್ನು ಅಲ್ಲಿಂದಲೇ ವಾಪಸ್ ಕಳುಹಿಸತಕ್ಕಂಥ ಪ್ರಯತ್ನವನ್ನು ಸಹ ಮಾಡಬಹುದಾಗಿತ್ತು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆಯನ್ನು ಮಾಡುವುದಕ್ಕೋಸ್ಕರ ನಾವು ಅವಕಾಶವನ್ನು ಕೊಡಬೇಕು ಎನ್ನುವಂಥ ಉದ್ದೇಶಕ್ಕಾಗಿ ನಾವು ಅವರಿಗೆ ಫ್ರೀಡಂ ಪಾರ್ಕ್‌ಗೆ ಬನ್ನಿ, ಅಲ್ಲಿಗೆ ಸಂಬಂಧಪಟ್ಟ ನಮ್ಮ ಸಚಿವರುಗಳು ಬಂದು ತಮ್ಮ ಜೊತಗೆ ಮಾತನಾಡುತ್ತಾರೆ, ವಿವರಣೆಯನ್ನು ನೀಡುತ್ತಾರೆ ಎಂದು ಹೇಳಿದಾಗ್ಯೂ ಸಹ ಅವರು ಈ ರೀತಿಯಾಗಿ ನಡೆದುಕೊಂಡಿದ್ದಾರೆ. ಸುಮಾರು 300-400ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಬಂದು ದಾರಿ ಉದ್ದಕ್ಕೂ ಸಾರ್ವಜನಿಕ ವಸ್ತುಗಳನ್ನು ಹಾಳು ಮಾಡಿ, ಬೆಳಿಗ್ಗೆ 11.30 ಗಂಟೆಯಿಂದ ಸಂಜೆ 6.00 ಗಂಟೆಯವರೆವಿಗೂ ಅಲ್ಲಿ ರಸ್ತೆಯಲ್ಲಿ ಪ್ರತಿಭಟನೆಯನ್ನು ಮಾಡಿ, ರಸ್ತೆಯಲ್ಲಿದ್ದ ಟ್ರ್ಯಾಫಿಕ್‌ನ್ನು ತಡೆದು ಎಲ್ಲಾ ರೀತಿಯಲ್ಲಿಯೂ ಸಹ ಅವರು ಸಾರ್ವಜನಿಕರಿಗೆ ತೊಂದರೆಯನ್ನು ನೀಡಿ ಬಂದಿದ್ದಾರೆ. ಅದಕ್ಕಾಗಿ ನಾನು ಈ ಹೇಳಿಕೆಯ ಮುಖಾಂತರ ವಸ್ತು ಸ್ಥಿತಿಯನ್ನು ಈ ಸದನದ ಮುಂದೆ ಮಂಡಿಸುತ್ತಿದ್ದೇನೆ. ಶಾಲೆಗೆ ಹೋಗತಕ್ಕಂಥ ಮಕ್ಕಳು, ಆ್ಯಂಬುಲೆನ್ಸ್‌ಗಳು ಮತ್ತು ಏರ್‌ಪೋರ್ಟ್‌ಗೆ ಹೋಗುವ ಸುಮಾರು 350ಕ್ಕೂ ಹೆಚ್ಚು ಜನರು ತಾವು ಹೋಗಬೇಕಾದ ಫ್ಲೈಟ್‌ಗಳನ್ನು ಮಿಸ್ ಮಾಡಿಕೊಂಡಿದ್ದಾರೆ. ಶಾಲೆಗೆ ಹೋಗುವ ಮಕ್ಕಳಿಗೆ ತೊಂದರೆಯಾಗಿದೆ. ಪೊಲೀಸ್ ಇಲಾಖೆಯವರು ಎಲ್ಲಾ ರೀತಿಯಿಂದ ಸಂಯಮದಿಂದ ವರ್ತಿಸಿದ್ದಾರೆ. ನಾವು ಅವರಿಗೆ ಸೂಚನೆಯನ್ನು ಕೊಟ್ಟಿದ್ದೆವು. ರೈತರು ಪ್ರತಿಭಟನೆಯಲ್ಲಿ

ಹೇಳುವುದನ್ನು ಅವರು ಕೇಳಲಿ. ಪ್ರತಿಭಟನೆಯನ್ನು ಮಾಡುವುದಕ್ಕೆ ನಾವು ಅವರಿಗೆ ಯಾವುದೇ ಅಡೆತಡೆಯನ್ನು ಮಾಡಬಾರದು ಎಂದು ಬಹಳ ಸಂಯಮದಿಂದ ವರ್ತಿಸಿದಾಗ್ಯೂ ಕೂಡ ಅವರು ಈ ರೀತಿಯಾಗಿ ನಡೆದುಕೊಂಡಿದ್ದಾರೆ. ಆದಾಗ್ಯೂ ಸಹ ನಾವು ಲಾಠಿ ಚಾರ್ಜ್ ಮಾಡುವುದು, ಅಶ್ರುವಾಯಿ ಸಿಡಿಸುವುದು ಈ ರೀತಿ ಅವರಿಗೆ ಬೇರೆ ಯಾವುದನ್ನೂ ಸಹ ಮಾಡದೇ ಅವರನ್ನು ನಾವು ವಿಂಡ್ಸರ್ ಮ್ಯಾನರ್ ಬ್ರಿಡ್ಜ್‌ವರೆವಿಗೂ ಬಿಟ್ಟುಕೊಂಡು ಬಂದಿದ್ದೇವೆ. ಆದರೂ ಸಹ ಅವರು ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆಂದು ವಿಧಾನ ಸೌಧಕ್ಕೆ ತಿರುಗುವಂಥ ಸಂದರ್ಭದಲ್ಲಿ ನಮ್ಮ ಪೋಲೀಸರು ಅವರನ್ನು ತಡೆದಿದ್ದಾರೆ. ಸ್ವಲ್ಪ ಒತ್ತಡ ಮಾಡಿ ಅವರನ್ನು ತಡೆದು ಚದುರಿಸಿದ್ದಾರೆ ವಿನಃ ಯಾವುದೇ ರೀತಿಯಲ್ಲಿ ಅವರಿಗೆ ತೊಂದರೆಯನ್ನು ಮಾಡಿಲ್ಲ. ನಾಲ್ಕೈದು ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅವರು ಹೊರರೋಗಿಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು ಹೋಗಿದ್ದಾರೆ. ಶ್ರೀ ಕೋಡಿಹಳ್ಳಿ ಚಂದ್ರಶೇಖರ್‌ರವರನ್ನು, ಶ್ರೀ ಆಂಜನೇಯ ರೆಡ್ಡಿಯವರನ್ನು ಮತ್ತು 11 ಜನರನ್ನು ಏನು ವಶಕ್ಕೆ ತೆಗೆದುಕೊಂಡಿದ್ದೇವೆ, ಅವರನ್ನು ನಾವು ಅರೆಸ್ಟ್ ಮಾಡಲಿಲ್ಲ. ಅವರನ್ನು ವಶಕ್ಕೆ ತೆಗೆದುಕೊಂಡು, ಅವರ ಅನಿಸಿಕೆಗಳನ್ನು ಕೇಳಿಕೊಂಡು ಅವರನ್ನು ಬಿಟ್ಟಿದ್ದಾರೆ. ಆದರೂ ಸಹ ರಾತ್ರಿ 11.00 ಗಂಟೆಯ ನಂತರ ನೀವು ಮನೆಗೆ ಹೋಗಿ ಎಂದು ಹೇಳಿದರೂ ಸಹ ಅವರು ಇನ್ನು ಕೂಡ ಅಲ್ಲಿಯೇ ಇದ್ದಾರೆಂದು ನನಗೆ ಸುದ್ದಿ ಬಂದಿದೆ. ಅವರುಗಳು ಇನ್ನು ಸಹ ಅಲ್ಲಿಯೇ ಇದ್ದಾರೆ. ಅವರನ್ನು ನಾವು ಯಾವುದೇ ರೀತಿಯಲ್ಲಿ ಅರೆಸ್ಟ್ ಮಾಡಿಲ್ಲ. ಇದಿಷ್ಟು ವಿಚಾರಗಳನ್ನು ನಾನು ಸದನದ ಮುಂದೆ ಇಡುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಹಿನ್ನೆಲೆಯಲ್ಲಿ ಇವತ್ತು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಬಂದ್ ಆಚರಿಸಲಾಗುತ್ತಿದೆ. ಅಲ್ಲಿ ಇವತ್ತು ಶಾಲೆಗಳು ಮತ್ತು ಕಛೇರಿಗಳು ಬಂದ್ ಆಗಿವೆ. ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಲು ಇಷ್ಟಪಡುತ್ತೇನೆ. 1983ರಲ್ಲಿ ಸನ್ಮಾನ್ಯ ಗುಂಡೂರಾವ್‌ರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಇದೇ ರೀತಿಯಾಗಿ ಸುಮಾರು 5,000–6,000 ಲಾರಿಗಳು ಬೆಂಗಳೂರಿಗೆ ಎಲ್ಲಾ ರಸ್ತೆಗಳಿಂದ ಬಂದವು. ಆವತ್ತು ಯಾವುದೇ ಗಲಾಟೆಗಳು ಆಗಲಿಲ್ಲ. ಇವತ್ತು ಸುಮಾರು 200 ರಿಂದ 250 ಟ್ರ್ಯಾಕ್ಟರ್‌ಗಳು ಬಂದಾಗ ಸಮಾಧಾನಕರವಾಗಿ ಅವರನ್ನು ಫ್ರೀಡಂ ಪಾರ್ಕ್‌ಗೆ ಹೋಗಲು ಬಿಟ್ಟು ಬಿಟ್ಟಿದ್ದರೆ ಅಲ್ಲಿ ಯಾವುದೇ ಗಲಾಟೆಗಳಾಗುತ್ತಿರಲಿಲ್ಲ. ಎಲ್ಲೋ ಒಂದು ಕಡೆ ಅಸ್ತವ್ಯಸ್ತವಾಗಿದೆ ಎನ್ನುವುದು ನನ್ನ ಒಂದು ಭಾವನೆಯಾಗಿದೆ.

ಈ ರೀತಿ ಅಸ್ತವ್ಯಸ್ತವಾಗಿರುವಂಥಾದ್ದಕ್ಕೆ ತಾವು ಮಂತ್ರಿಗಳು ಏನು ಮಾಡುತ್ತೀರಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡ ಜೋಪಾನವಾಗಿ, ಜಾಗೃತವಾಗಿ ಕೆಲಸ ಮಾಡಬೇಕಾದುದು ಅವರ ಹೊಣೆಯಾಗಿರುತ್ತದೆ. ಅನಾವಶ್ಯಕವಾಗಿ ಅವರಿಗೆ ಬೆದರಿಸುವುದು ಮಾಡಬಾರದು. ಈಗ ಅಷ್ಟೊಂದು ಪ್ರಮಾಣದ ಟ್ರ್ಯಾಕ್ಟರ್‌ಗಳು ನಗರಕ್ಕೆ ಬಂದವು. ಅವರನ್ನು ತಡೆಯಲೇಬೇಕೆಂದರೆ ಟ್ರ್ಯಾಕ್ಟರ್‌ನ ಡ್ರೈವರ್‌ಗಳನ್ನು ಅರೆಸ್ಟ್ ಮಾಡಬಹುದಾಗಿತ್ತು. ಆಗ ಗಾಡಿಗಳು ಹೋಗುತ್ತಿರಲಿಲ್ಲ. ಬುದ್ಧಿವಂತಿಕೆಯಿಂದ ಏನಾದರೂ ಮಾಡಬಹುದಾಗಿತ್ತು. ಈ ರೀತಿಯಾಗಿ ಮಾಡದೇ ನಿನ್ನೆಯ ದಿವಸ ನಾವು ಟಿವಿಯಲ್ಲಿ ನೋಡಿದಂತೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ನೋಡಿರಬಹುದು. ಪೊಲೀಸರು ಅಮಾನುಷವಾಗಿ ವರ್ತನೆ ಮಾಡಿದ್ದಾರೆ. ಬೆಂಗಳೂರಿನ ಪೊಲೀಸರು ಈ ರೀತಿ ವರ್ತನೆ ಮಾಡಿರುವುದನ್ನು ನನ್ನ ಜೀವನದಲ್ಲಿ ನಾನು ನೋಡಿಲ್ಲ. ನಿನ್ನೆಯ ದಿವಸ ಪೊಲೀಸರು ಮಾಡಿದ ವರ್ತನೆ ಇದುವರೆವಿಗೂ ಸಹ ಬೆಂಗಳೂರಿನಲ್ಲಿ ಯಾವಾಗಲೂ ಸಹ ಮಾಡಿಲ್ಲ? ಏಕೆ ಈ ರೀತಿಯಾಗಿ ಮಾಡಿದರು? ಮಗುವಿಗೆ ಹಸಿವಾದಾಗ ಅಳುತ್ತದೆ. ಹಸಿವಾಗಿ ಅಳುತ್ತಿದೆ ಎಂದರೆ ಅದಕ್ಕೆ ಬಡಿದರೆ ಅದು ಸರಿ ಹೋಗುತ್ತದೆಯೇ. ಹಸಿವಿಗಾಗಿ ಅದಕ್ಕೆ ಹಾಲು ಕುಡಿಸಬೇಕು. ನೀವು ಬಡಿದರೆ ಆ ಮಗು ಸುಮ್ಮನೆ ಇರುತ್ತದೆಯೇ? ಪ್ರತಿಭಟನಾಕಾರರು ಕುಡಿಯುವ ನೀರನ್ನು ಕೇಳುವುದಕ್ಕಾಗಿ ಬಂದಿದ್ದಾರೆ ಹೊರತು ಬೇರೆ ಯಾವುದೇ ಉದ್ದೇಶಕ್ಕಾಗಿ ಬಂದಿಲ್ಲ. ಅವರಿಗೆ ಬೇಕಾದಷ್ಟು ಸಾರಿ ಉತ್ತರವನ್ನು ಕೊಟ್ಟಿದ್ದೀರಿ, ಆದರೆ ಅವರಿಗೆ ಸಮಾಧಾನವಾಗಿಲ್ಲ. ಹಸಿವಾದಾಗ ಮಗು ಅಳುತ್ತಲೇ ಇರುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ರೈತರು ಕುಡಿಯುವುಕ್ಕಾಗಿ, ನೀರಾವರಿಗಾಗಿ ನೀರನ್ನು ಕೇಳುವುದಕ್ಕೆ ನಮ್ಮ ವಿರೋಧವಿಲ್ಲ. ಅವರು ನೀರನ್ನು ಕೇಳಬಾರದೆಂದು ನಾವು ಹೇಳುವುದಿಲ್ಲ, ಅವರು ನೀರನ್ನು ಕೇಳಬೇಕು. ಕುಡಿಯುವುಕ್ಕೆ ಮತ್ತು ಅವರ ಜಮೀನುಗಳಿಗೆ ನೀರು ಬೇಕಾಗುತ್ತದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ನದಿಗಳು ಸಹ ಇಲ್ಲ. ಕುಡಿಯುವ ನೀರು ಬಹಳ ಅವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು. ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆನ್ನುವುದು ನಿನ್ನೆ ಅಥವಾ ಮೊನ್ನೆಯಿಂದ ಪ್ರಾರಂಭವಾಗಿರುವ ಹೋರಾಟವಲ್ಲ. ಈ ಹೋರಾಟ ಬಹಳ ವರ್ಷಗಳಿಂದ ನಡೆಯುತ್ತಿದೆ. ಈಗಾಗಲೇ ನಾವು ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ

ನೀರನ್ನು ಒದಗಿಸಬೇಕೆಂದು ಎತ್ತಿನಹೊಳೆ ಯೋಜನೆಯನ್ನು ಪ್ರಾರಂಭ ಮಾಡಿ ಆಗಿದೆ. ಅನೇಕ ಸಾರಿ ರೈತ ಮುಖಂಡರುಗಳ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿ ಅವರಿಗೆ ತಿಳಿಸಿದ್ದೇವೆ. ಅದು ಕುಡಿಯುವ ನೀರಿಗಾಗಿ ಎಷ್ಟು ಅನುಕೂಲವಾಗಿದೆ ಎನ್ನತಕ್ಕಂಥಾದ್ದನ್ನು ಸಹ ನಾವು ಅವರಿಗೆ ತಿಳಿಸಿದ್ದೇವೆ. ಈಗ ಎತ್ತಿನಹೊಳೆ ಪ್ರಾಜೆಕ್ಟ್‌ನ್ನು ನೇತ್ರಾವತಿ ತಿರುವು ಯೋಜನೆ ಎಂದು ತಪ್ಪು ಕಲ್ಪನೆಯಿಂದ ಹೇಳುತ್ತಿದ್ದಾರೆ, ಇದು ನೇತ್ರಾವತಿ ನದಿ ತಿರುವು ಯೋಜನೆ ಅಲ್ಲ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ, ತಾವು ಸಹ ಒಳ್ಳೆಯ ವಿಚಾರವನ್ನು ಹೇಳುತ್ತಿದ್ದೀರಿ. ಸಾರ್ವಜನಿಕರಲ್ಲಿ ತಾವು ನೇರವಾಗಿ ಹೇಳಿದ್ದೀರಿ. ನೇತ್ರಾವತಿ ತಿರುವು ಯೋಜನೆ ನಮ್ಮ ಮುಂದೆ ಇಲ್ಲ ಎನ್ನುವುದನ್ನು ತಾವು ಇನ್ನೊಮ್ಮೆ, ಮತ್ತೊಮ್ಮೆ ಹೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದು ನೇತ್ರಾವತಿ ತಿರುವು ಯೋಜನೆ ಅಲ್ಲ. ಏಕೆಂದರೆ ಈ ಬಗ್ಗೆ ಕರಾವಳಿ ಪ್ರದೇಶದ ಜನರಿಗೆ ತಪ್ಪು ಕಲ್ಪನೆ ಇದೆ. ಮಾನ್ಯ ಗಣೇಶ್ ಕಾರ್ಣಿಕ್‌ರವರು ಸದನದಲ್ಲಿದ್ದಾರೆ. ಅವರಿಗೂ ಸಹ ಗೊತ್ತಿದೆ. ನೇತ್ರಾವತಿ ತಿರುವನ್ನು ವಿರೋಧ ಮಾಡತಕ್ಕಂಥಾದ್ದರಲ್ಲಿ ಅವರು ಸಹ ಒಬ್ಬರು. ಆದರೆ ಇಲ್ಲಿಗೆ ನೀರಾವರಿಯನ್ನು ಕೊಡಿ ಎಂದು ಹೇಳುತ್ತಾರೆ.

**ಕ್ಯಾ. ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮುಗಿಸಲಿ, ಮಧ್ಯದಲ್ಲಿ ಚರ್ಚೆ ಬೇಡ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಗಣೇಶ್ ಕಾರ್ಣಿಕ್‌ರವರು ಮಿಲಿಟರಿಯಲ್ಲಿದ್ದವರು. He is a gentleman. ಅವರೇಕೆ ಹೀಗೆ ಮಧ್ಯದಲ್ಲಿ ಮಾತನಾಡುತ್ತಾರೆ?

**ಶ್ರೀ ಎಸ್.ಆರ್.ಪಾಟೀಲ್:–** ನೀವು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದವರು. ನೀವು ಕಾನೂನು ಮುರಿದು ಮಾತನಾಡಿದರೆ ಹೇಗೆ?

(65) 04-03-2016 10.40 MD-VK

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದು ನೇತ್ರಾವತಿ ತಿರುವು ಯೋಜನೆ ಅಲ್ಲ ಮತ್ತು ಎತ್ತಿನಹೊಳೆ ಯೋಜನೆಯಿಂದ ಕರಾವಳಿ ತೀರದ ಜನರಿಗೆ ಏನೂ ತೊಂದರೆಯಾಗುವುದಿಲ್ಲ. ಮಳೆಗಾಲದಲ್ಲಿ ಅದರಲ್ಲಿ 24 ಟಿಎಂಸಿ ನೀರನ್ನು ಲಿಫ್ಟ್ ಮಾಡಿ ಅದನ್ನು ಕೊಳವೆಯ ಮೂಲಕ ತೆಗೆದುಕೊಂಡು ಬಂದು ಇಲ್ಲಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ಇದೆ. ಎತ್ತಿನಹೊಳೆ ಯೋಜನೆ ನೀರಾವರಿಗೆ ಸಂಬಂಧಿಸಿದ್ದಲ್ಲ. ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಕೊಡಬೇಕೆನ್ನತಕ್ಕಂಥಾದ್ದಿದೆ. ಮಾನವೀಯತೆಯ ದೃಷ್ಟಿಯಿಂದ ಕೊಡಬೇಕೆಂದು ಇದು ಸುಮಾರು 13,000 ಕೋಟಿ ರೂಪಾಯಿಯ ಒಂದು ಯೋಜನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ, ಇದು ಎತ್ತಿನಹೊಳೆ ಯೋಜನೆ ಬಗ್ಗೆ ಇರುವ ಚರ್ಚೆ ಅಲ್ಲ. ನಿನ್ನೆಯ ದಿವಸ ನಡೆದ ಘಟನೆಯ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಮಾಡಿದೆ. ಅದರ ಬಗ್ಗೆ ಸ್ಪಷ್ಟೀಕರಣವಾಗಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಹಿನ್ನೆಲೆ ಗೊತ್ತಿರಲಿ ಎಂದು ನಾನು ಹೇಳುತ್ತಿದ್ದೇನೆ. ಎತ್ತಿನಹೊಳೆ ಯೋಜನೆ ಸುಮಾರು 13,000 ಕೋಟಿ ರೂಪಾಯಿಯ ಯೋಜನೆಯಾಗಿದೆ.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

**ಶ್ರೀ ಸಿದ್ಧರಾಮಯ್ಯ**(ಮುಂದು)

ಇದು ಮೂರ್ನಾಲ್ಕು ವರ್ಷಗಳ ಯೋಜನೆಯಾಗಿದೆ. ಸದನದಲ್ಲಿ ನಮ್ಮ ನೀರಾವರಿ ಸಚಿವರೂ ಕೂಡ ಇದ್ದಾರೆ . . .

**ಕ್ಯಾ.ಗಣೇಶ್ ಕಾರ್ಣಿಕ್:-** ಅದರ ಬಗ್ಗೆ ನಮಗೆ ಅನೇಕ ಸಂದೇಹಗಳಿವೆ. . . .

**ಶ್ರೀ ಸಿದ್ಧರಾಮಯ್ಯ:-** ಆ ಕುರಿತು ಆಮೇಲೆ ಚರ್ಚೆ ಮಾಡೋಣ. ನಿಯಮ 330ರ ಅಡಿಯಲ್ಲಿ ಚರ್ಚೆ ಮಾಡಿದ ಮೇಲೆ ಅದಕ್ಕೆ ಉತ್ತರ ಕೊಡುತ್ತೇವೆ. . .

**ಕ್ಯಾ.ಗಣೇಶ್ ಕಾರ್ಣಿಕ್:-** ಎತ್ತಿನಹೊಳೆ feasible project ಅಲ್ಲ . . .(ಗೊಂದಲ)

**ಶ್ರೀ ಸಿದ್ಧರಾಮಯ್ಯ:-** ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಪುನಃ ಪುನಃ ಅದನ್ನೇ ಹೇಳಿದರೆ ಏನು ಪ್ರಯೋಜನ? . . .(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, . . .

**ಸಭಾಪತಿಗಳು:-** ಮುಖ್ಯಮಂತ್ರಿಗಳು ಮಾತನಾಡುವಾಗ ಏಕೆ ಮಧ್ಯ ಬಾಯಿ ಹಾಕುತ್ತೀರಿ? ಸ್ವಲ್ಪ ಗಮನಿಸಿ. ಸದನದಲ್ಲಿ ಮುಖ್ಯಮಂತ್ರಿಗಳು ಬಂದು ಒಂದು ವಿಷಯ ಪ್ರಸ್ತಾಪ ಮಾಡುತ್ತಿದ್ದರೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವುದಾದರೆ ಪ್ರಜಾಪ್ರಭುತ್ವ ಸರಿಯಾದ ಹಾದಿಯಲ್ಲಿ ಹೋಗುವುದಿಲ್ಲ. ಅವರು ಮಾತನಾಡಲಿ. ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಇರುವ ಹಾಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಅವಕಾಶ ಇರುತ್ತದೆ. ಆದರೆ ಮುಖ್ಯಮಂತ್ರಿಗಳು ಮಾತನಾಡುವಾಗ ಆಕಡೆಯಿಂದ ಈಕಡೆಯಿಂದ ಮಾತನಾಡುವುದು ಸರಿಯಲ್ಲ. ಅವರಿಗೆ ಯಾರ ಸಪೋರ್ಟ್ ಕೂಡ ಬೇಕಾಗಿಲ್ಲ. ಅವರು ಕುಳಿತುಕೊಂಡ ನಂತರ ಬೇಕಾದರೆ ಮಾತನಾಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಗಳೆ, ತಮಗೆ ಧನ್ಯವಾದಗಳು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಆಕಡೆಯವರೂ ಕೂಡ ಮಾತನಾಡಬಾರದೆಂದು ಹೇಳಿ . . .

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಹೊರಟ್ಟಿಯವರೇ, you are the senior most member of this House. ಇಡೀ ದೇಶದಲ್ಲೇ ನಿಮ್ಮಷ್ಟು ದೀರ್ಘ ಕಾಲ ಸದನದ ಸದಸ್ಯರಾಗಿರುವವರು ಇಲ್ಲ ಎಂದು ನಾನು ಭಾವಿಸುತ್ತೇನೆ. ದಯವಿಟ್ಟು ಕೇಳಿ. ಮಾನ್ಯ ಸಭಾಪತಿಗಳೆ, ಎತ್ತಿನಹೊಳೆ ಪ್ರಾಜೆಕ್ಟ್ ಬಗ್ಗೆ, ಕರಾವಳಿ ಪ್ರದೇಶದವರ ಜೊತೆ, ಶಾಶ್ವತ ನೀರಾವರಿ ಹೋರಾಟ ಸಮಿತಿಯವರ ಜೊತೆ, ರೈತ ಸಂಘದ ಜೊತೆ, ಹೀಗೆ ಅನೇಕರ ಜೊತೆ ಚರ್ಚೆಯಾಗಿದೆ. ನಾನೂ ಚರ್ಚೆ ಮಾಡಿದ್ದೇನೆ, ಮಾನ್ಯ ಎಂ.ಬಿ.ಪಾಟೀಲರು ಕೂಡ ಅನೇಕ ಸಲ ಚರ್ಚೆ ಮಾಡಿದ್ದಾರೆ. ಆ ಭಾಗದ ಜನಪ್ರತಿನಿಧಿಗಳ ಜೊತೆ ಕೂಡ ಚರ್ಚೆಯಾಗಿದೆ. ಕರಾವಳಿ ಪ್ರದೇಶದ ಜನಪ್ರತಿನಿಧಿಗಳ ಜೊತೆ ಕೂಡ ಚರ್ಚೆಯಾಗಿದೆ. ಮಾನ್ಯ ಕಾರ್ಣಿಕ್‌ರವರೂ ಕೂಡ ಇದ್ದರು. ಅಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. . .

**ಕ್ಯಾ.ಗಣೇಶ್ ಕಾರ್ಣಿಕ್:-** ಚರ್ಚೆಯಾಗಿದೆ, ಆದರೆ ಅದರಲ್ಲಿ ಕೆಲವು ಸಂದೇಹಗಳಿವೆ. (ಗೊಂದಲ) ನಮ್ಮ ಸಂದೇಹಗಳನ್ನು ನೀವು ಪರಿಹಾರ ಮಾಡಿಲ್ಲ . . .

**ಶ್ರೀ ಸಿದ್ಧರಾಮಯಯ್ಯ:-** ನಾನೀಗ ಆ ಒಟ್ಟು ವಿವರಗಳನ್ನು ಹೇಳುವುದಕ್ಕೆ ಹೋಗುತ್ತಿಲ್ಲ, ಅದರ ಹಿನ್ನೆಲೆಯನ್ನು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:-ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಡಿ . . . .

**ಶ್ರೀ ಸಿದ್ಧರಾಮಯ್ಯ:-** ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಸರ್ಕಾರ ಇದ್ದಾಗಲೇ ಈ ಯೋಜನೆ ಮಾಡಿದ್ದು. ಮಾನ್ಯ ಸದಾನಂದಗೌಡರವರ ಕಾಲದಲ್ಲೇ ಈ ಪ್ರಾಜೆಕ್ಟ್ ಪ್ರಾರಂಭವಾಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರ ಕಾಲದಲ್ಲೇ ಪ್ರಾಜೆಕ್ಟ್ ತಯಾರಾಗಿತ್ತು. ಎತ್ತಿನಹೊಳೆ ಪ್ರಾಜೆಕ್ಟ್ ತಯಾರಾಗಿದ್ದೇ ನಿಮ್ಮ ಕಾಲದಲ್ಲಿ. ಕರಾವಳಿ ಪ್ರದೇಶದವರಾದ ನಿಮ್ಮ ಸದಾನಂದಗೌಡರವರ ಕಾಲದಲ್ಲಿ ಎತ್ತಿನಹೊಳೆ ಪ್ರಾಜೆಕ್ಟ್ ಪ್ರಾರಂಭವಾಯಿತು. . .

**ಸಭಾಪತಿಗಳು:-** ಮುಖ್ಯಮಂತ್ರಿಗಳು ಮಾತನಾಡುವಾಗ ಮಧ್ಯ ಎದ್ದುನಿಂತು ಮಾತನಾಡಬೇಡಿ.

**Sri SIDDARAMAIAH:-** If you want to ask any question, please ask after my statement.

**Mr. CHAIRMAN:-** This is not the way. ದಯಮಾಡಿ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಮಾತನಾಡುವಾಗ ಮಧ್ಯೆ ಬಾಯಿ ಹಾಕಬೇಡಿ. ಅವರದು ಮುಗಿದ ಮೇಲೆ ನೀವೇನಾದರೂ ಕೇಳುವುದಿದ್ದರೆ ನನಗೆ ಹೇಳಿ, ಸಮಯ ಇದ್ದರೆ, ಸರಿಯಾಗಿದ್ದರೆ ಅವಕಾಶ ಕೊಡುತ್ತೇನೆ. ದಯವಿಟ್ಟು ಮುಖ್ಯಮಂತ್ರಿಗಳು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬೇಡಿ. It is not correct. ಅವರಿಗೆ ಮಾತನಾಡಲು ಸ್ವಾತಂತ್ರ್ಯ ಇದೆ, ಅವರು ಮಾತನಾಡುತ್ತಾರೆ. ಈಕಡೆಯವರೂ ಅಷ್ಟೇ, ಮುಖ್ಯಮಂತ್ರಿಗಳಿಗೆ ಸಪೋರ್ಟ್ ಮಾಡುವುದಕ್ಕೆ ಎದ್ದು ನಿಂತು ಮಧ್ಯೆ ಮಾತನಾಡಬೇಡಿ, ನಮ್ಮ ಮುಖ್ಯಮಂತ್ರಿಗಳು strong ಇದ್ದಾರೆ, efficient ಆಗಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಅವರಿಗೆ ನಿಮ್ಮ ಸಪೋರ್ಟ್ ಅವಶ್ಯಕತೆ ಇಲ್ಲ, ದಯಮಾಡಿ ಯಾರೂ ಮಾತನಾಡಬೇಡಿ.

**ಶ್ರೀ ಸಿದ್ಧರಾಮಯ್ಯ:-**ಮಾನ್ಯ ಸಭಾಪತಿಗಳೆ, ನಮಗೆ ನಿಮ್ಮ ಸಪೋರ್ಟ್ ಇದ್ದರೆ ಸಾಕು. ಮಾನ್ಯ ಸಭಾಪತಿಗಳೆ, ಈ ಯೋಜನೆ ರೂಪಿಸಿದ್ದು ಹಿಂದಿನ ಬಿಜೆಪಿ ಸರ್ಕಾರದವರು. ಎಷ್ಟು yield ಬರುತ್ತದೆ ಎಂದು ಅವರೇ ಲೆಕ್ಕ ಹಾಕಿದ್ದರು. ಆಗ ಮಾನ್ಯ ಸದಾನಂದಗೌಡರಿದ್ದರು. ಟೆಂಡರ್ ಕೂಡ ಅವರೇ ಕರೆದಿದ್ದರು. ನಾವು ಅದಕ್ಕೆ ಅಡಿಗಲ್ಲು ಹಾಕಿ ಕೆಲಸ ಪ್ರಾರಂಭ ಮಾಡಿದ್ದೇವೆ. ಈಗ ಅದಕ್ಕೆ ಸುಮಾರು ರೂ. 1680 ಕೋಟಿ ಖರ್ಚಾಗಿದೆ. ಅದನ್ನು ಆದಷ್ಟು ಜಾಗ್ರತೆ ಮುಗಿಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಏಕೆಂದರೆ ಆ ಭಾಗದ ಜನರಿಗೆ ಕುಡಿಯುವುದಕ್ಕೆ ನೀರು ಕೊಡಬೇಕು. ಬೋರ್‌ವೆಲ್‌ಗಳು ಬತ್ತಿ ಹೋಗಿವೆ, ಒಂದೂವರೆ ಸಾವಿರ ಅಡಿ ಕೊರೆದು ನೀರು ಪಡೆಯಬೇಕಾಗುತ್ತದೆ, ಅಲ್ಲಿ ನೀರು ಸಿಕ್ಕಿದರೂ ಕೂಡ 2-3 ತಿಂಗಳಲ್ಲಿ ಮತ್ತೆ ಬತ್ತಿ ಹೋಗುತ್ತಿವೆ. ಇದರ ಜೊತೆ, ಬೆಂಗಳೂರಿನಿಂದ sewage water ಅನ್ನ treatment ಮಾಡಿ ಕೋಲಾರ ಜಿಲ್ಲೆಯ ಕೆರೆಗಳನ್ನು ತುಂಬಿಸುವ ಯೋಜನೆ ಇದ್ದು ಅದರ ಒಂದು Detailed Project Report ತಯಾರು ಆಗಿ ಮೈನರ್ ಇರಗೇಷನ್‌ನವರು ಟೆಂಡರ್

ಕರೆಯುತ್ತಿದ್ದಾರೆ. ಚಿಕ್ಕಬಳ್ಳಾಪುರದವರದ್ದೂ ಒಂದು proposal ಇದೆ. ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಕೆರೆಗಳಿಗೆ ನೀರು ತುಂಬಿಸಬೇಕು, ಕುಡಿಯುವ ನೀರನ್ನು ಕೊಡಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಬೇರೆ ಯಾವುದೇ ನೀರಿನ ಮೂಲಗಳು ಈ ಪ್ರದೇಶಗಳಿಗೆ ಇಲ್ಲ. Indian Institute of Science ನವರು, ಇದರಿಂದ ಎಷ್ಟು ಸಿಗುತ್ತದೆ, ಇದು viable ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ವರದಿ ಕೊಟ್ಟಿದ್ದಾರೆ, ಅವರಿಂದಲೂ ರಿಪೋರ್ಟ್ ತೆಗದುಕೊಂಡಿದ್ದೇವೆ. National Institute of Hydrology ಅವರಿಂದಲೂ ವರದಿಯನ್ನು ತೆಗೆದುಕೊಂಡಿದ್ದೇವೆ. ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಪ್ರಾರಂಭ ಮಾಡಿದ್ದೇವೆ. ನಾನು ಮೊನ್ನೆ ಚುನಾವಣಾ ಪ್ರಚಾರಕ್ಕೆ ಚಿಕ್ಕಬಳ್ಳಾಪುರಕ್ಕೆ ಹೋಗಿದ್ದೆ. ಚಿಕ್ಕಬಳ್ಳಾಪುರ ರಸ್ತೆಯಲ್ಲಿ ಹೋರಾಟ ಸಮಿತಿಯವರಿದ್ದರು. ನಾನು ಹೋಗಿ ಭೇಟಿ ಮಾಡಿದೆ, ಅವರ ಅಹವಾಲನ್ನು ಕೇಳಿ, ಚುನಾವಣೆ ಆದಮೇಲೆ ನಿಮ್ಮನ್ನು ಕರೆಯುತ್ತೇನೆ, ನಿಮ್ಮ ಜೊತೆ ಚರ್ಚೆ ಮಾಡುತ್ತೇನೆ, ನಿಮಗಿರುವ ಸಂದೇಹಗಳನ್ನು ಪರಿಹಾರ ಮಾಡುತ್ತೇವೆ ಎಂದು ಹೇಳಿದೆ. ಅದಕ್ಕೆ ಅವರು, ಆಯಿತು, ನೀವು ಸಭೆ ಕರೆಯಿರಿ ಎಂದು ಒಪ್ಪಿಕೊಂಡು ಹೋದರು. ನಾನು 6ನೇ ದಿನಾಂಕದಂದು ಅವರ ಜೊತೆ ಮೀಟಿಂಗ್ ಇಟ್ಟುಕೊಂಡಿದ್ದೇನೆ. ನಾನು, ಮೀಟಿಂಗ್ ಕರೆದ ಮೇಲೆ ಬಹುಶಃ ಅವರೇನು ಟ್ರ್ಯಾಕ್ಟರ್ ಮೂಲಕ ಪ್ರತಿಭಟನೆ ಮಾಡಬಯಸಿದ್ದರೋ ಅದನ್ನು ಕೈಬಿಡುತ್ತಾರೆ ಎಂದು ಕೊಂಡಿದ್ದೆ. ನಮ್ಮ ಪೊಲೀಸ್‌ನವರಿಗೆ ಸುಮಾರು 2 ಸಾವಿರ ಟ್ರ್ಯಾಕ್ಟರ್‌ಗಳು ಬೆಂಗಳೂರಿಗೆ ಬರುತ್ತವೆ ಎನ್ನುವ ಮಾಹಿತಿ ಸಿಕ್ಕಿತು. ಟ್ರ್ಯಾಕ್ಟರ್‌ಗಳು ಬಂದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ, ಆಂಬ್ಯೂಲೆನ್ಸ್‌ಗಳಿಗೆ, ಶಾಲಾ ವಾಹನಗಳಿಗೆ, ಸರ್ಕಾರಿ ವಾಹನಗಳಿಗೆ ತೊಂದರೆ ಆಗುತ್ತದೆ, ಬಳ್ಳಾರಿ ರಸ್ತೆಯ ದೇವನಹಳ್ಳಿ ಹತ್ತಿರ ಅಂತಾರಾಷ್ಟ್ರೀಯ ಏರ್‌ಪೋರ್ಟ್ ಇದೆ, ಅದಕ್ಕೂ ತೊಂದರೆ ಆಗುತ್ತದೆ, ಹಾಗೆ ಆಗಬಾರದು ಎನ್ನುವ ಉದ್ದೇಶದಿಂದ ಪೊಲೀಸ್ ಕಮೀಷನರ್‌ರವರು ಒಂದು ಆದೇಶ ಹೊರಡಿಸಿದ್ದರು. ಹಾಲು ಮತ್ತು ತರಕಾರಿ ತರುವಂತಹ ವಾಹನಗಳು ಬಿಟ್ಟು ಬೇರೆ ಟ್ರ್ಯಾಕ್ಟರ್‌ಗಳು ಬರಬಾರದು ಮತ್ತು ಟ್ರಕ್ಸ್ ಬರಬಾರದು ಎಂದು ಕಾನೂನುರೀತ್ಯ ಆದೇಶ ಹೊರಡಿಸಿದ್ದಾರೆ. ಇವರ ಪ್ರತಿಭಟನೆಯನ್ನು ಹತ್ತಿಕ್ಕಬೇಕು ಅಥವಾ ಪ್ರತಿಭಟನೆ ಮಾಡುವುದನ್ನು ತಡೆಗಟ್ಟಬೇಕು, ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ನಡೆದುಕೊಳ್ಳಬೇಕು ಎನ್ನುವುದು ಉದ್ದೇಶವಲ್ಲ. ಮಾನ್ಯ ಸಭಾಪತಿಗಳೆ, ನಾನೂ ಕೂಡ ರೈತ ಸಂಘದಿಂದ ಬಂದವನು. ನಾನು ರೈತನ ಮಗ. ಹಳ್ಳಿಯಿಂದ ಬಂದಂಥವನು. 1980 ರಿಂದ 1983ರವರೆಗೆ ರೈತ ಸಂಘದಲ್ಲೇ ಮಾನ್ಯ ನಂಜುಂಡಸ್ವಾಮಿಯವರ ಜೊತೆಯಲ್ಲೇ ಇದ್ದೆ. ರೈತರ ಪರವಾಗಿ ಹೋರಾಟ ಮಾಡಿದ್ದೇನೆ, ರೈತರ

ಸಮಸ್ಯೆ ಕುರಿತು ಹೋರಾಟ ಮಾಡಿದ್ದೇನೆ. ಯಾವತ್ತೂ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಹಕ್ಕುಗಳನ್ನು ಮೊಟಕು ಮಾಡಬೇಕೆಂದು ಕನಸು ಮನಸಿನಲ್ಲಿ ಯೋಚನೆ ಮಾಡಿದವನಲ್ಲ, ಅದಕ್ಕೆ ವಿರೋಧ ಮಾಡಿದವನೂ ಅಲ್ಲ. ಮಾನ್ಯ ಸಭಾಪತಿಗಳೆ, ಇದರಲ್ಲಿ ಯಾರು ರಾಜಕಾರಣ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರು ನಮ್ಮನ್ನು ಭೇಟಿ ಮಾಡಿ ಚರ್ಚೆ ಮಾಡುವುದಕ್ಕೆ ಒಪ್ಪಿಕೊಂಡಿದ್ದರು. ಇದರಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು. ಯಾರೂ ಕೂಡ ಇದನ್ನು ಮಾಡಬಾರದು. . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ನಾನು ಹೇಳಬಯಸುತ್ತಿರುವುದೇನೆಂದರೆ . . . . (ಗೊಂದಲ)

**ಶ್ರೀ ಸಿದ್ಧರಾಮಯ್ಯ:–** ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಬಗ್ಗೆ ಏನೂ ಮಾತನಾಡಿಲ್ಲ . . .

**ಸಭಾಪತಿಗಳು:–** ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳುವ ವಿಷಯದ ಬಗ್ಗೆ ನೋಟ್ ಮಾಡಿಕೊಳ್ಳಿ, ನಂತರ ಪ್ರಶ್ನೆ ಕೇಳಿ . . .(ಗೊಂದಲ)

**ಶ್ರೀ ಸಿದ್ಧರಾಮಯ್ಯ:–** ನೀವು ಏನು ಮಾತನಾಡಬೇಕೋ ಮಾತನಾಡಿ, you have every right to speak. We don’t come in your way and obstruct.

**Mr. CHAIRMAN:-** I will allow you to speak. But, not in the middle. ಮಧ್ಯದಲ್ಲಿ ಮಾತನಾಡಬೇಡಿ . . .

**ಶ್ರೀ ಸಿದ್ಧರಾಮಯ್ಯ:–** ಕುಂಬಳಕಾಯಿ ಕಳ್ಳ ಎಂದರೆ ನೀವೇಕೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತೀರಿ? ರಾಜಕೀಯ ಮಾಡಿದ್ದಾರೆ ಎಂದು ಹೇಳಿದ್ದೇನೆಯೇ ಹೊರತು, ಬಿಜೆಪಿಯವರು ರಾಜಕೀಯ ಮಾಡಿದರೂ ಎಂದು ನಾನು ಹೇಳಿದ್ದೇನೆಯೇ? ಅಥವಾ ಜೆಡಿಎಸ್‌ರವರು ರಾಜಕೀಯ ಮಾಡಿದರು ಎಂದು ಹೇಳಿದ್ದೇನೆಯೇ?

(ಮುಂದು . . .)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿದ್ದರಾಮಯ್ಯ:-** ಕುಂಬಳಕಾಯಿ ಕಳ್ಳ ಎಂದರೆ ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ? ನಾನು ಬಿಜೆಪಿಯವರು ಎಂದು ಹೇಳಿದ್ದೇನೆಯೇ? ಯಾರೂ ರಾಜಕೀಯ ಮಾಡಬಾರದು ಎಂದು ಹೇಳಿದ್ದೇನೆಯೇ ಹೊರತು ಬಿಜೆಪಿ ಎಂದಾಗಲಿ, ಜೆಡಿಎಸ್ ಎಂದಾಗಲಿ ಎಲ್ಲಾದರೂ ಹೇಳಿದ್ದೇನೆಯೇ? ನಾನು ಏನು ಹೇಳಲೇ ಇಲ್ಲ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವುದು, ಇದೆಲ್ಲಾ ಏಕೆ? ನೀವು ರಾಜಕೀಯ ಮಾಡಿದ್ದೀರಾ? ರಾಜಕೀಯ ಮಾಡಿಲ್ಲವೆಂದರೆ ಕುಳಿತುಕೊಳ್ಳಿ. ರಾಜಕೀಯ ಮಾಡುವವರಿಗೆ ನಾನು ಹೇಳಿರುವುದು, ಬೇರೆಯವರಿಗೆ ಅಲ್ಲ. ನಾನು ಯಾವ ಬಿಜೆಪಿ ಹೆಸರು ಹೇಳಲಿಲ್ಲ, ಜೆಡಿಎಸ್ ಹೆಸರು ಹೇಳಲಿಲ್ಲ. ಅದಕ್ಕೆ ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು? ನಾನು ಏನು ಹೇಳಲೇ ಇಲ್ಲ.

ಮಾನ್ಯ ಸಭಾಪತಿಯವರೇ, ನಾವು ಯಾವುದನ್ನೂ ಕೂಡ ಹತ್ತಿಕ್ಕುವಂತಹ ಪ್ರಯತ್ನ ಮಾಡಲಿಲ್ಲ. ಏಕೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು, ಪ್ರತಿಭಟನೆ ಮಾಡುವಂತಹ ಹಕ್ಕುಗಳಿರಬೇಕು. ಪ್ರತಿಭಟನೆ ಮಾಡತಕ್ಕಂಥದ್ದು, ಅಭಿಪ್ರಾಯ, ಭಿನ್ನಾಭಿಪ್ರಾಯ ಇರತಕ್ಕಂಥದ್ದು ಇವೆಲ್ಲವೂ ಕೂಡ ಪ್ರಜಾಪ್ರಭುತ್ವದ ಜೀವಾಳ. ಅವುಗಳನ್ನು ಹತ್ತಿಕ್ಕುವಂಥ ಪ್ರಯತ್ನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ವಾಹನಗಳನ್ನು ತರಬೇಡಿ ಎಂದು ದೇವನಹಳ್ಳಿಯ ಹತ್ತಿರವೇ ಪ್ರತಿಭಟನಕಾರರಿಗೆ ಪೊಲೀಸರು ಹೇಳಿದ್ದಾರೆ. ಆದರೆ ಅವರು ಬ್ಯಾರಿಕೇಡ್‌ಗಳೆಲ್ಲಾ ಮುರಿದು ತಳ್ಳಿಕೊಂಡು ಬಂದುಬಿಟ್ಟಿದ್ದಾರೆ. ಅಲ್ಲಿಯವರೆಗೂ ಬಿಟ್ಟುಕೊಂಡು ಬಂದಿದ್ದಾರೆ. ಮಧ್ಯ ದಾರಿಯಲ್ಲಿ ಹೇಳಿದ್ದಾರೆ. ಆಮೇಲೆ ಇನ್ನು ಎಲ್ಲಿಯವರೆಗೆ ಹೋಗಿದ್ದಾರೆಂದರೆ, ಪ್ಯಾಲೇಸ್ ಗ್ರೌಂಡ್‌ನಲ್ಲಿ ನೀವು ಟ್ರ್ಯಾಕ್ಟರ್‌ಗಳನ್ನೆಲ್ಲಾ ಬಿಟ್ಟುಬಿಡಿ, ಅಲ್ಲಿಂದ ನಡೆದುಕೊಂಡು ಫ್ರೀಡಂ ಪಾರ್ಕ್‌ಗೆ ಹೋಗಿ ಎಂದು ಹೇಳಿದ್ದಾರೆ. ಲೀಡರ್‌ಗಳಿಗೆಲ್ಲಾ ಹೇಳಿದ್ದಾರೆ. ಆಂಜನೇಯ ರೆಡ್ಡಿ ಎನ್ನುವವರು ಹೋರಾಟ ಸಮಿತಿಯ ಅಧ್ಯಕ್ಷರು, ಕೋಡಿಹಳ್ಳಿ ಚಂದ್ರಶೇಖರ್‌ರವರು ರಾಜ್ಯ ರೈತ ಸಂಘದ ಅಧ್ಯಕ್ಷರು, ಭೈರರೆಡ್ಡಿ ಎನ್ನುವವರು ಚಿಕ್ಕಬಳ್ಳಾಪುರದ ರೈತ ಸಂಘದ ಅಧ್ಯಕ್ಷರು, ಇವರೆಲ್ಲರಿಗೂ ಕೂಡ ಹೋಗಬೇಡಿ ಎಂದು ಹೇಳಿದ್ದಾರೆ. ಇಲ್ಲಿ ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಬೇಡಿ ಜನರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಪ್ರತಿಭಟನೆಕಾರರು ಟ್ರ್ಯಾಕ್ಟರ್‌ಗಳನ್ನೆಲ್ಲಾ ಅಡ್ಡಾದಿಡ್ಡಿಯಾಗಿ ರಸ್ತೆಗಳಲ್ಲಿ ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ. 12

ಗಂಟೆಯಿಂದ 6 ಗಂಟೆಯವರೆಗೆ ಅಲ್ಲಿ ಬಹಳ ತೊಂದರೆಯಾಗಿಬಿಟ್ಟಿದೆ. ಟ್ರಾಫಿಕ್ ಜಾಮ್‌ನಿಂದ ಸಾರ್ವಜನಿಕರಿಗೆಲ್ಲಾ ತೊಂದರೆ ಆಗಿದೆ, ಶಾಲೆಗೆ ಹೋಗತಕ್ಕಂಥ ಮಕ್ಕಳಿಗೆ ತೊಂದರೆ ಆಗಿದೆ, ಆಂಬ್ಯುಲೆನ್ಸ್‌ಗಳಿಗೆ, ಏರ್‌ಪೋರ್ಟ್‌ಗೆ ಹೋಗತಕ್ಕಂಥ ಪ್ರಯಾಣಿಕರಿಗೆಲ್ಲಾ ತೊಂದರೆಯಾಗಿದೆ. ಇಷ್ಟೆಲ್ಲಾ ಆದರೂ ಕೂಡ ಪೊಲೀಸ್‌ನವರು ಎಲ್ಲಿಯವರೆಗೆ ಅವರನ್ನು ತಡೆದುಕೊಂಡು ಬಂದಿದ್ದಾರೆಂದರೆ ಕೊನೆಯಲ್ಲಿ ವಿಂಡ್ಸರ್‌ಮ್ಯಾನರ್ ಹೋಟೆಲ್‌ವರೆಗೆ ತಳ್ಳಿಕೊಂಡು ನುಗ್ಗಿಕೊಂಡು ಬಂದಿದ್ದಾರೆ. ನಾವು ಬಹಳ ಸ್ಪಷ್ಟವಾಗಿ ಪೊಲೀಸ್‌ನವರಿಗೆ ಹೇಳಿದ್ದೇವೆ. ರೈತರು ಈ ದೇಶದ ಬೆನ್ನೆಲುಬು, ಅನ್ನದಾತರು, ಅವರು ಪ್ರತಿಭಟನೆ ಮಾಡಿದರೆ, ಹೋರಾಟ ಮಾಡಿದರೆ ಯಾವುದೇ ಕಾರಣಕ್ಕೂ ಬಲ ಪ್ರಯೋಗ ಮಾಡಬಾರದು. ಅವರ ಮೇಲೆ ಲಾಠಿ ಜಾರ್ಜ್ ಆಗಲಿ, ಗೋಲಿಬಾರ್ ಆಗಲಿ ಅಥವಾ ಇನ್ನೇನಾದರೂ ಆಗಲಿ ಮಾಡಬಾರದು ಎಂದು ಹೇಳಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಒಮ್ಮೆಯೂ ಕೂಡ ಅವರ ಮೇಲೆ ಗೋಲಿಬಾರ್ ಮಾಡತಕ್ಕಂಥ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ಹಿಂದಿನ ಸರ್ಕಾರದಲ್ಲಿ ಹಾವೇರಿಯಲ್ಲಿ ಗೋಲಿಬಾರ್ ನಡೆಯಿತು.

(ಗೊಂದಲ)

ಇವರಿಗೆ ನಡೆದದ್ದು ಹೇಳಬಾರದೇ? ಅಶ್ವತ್ ನಾರಾಯಣರವರೇ, ನಡೆದದ್ದು ಹೇಳಬಾರದೇ? ಗೋಲಿಬಾರ್ ಆಗಿರುವುದು ಸತ್ಯವೋ ಸುಳ್ಳೋ? ಹಾವೇರಿಯಲ್ಲಿ ಗೋಲಿಬಾರ್ ಆಗಿರುವುದು ಸತ್ಯವೋ ಸುಳ್ಳೋ?

**ಶ್ರೀ ಅಶ್ವತ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಇವರು ಏನು ಬೇಕಾದರೂ ಹೇಳಬಹುದೆ?

**ಶ್ರೀ ಸಿದ್ದರಾಮಯ್ಯ:-** ಇಬ್ಬರು ಸತ್ತಿರುವುದು ಸುಳ್ಳೋ ಸತ್ಯವೋ?

**ಶ್ರೀ ಗೋ.ಮಧುಸೂದನ್:-** ನರಗುಂದದಲ್ಲಿ ಆಗಿರುವುದನ್ನು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:-** ಅದನ್ನು ಹೇಳುತ್ತೇನೆ, ಕುಳಿತುಕೊಳ್ಳಿ. ಈ ರೀತಿಯೆಲ್ಲಾ ಮಾತನಾಡುತ್ತೀಯಾ ಎಂದು ಬಿಜೆಪಿಯವರು ಟಿಕೆಟ್ ತಪ್ಪಿಸಿಬಿಟ್ಟಿದ್ದಾರೆ. ನಿನಗೆ ವಿಧಾನ ಪರಿಷತ್ತಿಗೆ ಬರಬಾರದು ಎಂದು ತಪ್ಪಿಸಿಬಿಟ್ಟಿದ್ದಾರೆ, ನನಗೆ ಬಹಳ ನೋವಾಗುತ್ತಿದೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಸತ್ಯವನ್ನು ಹೇಳುವ ಹಾಗಿಲ್ಲ. ಅದನ್ನು ಮೆನ್‌ಷನ್ ಮಾಡುವ ಹಾಗಿಲ್ಲ, ಏನು ನಡೆಯಿತು ಎಂದು ಹೇಳುವ ಹಾಗಿಲ್ಲ ಎಂದರೆ ಹೇಗೆ? ಇವೆಲ್ಲಾ ಇತಿಹಾಸದಲ್ಲಿ ದಾಖಲಾಗಿಬಿಟ್ಟಿವೆ. ನಾನು ಹುಟ್ಟಿಸಿಕೊಂಡು ಹೇಳುತ್ತಿದ್ದೇನೆಯೇ? ನಡೆದಿರುವಂತಹ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಾವು ಇವತ್ತಿನವರೆಗೆ ರೈತರು, ವಿದ್ಯಾರ್ಥಿಗಳು, ಕಾರ್ಮಿಕರು ಚಳುವಳಿಗಳನ್ನು ಮಾಡಿದರೆ ಚಳುವಳಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಕಾನೂನು ರೀತಿಯಲ್ಲಿ ನೋಡಿಕೊಂಡಿದ್ದೇವೆ. ಸಂಯಮದಿಂದ ನಡೆದುಕೊಂಡಿದ್ದೇವೆ. ಪೊಲೀಸ್‌ನವರು ಬಹಳ ಅತ್ಯಂತ ಸಂಯಮದಿಂದ ನಿನ್ನೆಯೂ ಕೂಡ ನಡೆದುಕೊಂಡಿದ್ದಾರೆ. ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೂ ಸಂಯಮದಿಂದ ನಡೆದುಕೊಂಡಿದ್ದಾರೆ. ಎಲ್ಲೂ ಕೂಡ ಲಾಠಿ ಚಾರ್ಜ್ ಆಗಲಿ, ತೊಂದರೆಯಾಗಲಿ ಮಾಡಿಲ್ಲ. ಅಮಾನುಷವಾಗಿ ಹೊಡೆದುಬಿಟ್ಟಿದ್ದಾರೆಂದು ಮಾನ್ಯ ರಾಮಚಂದ್ರಗೌಡರು ಹೇಳಿದರು. ಈ ತಳ್ಳಾಟದಲ್ಲಿ ನೂಕಾಟದಲ್ಲಿ ಸ್ವಲ್ಪ ಆಗಿವೆ. ರಾಮಚಂದ್ರಗೌಡರೇ, ನೀವು ಚಳುವಳಿಯಿಂದ ಬಂದವರಲ್ಲವೆ? ನಿನ್ನೆ ನಡೆದಂಥ ಘಟನೆ ಬಗ್ಗೆ ನನಗೂ ಕೂಡ ನೋವಾಗಿದೆ. ನಿನ್ನೆ ಕೆಲವರಿಗೆ ಏಟು ಬಿದ್ದಿದೆ ಎಂದು ನೋಡಿದಾಗ ನನಗೂ ಕೂಡ ಬಹಳ ನೋವಾಗಿದೆ. ಇಂತಹವುಗಳೆಲ್ಲಾ ನಡೆಯಬಾರದು ಎಂದು ನನಗೂ ಇದೆ. ಇದಕ್ಕೆ ನನ್ನ ಸಹಮತ ಇದೆ ಎಂದು ಯಾರು ತಿಳಿದುಕೊಳ್ಳಬೇಡಿ. ಇಂಥವೆಲ್ಲಾ ಆಗಬಾರದು ಎನ್ನುವುದ್ದೇ ನಮ್ಮ ಉದ್ದೇಶ. ಆದರೆ ಉದ್ದೇಶ ಪೂರ್ವಕವಾಗಿ ಲಾಠಿ ಚಾರ್ಜ್ ಮಾಡಿ ಅವರನ್ನು ಹತ್ತಿಕ್ಕುವಂತಹ ಪ್ರಯತ್ನವಂತೂ ಮಾಡಿಲ್ಲ. ಪೊಲೀಸ್‌ನವರಿಂದ ಮಾಡಿರತಕ್ಕಂಥ

ಪ್ರಯತ್ನ ಅಲ್ಲ. ಆ ತಳ್ಳಾಟದಲ್ಲಿ ಹೀಗೆಲ್ಲಾ ಸ್ವಲ್ಪ ಆಗಿರುವುದು ನಿಜ. ಅವರು ಆಸ್ಪತ್ರೆಗೆ ಸೇರಿ ಡಿಸ್‌ಚಾರ್ಜ್ ಆಗಿದ್ದಾರೆ. ಕೈಕಾಲು ಮುರಿದು ಹಾಕಿಬಿಟ್ಟಿದ್ದಾರೆ, ಅದು ಮುರಿದು ಹಾಕಿಬಿಟ್ಟಿದ್ದಾರೆ ಎಂದು ಏನೇನೋ ಪ್ರಚಾರ ಆಗುತ್ತಿದೆಯೆಲ್ಲಾ, ಅವೆಲ್ಲಾ ಸತ್ಯಕ್ಕೆ ದೂರವಾದದ್ದು. ನಮ್ಮ ಸರ್ಕಾರ ಬಹಳ ಸಂಯಮದಿಂದ ಕೆಲಸ ಮಾಡಿದೆ. ಇಷ್ಟೆಲ್ಲಾ ಆದರೂ ಕೂಡ ನಾವು ಅವರಿಗೆ ಫ್ರೀಡಂ ಪಾರ್ಕ್‌ಗೆ ಬನ್ನಿ ಎಂದು ಹೇಳಿದೆವು. ಫ್ರೀಡಂ ಪಾರ್ಕ್‌ಗೆ ನಡೆದುಕೊಂಡು ಹೋಗಿ, ಮೆರವಣಿಗೆ ಮಾಡಿಕೊಂಡು ಹೋಗಿ ಎಂದು ಹೇಳಿದ್ದೆವು. ಅಲ್ಲಿಗೆ ಬಂದು ಎಂದರೆ ವಿಧಾನಸೌಧಕ್ಕೆ ನುಗ್ಗುತ್ತೇವೆ, ವಿಧಾನಸೌಧ ಚಲೋ, ಮುಖ್ಯಮಂತ್ರಿಯವರ ಮನೆಗೆ ನುಗ್ಗುತ್ತೇವೆಂದು ಶುರು ಮಾಡಿದರು. ಆಗ ಪೊಲೀಸ್‌ನವರು ಸ್ವಲ್ಪ ಅವರನ್ನು ಹಿಂದಕ್ಕೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಬಿಟ್ಟರೆ ನಾವು ರೈತರ ಮೇಲೆ ಬಲ ಪ್ರಯೋಗ ಮಾಡತಕ್ಕಂಥದ್ದಾಗಲಿ, ಅವರ ಹಕ್ಕನ್ನು ಹತ್ತಿಕ್ಕುವಂಥದ್ದಾಗಲಿ, ಅಂತಹ ಯಾವ ಕೆಲಸವನ್ನು ಕೂಡ ಮಾಡಿಲ್ಲ. ನಾವು ರೈತರ ಪರವಾಗಿಯೇ ಇದ್ದೇವೆ. ರೈತರ ಹಕ್ಕುಗಳನ್ನು ರಕ್ಷಣೆ ಮಾಡಬೇಕೆನ್ನುವುದೇ ನಮ್ಮ ಸರ್ಕಾರದ ಬದ್ಧತೆ. ರೈತರಿಗೆ ನೀರಾವರಿ ಸೌಲಭ್ಯ ಒದಗಿಸಿ ಕೊಡಬೇಕೆನ್ನುವುದೇ ನಮ್ಮ ಬದ್ಧತೆ. ಕುಡಿಯುವ ನೀರು ಕೊಡಬೇಕು ಎನ್ನುವುದೇ ನಮ್ಮ ಬದ್ಧತೆ. ಆ ಬದ್ಧತೆ ಇಲ್ಲದೆ ಹೋಗಿದ್ದರೆ 13,000 ಕೋಟಿ ರೂಪಾಯಿಯ ಪ್ರಾಜೆಕ್ಟ್ ಕೆಲಸ ಈಗಾಗಲೇ ಮಾಡುತ್ತಿದ್ದೇವೆಯೇ? ಹಿಂದಿನ ಸರ್ಕಾರದವರು ಅದಕ್ಕೆ ಟೆಂಡರ್ ಕರೆದಿದ್ದರು. ಅದರ ಕೆಲಸ ನಡೆಯುತ್ತಿದೆ, ಬಹಳ ವೇಗವಾಗಿ ಕೆಲಸ ಮಾಡಬೇಕೆನ್ನುವುದು ನಮ್ಮ ಅಭಿಪ್ರಾಯ ಇದೆ. ಇದನ್ನು ಆ ಸದನದಲ್ಲೂ ಹೇಳಿದ್ದೇನೆ, ಇಲ್ಲೂ ಕೂಡ ಪ್ರಸ್ತಾಪ ಮಾಡಿ ಹೇಳಿದ್ದೇನೆ. ನಮ್ಮ ಎಂ.ಬಿ.ಪಾಟೀಲ್‌ರವರು ಎರಡು-ಮೂರು ಸಲ ಇದನ್ನು ಪ್ರಸ್ತಾಪ ಮಾಡಿ ಎರಡೂ ಸದನಗಳಲ್ಲಿ ಹೇಳಿದ್ದಾರೆ. ಆದ್ದರಿಂದ ನಾನು ರೈತರಲ್ಲಿ ಮನವಿ ಮಾಡುತ್ತೇನೆ, ನಾನು 6ನೇ ತಾರೀಖು ಸಭೆಯನ್ನು ಕರೆದಿದ್ದೇನೆ. ಅವರು ಬರಲಿ, ಸಾಧಕಬಾಧಕಗಳನ್ನೆಲ್ಲಾ ಚರ್ಚೆ ಮಾಡೋಣ. ಅವರ ಅಭಿಪ್ರಾಯ ಏನಿದೆ ಎನ್ನುವುದನ್ನು ಮುಕ್ತವಾಗಿ ಕೇಳುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಎಲ್ಲವನ್ನು ಚರ್ಚೆ ಮೂಲಕವೇ ಬಗೆಹರಿಸಿಕೊಳ್ಳಬೇಕು. ಹಿಂಸೆ ಮೂಲಕವಾಗಲಿ ಅಥವಾ ಇನ್ನು ಯಾವುದೇ ರೀತಿಯಲ್ಲಿ ಮಾಡಿ ಯಾವುದೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನೇ ನಮಗೆ ಮಹಾತ್ಮ ಗಾಂಧೀಜಿಯವರು ಹೇಳಿಕೊಟ್ಟಿರುವಂಥದ್ದು. ಸತ್ಯ ಅಹಿಂಸೆ, ಅಹಿಂಸಾತ್ಮಕ ಹೋರಾಟದ ಮೂಲಕವೇ ಹೋರಾಟ ಮಾಡಬೇಕೆಂದು

ಗಾಂಧೀಜಿಯವರು ಹೇಳಿಕೊಟ್ಟಿದ್ದಾರೆ. ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಹೋರಾಟ ಮಾಡಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿರುವಂಥದ್ದು. ನಾವು ಅದರಲ್ಲಿ ನಂಬಿಕೆ ಇಟ್ಟುಕೊಂಡಿರುವಂಥವರು. ಬಸವರಾಜ ಹೊರಟ್ಟಿ ಏನು ನಗುತ್ತಿದ್ದೀಯಲ್ಲಪ್ಪ?

**ಶ್ರೀ ಗೋ.ಮಧುಸೂದನ್:-** ಅವರು ಏಕೆ ನಗುತ್ತಿದ್ದಾರೆಂದರೆ, ಈಗ ಶ್ರೀ ರಾಹುಲ್ ಗಾಂಧಿಯವರು ಪಾಕಿಸ್ತಾನ ಜಿಂದಾಬಾದ್ ಎಂದು ಹೇಳಿಬಿಟ್ಟಿದ್ದಾರೆ ಅದಕ್ಕೆ.

**ಶ್ರೀ ಸಿದ್ದರಾಮಯ್ಯ:-** ಮಧುಸೂದನ್‌ರವರೇ, ಕುಳಿತುಕೊಳ್ಳಿ. ಮೈಸೂರಿನಲ್ಲಿದ್ದುಕೊಂಡು ಅಲ್ಲಿರುವುದನ್ನು ಏಕೆ ಹೇಳುತ್ತಿದ್ದೀಯಾ? ನಿಮಗೆ ಏನು ಗೊತ್ತಿಲ್ಲ. ನಾನು ಮತ್ತೆ ಈಗ ಅವೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ದೇಶದ್ರೋಹ ಎಂದರೆ ಏನು, ದೇಶದ್ರೋಹಕ್ಕೆ ವ್ಯಾಖ್ಯಾನ ಏನು, ಈ ದೇಶದಲ್ಲಿ ದೇಶದ್ರೋಹ ಯಾರ್‍ಯಾರು ಮಾಡಿದ್ದಾರೆ ಅವೆಲ್ಲಾ ಹೇಳುವುದಕ್ಕಾಗುತ್ತದೆಯೇ? ಈಗ ಅವೆಲ್ಲಾ ಬೇಡ.

ಮಾನ್ಯ ಸಭಾಪತಿಯವರೇ, ನಾನು ರೈತರಿಗೆ ಹೇಳುತ್ತಿದ್ದೇನೆ. ರೈತರ ಜೊತೆಯಲ್ಲಿ ನಾವಿದ್ದೇವೆ. ಅವರು ಸಹನೆಯನ್ನು ಕಳೆದುಕೊಳ್ಳುವುದಕ್ಕೆ ಹೋಗಬಾರದು. ಅವರು ಹೋರಾಟ ಮಾಡುವುದಕ್ಕೆ ನಮ್ಮದೇನೂ ತಕರಾರು, ವಿರೋಧ ಇಲ್ಲ. ನಾವು ಅವರ ಪ್ರದೇಶ ಇದೆಯಲ್ಲಾ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ಇವೆಲ್ಲಕ್ಕೂ ಬಯಲುಸೀಮೆಗೆ ನೀರು ಕೊಡಬೇಕೆನ್ನುವುದು ನಮ್ಮ ಉದ್ದೇಶ. ಅದನ್ನು ಕೊಟ್ಟೇ ಕೊಡುತ್ತೇವೆ. ಆದ್ದರಿಂದ ನಾನು ರೈತರಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಅವರ ಜೊತೆ ನಾವಿದ್ದೇವೆ. ಈ ತರಹದ ಹೋರಾಟವನ್ನು ಅವರು ಕೈಬಿಡಬೇಕು. ಚರ್ಚೆ ಮಾಡೋಣ. ಭಾನುವಾರ 11 ಗಂಟೆಗೆ ಕೃಷ್ಣಾದಲ್ಲಿ ನಾನು ಸಭೆಯನ್ನು ಕರೆದಿದ್ದೇನೆ. ಬಹಳಷ್ಟು ವಿಚಾರಗಳಿವೆ. ಅವೆಲ್ಲಾ ಚರ್ಚೆ ಮಾಡೋಣ. ಆದ್ದರಿಂದ ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ನಾನು ರೈತರಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಹೋರಾಟವನ್ನು ಕೈಬಿಡಿ. ನಾವು ಯಾವತ್ತೂ ಕನಸು ಮನಸ್ಸಿನಲ್ಲೂ ಕೂಡ ಅವರಿಗೆ ನೋವುಂಟು ಮಾಡಬೇಕು ಅಥವಾ ಅವರ ಮೇಲೆ ಬಲ ಪ್ರಯೋಗ ಮಾಡಬೇಕು, ಅವರ ಹಕ್ಕನ್ನು ಹತ್ತಿಕ್ಕಬೇಕು, ಪ್ರಜಾಪ್ರಭುತ್ವಕ್ಕೆ

ವಿರುದ್ಧವಾಗಿ ನಡೆದುಕೊಳ್ಳಬೇಕು ಎನ್ನತಕ್ಕಂಥ ಉದ್ದೇಶ ನಮ್ಮ ಸರ್ಕಾರಕ್ಕೆ ಇಲ್ಲ. ನಾವು ಆ ತರಹದ್ದವರಲ್ಲ. ಅವರ ಜೊತೆಯಲ್ಲಿ ನಾವಿದ್ದೇವೆ, ಅವರ ಪರವಾಗಿದ್ದೇವೆ, ಅವರ ಸಮಸ್ಯೆಗೆ ಪರಿಹಾರ ಹುಡುಕುವ ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಯಾರು ಕೂಡ ಇದರಲ್ಲಿ ರಾಜಕಾರಣ ಮಾಡಬಾರದು ಎನ್ನುವುದು ನನ್ನ ಮನವಿ. ಇಷ್ಟು ಮಾತುಗಳನ್ನು ತಮ್ಮ ಮೂಲಕ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಮುಂದು)

**ಶ್ರೀ ವಿ.ಸೋಮಣ್ಣ(ಮುಂದು. . )**

ನಿನ್ನೆ ಘಟನೆಯ ಬಗ್ಗೆ ಮಾನ್ಯ ಗೃಹ ಸಚಿವರು ಒಂದು ರೀತಿಯ ಮಾಸ್ಟರ್ ಪಾಠವನ್ನು ಕೊಟ್ಟಿದ್ದಾರೆ. ಅಧಿಕಾರಿಗಳು ಏನು ಬರೆದುಕೊಟ್ಟಿದ್ದಾರೆ, ಅದನ್ನು ಇಲ್ಲಿ ಅವರು ಓದಿದ್ದಾರೆ. ಆದರೆ, ಮುಖ್ಯಮಂತ್ರಿಗಳ ಒಂದು ಅನುಭವ, ಅವರ ಒಂದು ಕಳಕಳಿ, ಈ ವಿಚಾರ ಯಾವ ರೀತಿಯಲ್ಲಿ ಎಲ್ಲಿಗೆ ಹೋಗಿದೆ ಎನ್ನುವುದರ ಬಗ್ಗೆ ಅವರೇ ಒಂದು ರೀತಿಯಲ್ಲಿ ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಸಮಂಜಸ ಎನ್ನುವುದು ನನ್ನ ಭಾವನೆಯಾಗಿದೆ. ಆದ್ದರಿಂದ, ಇದು ಗೃಹ ಸಚಿವರಾದ ಶ್ರೀಯುತ ಪರಮೇಶ್ವರ್‌ರವರ ಹೇಳಿಕೆಯಲ್ಲ. ತಮ್ಮ ಅನುಭವ ನನಗೂ ಸಹ ಗೊತ್ತಿದೆ. ನಾನು ಸಹ ತಮ್ಮ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಸಹ ಕೆಲಸ ಮಾಡಿದ್ದೇನೆ. ಈ ಹೇಳಿಕೆ ತಮ್ಮದಲ್ಲ. ಅಧಿಕಾರಿಗಳು ಬರೆದು ಕೊಟ್ಟಿರುವ ಹೇಳಿಕೆ ಇದಾಗಿದೆ.

**ಶ್ರೀ ಸಿದ್ದರಾಮಯ್ಯ:-** ಕೆಳ ಮನೆಯಲ್ಲಿ ಇದೇ ವಿಷಯವಾಗಿ ನಿಲುವಳಿ ಸೂಚನೆ ವಿಷಯ ಇದ್ದು ನಾನು ಅಲ್ಲಿಗೆ ಹೋಗಬೇಕಾಗಿದೆ.

**ಶ್ರೀ ವಿ.ಸೋಮಣ್ಣ:-** ಈ ಮನೆಯಲ್ಲೂ ಸಹ ತಾವು ಸ್ವಲ್ಪ ಸಮಯ ಕುಳಿತುಕೊಳ್ಳಿ. ನಾವು ಎದ್ದ ತಕ್ಷಣ ನೀವು ಹೋಗುತ್ತೇವೆಂದು ಹೇಳುತ್ತೀರಿ.

**ಶ್ರೀ ಸಿದ್ದರಾಮಯ್ಯ:-** ಶ್ರೀಯುತ ಸೋಮಣ್ಣನವರೆ, ಸಚಿವರು ಇದ್ದಾರೆ.

**ಶ್ರೀ ವಿ.ಸೋಮಣ್ಣ:-** ನೀವು ಸಹ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಒಂದು ನಿಮಿಷ ಕೇಳಿ. ನಾನು ಇಲ್ಲಿ ಇರಬಾರದು ಎಂದೇನೂ ಇಲ್ಲ. ಗೃಹ ಸಚಿವರು ಸಮರ್ಥವಾಗಿ ತಮಗೆ ಉತ್ತರವನ್ನು ಕೊಡುತ್ತಾರೆ. ಈ ವಿಚಾರವಾಗಿಯೇ ಅಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದು, ನಾನು ಅಲ್ಲಿಗೆ ಹೋಗಬೇಕಾಗಿದೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಗಮನಿಸಬೇಕು.

**ಶ್ರೀ ವಿ.ಸೋಮಣ್ಣ:-** ದಯಮಾಡಿ ಕುಳಿತುಕೊಳ್ಳಬೇಕು. ನೀವು ಹೋದಲ್ಲಿ ನಿಮ್ಮ ಹಿಂದೆಯೇ ನಿಮ್ಮ ಅಧಿಕಾರಿಗಳು ಬರುತ್ತಾರೆ. ತಾವು ಹೋಗುತ್ತಿದ್ದಂತೆಯೇ ನಿಮ್ಮ ಡಿಜಿಪಿ ಹೋಗುತ್ತಾರೆ,

**ಶ್ರೀ ಸಿದ್ದರಾಮಯ್ಯ:-** ಗೃಹ ಸಚಿವರೇ, ಸದನದಲ್ಲಿದ್ದಾರೆ, ನೀರಾವರಿ ಮಂತ್ರಿಗಳಿದ್ದಾರೆ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-** ನಾವೆಲ್ಲರೂ ಇಲ್ಲೇ ಇದ್ದು, ಉತ್ತರ ಕೊಡುತ್ತೇವೆ.

**ಶ್ರೀ ವಿ.ಸೋಮಣ್ಣ:-** ನಾವು ಮಾತನಾಡುವುದನ್ನು ಸಹ ತಾವು ಒಂದು 5 ನಿಮಿಷ ಕೇಳಿ.

**ಶ್ರೀ ಸಿದ್ದರಾಮಯ್ಯ:-** ಎಲ್ಲರೂ ಸಹ ಒಂದೇ ಕಡೆ ಇರಲಿಕ್ಕೆ ಆಗುವುದಿಲ್ಲವೆನ್ನುವುದನ್ನು ಶ್ರೀಯುತ ಸೋಮಣ್ಣನವರು ಗಮನಿಸಬೇಕು. ದಯವಿಟ್ಟು ಕ್ಷಮಿಸಿ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರಿ ಮುಖ್ಯ ಸಚೇತಕರು):-**ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಇದೆ.

(ಗೊಂದಲ)

(ಈ ಹಂತದಲ್ಲಿ ಮುಖ್ಯಮಂತ್ರಿಗಳು ಸದನದಿಂದ ಹೊರ ನಡೆದರು)

**ಶ್ರೀ ವಿ.ಸೋಮಣ್ಣ:-** ನೀವು ಪ್ರಚಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಬರೆದುಕೊಂಡಿದ್ದೀರಿ. ಮುಖ್ಯಮಂತ್ರಿಗಳನ್ನು ಕಳುಹಿಸಿದ್ದೀರಿ. ಇದು ಯಾವ ನ್ಯಾಯ? ಬೇರೆಯವರು ಹೇಳುವುದನ್ನು ಕೇಳಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:-** ಮಧ್ಯೆ ಬಾಯಿ ಹಾಕಬೇಡಿ. ಅವರು ಮಾತನಾಡಲಿಕ್ಕೆ ಬಿಡಿ. ಶ್ರೀಯುತ ಸೋಮಣ್ಣನವರನ್ನು ಕರೆದು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡುತ್ತಾರೆ. ಮಧ್ಯೆ ದಯವಿಟ್ಟು ಯಾರು ಬಾಯಿ ಹಾಕಬೇಡಿ.

**ಶ್ರೀ ವಿ.ಸೋಮಣ್ಣ:-** ಸನ್ಮಾನ್ಯ ಸಭಾಪತಿಯವರೆ, ನಾನು ಸನ್ಮಾನ್ಯ ಗೃಹ ಸಚಿವರ ಒಕ್ಕಣೆಯನ್ನು ನಾನು ಪೂರ್ಣವಾಗಿ ಓದಿದ್ದೇನೆ. ನಾನು ಗೃಹ ಸಚಿವರನ್ನು ಕಳೆದ 9 ವರ್ಷಗಳಿಂದ ಬಲ್ಲವನಾಗಿದ್ದೇನೆ. ಅವರ Style of functioning ಬಲ್ಲವನ್ನಾಗಿದ್ದೇನೆ. ಆದರೆ, ನಿನ್ನೆಯ ಘಟನೆಯಲ್ಲಿ ವಿಶೇಷವಾಗಿ ಬೆಂಗಳೂರು ನಗರ ಪೊಲೀಸರ ಬಗ್ಗೆ ಹೇಳುವುದಾದರೆ, ನಾನು ಬೆಂಗಳೂರಿಗೆ ಬಂದು ಸುಮಾರು 46

ವರ್ಷಗಳಾಗಿದೆ. ನಾನು 4 ಬಾರಿ ಶಾಸಕನಾಗಿ, 2 ಬಾರಿ ನಗರಪಾಲಿಕೆ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮಂತ್ರಿಯಾಗಿ ಸುಮಾರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಕೂಡ ತಮ್ಮ ಹಿತಾಸಕ್ತಿಯನ್ನು ನಿನ್ನೆ ನಡೆದಂತಹ ಅಮಾನುಷ ಕೃತ್ಯಕ್ಕೆ ಎಂದೂ ಕೂಡ ಯೋಚನೆ ಮಾಡಿದವರಲ್ಲ. ಇದನ್ನು ನಾನು ಘಂಟಾಘೋಷವಾಗಿ ಖಂಡಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೆ, ನಿನ್ನೆ ನಡೆದಂತಹ ಘಟನೆಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಗೃಹ ಸಚಿವರು ಹೇಳಿದರು. ನಿನ್ನೆ ಘಟನೆಯಿಂದ ನೂರಾರು, ಸಾವಿರ ಮಕ್ಕಳಿಗೆ ತೊಂದರೆಯಾಯಿತು. 30 ಹೆಚ್ಚು Ambulances ನಿಂತು ಹೋದವು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅದೇ ರಸ್ತೆಯಲ್ಲಿ ಹೋಗಬೇಕಾಗಿರುವುದರಿಂದ ಸಾವಿರಾರು ಜನರು ಈ ಘಟನೆಯಿಂದ ತೊಂದರೆಯನ್ನು ಅನುಭವಿಸಿದ್ದು, ಈ ಘಟನೆಯ ವಿಷಯವಾಗಿ ಇಡೀ ದೇಶಕ್ಕೆ ಒಂದು ಕೆಟ್ಟ ಸಂದೇಶ ಹೋಯಿತು. ಇದೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಕೇವಲ 350–400 ಟ್ರ್ಯಾಕ್ಟರ್‌ಗಳು ಬೆಂಗಳೂರಿಗೆ ಬಂದಿವೆ ಎನ್ನುವ ಮಾಹಿತಿ ನಮಗೆ ಇರುವಂತಹದ್ದಾಗಿದೆ. ಆದರೆ, ಸನ್ಮಾನ್ಯ ಗೃಹ ಸಚಿವರಿಗೆ ಬಂದಿರುವ ಮಾಹಿತಿಯ ಪ್ರಕಾರ ಎಷ್ಟಿದೆಯೋ ಗೊತ್ತಿಲ್ಲ. ಈ 400 ಟ್ರ್ಯಾಕ್ಟರ್‌ಗಳಲ್ಲಿ ಬಂದಂತಹ ಜನರು, ಇಡೀ ವ್ಯವಸ್ಥೆಯಲ್ಲಿದ್ದಂತಹ ಜನರು ಒಟ್ಟು ಸೇರಿ 5 ರಿಂದ 6 ಸಾವಿರ ಜನರು ಇರಬಹುದು. 50 ಸಾವಿರ ಜನರಂತೂ ಅಲ್ಲಿ ಇರಲಿಲ್ಲ. 5 ಸಾವಿರ ಜನರೂ ಅಲ್ಲಿ ಇರಲಿಲ್ಲ. ಇಡೀ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಿಡಿದು, ನಿನ್ನೆ ಬೆಳಿಗ್ಗೆಯಿಂದ ರಾತ್ರಿ 5–6 ಗಂಟೆಯವರೆಗೆ ನಡೆದಂತಹ ಈ ಡ್ರಾಮ ಏನಿದೆ, ಇದರೊಳಗೆ ರೈತರು ಎಲ್ಲಿಯೋ ಒಂದು ಕಡೆ ತೊಂದರೆಯನ್ನು ಅನುಭವಿಸಿದ್ದಾರೆ. ತಾವು ಕೂಡ ಅನುಭವಸ್ಥರು. ಮಾನ್ಯ ನೀರಾವರಿ ಸಚಿವರು ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಎತ್ತಿನಹೊಳೆ, ಬಯಲು ಸೀಮೆ ಪ್ರದೇಶಕ್ಕೆ ಕೊಡುವಂತಹ ಶಾಶ್ವತ ನೀರಾವರಿ ಯೋಜನೆಯಾಗಿದೆ. ಇದರ ಬಗ್ಗೆ ಇರತಕ್ಕಂತಹ ಗೊಂದಲ, ನಮ್ಮ ಸರ್ಕಾರದಲ್ಲೂ ಇತ್ತು, ಇವತ್ತು ಸಹ ಮುಂದುವರಿದಿದೆ. 'ಮಹದಾಯಿ' ವಿಚಾರವಾಗಿ ಏನು ಅಲ್ಲಿ ಹೋರಾಟ ಮಾಡುತ್ತಿದ್ದಾರೆ, ಅದೇ ರೀತಿಯಲ್ಲಿ ಇಲ್ಲೂ ಕೂಡ ಹೋರಾಟವನ್ನು ಚಿಕ್ಕಬಳ್ಳಾಪುರ, ಕೋಲಾರದಲ್ಲಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದರೆ ಚೆನ್ನಾಗಿ ಇರುತ್ತಿತ್ತು. ಈಗ ಗೃಹ ಸಚಿವರು ಮತ್ತು ನೀರಾವರಿ ಸಚಿವರು ಇದ್ದಾರೆ. ನನಗೆ ಈ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ನಾನು ನೀರಾವರಿ ತಜ್ಞ ಅಲ್ಲ. ಈ ಎತ್ತಿನಹೊಳೆ ಯೋಜನೆಯ 13 ಸಾವಿರ ಕೋಟಿ ರೂಪಾಯಿಗಳು ಕೆಲವೇ ಕೆಲವು ಜನರ ಜೇಬಿಗೆ ಹೋಗುತ್ತಿದ್ದು, ಇದು ಯಾವುದೇ ರೀತಿಯಲ್ಲಿ ಫಲಪ್ರದವಾಗುತ್ತಿಲ್ಲವೆಂದು ಆ ಭಾಗದ ರೈತರ ಭಾವನೆಯಾಗಿದೆ.

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ,

(ಗೊಂದಲ)

**ಸಭಾಪತಿಯವರು:-** ಸದಸ್ಯರು ಏನು ಹೇಳುತ್ತಿದ್ದಾರೆ, ಅದನ್ನು ತಾವು ನೋಟ್ ಮಾಡಿಕೊಳ್ಳಿ. ನಂತರ ಅದಕ್ಕೆ ಕ್ಲಾರಿಫಿಕೇಷನ್ ಕೊಡಿ. ಪಾಯಿಂಟ್ಸ್‌ಗಳನ್ನು ನೋಟ್ ಮಾಡಿಕೊಳ್ಳಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ನಂತರ ಮಾತನಾಡಲಿ.

**ಸಭಾಪತಿಯವರು:-** ಶ್ರೀಯುತ ಸೋಮಣ್ಣನವರೆ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಚಿವರು ಇಲ್ಲಿ ಗಮನಿಸಬೇಕು. ವಾಸ್ತವವಾಗಿ ಇಲ್ಲಿ ಎತ್ತಿನಹೊಳೆ ಯೋಜನೆಯ ವಿಷಯವಾಗಿ ಈಗ ಚರ್ಚೆಗೆ ಅವಕಾಶ ಇಲ್ಲ. ನಿನ್ನೆ ನಡೆದಂತಹ ಘಟನೆಯ ಬಗ್ಗೆ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೈತರಲ್ಲಿ ಮನವಿ ಮಾಡಿಕೊಳ್ಳುತ್ತೇನೆಂದು ಹೇಳಿದ್ದಕ್ಕೆ ನಾನು ಅದಕ್ಕೆ ಅವಕಾಶವನ್ನು ಕೊಟ್ಟೆ. ಅದರೂ ಸಹ ಇದೊಂದು ಪ್ರಮುಖವಾದ ವಿಷಯವಾದ ಕಾರಣಕ್ಕಾಗಿ ಶ್ರೀಯುತ ಸೋಮಣ್ಣನವರು ಮಾತನಾಡುತ್ತಿದ್ದಾರೆ. ಅವರು ಹೇಳಿರುವಂತಹದ್ದರಲ್ಲಿ ಯಾವುದಾದರೂ ತಪ್ಪು ಮಾಹಿತಿ ಇದೆ ಎಂದು ತಮಗೆ ಅನಿಸಿದರೆ ದಯವಿಟ್ಟು ತಾವು ನೋಟ್ ಮಾಡಿಕೊಳ್ಳಿ. ಇವರ ನಂತರ ಮಾತನಾಡಲಿಕ್ಕೆ ನಿಮಗೆ ನಾನು ಅವಕಾಶವನ್ನು ಕೊಡುತ್ತೇನೆ. ಈ ರೀತಿಯಲ್ಲಿ ಮಧ್ಯೆದಲ್ಲಿ ಬಾಯಿ ಹಾಕುವುದು ಸರಿಯಲ್ಲ. ಮಧ್ಯೆದಲ್ಲಿ ಬಾಯಿ ಹಾಕಿದರೆ ಏನಾಗುತ್ತದೆ ಎಂದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೆ, ನಿನ್ನೆ ಘಟನೆಯ ಬಗ್ಗೆ ಮಾತನಾಡುತ್ತಿದ್ದಾರೆಂದು ತಾವು ಹೇಳಿದಿರಿ. ಈಗ ಅವರು ಎತ್ತಿನಹೊಳೆ ಯೋಜನೆಯ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ವಿ.ಸೋಮಣ್ಣ:-** ಅವರು ಮಾತನಾಡಿದ್ದಕ್ಕೆ ನಾನು ಹೇಳುತ್ತಿದ್ದೇನೆ.

**Mr.Chairman:** The hon.Member V.Somanna is making a passing reference to Yettinhole Project. We will exclusively discuss about it some time later. Please continue

**ಶ್ರೀ ವಿ.ಸೋಮಣ್ಣ:-** ಮಾನ್ಯ ಸದಸ್ಯರಾದ ಶ್ರೀಯುತ ವಿ.ಎಸ್.ಉಗ್ರಪ್ಪನವರು "ಇದನ್ನು ನಮ್ಮ ಸರ್ಕಾರ ಮಾಡಿದ್ದಲ್ಲ, ನಿಮ್ಮ ಸರ್ಕಾರ ಮಾಡಿದ್ದು" ಎಂದು ಒಂದು ಒಳ್ಳೆಯ ಮಾತನ್ನು ಹೇಳಿದರು. ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಆಗಲಿ, ಬೇರೆ ಬೇರೆ ಸರ್ಕಾರ ಆಗಲಿ, ಬೇರೆ ಬೇರೆ ಸರ್ಕಾರ ಬರಲಿ. ನಿನ್ನೆ 4-5 ಸಾವಿರ ಜನರು ಏನು ಬಂದರು, ಈ 4-5 ಸಾವಿರ ಜನರನ್ನು ನಿಯಂತ್ರಣ ಮಾಡಲಿಕ್ಕೆ ಆಗದೇ ಈ ಸಂಶಯವನ್ನು ಅದೇ ರೀತಿಯಲ್ಲಿ ಇಟ್ಟು, ಎತ್ತಿನ ಹೊಳೆ ಯೋಜನೆ ಏನು, ಶಾಶ್ವತ ಕುಡಿಯುವ ನೀರಿನ ಯೋಜನೆ ಏನು, ಪರಮಶಿವಯ್ಯ ವರದಿ ಏನು, ಬಯಲು ಸೀಮೆಗೆ ಆಗಿರುವಂತಹ ಅನಾಹುತವನ್ನು ಸರಿಪಡಿಸಲಿಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ, ಈ ಮೂರು ವಿಚಾರಗಳನ್ನು ಗಮನಿಸಬೇಕಾಗುತ್ತದೆ. ತಾವು ಕೂಡ ಸ್ಥಳಕ್ಕೆ ಹೋಗಿದ್ದೀರಿ. ಅಲ್ಲಿ ಘಟನೆಯಾದ ತಕ್ಷಣವೇ ವಿಧಾನಸೌಧದಿಂದ ಅಲ್ಲಿಗೆ ಹೋಗಿದ್ದೀರಿ. ಆದರೆ, ಆ ಸಮಯದಲ್ಲಿ ನನಗೆ ಆರೋಗ್ಯ ಸರಿಯಿಲ್ಲದ ಕಾರಣ, ನಾನು ನಿನ್ನೆ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ವಿಕ್ರಮ್ ಆಸ್ಪತ್ರೆಯ ಡಾಕ್ಟರ್ ನವೀನ್ ಹತ್ತಿರ ಇದ್ದೆ. ನಿನ್ನೆ ನಡೆದಿರುವಂತಹ ಘಟನೆ ಸಂಬಂಧವಾಗಿ ಒಬ್ಬರಿಗೆ ಗಾಯವಾಗಿ ಅಲ್ಲಿಗೆ ಬ್ಯಾಂಡೇಜ್ ಹಾಕಿಸಿಕೊಳ್ಳುವ ಸಲುವಾಗಿ ಅಲ್ಲಿಗೆ ಬಂದರು. ಅವರು ಹೇಳಿದ್ದು ಇಷ್ಟೆ. ಪೊಲೀಸ್‌ನವರು ಯಾವ ರೀತಿಯಲ್ಲಿ ನಡೆದುಕೊಂಡರು ಎನ್ನುವುದಕ್ಕಿಂತ ಹೆಚ್ಚಾಗಿ, ಕೇವಲ 300 ಟ್ರ್ಯಾಕ್ಟರ್‌ಗಳನ್ನು ತಡೆದು ನಿಲ್ಲಿಸಿದರು ಎಂದವರು ಹೇಳಿದರು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವಂತಹ ಈ ರಸ್ತೆಯಲ್ಲಿ ಈ ಒಂದು ಘಟನೆ ನಡೆದಿರುವುದರಿಂದ ನಿಮ್ಮಲ್ಲಿ Intelligence Wing ಇದೆ, ತಮ್ಮಲ್ಲೆ ಎಲ್ಲವೂ ಇದ್ದು, 3-4 ಸಾವಿರ ಜನರನ್ನು ಕಂಟ್ರೋಲ್ ಮಾಡಲಿಕ್ಕೆ ಆಗದೇ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಡ್ರಾಮ ಮಾಡಿಕೊಂಡು ಬಂದು, ಏನೆಲ್ಲಾ ಮಾಡಿ, ಕೊನೆಗೆ ಏನೂ ತಪ್ಪು ಮಾಡದ ರೈತರನ್ನು ಪೊಲೀಸರು ಹೊಡೆದಾಗ, ನೀವು ಕೊಡತಕ್ಕಂತಹ ತೀರ್ಮಾನ ಏನಿದೆ, ಅದರ ಬಗ್ಗೆ ತಮ್ಮ ಭಾವನೆಯನ್ನು ಏನು ಹೇಳಿದ್ದೀರಿ, ಕೊನೆಯ ಪಕ್ಷ ಅದಕ್ಕೆ ಗೃಹ ಸಚಿವರಾಗಿ ತಾವು ವಿಷಾದವನ್ನಾದರೂ ವ್ಯಕ್ತ ಮಾಡಬಹುದಿತ್ತು. ಆ ವಿಷಾದವನ್ನು ವ್ಯಕ್ತಪಡಿಸಲಿಕ್ಕೆ ತಾವು ತಯಾರಾಗಿಲ್ಲ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-** ನಾನು ವಿಷಾದವನ್ನು ವ್ಯಕ್ತ ಮಾಡಿದಂತಹ ಸಮಯದಲ್ಲಿ ತಾವು ಇರಲಿಲ್ಲ.

068/04-03-2016/11-10/bkp-hvr

**ಶ್ರೀ ವಿ.ಸೋಮಣ್ಣ:-** ಸನ್ಮಾನ್ಯ ಸಭಾಪತಿಯವರೆ, ಎರಡನೆಯದಾಗಿ, ನಾನು ಹೇಳುವುದೇನೆಂದರೆ, ಸನ್ಮಾನ್ಯ ಪಾಟೀಲ್‌ರವರು ಬಹಳ ಬುದ್ಧಿವಂತರು. ಇದನ್ನು ಯಾರು ಮಾಡಿದ್ದಾರೆ, ಏನು ಮಾಡಿದ್ದಾರೆ, ಅದರ ಅವಶ್ಯಕತೆ ನನಗೆ ಇಲ್ಲ. ಯಾರೇ ತಪ್ಪು ಮಾಡಿದ್ದರೂ ಸಹ ಅದು ತಪ್ಪೇ. ಆದರೆ, ಜನರ ಸಂಶಯ ಏನಿದೆ, ಜನರಿಗೆ ಗೊಂದಲ ಏನಿದೆ, ಪರಮಶಿವಯ್ಯನವರ ವರದಿ ಬೇಕೆಂದು ಜನರು ಹೇಳುತ್ತಿದ್ದಾರೆ. ಪರಮಶಿವಯ್ಯನವರ ವರದಿಯನ್ನು ತರುವುದರಿಂದ ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವುಗಳಿಗೆ ನೀರು ಒದಗಿಸುವಲ್ಲಿ ಯಾವ ರೀತಿ ಗೊಂದಲ ಇದೆ, ಈ ಗೊಂದಲಕ್ಕೆ ಗೆರೆ ಎಳೆಯದೇ, ಈ ದೊಂಬರಾಟವನ್ನು ಮುಂದುವರಿಸಿಕೊಂಡು ಹೋಗುವಂತಹ ಕೆಲಸ ಆಗಿದೆ. ಇದರ ಬಗ್ಗೆ ರೈತರಿಗೆ ಹೇಳಬೇಕಾಗುತ್ತದೆ. ನಾವು ಪರಮಶಿವಯ್ಯನವರ ವರದಿಯನ್ನು ತಿರಸ್ಕಾರ ಮಾಡಿದ್ದೇವೆ, ಎತ್ತಿನ ಹೊಳೆಯನ್ನು ನಾವು ತರುತ್ತೇವೆ, ಈ ಎತ್ತಿನಹೊಳೆಯ ಸಾಧಕ-ಭಾದಕಗಳೇನು, ಎನ್ನುವುದರ ಬಗ್ಗೆ ನೀವು ವ್ಯವಸ್ಥಿತವಾಗಿ ಹೇಳಬೇಕಾಗುತ್ತದೆ.

**ಮುಂದು. .**

ಶ್ರೀ ವಿ.ಸೋಮಣ್ಣ(ಮುಂದುವರೆದುದು ...

ನೀವು ರೈತರಿಗೆ ಹೇಳಬೇಕಾಗುತ್ತದೆ, ಇಲ್ಲ ನಾವು ಮಾನ್ಯ ಪರಮಶಿವಯ್ಯ ವರದಿಯನ್ನು ತಿರಸ್ಕಾರ ಮಾಡಿದ್ದೇವೆ, ಎತ್ತಿನಹೊಳೆ ಯೋಜನೆಯನ್ನೇ ನಾವು ತರುತ್ತೇವೆ, ಈ ಎತ್ತಿನಹೊಳೆಯ ಸಾಧಕ-ಬಾಧಕಗಳೇನು, ಇದನ್ನು ನೀವು ವ್ಯವಸ್ಥಿತವಾಗಿ ಹೇಳುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು? ಈ ಹೋರಾಟ ನೆನ್ನೆ-ಮೊನ್ನೆಯದಲ್ಲ, ಮೊದಲಿನಿಂದಲೂ ಇದೆ. ಸುಮಾರು ವರ್ಷಗಳಿಂದ ಆ ಭಾಗದ ಜನತೆ ಕುಡಿಯುವ ನೀರಿಗೋಸ್ಕರ ತಮ್ಮತನವನ್ನು ಬದಿಗೊತ್ತಿ ಬದುಕುವುದಕ್ಕೋಸ್ಕರ ಹೋರಾಟ ಮಾಡುವುದಕ್ಕಾಗಿ ಬಂದಂತಹ ಸುಮಾರು ನಾಲ್ಕೈದು ಸಾವಿರ ಜನರನ್ನು ನೀವು ನಿಯಂತ್ರಣ ಮಾಡುವುದಕ್ಕಾಗದಿದ್ದರೆ ಈ ಸರ್ಕಾರ ಎಂಥದ್ದು ಎನ್ನುವುದರ ಬಗ್ಗೆ ಜನರಲ್ಲಿ ನಾವು ಯಾವ ರೀತಿ ಹೇಳಬೇಕಾಗುತ್ತದೆ? ಏನಿವತ್ತು ಪ್ರತಿಯೊಂದಕ್ಕೂ ಕೂಡ 3 ವರ್ಷ ಮುಗಿಯುತ್ತಾ ಬಂದಿದೆ, ಇನ್ನು ಮುಂದಾದರೂ ನಿರ್ದಿಷ್ಟವಾಗಿ ಹಳೆಯ ಕಾಲದ ಛಾಳಿಯನ್ನೇ ಕಲಿತುಕೊಂಡು ಅವರಂತೆ-ಇವರಂತೆ ಎನ್ನುವುದನ್ನು ಬಿಟ್ಟು, ನನಗೆ ಮಾನ್ಯ ಸಿದ್ದರಾಮಯ್ಯನವರ style 30 ವರ್ಷಗಳಿಂದ ಗೊತ್ತಿದೆ. ಏತಕ್ಕೋಸ್ಕರವಾಗಿ ಅವರು ಕೆಲವು ತೀರ್ಮಾನಗಳನ್ನು ಈ ರೀತಿಯಾಗಿ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ನೆನ್ನೆ ದಿವಸ ನನಗಾದಂತಹ ಒಂದು ನೋವು ಪ್ರಾಯಶಃ ಏನೂ ಇಲ್ಲದೆ ಆ ಮಕ್ಕಳ ಚೀರಾಟ, ಆಸ್ಪತ್ರೆಗೆ ಹೋಗಲು 30 ಆಂಬ್ಯುಲೆನ್ಸ್‌ನಲ್ಲಿ ಬಂದಂತಹ ರೋಗಿಗಳ ಗತಿ ಮತ್ತು ಜನರಿಗೆ ಆಗಿರುವಂತಹ ಅನಾಹುತ ಇದಕ್ಕೆ ಯಾರಾದರೂ ನೇರ ಹೊಣೆ ಎಂದರೆ, ಇವತ್ತಿನ ಈ ಸರ್ಕಾರವೇ ವಿನಃ ಬೇರೆಯವರಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಮಾನ್ಯ ಗೃಹ ಸಚಿವರು, ಸಭಾನಾಯಕರು, ಮಾನ್ಯ ಎಚ್.ಕೆ.ಪಾಟೀಲ್‌ರವರು ಈ ಎತ್ತಿನಹೊಳೆ ಯೋಜನೆ ಬಗ್ಗೆ ಇರುವಂತಹ ಸಂಶಯವನ್ನು ಹೋಗಲಾಡಿಸಬೇಕು. ಎತ್ತಿನಹೊಳೆ ಯೋಜನೆ ಏನು, ಶಾಶ್ವತವಾದ ಕುಡಿಯುವ ನೀರಿನ ಯೋಜನೆ ಏನು, ಡಾ:ಪರಮಶಿವಯ್ಯ ವರದಿ ಏನು ಎನ್ನುವುದರ ಬಗ್ಗೆ ಆ ಭಾಗದ ಜನರಿಗೆ ಬೆಳಕನ್ನು ಚೆಲ್ಲಬೇಕಾಗುತ್ತದೆ.

ನೆನ್ನೆ ದಿವಸ ನಡೆದ ಘಟನೆಯ ಬಗ್ಗೆ ಉನ್ನತ ಮಟ್ಟದ ಒಂದು ಸಮಿತಿಯನ್ನು ರಚನೆ ಮಾಡಿ, ಇದರ ಸಾಧಕ-ಬಾಧಕಗಳೇನು, ಇದಕ್ಕೆ ಯಾರು ಕಾರಣಕರ್ತರು? ಕೇವಲ 4000 ಜನರನ್ನು ನಿಯಂತ್ರಣ ಮಾಡದೆ ಇಂತಹ ಅನಾಹುತಕ್ಕೆ ಕಾರಣವಾಗಿರುವ ಈ ಸರ್ಕಾರ ಪ್ರಾಯಶಃ ಈ ರಾಜ್ಯದಲ್ಲಿ ಇನ್ನು ಯಾವ ರೀತಿ ನಡೆದುಕೊಳ್ಳುತ್ತದೆ ಎನ್ನುವುದರ ಬಗ್ಗೆ ಅನುಮಾನವಿದೆ. ಅದಕ್ಕಾಗಿ ನಾನು ಆಗ್ರಹಪಡಿಸುವುದೇನೆಂದರೆ, ದಯಮಾಡಿ ನೆನ್ನೆ ನಡೆದಿರುವಂತಹ ಘಟನೆ ಏನಿದೆ, ಇದನ್ನು ನಾನು ಖಡಾಖಂಡಿತವಾಗಿ ಖಂಡಿಸುತ್ತಾ

ಪ್ರಾಯಶಃ ನಾವು ಈ ಸದನದಲ್ಲಿ ನಡೆಯುವಂತಹ ಕೆಲವಾರು ವಿಚಾರಗಳಲ್ಲಿ ಪ್ರತಿಯೊಂದಕ್ಕೂ ಸಹ ರಾಜಕಾರಣವನ್ನು ಬೆರೆಸುವುದರ ಮುಖೇನ ರಾಜ್ಯದ ರಾಜಕಾರಣವನ್ನು ಬೇರೆ ಬೇರೆ ಕಡೆ ತೆಗೆದುಕೊಂಡು ಜನರ ಮನಸ್ಸಿನ ಭಾವನೆಗಳನ್ನು ದಿಕ್ಕು ತಪ್ಪಿಸುವಂಥದ್ದು, ಇವತ್ತಿನ ಸಂದರ್ಭದಲ್ಲಿ ನೆನ್ನೆಯ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪ್ರಾಯಶಃ ಈ ಸರ್ಕಾರವೇನಾದರೂ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದರೆ, ಈ ಸರ್ಕಾರಕ್ಕೆ ದೂರದೃಷ್ಟಿ ಇರುವುದೇ ಆಗಿದ್ದರೆ ಇಂತಹ ಘಟನೆಗಳು ನಡೆಯುತ್ತಿರಲಿಲ್ಲ. ಆದ್ದರಿಂದ ಈ ಸರ್ಕಾರವೇ ಇದಕ್ಕೆ ನೇರವಾಗಿ ಹೊಣೆಯಾಗಿದ್ದು, ಸರ್ಕಾರವೇ ಇದಕ್ಕೆ ಬೆಲೆಯನ್ನು ತೆರಬೇಕಾಗುತ್ತದೆ. ತನ್ಮೂಲಕ ಒಂದು ಸಮಿತಿಯನ್ನು ರಚನೆ ಮಾಡಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೆನ್ನೆ ದಿವಸ ನಡೆದಿರುವ ಘಟನೆಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ನಾನು ರಾಜಕಾರಣ ಮಾಡುವುದಿಲ್ಲ ಎನ್ನುವಂತಹ ಮಾತನ್ನು ತಿಳಿಸಿದ್ದಾರೆ. ಇಂತಹ ಘಟನೆ ಆಗಬಾರದಾಗಿತ್ತು ಎಂದು ಮಾನ್ಯ ಗೃಹ ಸಚಿವರು ವಿಷಾದವನ್ನು ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವದಲ್ಲಿರುವಂತಹ ಒಂದು ವ್ಯವಸ್ಥೆಯಲ್ಲಿ ತಮ್ಮ ಮಾತನ್ನು ನಾನು ಸ್ವಾಗತ ಮಾಡುತ್ತೇನೆ. ನನ್ನ ಪ್ರಶ್ನೆ ಇಷ್ಟೆ, ನೆನ್ನೆ ನಡೆದಂತಹ ಘಟನೆಯ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದಲ್ಲಿ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಇದೆ, ಟ್ರ್ಯಾಕ್ಟರ್‌ಗಳು ಮತ್ತು ಟ್ರಕ್‌ಗಳು ಬರುವುದನ್ನು ಅಲ್ಲಿಯೇ ನಿಲ್ಲಿಸಬೇಕಾಗಿತ್ತು, ಬಸ್‌ಗಳ ವ್ಯವಸ್ಥೆಯನ್ನು ಮಾಡಿ ಆ ಪ್ರತಿಭಟನಾಕಾರರನ್ನು ಫ್ರೀಡಂ ಪಾರ್ಕ್‌ಗೆ ಕರೆತರುವಂತಹ ವ್ಯವಸ್ಥೆಯಾಗಬೇಕಾಗಿತ್ತು. ಅವರು ಇಲ್ಲಿಯವರೆಗೆ ಬರುವುದಕ್ಕೆ ಬಿಟ್ಟ ಕಾರಣದಿಂದಾಗಿ ರಸ್ತೆಗಳಲ್ಲಿನ ವಾಹನ ಸಂಚಾರ ಸ್ಥಗಿತಗೊಂಡು ಟ್ರಾಫಿಕ್ ಸಮಸ್ಯೆ ಉಂಟಾಗುವವರೆಗೆ ನಿಮ್ಮ ಇಂಟಲಿಜೆನ್ಸ್ ವಿಭಾಗ ಏನು ಮಾಡುತ್ತಿತ್ತು? ದೇವನಹಳ್ಳಿಯಲ್ಲಿಯೋ, ಮತ್ತೊಂದೆಡೆಯೋ ಆ ಟ್ರಕ್‌ಗಳನ್ನೆಲ್ಲಾ ನಿಲ್ಲಿಸಿ ಸರ್ಕಾರವೇ ಬಸ್‌ನ ವ್ಯವಸ್ಥೆಯನ್ನು ಮಾಡಿ ಜನರನ್ನು ಕರೆದುಕೊಂಡು ಬಂದಿದ್ದರೆ ಈ ಅನಾಹುತ ತಪ್ಪುತ್ತಿತ್ತು. ಆದರೆ, ಆ ರೀತಿಯ ವ್ಯವಸ್ಥೆ ಆಗಲಿಲ್ಲ.

ಮಾನ್ಯ ಸಭಾಪತಿಯವರೇ, ನಾವು ಆಡಳಿತ ಪಕ್ಷದಲ್ಲಿದ್ದಾಗ ಪೊಲೀಸರನ್ನು defend ಮಾಡಿಕೊಳ್ಳುತ್ತೇವೆ; ನೀವು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಅವರನ್ನು ಟೀಕೆ ಮಾಡುತ್ತೀರಿ. ಇದು ನಿರಂತರವಾಗಿ ನಡೆಯುತ್ತಿದೆ. ನೆನ್ನೆಯ ಪರಿಸ್ಥಿತಿಯನ್ನು ನಾವು ಟಿ.ವಿ.ಯಲ್ಲಿ ನೋಡಿದ್ದೇವೆ, ಪೊಲೀಸರು ಕೂಡ ಬಹಳ ಸಂಯಮದಿಂದ ವರ್ತಿಸಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಒಮ್ಮೊಮ್ಮೆ ಏನಾಗುತ್ತದೆ ಎಂದರೆ, ನಿಜವಾದಂತಹ ರೈತರು ಹೋರಾಟ ಮಾಡುತ್ತಾರೆ. ಕೆಲವರು ನಡುವೆ ಸೇರಿಕೊಂಡು ಗಲಾಟೆ ಮಾಡುವ ಸಾಧ್ಯತೆಗಳಿರುತ್ತವೆ. ಪೊಲೀಸರು ಲಾಠಿ ಚಾರ್ಜ್ ಮಾಡುವಂತಹ ಘಟನೆ ಕೆಲವು ಕಡೆ ಆಗಿದೆ. ಇಂತಹ ಘಟನೆ ಆಗಬಾರದಾಗಿತ್ತು, ಆಗಿಹೋಗಿದೆ. ಆದರೆ ಸರ್ಕಾರ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನ್ನು ಹೆಚ್ಚು ಚಾಕಚಕ್ಯತೆಯಿಂದ ಉಪಯೋಗಿಸಿಕೊಂಡಿದ್ದರೆ ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು ಎನ್ನುವುದು ನನ್ನ ಮನವಿ. ಆದ್ದರಿಂದ ಮುಂದಿನ ದಿನಮಾನಗಳಲ್ಲಿ ಸರ್ಕಾರ ಇಂತಹ ಸಂದರ್ಭಗಳಲ್ಲಿ ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡಬೇಕು. ಆ ರೈತರ ಜಾಗದಲ್ಲಿ ನಾವೇ ಇದ್ದರೂ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು, ಇವರೆಲ್ಲಾ ಗಲಾಟೆ ಮಾಡಿದಾಗ ಟ್ರ್ಯಾಕ್ಟರ್‌ನಲ್ಲಿ ಬಂದಂತಹವರು ಕೂಡ ಅನಿವಾರ್ಯವಾಗಿ ಅದರಲ್ಲಿ ಸೇರಿ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಅದಕ್ಕಾಗಿ ಆ ಟ್ರ್ಯಾಕ್ಟರ್‌ಗಳನ್ನೆಲ್ಲಾ ಅಲ್ಲಿಯೇ ನಿಲ್ಲಿಸಿ ಜನರನ್ನು ಮಾತ್ರ ಕರೆತರಲು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕಾಗಿತ್ತು.

ನೀರಿನ ಸಲುವಾಗಿ ಕೋಲಾರ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರದವರೆಲ್ಲಾ ಹೋರಾಟ ಮಾಡಿದರು. ನಾವು ಗೋವಾ, ಮಹಾರಾಷ್ಟ್ರದವರನ್ನು ನಿಂದಿಸುತ್ತೇವೆ, ಆದರೆ ಸರ್ಕಾರ ನಮ್ಮ ರಾಜ್ಯದ ಈ ಎರಡು ಜಿಲ್ಲೆಗಳನ್ನು ಹೊಂದಿಸಿಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲವೆ? ಕುಡಿಯುವ ನೀರಿನ ಅವಶ್ಯಕತೆ ಇದೆ, ಅಲ್ಲಿ ಅಂತರ್ಜಲ ಬತ್ತಿ ಹೋಗಿರುವುದರಿಂದ ಸುಮಾರು 1200 ರಿಂದ 1300 ಅಡಿ ಆಳದವರೆಗೆ ಕೊಳವೆಬಾವಿಗಳನ್ನು ತೋಡಿದರೂ ನೀರು ಬೀಳುವುದಿಲ್ಲ. ಒಮ್ಮೆ ಕೋಲಾರಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಕುಡಿಯುವ ನೀರಿಲ್ಲದೆ ಮಂಗಗಳು ಸತ್ತುದನ್ನು ನಾವು ನೋಡಿದ್ದೇವೆ. ನಮಗೂ ಸಹ ಮನುಷ್ಯತ್ವ ಬೇಕಲ್ಲವೆ. ಅದಕ್ಕಾಗಿ ಜಗಳ ಮಾಡುವ ಬದಲಿಗೆ ಸೌಹಾರ್ಧತೆಯಿಂದ ಎರಡು ಜಿಲ್ಲೆಯವರನ್ನು ಕೂರಿಸಿಕೊಂಡು ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲವೆ? ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಆ ಯೋಜನೆಗೆ ಟೆಂಡರ್ ಕರೆದಿರುವುದಾಗಿ ತಿಳಿದುಬಂದಿದೆ, ಆದ್ದರಿಂದ ಯಾರಿಗೂ ಕೆಡುಕಾಗದಂತೆ ಎಚ್ಚರಿಕೆ ವಹಿಸಿ ಆ ಕೆಲಸವನ್ನು ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆಯಿಂದ ಕಂಗಾಲಾಗಿರುವ ಜನರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅದನ್ನು ಬಗೆಹರಿಸುವುದಕ್ಕೆ ಸರ್ಕಾರ ತನ್ನ ಮೊದಲ ಆದ್ಯತೆಯನ್ನು ನೀಡಬೇಕೆಂಬುದು ನನ್ನ ಸ್ಪಷ್ಟವಾದ ಸಲಹೆಯಾಗಿದೆ. ಒಬ್ಬರನ್ನು ಮೇಲೆತ್ತುವುದು, ಮತ್ತೊಬ್ಬರನ್ನು ಕೆಳಗಿಳಿಸುವ ರೀತಿಯಲ್ಲಿ ನಾನು ಮಾತನಾಡುವುದಿಲ್ಲ. ಆದರೆ, ಆ ಭಾಗದವರಿಗೆ ಹಾನಿಯಾಗದಂತೆ ಈ ಭಾಗದವರಿಗೆ ಕುಡಿಯುವ ಉದ್ದೇಶಕ್ಕಾಗಿ ನೀರನ್ನೊದಗಿಸುವಂತಹ ಒಂದು ಒಳ್ಳೆಯ ವ್ಯವಸ್ಥೆಯನ್ನೇನು ಮಾಡಿದ್ದೀರಿ, ಆ ಯೋಜನೆಯನ್ನು ಕಾರ್ಯಗತಗೊಳಿಸಿ ಆ ಭಾಗದ ಜನರಿಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿದ್ದು, ಮುಂದಿನ ದಿನಮಾನಗಳಲ್ಲಿ ಸರ್ಕಾರ ಆ ದಿಕ್ಕಿನಲ್ಲಿ ಬಹಳ ಮುಂಜಾಗ್ರತೆಯಿಂದ ಕ್ರಮ ವಹಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಚೌಡರೆಡ್ಡಿ ಆರ್.ತೂಪಲ್ಲಿ:-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನನಗೆ 2 ನಿಮಿಷಗಳ ಕಾಲಾವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನೆನ್ನೆ ದಿವಸ ಸರ್ಕಾರದಿಂದ ಒಂದು ಹೇಳಿಕೆ ಕೊಡುವುದಾಗಿ ತಾವೇನು ತಿಳಿಸಿದ್ದಿರಿ, ಅದರ ಪ್ರಕಾರ ಮಾನ್ಯ ಗೃಹ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆಯ ಬಗ್ಗೆ ಮತ್ತೆ ಎಲ್ಲರೂ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೂ

ತಾವು ಕೆಲವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮತ್ತೆ ಅದೇ ಚರ್ಚೆಯನ್ನು ಮುಂದುವರೆಸುತ್ತಾ ಹೋಗುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

(ಗೊಂದಲ)

**ಸಭಾಪತಿಯವರು:-** ಸರ್ಕಾರದ ಹೇಳಿಕೆಯ ಮೇಲೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ನೀಡಿರುವ ಹೇಳಿಕೆ ಅಪೂರ್ಣವಾಗಿದೆ. Let him complete the statement. The statement is incomplete. 2ನೇ ಪುಟದಲ್ಲಿ 'ಸದರಿ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಪೊಲೀಸ್ ಇಲಾಖಾ ವತಿಯಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ' ಎಂದಷ್ಟೇ ಇದೆ, ಮುಂದೆ ಆ ವಾಕ್ಯವನ್ನು ಹೇಗೆ ಪೂರ್ಣಗೊಳಿಸಿಕೊಳ್ಳಬೇಕೆಂದು ಮಾನ್ಯ ಗೃಹ ಸಚಿವರು ತಿಳಿಸಬೇಕಾಗುತ್ತದೆ.

**ಡಾ:ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, 'ಚರ್ಚಿಸಲಾಗಿದೆ' ಎಂದು ಸೇರಿಕೊಂಡರೆ ಆ ವಾಕ್ಯ ಪೂರ್ಣವಾಗುತ್ತದೆ. ಅದನ್ನು ನಾನು ಈ ಹೇಳಿಕೆಯನ್ನು ಓದುವಂತಹ ಸಂದರ್ಭದಲ್ಲಿಯೇ ತಿಳಿಸಿದ್ದೇನೆ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಐದಾರು ಜನರು ಒಟ್ಟಿಗೆ ಎದ್ದು ಮಾತನಾಡಿದರೆ ಹೇಗೆ? ಈ ವಿಷಯದ ಬಗ್ಗೆ ಎಲ್ಲರೂ ಮಾತನಾಡಬಯಸುವುದಾದರೆ ಇವತ್ತು ಸನ್ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ನಾನು ರದ್ದುಪಡಿಸುತ್ತೇನೆ. ತಾವು ಇದೇ ವಿಷಯದ ಮೇಲೆ ಚರ್ಚೆಯನ್ನು ಮಾಡಿ, ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಯಾರು ಬೇಕಾದರೂ ಮಾತನಾಡಿ.

**ಶ್ರೀ ಚೌಡರೆಡ್ಡಿ ಆರ್.ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಆ ಭಾಗದ ಶಾಸಕನಾಗಿದ್ದೇನೆ.

**ಸಭಾಪತಿಯವರು:-** ಆ ಭಾಗದಿಂದ ಇತ್ತೀಚೆಗೆ ಆಯ್ಕೆಯಾಗಿ ಬಂದಿರುವ ಸದಸ್ಯರು ಸಹ ಮಾತನಾಡಬಯಸುತ್ತಿದ್ದಾರೆ. ನಾನು ಅವರಿಗೂ ಅವಕಾಶ ಕೊಡಬೇಕು, ನಿಮಗೂ ಅವಕಾಶ ಕೊಡಬೇಕು. ಮಾನ್ಯ ಕೆ.ಬಿ.ಶಾಣಪ್ಪನವರು ಇಡೀ ರಾಜ್ಯಕ್ಕೆ ಪ್ರತಿನಿಧಿಯಾಗಿದ್ದು, ಅವರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದಾರೆ. ಅವರಿಗೂ ಸಹ ನಾನು ಅವಕಾಶ ಕೊಡಬೇಕು. ಆದರೆ ಈಗ ಆ ರೀತಿ ಮಾಡುವುದಕ್ಕಾಗುವುದಿಲ್ಲ, ನಿಮ್ಮ ಪಕ್ಷದಿಂದ ಯಾರು ಮಾತನಾಡುತ್ತೀರಿ ಎಂದು ಕೇಳಿದಾಗ ನಿಮ್ಮ ನಾಯಕರು ನಾನೇ ಮಾತನಾಡುತ್ತೇನೆ ಎಂದರು. ಆ ಸಂದರ್ಭದಲ್ಲಿ ನೀವೇ ಮಾತನಾಡಬೇಕಾಗಿತ್ತು, ನಾನು ಬೇಡವೆಂದೆನೇನು? ನಿಮ್ಮ ನಾಯಕರು ನಾನು ಮಾತನಾಡುತ್ತೇನೆ ಎಂದು ಹೇಳಿದ ಮೇಲೆ ಅದು ಅಲ್ಲಿಗೆ ಮುಗಿಯಿತು. ಬಿ.ಜೆ.ಪಿ.ಯಿಂದ ಯಾರು ಎಂದು ಕೇಳಿದಾಗ ಸೋಮಣ್ಣನವರ ಹೆಸರನ್ನು ಹೇಳಲಾಯಿತು. ಅದು ಅಲ್ಲಿಗೆ ಮುಗಿಯಿತು. ತಾವು ಅವರೂ ಮಾತನಾಡಬೇಕು, ನಾನೂ ಮಾತನಾಡಬೇಕು ಎಂದರೆ ಆಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಪಕ್ಷದಿಂದ ಮಾನ್ಯ ಸೋಮಣ್ಣನವರು ಮತ್ತು ಜೆ.ಡಿ.ಎಸ್. ಪಕ್ಷದಿಂದ ನಾನು ಮಾತನಾಡಿರುವುದರಿಂದ ಅಲ್ಲಿಗೆ ಸಾಕು ಬಿಡಿ ಸರ್, ಬೇರೆ ಯಾರಿಗೂ ಅವಕಾಶ ಕೊಡುವುದು ಬೇಡ.

**ಸಭಾಪತಿಯವರು:-** ಅವರು ಯಾರಿಗೆ ಅವಕಾಶ ಕೊಡುವುದೂ ಸರಿಯಾಗುವುದಿಲ್ಲ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾನು ಐದು ನಿಮಿಷ ಮಾತನಾಡುತ್ತೇನೆ. Kindly allow me to speak.

**ಸಭಾಪತಿಯವರು:-** ಎಲ್ಲರೂ ಮಾತನಾಡಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ಮಾನ್ಯ ಕೋಟ ಶ್ರೀನಿವಾಸ ಪೂಜಾರ್‌ರವರು ಮಧ್ಯದಲ್ಲಿ ಮಾತನಾಡುವಾಗ ನಾನು ಹೇಳಿದೆ, ಅದನ್ನು ಬರೆದುಕೊಳ್ಳಿ ನಿಮಗೆ ಒಂದು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಅವರಿಗೆ ಅವಕಾಶ ಕೊಡುವುದು ಬೇಡವೆ? ಅವರಿಗೂ ನಾನು ಅವಕಾಶ ಕೊಡಬೇಕಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದಿಂದ ನಾನೊಬ್ಬನೇ ಮಾತನಾಡಿ ಮುಗಿಸುತ್ತೇನೆ, ಬೇರೆ ಯಾರೂ ಮಾತನಾಡುವುದಿಲ್ಲ.

**ಸಭಾಪತಿಯವರು:–** ಆಗಲಿ, ಮೊದಲು ಮಾನ್ಯ ಚೌಡರೆಡ್ಡಿ ಆರ್.ತೂಪಲ್ಲಿಯವರು ಮಾತನಾಡಿದ ನಂತರ ಮಾನ್ಯ ಕೆ.ಬಿ.ಶಾಣಪ್ಪನವರೇ, ತಾವು ಮಾತನಾಡಿ. ಬೇರೆ ಯಾರೂ ಮಾತನಾಡುವುದಿಲ್ಲ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಸ್ಟೇಟ್‌ಮೆಂಟ್ ಬಗ್ಗೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಇದೆಯೇ?

**ಸಭಾಪತಿಯವರು:–** ಎರಡೆರಡು ನಿಮಿಷ ಮಾತನಾಡಲಿ ಬಿಡಿ ಸರ್. ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಸರಿಯಾಗುವುದಿಲ್ಲ, ಚರ್ಚೆ ಅಲ್ಲ, ತಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದಾರೆ, ಮಾತನಾಡಲಿ ಬಿಡಿ ಸರ್.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನೆನ್ನೆ ದಿವಸ ನಾನು ಹೇಳಿದ್ದೆ, ಕಮಿಟ್ ಮಾಡಿದ್ದೆ. ನೆನ್ನೆ ದಿವಸ ನಡೆದ ಘಟನೆಯ ಬಗ್ಗೆ ಇವತ್ತು ವಿವರವಾದಂತಹ ವರದಿಯನ್ನು ಕೊಡಿಸುವುದಾಗಿ ನಾವು ತಿಳಿಸಿದ್ದೆವು. ಮಾನ್ಯ ಗೃಹ ಸಚಿವರು ವರದಿ ಕೊಟ್ಟಿದ್ದಾರೆ. ಅದರ ಮೇಲೆ ಎಲ್ಲ ಪ್ರಮುಖ ನಾಯಕರು ಮಾತನಾಡಿದ್ದಾರೆ. ಮತ್ತೆ ಎಲ್ಲರೂ ಮಾತನಾಡುತ್ತೇವೆ ಎಂದರೆ ಅದು ಸರಿಕಾಣುವುದಿಲ್ಲ. It will be a bad precedent in the coming days.

**ಸಭಾಪತಿಯವರು:–** ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ನಂತರ ನಾವು ಮುಂದಿನ ಕಲಾಪಕ್ಕೆ ಹೋಗೋಣ.

(ಮುಂದುವರೆದಿದೆ ...

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಕೇವಲ ಎರಡು ನಿಮಿಷ ಮಾತ್ರ ಮಾತನಾಡುತ್ತೇನೆ.

**ಸಭಾಪತಿಯವರು:-** ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ಪ್ರಾರಂಭ ಮಾಡಿ.

(ಗೊಂದಲ)

**ಸಭಾಪತಿಯವರು:-** ಆಯಿತು ಬಿಡಿ, ಅವರು ಅವರ ಅಭಿಪ್ರಾಯವನ್ನು ಹೇಳುತ್ತಾರೆ ವಿನಃ ಚರ್ಚೆ ಮಾಡುವುದಿಲ್ಲ. ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಸರಿ ಹೋಗುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ವಿನಂತಿಸುವುದೇನೆಂದರೆ, ಇವರು concerning yesterday's incident only ಬಗ್ಗೆ ಬೇಕಾದರೆ ಮಾತನಾಡಲಿ.

**ಸಭಾಪತಿಯವರು:-** ಆಯಿತು ಕುಳಿತುಕೊಳ್ಳಿ ಸರ್.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಡೆದಂತಹ ರೈತರು ನಡೆಸಿದಂತಹ ಧರಣಿಗೆ ಸರ್ಕಾರದ ವತಿಯಿಂದ ಯಾವ ರೀತಿಯಾದಂತಹ ಧೋರಣೆ ತೆಗೆದುಕೊಂಡಿದ್ದಾರೆ ಎಂಬುದನ್ನು ಈಗಾಗಲೇ ಎಲ್ಲರೂ ಸಹ ಟಿ.ವಿ.ಯಲ್ಲಿ ನೋಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈಗ ಮಾತನಾಡುತ್ತಾ ನಾನು 6ನೇ ತಾರೀಖು ಮೀಟಿಂಗ್ ಕರೆದಿದ್ದೆ, ಆದರೂ ಅವರು ಮುಷ್ಕರಕ್ಕೆ ಬಂದಿದ್ದು ತಪ್ಪು ಎಂದು ಹೇಳುತ್ತಿದ್ದರು. ಆದರೆ ಅವರು ಏಕೆ ಮುಷ್ಕರಕ್ಕೆ ಬಂದರು ಎಂದರೆ, ಮೊದಲನೆ ಸಲ ಸಭೆಯನ್ನು ಕೃಷ್ಣದಲ್ಲಿಯೇ ನಡೆಸಿ ಶೀಘ್ರವಾಗಿ ನೀರು ಕೊಡುತ್ತೇವೆಂದು ಹೇಳಿದರು. ಚಲಘಟ್ಟದಿಂದ ಬರುವಂತಹ ನೀರನ್ನು ಆಗಿನ ಅಧಿಕಾರಿ ವರ್ಗದವರು ನಾವು ಒಂದು ವರ್ಷದಲ್ಲಿ ನೀರನ್ನು ಹರಿಸುತ್ತೇವೆ, ಎರಡು ವರ್ಷದಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಹೇಳಿದರು. ಆದರೆ ಒಂದು ಮುಕ್ಕಾಲು ವರ್ಷವಾದರೂ ಟೆಂಡರ್ ಓಪನ್ ಆಗಿಲ್ಲ. ನಮ್ಮ ಭಾಗದ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ.

**ಸಭಾಪತಿಯವರು:–** ಮಾನ್ಯ ಚೌಡರೆಡ್ಡಿಯವರೇ, ಈಗ ನೀರಿನ ಬಗ್ಗೆ ಚರ್ಚೆ ಬೇಡ. ನಿನ್ನೆ ದಿವಸ ನಡೆದಂತಹ ಘಟನೆಯ ಬಗ್ಗೆ ಮಾತ್ರ ಚರ್ಚೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, let him discuss by giving a notice on this matter.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಅವರು ಮುಷ್ಕರಕ್ಕೆ ಏಕೆ ಬಂದರು ಎಂದರೆ...

**ಸಭಾಪತಿಯವರು:–** ಅವರು ಮುಷ್ಕರಕ್ಕೆ ಏಕೆ ಬಂದು ಎಂಬುದಲ್ಲ, ಮುಷ್ಕರದ ಸಂದರ್ಭದಲ್ಲಿ ನಡೆದ ದೌರ್ಭಾಗ್ಯಕರ ಘಟನೆಗಳ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ರೈತರು ಟ್ರ್ಯಾಕ್ಟರ್‌ಗಳ ಮೂಲಕ ಬರಬಾರದು ಎಂದರೆ ಅವರೇನು ಎಲಿಕಾಪ್ಟರ್ ಮೂಲಕ ಬಂದು ಫ್ರೀಡಂ ಪಾರ್ಕ್‌ನಲ್ಲಿ ಇಳಿಯುವುದಕ್ಕೆ ಆಗುತ್ತದೆಯೇ? ಆದಕಾರಣ ಅವರು ಟ್ರ್ಯಾಕ್ಟರ್‌ಗಳ ಮೂಲಕವೇ ಬರುವುದು. ಪ್ರತೀ ದಿವಸ ಟ್ರಾಫಿಕ್ ಜಾಮ್ ಆಗುತ್ತದೆ. ಆಗ ಲಾಠಿ ಚಾರ್ಜ್ ಮಾಡುತ್ತಾರೆಯೇ? ಅಥವಾ ಹೊಡೆಯುತ್ತಾರೆಯೇ? ಇಲ್ಲಿ ಪ್ರತೀ ದಿವಸ ಒಂದೊಂದು ಗಂಟೆ ಟ್ರಾಫಿಕ್ ಜಾಮ್ ಆಗುತ್ತದೆ. ಒಂದು ದಿವಸ ಟ್ರ್ಯಾಕ್ಟರ್‌ಗಳ ಮೂಲಕ ಬಂದಂತಹ ರೈತರಿಗೆ ಅವರು ಹಾಲು ಕೊಡುತ್ತಾರೆ, ಅನ್ನ ಕೊಡುತ್ತಾರೆ, ತರಕಾರಿ ಕೊಡುತ್ತಾರೆ. ಇಂತಹ ರೈತರು ಟ್ರ್ಯಾಕ್ಟರ್‌ಗಳ ಮೂಲಕ ಬರುತ್ತಾರೆಂದರೆ ಪೊಲೀಸಿನವರು ಹೋಗಿ ಅವರನ್ನು ಹೊಡೆಯುತ್ತಾರೆ. ಇಂತಹ ಒಂದು ಪರಿಸ್ಥಿತಿ ಆಗಬಾರದು. ನಿನ್ನೆ ದಿವಸ ರೈತರು ಟ್ರ್ಯಾಕ್ಟರ್‌ಗಳ ಮೂಲಕ ಏಕೆ ಬಂದರೆಂದರೆ, 13 ಸಾವಿರ ಕೋಟಿ ರೂಪಾಯಿಗಳು ಎಂದು ಮಾನ್ಯ ಸಚಿವರು ಅನೇಕ ಸಲ ಹೇಳುತ್ತಿದ್ದಾರೆ. ಆದರೆ ನಿನ್ನೆ ದಿವಸ ಕೇಳಿದಂತಹ ಪ್ರಶ್ನೆಗೆ ಎರಡು ವರ್ಷದಿಂದ ಖರ್ಚು ಮಾಡಿರುವಂತಹ ಹಣ 1,600 ಕೋಟಿ ರೂಪಾಯಿಗಳು ಎಂದು ತಿಳಿಸಿದರು. ಈ ರೀತಿ ಖರ್ಚು ಮಾಡಿದರೆ ನೀರು ಕೊಡುವುದಕ್ಕೆ ಎಷ್ಟು ವರ್ಷಗಳಾಗುತ್ತದೆ? ನಮ್ಮ ಮನೆಯಲ್ಲಿ ನಮ್ಮ ಅಣ್ಣ 4ನೇ ಸಲ ಜಿಲ್ಲಾಪಂಚಾಯತ್ ಸದಸ್ಯರಾಗಿದ್ದಾರೆ, ನಾನು ಎಂ.ಎಲ್.ಸಿ., ಆಗಿದ್ದೇನೆ, ನಮ್ಮ ಮನೆಯಲ್ಲಿಯೂ ಸಹ ಕುಡಿಯುವುದಕ್ಕೆ ನೀರಿಲ್ಲ. ಈ ರೀತಿ ನಮ್ಮ ಜಿಲ್ಲೆಗಳಲ್ಲಿ ನೀರಿನ ಹಾಹಾಕಾರವಿದೆ. ನಿನ್ನೆ ದಿವಸ ರೈತರು ಟ್ರ್ಯಾಕ್ಟರ್‌ಗಳ ಮೂಲಕ ಏಕೆ ಮುಷ್ಕರಕ್ಕೆ ಬಂದರು ಎಂದರೆ,

ಸರ್ಕಾರ ತ್ವರಿತವಾಗಿ ಹಣವನ್ನು ಕೊಟ್ಟು ಬೇಗ ನಮಗೆ ಕುಡಿಯುವುದಕ್ಕೆ ನೀರನ್ನು ಕೊಡಲಿ ಎನ್ನುವ ಉದ್ದೇಶದಿಂದ ಬಂದಂತಹ ರೈತರಿಗೆ ಈ ಸರ್ಕಾರ ಮಾಡುವಂಥದ್ದು ಏನು? ರೈತರು ಟ್ರ್ಯಾಕ್ಟರ್‌ಗಳ ಮೂಲಕ ಬಂದರೆ ಟ್ರಾಫಿಕ್ ಜಾಮ್ ಆಗುತ್ತದೆಯೆಂದು ಅವರನ್ನು ಹೊಡೆದು ಕಳಿಸುವಂತಹ ಕೆಲಸ ಸರ್ಕಾರ ಮಾಡುತ್ತಿದೆ. ಖಂಡಿತವಾಗಿಯೂ ಇದು ಖಂಡನೀಯ. ನಾನು ಪ್ರತೀಸಲ ಇದರ ಬಗ್ಗೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಿನ್ನೆ ದಿವಸ ಕೂಡ ಕೇಳದ್ದೇನೆ. ಯಾವ ಕಾಲಕ್ಕೆ ನೀರನ್ನು ಕೊಡುತ್ತೀರಿ ಎಂದು ಕೇಳಿದಂತಹ ಪ್ರಶ್ನೆಗೆ ಖಂಡಿತವಾಗಿಯು ನಿಖರವಾದಂತಹ ಉತ್ತರವಿಲ್ಲ. ಅಲ್ಲಿನ ಜನರು ಜಮೀನನ್ನು ಯಾವಾಗ ಕೊಡುತ್ತಾರೆ ಎಂಬುದನ್ನು ನೋಡಿಕೊಂಡು ನಿಮಗೆ ತಿಳಿಸುತ್ತೇವೆಂದು ಹೇಳುತ್ತಾರೆ. ಈ ರೀತಿಯಾದರೆ ಯಾವಾಗ ನೀರು ಕೊಡುವುದು?

**ಸಭಾಪತಿಯವರು:–** ಈಗ ನೀವು ನಿನ್ನೆ ದಿವಸ ನಡೆದಂತಹ ಘಟನೆಯ ಬಗ್ಗೆ ಮಾತನಾಡುತ್ತೀರೋ ಅಥವಾ ನೀರಿನ ಬಗ್ಗೆ ಮಾತನಾಡುತ್ತೀರೋ? ನೀರಿನ ಬಗ್ಗೆ ನೀವು ಮಾತನಾಡುವುದಾದರೆ ನನಗೆ ನೊಟೀಸ್ ಕೊಡಬೇಕು.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ನೀರನ್ನು ಕೊಟ್ಟರೆ ಯಾರೂ ಸಹ ಮುಷ್ಕರವನ್ನೇ ಮಾಡುವುದಿಲ್ಲ.

**ಸಭಾಪತಿಯವರು:–** ಆಯಿತು ಬಿಡಿ. ಮಾನ್ಯ ಶಾಣಪ್ಪನವರೇ, ತಾವು 5 ನಿಮಿಷ ಮಾತನಾಡಿ.

**ಶ್ರೀ ಕೆ.ಬಿ,ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ನಾನು ಕೇವಲ ಕೆಲವೇ ವಿಷಯಗಳನ್ನು ಮಾತನಾಡಬಯಸುತ್ತೇನೆ. ಇಡೀ ದೇಶದಲ್ಲಿ ರೈತ ಸಂಘಟನೆಗಳು ತಮ್ಮದೇ ಆದಂತಹ ರೀತಿಯಲ್ಲಿ ಹೋರಾಟ ಮಾಡುತ್ತಾರೆ. ಆದರೆ ನಿನ್ನೆ ದಿವಸ ರೈತರು ತನ್ನ ಕಬ್ಬಿನ ಬೆಲೆಗಾಗಿ ಹೋರಾಟ ಮಾಡಲಿಲ್ಲ, ಅಥವಾ ಭತ್ತದ ಬೆಲೆಗಾಗಲಿ, ಜೋಳದ ಬೆಲೆಗಾಗಲಿ, ತೊಗರಿಯ ಬೆಲೆಗಾಗಲಿ ಹೋರಾಟ ಮಾಡಲಿಲ್ಲ. ನಿನ್ನೆ ದಿವಸ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಗ್ರಾಮಾಂತರ ಪ್ರದೇಶದಿಂದ ರೈತ ಮುಖಂಡರ ಮುಖಾಂತರ ಸಾವಿರಾರು ಜನ ರೈತರು ಈ ಭಾಗದ ನೀರಿನ ಸಮಸ್ಯೆಯ ಬಗ್ಗೆ ಕೇಳುವುದಕ್ಕೆ ಬಂದಿದ್ದರು. ಸರ್ಕಾರದ ಕಣ್ಣು ತೆರೆಸುವುದಕ್ಕೆ ಬಂದಿದ್ದರು. ನಾನು ಎತ್ತಿನ ಹೊಳೆಯ ಇತಿಹಾಸವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಿನ್ನೆ ಬಂದಂತಹ

ಸಮಸ್ಯೆಯನ್ನು ಸರ್ಕಾರ ಬಹಳ ಸಮಾಧಾನದಿಂದ ಪರಿಹರಿಸಬಹುದಾಗಿತ್ತು ಎಂಬುದು ನಮ್ಮ ಅನಿಸಿಕೆ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ನಾನು ಚಿಕ್ಕಬಳ್ಳಾಪುರಕ್ಕೆ ಹೋದಾಗ ನಾನು ಇಂಥವರನ್ನು ಭೇಟಿ ಆಗಿದ್ದೆ, ಆದರೂ ಅವರು ನಿನ್ನೆ ದಿವಸ ದೇವನ ಹಳ್ಳಿಯಿಂದ ಹಿಡಿದು ಫ್ರೀಡಂ ಪಾರ್ಕ್‌ವರೆಗೂ ಬಂದರು, ಅದನ್ನು ಪೊಲೀಸರು ಎಷ್ಟೇ ಪ್ರಯತ್ನ ಪಟ್ಟರು ಅವರು ಬರುವುದನ್ನು ತಡೆಯುವುದಕ್ಕೆ ಆಗಲಿಲ್ಲ. ರೈತರು ಅದರಿಂದಾಗಿ ಬಹಳ ferocious ಆದರು. ಆದಕಾರಣ ನಾವು ಲಾಠಿ ಚಾರ್ಜ್ ಮಾಡಬೇಕಾಯಿತು ಎಂದು ಬಹಳ ಸಮಂಜಸವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನೀವು ಚಿಕ್ಕಬಳ್ಳಾಪುರಕ್ಕೆ ಹೋಗಿ ರೈತರನ್ನು ಭೇಟಿ ಆಗುತ್ತೀರಿ, ಆದರೆ ರೈತರು ಫ್ರೀಡಂ ಪಾರ್ಕಿಗೆ ಬಂದಾಗ ತಾವು, ಹಾಗೂ ಮಾನ್ಯ ಗೃಹ ಸಚಿವರುಗಳು ಹೋಗಿ ಮಾತನಾಡಿದ್ದರೆ ಅವರಿಗೆ ಸಮಾಧಾನವಾದರೂ ಆಗುತ್ತಿತ್ತು.

**ಶ್ರೀ ಜಿ.ಪರಮೇಶ್ವರ್(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ಮಹದೇವ್ ಪ್ರಸಾದ್‌ರವರು ಫ್ರೀಡಂ ಪಾರ್ಕಿಗೆ ಹೋಗಿ ರೈತರನ್ನು ಭೇಟಿ ಮಾಡಿದ್ದಾರೆ. ಆದರೂ ಸಹ ಅವರು oblige ಮಾಡಲಿಲ್ಲ. ಮಾನ್ಯ ಸಚಿವರೂ ಸಹ ಅವರೊಂದಿಗೆ ಸೇರಿಕೊಳ್ಳಬೇಕೆಂದು ಪ್ರಯತ್ನ ಮಾಡಿದಾಗ ಸುಮಾರು 189 ಜನ ರೈತರನ್ನು ವಶಕ್ಕೆ ತೆಗೆದುಕೊಂಡಿದ್ದು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, somewhere, you have not handled the things properly.

**ಸಭಾಪತಿಯವರು:-** ಆಯಿತು ನಿಮ್ಮ ಅಭಿಪ್ರಾಯವನ್ನು ಹೇಳಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಮುಖ್ಯಮಂತ್ರಿಯವರು ನಾವು ಲಾಠಿ ಚಾರ್ಜ್ ಮಾಡಿರಲಿಲ್ಲ, ನಾವು ಗೋಲಿಬಾರ್ ಮಾಡಲಿಲ್ಲ, ಗೋಲಿಬಾರ್‌ನಿಂದಾಗಿ ರೈತ ಸತ್ತಿಲ್ಲ ಎಂದು ಹೇಳಿದರು. ಆದರೆ ಆ ರೀತಿ ನೀವು ಮಾಡದೆಯೇ ಸಾವಿರಾರು ಜನ ರೈತರು ಸತ್ತಿದ್ದಾರೆ. You have not made them to die. You have created such a situation that they have to die. Suicide ಮಾಡಿಕೊಂಡಿರುವಂತಹ ರೈತರ ಕುಟುಂಬದವರಿಗೆ ಸರ್ಕಾರ ಏನು ಸಹಾಯ ಮಾಡುತ್ತಿಲ್ಲ. ನೀವು ಗೋಲಿಬಾರ್ ಮಾಡಿದ್ದರಿಂದ ಸಾವಿರಾರು ಜನ ರೈತರು ಸತ್ತಿದ್ದಾರೆಂದು ನಾನು ಹೇಳುತ್ತಿಲ್ಲ, ಎಲ್ಲೋ ಒಂದಿಬ್ಬರು ಗೋಲೀಬಾರ್‌ನಿಂದಾಗ ಸಾವನ್ನಪ್ಪಿರಬಹುದು. ಆದರೆ ಸಾವಿರಾರು ಜನ ರೈತರು ತಮ್ಮ ಸರ್ಕಾರದ ತಪ್ಪು ನೀತಿಯಿಂದಾಗಿ ಸಾಯುತ್ತಿದ್ದಾರೆ. ಅದಕ್ಕಾಗಿ ಸರ್ಕಾರ ಕೊಟ್ಟಂತಹ ಉತ್ತರ

ಸಮಂಜಸವಾಗಿಲ್ಲ, we would not like to have this sort of answer from the Hon'ble Home Minister. Therefore, we give a walk out to you.

**(ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತಾ ಸಭೆಯಿಂದ ಹೊರ ನಡೆದರು)**

**ಸಭಾಪತಿಯವರು:–** ಮಾನ್ಯ ಸಭಾ ನಾಯಕರು ಸಭೆಯ ಮುಂದೆ ಇಡಲಾಗುವ ಕಾಗದ ಪತ್ರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಇರುವಂಥದ್ದನ್ನು ಓದಬೇಕು.

**ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಸನ್ಮಾನ್ಯ** ಸಭಾಪತಿಯವರೇ, ಭಾರತದ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ ಮಾರ್ಚ್ 2015ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಿಕರು, ಮತ್ತು ಮಹಾ ಲೆಕ್ಕ ಪರಿಶೋಧಕರು ನೀಡಿರುವ ಆರ್ಥಿಕ ವಲಯ ಮತ್ತು ರಾಜಸ್ವ ವಿಭಾಗದ ಮೇಲಿನ ವರದಿಯನ್ನು ಸದನದಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಈಗ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಭಾಷಣ ಮಾಡಲು ನನ್ನ ಬಳಿ ಎಷ್ಟು ಸಮಯ ಉಳಿದಿದೆ ಎಂಬುದನ್ನು ನಾನು ಅಂದಾಜು ಲೆಕ್ಕ ಮಾಡಿದ್ದೇನೆ. It cannot be to the last minute. ಅಂದಾಜು ನನ್ನ ಬಳಿ 180 ನಿಮಿಷಗಳ ಕಾಲಾವಕಾಶ ಇದೆ. ಹಾಗಾಗಿ ಮಾನ್ಯ ಗೌರವಾನ್ವಿತ ಸದಸ್ಯರುಗಳಿಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ನಮ್ಮಲ್ಲಿ ಒಂದು ಪದ್ಧತಿ ಇದೆ. ಅದು ನಮ್ಮ ಸಂವಿಧಾನದೊಳಗೆ ಇರುವುದನ್ನೇ ನಾನು ಉಲ್ಲೇಖ ಮಾಡಿದ್ದೇನೆ. ಪುನಃ ಅದನ್ನು ತೆಗೆದು ನೋಡಿದೆ. ಇರುವ ಸಮಯವನ್ನು ಸದಸ್ಯರ ಸಂಖ್ಯೆಯಿಂದ ಭಾಗಿಸಬೇಕು. ಆದರೆ ನಮ್ಮಲ್ಲಿ ಇರುವಂತಹ ಸದಸ್ಯರ ಸಂಖ್ಯೆ 72. 72ರಲ್ಲಿ ಸಭಾಪತಿ, ಉಪ ಸಭಾಪತಿ, ಸಭಾ ನಾಯಕರು, ವಿರೋಧ ಪಕ್ಷದ ನಾಯಕರು ಇವರೆಲ್ಲರನ್ನು ತೆಗೆದರೆ ಸುಮಾರು 10 ಜನರು ಈ ಪಟ್ಟಿಯಲ್ಲಿ ಸಿಗುವುದಿಲ್ಲ. ಹಾಗಾಗಿ ಉಳಿದ 62 ಜನರಲ್ಲಿ 60 ಜನರು ಎಂದು ತಿಳಿದುಕೊಂಡಿದ್ದೇನೆ. ಅದನ್ನು ಭಾಗಿಸಿದರೆ ಒಬ್ಬರಿಗೆ 3 ನಿಮಿಷ ಸಿಗುತ್ತದೆ. ಈ ರೀತಿ ನಾನು ಒಬ್ಬರಿಗೆ 3 ನಿಮಿಷ ಎಂದು ಹೇಳಿದಾಗ ಆಯಾಯಾ ಪಕ್ಷಕ್ಕೆ ಒಟ್ಟಾರೆಯಾಗಿ ಎಷ್ಟು ಸಮಯ ಸಿಗುತ್ತದೆ ಎಂದು ಲೆಕ್ಕ ಮಾಡಿದ್ದೇನೆ. ಯಾರ್‍ಯಾರಿಗೆ ಸಿಗುವುದಿಲ್ಲವೆಂದರೆ, ಮಾನ್ಯ ಸಭಾ ನಾಯಕರಿಗೆ ಸಿಗುವುದಿಲ್ಲ, ಮಾನ್ಯ ಗೃಹ

ಸಚಿವರಿಗೆ ಸಿಗುವುದಿಲ್ಲ, ಈ ರೀತಿ ಎಲ್ಲಾ ಲೆಕ್ಕ ಮಾಡಿದಾಗ Hon'ble Member moving the Motion and Hon'ble Member, who is seconding the Motion, ಇವರೆಲ್ಲರನ್ನೂ ತೆಗೆದಾಗ ಕಾಂಗ್ರೆಸ್ ಪಕ್ಷದಲ್ಲಿ 22 ಜನ ಸದಸ್ಯರು ಉಳಿಯುತ್ತಾರೆ. 22 X 3 = 66 ನಿಮಿಷಗಳು ಕಾಂಗ್ರೆಸ್ ಪಕ್ಷಕ್ಕೆ ಸಿಗುತ್ತದೆ. ಅದೇ ರೀತಿ ಬಿಜೆಪಿ ಪಕ್ಷಕ್ಕೆ ಲೆಕ್ಕ ಮಾಡಿದಾಗ ಆ ರೀತಿ 24 ಜನರು. ಉಳಿಯುತ್ತಾರೆ. ಅಂದರೆ ಅವರಿಗೆ 72 ನಿಮಿಷ ಸಿಗುತ್ತದೆ.

**(ಈ ಹಂತದಲ್ಲಿ ಜೆ.ಡಿ.ಎಸ್. ಮತ್ತು ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳು ಸದನಕ್ಕೆ ಹಾಜರಾದರು)**

ಜೆ.ಡಿ.ಎಸ್.ನಲ್ಲಿ ಇಬ್ಬರಿಲ್ಲ. ಒಂದು, ಉಪ ಸಭಾಪತಿಯವರು ಹಾಗೂ ಮಾನ್ಯ ಬಸವರಾಜ್ ಹೊರಟ್ಟಿಯವರು ಈಗ ಮಾತನಾಡುವುದರಿಂದ ಅವರು ಈ ಲೆಕ್ಕದಲ್ಲಿ ಬರುವುದಿಲ್ಲ. ಆದಕಾರಣ ಅವರಿಗೆ 27 ನಿಮಿಷ ಕಾಲಾವಕಾಶ ಸಿಗುತ್ತದೆ. ಸ್ವತಂತ್ರ ಪಕ್ಷದವರಿಗೆ 15 ನಿಮಿಷ ಕಾಲಾವಕಾಶ ಸಿಗುತ್ತದೆ. ಈ ರೀತಿ ನಾನು ಸಮಯವನ್ನು ಹಂಚಿಕೆ ಮಾಡಿದ್ದೇನೆ. ಈಗ ಜೆ.ಡಿ.ಎಸ್. ಅವರು 27 ನಿಮಿಷ ಕಾಲಾವಕಾಶದಲ್ಲಿ ಒಬ್ಬರೇ ಮಾತನಾಡುತ್ತಾರೋ ಅಥವಾ ಇಬ್ಬರು ಮಾತನಾಡುತ್ತಾರೋ ಅದು ಅವರಿಗೆ ಬಿಟ್ಟಂತಹ ವಿಷಯ. ಆದರೆ ನಾನು ಮೊದಲು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಅವಕಾಶ ಕೊಡುತ್ತೇನೆ. ಮೊನ್ನೆ ದಿವಸ ನಡೆದಂತಹ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಮಾನ್ಯ ಹೊರಟ್ಟಿಯವರಿಗೆ 40 ನಿಮಿಷ ಕಾಲಾವಕಾಶ ನೀಡಲಾಗಿದೆ. ಅದು ಈ 180 ನಿಮಿಷದ ಲೆಕ್ಕದಲ್ಲಿ ಬರುವುದಿಲ್ಲ. ಅದು ಬಿಟ್ಟು 27 ನಿಮಿಷ ಇರುತ್ತದೆ. ಅವರು ಯಾವ ರೀತಿ ಹಂಚಿಕೊಳ್ಳುತ್ತಾರೋ ಅವರಿಗೆ ಬಿಟ್ಟಂತಹ ವಿಷಯ. ಅದಾದಮೇಲೆ ನಿನ್ನೆ ದಿವಸ ಕಾಂಗ್ರೆಸ್ ಪಕ್ಷದಿಂದ ಮಾತನಾಡಿದವರೆಲ್ಲರನ್ನು ಬಿಟ್ಟು ಅವರೊಗೆ 66 ನಿಮಿಷ ಕಾಲಾವಕಾಶ ಸಿಗುತ್ತದೆ. ಅದನ್ನು ಯಾವ ರೀತಿ ಹಂಚಿಕೊಳ್ಳುತ್ತೀರೋ ಹಂಚಿಕೊಳ್ಳಿ. ನನ್ನದೊಂದು ಸಲಹೆ ಏನೆಂದರೆ, ಉದಾಹರಣೆಗೆ 66 ನಿಮಿಷ ಎಂದು ಹೇಳುತ್ತೇನೆ, ನೀವು 6 ಜನರಿಗೆ ಹತ್ತತ್ತು ನಿಮಿಷ ಎಂದು ಹೇಳಿದರೆ ಸೂಕ್ತವಾಗುತ್ತದೆ. ಆ ರೀತಿ ಮಾಡಿ ಎಂಬುದು ನನ್ನ ಸಲಹೆ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಕಡೆಯಿಂದ ಹತ್ತು ಜನರ ಪಟ್ಟಿಯನ್ನು ಕಳುಹಿಸಿದ್ದೇನೆ. ಆದಕಾರಣ ಒಬ್ಬೊಬ್ಬರಿಗೆ ಸುಮಾರು 15 ರಿಂದ 20 ನಿಮಿಷ ಕಾಲಾವಕಾಶ ಕೊಟ್ಟರೆ ಒಳ್ಳೆಯದು. ಬೇಕಾದರೆ ಸದನ ತಡವಾಗಿ ಅಂದರೆ ರಾತ್ರಿ 8-9 ಗಂಟೆಯವರೆಗಾದರು ನಡೆಯಲಿ. ಹೊಸದಾಗಿ ಬಂದಂತಹ ಸದಸ್ಯರಿಗೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಹತ್ತು ಜನರಿಗೆ ಅವಕಾಶ ಕೊಟ್ಟಿರುವುದು ತುಂಬಾ ಸಂತೋಷ. ಅದೇ ರೀತಿ ಹೊಸದಾಗಿ ಬಂದಿರುವಂತಹ ಸದಸ್ಯರಿಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ. ಈ ಸದನಕ್ಕೆ ಹೊಸದಾಗಿ ತುಂಬಾ ಜನ ಸದಸ್ಯರು ಬಂದಿದ್ದಾರೆ.

**ಶ್ರೀ ಆರ್.ವಿ.ವೆಂಕಟೇಶ್:–** ನಮ್ಮಲ್ಲಿ ಹೊಸದಾಗಿ ಬಂದಿರುವಂಥವರು ಬಜೆಟ್ ಮೇಲೆ ಮಾತನಾಡುತ್ತಾರೆ. ಅದೇ ರೀತಿ ಬೇರೆ ಕಡೆಯಿಂದ ಹೊಸದಾಗಿ ಬಂದಿರುವಂಥವರಿಗೂ ಅವಕಾಶ ಕೊಡಿ. ಸ್ವಲ್ಪ ತಡವಾಗಿ ಸದನ ನಡೆದರೂ ಪರವಾಗಿಲ್ಲ.

**ಸಭಾಪತಿಯವರು:–** ನೋಡೋಣ. ಆದರೆ ಎಲ್ಲರಿಗೂ 15 ನಿಮಿಷ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರಿಗಾದರು ಒಬ್ಬರು ಅಥವಾ ಇಬ್ಬರಿಗೆ ಅವಕಾಶ ಕೊಡುತ್ತೇನೆ. ಆದರೆ ಎಲ್ಲರಿಗೂ 15 ನಿಮಿಷ ಮಾತನಾಡುವುದಕ್ಕೆ ಆಗುವುದಿಲ್ಲ.

(ಮುಂದು)

(71) 11:40 04-02-2016 ಸಿಎಸ್:ಎಕೆ

**ಸಭಾಪತಿಯವರು:-** ಎಲ್ಲರೂ 15 ನಿಮಿಷಗಳ ಕಾಲ ಮಾತನಾಡುವುದಕ್ಕೆ ಆಗುವುದಿಲ್ಲ. ಒಂದಿಬ್ಬರು ಮಾತನಾಡಬಹುದು. ಆದರೆ ಎಲ್ಲರಿಗೂ ಸಾಧ್ಯವಾಗುವುದಿಲ್ಲ. 10-10 ನಿಮಿಷ ಒಬ್ಬೊಬ್ಬರು ಮಾತನಾಡಬಹುದು.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ತಮ್ಮ ಗಮನಕ್ಕೆ ತರುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯಲ್ಲಿ ನಾಳೆ ಬೆಳಿಗ್ಗೆ ಉತ್ತರ ಕೊಡುತ್ತಾರೆ. ಇಲ್ಲಿ ಮಧ್ಯಾಹ್ನದ 3 ಗಂಟೆಗೆ ಮೇಲೆ ಉತ್ತರ ಕೊಡುತ್ತಾರೆ.

**ಸಭಾಪತಿಯವರು:-** ಭಾರತೀಯ ಜನತಾ ಪಕ್ಷದವರಿಗೂ ಸಹ 72 ನಿಮಿಷಗಳ ಕಾಲಾವಕಾಶ ಸಿಗುತ್ತದೆ. ಇದನ್ನು ಯಾವ ರೀತಿಯಲ್ಲಿ ಹಂಚಿಕೊಳ್ಳುತ್ತೀರಾ ನೋಡಿ. ಈಗ ನಮ್ಮ ಕಾರ್ಯ ಕಲಾಪಗಳ ಸಲಹಾ ಸಮಿತಿಯಲ್ಲಿ ನಿರ್ಣಯಿಸಿದಂತೆ ಹೊರಟ್ಟಿಯವರನ್ನು ಜನತಾದಳ ಪಕ್ಷದ ನಾಯಕರನ್ನಾಗಿ ನೇಮಿಸಿ, ಈ ಯಾವುದೇ ಲೆಕ್ಕದಲ್ಲಿ ಬಾರದ ಹಾಗೆ ಸಮಯವನ್ನು ಅವರಿಗೆ ಅಲಾಟ್ ಮಾಡಲಾಗಿದೆ. ಅವರಿಗೆ 40 ನಿಮಿಷಗಳ ಕಾಲಾವಕಾಶವನ್ನು ನೀಡಲಾಗಿದೆ. ಈ ಸಮಯದಲ್ಲಿ ಹೊರಟ್ಟಿಯವರು ತಮ್ಮ ಭಾಷಣವನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

(71) 11:40 04-02-2016 ಸಿಎಸ್:ಎಕೆ

## ರಾಜ್ಯಪಾಲವ ಭಾಷಣದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ

**ಶ್ರೀ ಬಸವರಾಜ ಹೊರಟ್ಟಿ( ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಮೊದಲಿಗೆ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ವೀರಣ್ಣ ಮತ್ತಿಕಟ್ಟಿಯವರು ತಮ್ಮ ರಾಜ್ಯಪಾಲರ ಭಾಷಣದ ಮೇಲಿನ ವಂದಾನಾ ನಿರ್ಣಯವನ್ನು ಪ್ರಾರಂಭಿಸುವ ಪ್ರಾರಂಭದಲ್ಲಿಯೇ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡು ಒಂದು ಗಂಟೆಯ ಅವಧಿಯಲ್ಲಿಯೇ ಅನ್ನಭಾಗ್ಯ ಯೋಜನೆಯನ್ನು ವಿಸ್ತಾರ ಮಾಡಿದರು ಎನ್ನುವ ಮಾತನ್ನು ಹೇಳಿದರು. ಆದರೆ ಈ ಅನ್ನಭಾಗ್ಯ ಯೋಜನೆಯಿಂದ ಎಷ್ಟು ಜನರಿಗೆ ಭಾಗ್ಯ ದೊರಕಿದೆ ಎನ್ನುವುದನ್ನು ಸರ್ಕಾರ ತಿಳಿಸಬೇಕು. ಅನ್ನಭಾಗ್ಯದಲ್ಲಿ ದಿನಾ ದಿನಾ ಟ್ರಕ್‌ಗಟ್ಟಲೆ ಅಕ್ಕಿಯ ಲೂಟಿ ನಡೆಯುತ್ತಿದೆ. ಈ ಅಕ್ಕಿಯನ್ನೆಲ್ಲ ಮಾರಿಕೊಳ್ಳುತ್ತಾರೆ. ಯೋಜನೆಗಳನ್ನು ತರುವುದು ದೊಡ್ಡ ವಿಚಾರವಲ್ಲ. ಅವು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆಯೇ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಪ್ರತಿ ದಿವಸ 400-500 ಕ್ವಿಂಟಾಲ್ ಅಕ್ಕಿಗಳನ್ನು ಗೋಡಾನ್‌ಗಳಲ್ಲಿಯೇ ಲೂಟಿ ಮಾಡಲಾಗುತ್ತಿದೆ. ಸರ್ಕಾರ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ನಾನು ಪ್ರಶಂಸೆಯನ್ನು ಮಾಡುತ್ತೇನೆ. ಆದರೆ ಈ ಯೋಜನೆ ಯಾರಿಗೆ ತಲುಪಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಅರಿವು ಇಲ್ಲ. ಈ ಮೂರು ವರ್ಷಗಳಲ್ಲಿ ಏನೇನು ತಪ್ಪುಗಳಾಗಿವೆ ಅವುಗಳನ್ನು ಹೇಗೆ ಸರಿಪಡಿಸಬಹುದು ಎನ್ನುವುದನ್ನು ಸರ್ಕಾರ ಹೇಳಬೇಕು. ಏನೇನು ತಪ್ಪುಗಳಾಗಿವೆ ಎಂದರೆ ಮೊದಲಿಗೆ 30 ಕೆಜಿ ಅಕ್ಕಿಯನ್ನು ನೀಡಲಾಗುತ್ತಿತ್ತು. ನಮ್ಮ ಕಡೆಗಳಲ್ಲಿ ಒಂದು ಕುಟುಂಬಕ್ಕೆ 5 ರಿಂದ 10 ಕೆಜಿ ಅಕ್ಕಿ ಸಾಕಾಗುತ್ತದೆ. ಅವರು ತಮಗೆ ಬೇಕಷ್ಟು ಇಟ್ಟುಕೊಂಡು 20 ಕೆಜಿ ಅಕ್ಕಿಯನ್ನು ಅಲ್ಲಿಯೇ ಮಾರಿಕೊಳ್ಳುತ್ತಾರೆ. ಪೇಟೆಗಳಿಗೆ ತಂದು ಈ ಅಕ್ಕಿಯನ್ನು ಮಾರಿಕೊಳ್ಳುತ್ತಾರೆ. ಇದೊಂದು ದೊಡ್ಡ ದಂಧೆ ಆಗಿದೆ. ಸರ್ಕಾರ ತಂದಿರುವ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡಿ ಸರ್ಕಾರದ ಹಣ ಮತ್ತು ಜನರ ತೆರಿಗೆಯ ಹಣವನ್ನು ಹಾಳು

ಮಾಡದಿರುವ ದೃಷ್ಟಿಯಿಂದ ಸರ್ಕಾರ ಮತ್ತು ಅಧಿಕಾರಿಗಳು ಕೆಲಸವನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಮುಂಬರುವ ವರ್ಷಗಳಲ್ಲಿ ಜಾರಿಗೆ ತರುವ ಕಾರ್ಯಕ್ರಮಗಳ ಬಗ್ಗೆ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ಹಿಂದಿನ ವರ್ಷಗಳಲ್ಲಿ ಇದ್ದ ಯೋಜನೆಗಳನ್ನೇ ಮುಂದುವರೆಸುವ ಮೂಲಕ ಹೊಸ ಬಾಟಲಿಯನ್ನು ಹಳೆಯ ಮದ್ಯವನ್ನು ಹಾಕಿದಂತಾಗಿದೆ. ಸರ್ಕಾರ ತನ್ನ ಶಬ್ದ ಭಂಡಾರದ ಮೂಲಕ ಜನರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿರುವುದಾಗಿ ಹೇಳಿದೆ. ಆದರೆ ಈ ಯೋಜನೆಗಳಿಗೆ ದೂರದೃಷ್ಟಿ ಇಲ್ಲ, ಮುಂದಾಲೋಚನೆ ಇಲ್ಲ. ಕೇವಲ ಭಾಗ್ಯಗಳನ್ನು ಹೆಸರಿಸಲಾಗಿದೆ, ಇದರಿಂದ ಕೊನೆಗೆ ಇದು ಸರ್ಕಾರಕ್ಕೆ ದುರ್ಭಾಗ್ಯ ಆಗುತ್ತದೆ. ಇದನ್ನು ಸರ್ಕಾರದವರು ನೆನಪಿಟ್ಟುಕೊಳ್ಳಬೇಕು. ಈ ಭಾಗ್ಯಗಳನ್ನು ಮಾಡಿರುವುದರಲ್ಲಿ ಯಾವುದು ಸರಿಯಾಗಿ ನಡೆಯುತ್ತಿದೆ. ಇದನ್ನೆಲ್ಲ ನೋಡಿಕೊಳ್ಳಬೇಕಲ್ಲವೇ? ಈಗ ಮಕ್ಕಳಿಗೆ ಬಿಸಿಯೂಟದ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಸಾಕಷ್ಟು ತೊಂದರೆಗಳಿದ್ದರೂ ಸಹ ಇವತ್ತಿನವರೆಗೆ ಅದನ್ನು ಸುಧಾರಣೆ ಮಾಡುವ ಕೆಲಸವನ್ನು ಮಾಡಿರುವುದಿಲ್ಲ. ಈ ಅನ್ನಭಾಗ್ಯ ಬಹಳ ಒಳ್ಳೆಯ ಸ್ಕೀಮ್ ಇದರ ಮೂಲಕ ಬಡವರಿಗೆ ಅನ್ನ ನೀಡುವ ಯೋಜನೆಯನ್ನು ಸರ್ಕಾರ ಮಾಡಿದೆ. ಇದರಲ್ಲಿ ಎಷ್ಟು ಅನಾಹುತಗಳಾಗುತ್ತವೆ, ಇದರಲ್ಲಿ ಏನೇನು ಆಗುತ್ತವೆ ಎನ್ನುವುದನ್ನು ನಾವು ನೋಡುವುದೇ ಇಲ್ಲ. ಇದರಿಂದ ಕೆಲವರು ಶ್ರೀಮಂತರಾಗುತ್ತಾರೆ. ಸರ್ಕಾರದ ಹಣವನ್ನು ಪಡೆದುಕೊಂಡು ಅವರು ವ್ಯವಹಾರ ನಡೆಸುತ್ತಾರೆ. ಇದಕ್ಕೆ ಎಲ್ಲಾ ಅಧಿಕಾರಿಗಳು ಷಾಮೀಲಾಗಿದ್ದಾರೆ. ಅಕ್ಕಿ ಜೋಳ, ಗೋಧಿ ಏನು ಧಾನ್ಯಗಳಿವೆ ಅವು ನೇರವಾಗಿ ಉಗ್ರಾಣಗಳಿಗೆ ಹೋಗುತ್ತವೆ. ಹುಬ್ಬಳ್ಳಿಯಲ್ಲಿ 800 ಕ್ವಿಂಟಾಲ್ ಅಕ್ಕಿಯನ್ನು ಉಗ್ರಾಣದಲ್ಲಿ ಸೀಜ್ ಮಾಡಿದರು. ಅದರ ಬಗ್ಗೆ ಯಾರ ಮೇಲೂ ಸಹ ಕ್ರಮ ಕೈಗೊಳ್ಳಲಿಲ್ಲ. ಇದನ್ನು ಯಾವುದಾದರೂ ರೀತಿಯಲ್ಲಿ ಸರಿಪಡಿಸಬೇಕು. ಈ ಅಕ್ಕಿಯನ್ನು 29 ರೂಪಾಯಿಗಳನ್ನು ಕೊಟ್ಟು ಹೊರ ರಾಜ್ಯಗಳಿಂದ ತರುತ್ತೀರಿ., ನಮ್ಮ ರಾಜ್ಯದಲ್ಲಿ

ಜೋಳ ಬೆಳೆಯುವವರಿಗೆ 23 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಹೊರಗಿನ ರಾಜ್ಯದವರಿಗೆ ನಾವು ಸಾಕಷ್ಟು ಹಣವನ್ನು ನೀಡುತ್ತೇವೆ. ನಮ್ಮ ರಾಜ್ಯದ ರೈತರಿಗೆ ಹಣ ನೀಡಬೇಕು, ಅವರು ಹೆಚ್ಚಿಗೆ ನಾಲ್ಕು ರೂಪಾಯಿ ಕೊಡೋಣ ಎನ್ನುವ ಭಾವನೆ ನಮ್ಮ ಸರ್ಕಾರಕ್ಕೆ ಬರಬೇಕು. ರೈತರು ಬೆಳೆಯುವ ಬೆಳೆಗೆ ವೈಜ್ಞಾನಿಕವಾಗಿ ಬೆಂಬಲಬೆಲೆಯನ್ನು ಜಾರಿಗೆ ತರುವುದಿಲ್ಲ ಅಲ್ಲಿಯವರೆಗೆ ರೈತರ ಉದ್ಧಾರ ಆಗುವುದಿಲ್ಲ. ನಾವು ಸುಮ್ಮನೆ ಅವರ ಬಗ್ಗೆ ಮೊಸಳೆ ಕಣ್ಣೀರು ಹಾಕಿದಂತಾಗುತ್ತದೆ. ಅಂಗಡಿಗಳಲ್ಲಿ ನೋಡಿದರೆ ಈ ಧಾನ್ಯಗಳಿಗೆ ಒಂದು ನಿಖರವಾದ ಬೆಲೆಯನ್ನು ಹಾಕಿರುತ್ತಾರೆ. ಬೆಂಬಲಬೆಲೆ ಆಯೋಗ ಕೂಡ ಒಂದು ವರದಿಯನ್ನು ನೀಡಿದೆ. ಅದನ್ನು ಸಹ ಜಾರಿಗೊಳಿಸಿಲ್ಲ. ರಾಜ್ಯದಲ್ಲಿ ಭೀಕರವಾದ ಬರಗಾಲ ಇದ್ದರೂ ಸಹ ಈ ಸಾಲದ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಇಲ್ಲ. ಸಾಲದ ಬಗ್ಗೆ ಸರ್ಕಾರದ ನಿಲುವು ಏನು? ನೀರಾವರಿಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯನ್ನು ಮಾಡಲಾಗಿದೆ. ಕುಂಠಿತ ಸಾಗುತ್ತಿರುವ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಗ್ರಾಮೀಣ ಭಾಗದ ಜನರಿಗೆ ಮುಂದಿನ ವರ್ಷ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ತಿಳಿಸಬೇಕಾಗುತ್ತದೆ. ನೀರಾವರಿ ಯೋಜನೆಗಳಿಗೆ 1300-1600 ಕೋಟಿ ರೂಪಾಯಿಗಳನ್ನು ನೀಡುವುದನ್ನು ನಾನು ಒಪ್ಪುತ್ತೇನೆ. ಹಿಂದೆ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಎತ್ತಿನಹೊಳೆ ಯೋಜನೆಯ ಬಗ್ಗೆ ಹೇಳಿದ್ದರು. ಅದಕ್ಕಿನ್ನೂ 4-5 ವರ್ಷಗಳು ಬೇಕಾಗುತ್ತದೆ. ಕೋಲಾರದಲ್ಲಿ 1200-1500 ಅಡಿಗಳಷ್ಟು ಕೊರೆದರೂ ಸಹ ಅಂತರ್ಜಲ ಸಿಗುತ್ತಿಲ್ಲ. ಆದರೂ ಸಹ ಏಕೆ ಈ ಯೋಜನೆಗಳನ್ನು ಬೇಗ ಮಾಡುವುದಿಲ್ಲ. ಇದರಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿಸುತ್ತಿದೆಯೋ ಅಥವಾ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿದೆಯೋ ಗೊತ್ತಿಲ್ಲ. ಅಥವಾ ಇದರಲ್ಲಿ ಏನು ರಾಜಕಾರಣ ಇದೆ ಎನ್ನುವುದು ಬೇಕಲ್ಲ. ಈ ವಿಚಾರದಲ್ಲಿ ಸರ್ಕಾರ ಸ್ಪಷ್ಟವಾದ ಒಂದು ನಿಲುವನ್ನು ತಾಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಿ.ಆರ್.ರಮೇಶ್ ಎನ್ನುವವರೊಬ್ಬರು ರೈತರ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. ದಯಮಾಡಿ ಸರ್ಕಾರ ಈ ಪುಸ್ತಕವನ್ನು ಖರೀದಿಸಿ ಎಲ್ಲರಿಗೂ ಹಂಚಬೇಕು. ರೈತರ ಬಗ್ಗೆ ಎಷ್ಟು ಉತ್ತಮವಾದ ರೀತಿಯಲ್ಲಿ ಬರೆದಿದ್ದಾರೆಂದರೆ ಇದನ್ನು ಎಲ್ಲರೂ ಓದಬೇಕು. 1965ರಿಂದ ಇಲ್ಲಿಯವರೆಗೆ ಕೃಷಿಯಲ್ಲಿ ಯಾವ್ಯಾವ

ರೀತಿಯ ಬದಲಾವಣೆಗಳು ಆಗಿವೆ, ಇವತ್ತು ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಅವರು ಬರೆದಿದ್ದಾರೆ. ಅವರು30-40 ವರ್ಷಗಳ ಹಿಂದೆ ಆರೋಗ್ಯವಂತ ರೈತರಿಗೆ ಆತ್ಮಹತ್ಯೆಯ ಬಗ್ಗೆ ಗೊತ್ತಿರಲಿಲ್ಲ. ಅವರು ಕಷ್ಟ ಸಹಿಸುವವರಾಗಿದ್ದರು. ದೃಢಕಾಯರಾಗಿದ್ದು ಇಂದಿರುವ ಯಾವುದೇ ಸೌಲಭ್ಯಗಳು ಅವರಿಗೆ ಇರಲಿಲ್ಲ. ವಾತಾವರಣಕ್ಕೆ ಮತ್ತು ಭೂಮಿಯ ಗುಣಲಕ್ಷಣಗಳಿಗೆ ಅನುಗುಣವಾಗಿ ಅವರು ಕೃಷಿಯನ್ನು ಮಾಡುತ್ತಿದ್ದರು. ಈಗ ಆಗಿಲ್ಲ. ಅಧಿಕಾರಿಗಳಿಗೆ ಕೃಷಿಗಿಂತ ಅವರಿಗೆ ಸ್ಥಾನಮಾನಗಳು ಬೇಕು. ಇದಕ್ಕಾಗಿ ಇಲಾಖೆಗಳನ್ನು ವಿಭಜನೆ ಮಾಡಿದರು. ಪಶುಸಂಗೋಪನೆ, ತೋಟಗಾರಿಕೆ ಇಲಾಖೆಗಳನ್ನು ವಿಭಜಿಸಿದರು. ಕೃಷಿಯನ್ನೇ ಬೇರೆ ಮಾಡಿಕೊಂಡರು. ಹೀಗೆಲ್ಲ ಮಾಡಿಕೊಂಡು ರೈತರಿಗೆ ಯಾವುದೇ ರೀತಿಯ ಅನುಕೂಲ ಆಗಿಲ್ಲ. ಯಾವುದೇ ಸುಧಾರಣೆಗಳು ಅವರಿಗೆ ಆಗಿಲ್ಲ.

ಈ ಸಾವಯವ ಪದ್ಧತಿಯಲ್ಲಿ ಈ ಯೋಜನೆಗಳು ಜಾರಿಗೆ ಬರುವುದಕ್ಕೆ ಮೊದಲು ತಿಪ್ಪೆಯಲ್ಲಿ ನಾವು ಗೊಬ್ಬರಗಳನ್ನು ಉತ್ಪತ್ತಿ ಮಾಡುತ್ತಿದ್ದೆವು. ಹೊಲದಲ್ಲಿ ಮಳೆಯಾದಾಗ ಎರೆಹುಳುಗಳನ್ನು ಕಾಣುತ್ತಿದ್ದೆವು. ಈಗ ಅವುಗಳನ್ನೆಲ್ಲ ಔಷಧಿಗಳನ್ನು ಸಿಂಪಡಿಸಿ ಸಾಯಿಸಿಬಿಟ್ಟಿದ್ದೇವೆ. ಹಾಗಾಗಿ ಯಾವುದೇ ಅಧಿಕಾರಿ ಪರಿಣಿತಿ ಹೊಂದಿಲ್ಲ, ಸುಧಾರಣೆ ಆಗುತ್ತಿಲ್ಲ. ಅವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ. ನಾನು ಕೂಡ ಒಬ್ಬ ರೈತ ನಮ್ಮಲ್ಲಿ ಗಿಡಗಳನ್ನು ನೆಡುವುದಕ್ಕೆ ಇಲಾಖೆಯವರು ಬರುತ್ತಾರೆ. ಅವರನ್ನು ನೋಡಿ ನಾನು ನೀನು ಬರಬೇಡಪ್ಪ, ನೀನು ನನಗಿಂತ 10 ವರ್ಷ ಹಿಂದೆ ಇದ್ದೀಯಾ ಎಂದು ಹೇಳಿ ಕಳುಹಿಸಿದ್ದೇನೆ. ಯಾವ ಕಾಲಕ್ಕೆ ಗಿಡ ಹಾಕಬೇಕು, ಎಷ್ಟು ಆಳ ತೋಡಬೇಕು, ಏನು ಗೊಬ್ಬರ ಹಾಕಬೇಕು ಎನ್ನುವುದು ಏನೂ ಅವರಿಗೆ ಗೊತ್ತಿರುವುದಿಲ್ಲ. ಅಧಿಕಾರಿಗಳಿಗೆ ಓಡಾಡಲು ವಾಹನ ಕೊಡುತ್ತಾರೆ, ಅವರು ತೆಗೆದುಕೊಂಡು ಬಂದು ಹೋಗುತ್ತಿರುತ್ತಾರೆ ಅಷ್ಟೇ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ನಾವು ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ವ್ಯಕ್ತಿ ತನ್ನ ಸಾವಿನ ನಂತರ ತನ್ನನ್ನು ಹೇಡಿ ಎಂದು ಭಾವಿಸುತ್ತಾರೆ, ಇದರಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಕಳಂಕ ಬರುತ್ತದೆ ಎಂದು ಭಾವಿಸಿದ್ದರಿಂದ ಅವರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರಲಿಲ್ಲ ಎಂದು ಶ್ರೀ

(71) 11:40 04-02-2016 ಸಿಎಸ್:ಎಕೆ

ರಮೇಶ್‌ರವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಅಂದರೆ ತಮ್ಮ ಕುಟುಂಬಕ್ಕೆ ಅವಮಾನ ಆಗುತ್ತದೆ ಎಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ, ಅವರ ಪ್ರಕಾರ ಉಸಿರು ಇದ್ದಾಗ ನಮಗೆ ಹೆಸರು ಇರುತ್ತದೆ, ಉಸಿರು ಹೋದರೂ ಸಮಾಜದಲ್ಲಿ ಶಾಶ್ವತವಾಗಿ ನನ್ನ ಹೆಸರು ಇರಬೇಕೆಂದು ಯಾರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರಲಿಲ್ಲ ಎಂದು ಹೇಳಿದ್ದಾರೆ. ಇವತ್ತು ಒಬ್ಬ ರೈತ ಸತ್ತರೆ 5-10 ಲಕ್ಷ ಪರಿಹಾರ ಕೊಡಿ ಎಂದು ನಾವೆಲ್ಲರೂ ಮಾತನಾಡಿಕೊಂಡು ಪ್ರಚಾರ ಗಿಟ್ಟಿಸುತ್ತೇವೆ. ಎಷ್ಟೇ ಹಣ ನೀಡಿದರೂ ಸಹ ಅವನ ಜೀವ ಹಿಂದಕ್ಕೆ ಬರುವುದಿಲ್ಲ. ರೈತರು ಸಾಯಲಾಗದ ಹಾಗೆ ಏನು ಮಾಡಬೇಕೆನ್ನುವುದನ್ನು ಸರ್ಕಾರ ಚಿಂತನೆ ಮಾಡಬೇಕೆನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

(ಮುಂದು)

**ಶ್ರೀ ಬಸವರಾಜ ಹೊರಟ್ಟಿ(ಮುಂದು):-** " ಅನ್ನದಾತ ಆತ್ಮಹತ್ಯೆ" ಎಂಬ ಶೀರ್ಷಿಕೆಯಲ್ಲಿ ಹುತಾತ್ಮನತೆ ನಾವು ಅವರನ್ನು ಬಿಂಬಿಸುತ್ತೇವೆ. ನಾವು-ನೀವು ಹೋಗುತ್ತೇವೆ, ಟಿವಿ ಯವರು ಬರುತ್ತಾರೆ ಅದನ್ನು ದೊಡ್ಡದಾಗಿ ಮಾಡಿ ಬಿಂಬಿಸುತ್ತಾರೆ. ಸಾವಿರಾರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಪ್ರಮಾಣಿಕವಾಗಿ ಎಷ್ಟು ಜನ ರೈತರು ತಮ್ಮ ಹೊಲಕ್ಕೆ ಸಾಲ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಇದನ್ನು ನಾವು ನೋಡುವುದಿಲ್ಲ. ನನ್ನ ಹಿಡಿದುಕೊಂಡೆ ಹೇಳುತ್ತೇನೆ, ನಾವು ಪ್ರಚಾರ ಪ್ರಿಯರಾಗಬಾರದು. ಅಧಿಕಾರ ನಡೆಸುವ ನಾವು ಪ್ರಚಾರಕ್ಕಾಗಿ ರೈತರನ್ನು ಬಳಸಿಕೊಳ್ಳಬಾರದು.

**(ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯರವರು ಸಭಾಪತಿಗಳ ಪೀಠವನ್ನು ಅಲಂಕರಿಸಿದರು)**

ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಸರ್ಕಾರ ಪರಿಹಾರವನ್ನು ನೀಡುತ್ತದೆ. ಅದನ್ನು ಹೆಚ್ಚು ಮಾಡಿ ಎಂದು ನಾವು ಹೇಳುತ್ತೇವೆ. ಆದರೆ ಎಷ್ಟೆ ಹೆಚ್ಚು ಮಾಡಿದ್ದರೂ ಸತ್ತ ವ್ಯಕ್ತಿ ಎದ್ದು ಬರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಅಧಿಕಾರಿ ಗ್ಯಾಲರಿಯಲ್ಲಿ ಯಾರು ಇಲ್ಲ, ಹೊರಟ್ಟಿಯವರೆ ನೀವು ಯಾರಿಗೆ ಹೇಳುತ್ತೀದ್ದಿರಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಅಧಿಕಾರಿಗಳ ಗ್ಯಾಲರಿಯಲ್ಲಿ ಯಾರು ಇಲ್ಲ. ಇಲ್ಲಿ ಇರುವ ಮಂತ್ರಿಗಳಲ್ಲಿ ಯಾರನಾದರೂ ಅಲ್ಲಿ ಕೂಡಿಸಿ ಬಿಡಿ.

**ವೈಸ್ ಛೇರ್ಮನ್:-** ಹಿರಿಯ ಮಂತ್ರಿಗಳಿದ್ದಾರೆ ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ.

**Sri K.B. SHANAPPA:** No, this is not correct. You have to come to our rescue. It is not that much of an easy job. After all it is a system.

**ವೈಸ್ ಛೇರ್ಮನ್:-** ಅಧಿಕಾರಿಗಳನ್ನು ಕರೆಯಿಸುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಕೊಳವೆ ಬಾವಿಗಳನ್ನು ತೆಗೆಯಲು ರೀತಿ-ನೀತಿ ಇದೆ. ಅದನ್ನು ಬಿಟ್ಟು ಎಲ್ಲಿ ಬೇಕು ಅಲ್ಲಿ ತೆಗೆಯುತ್ತಾರೆ. ಇಷ್ಟು ಅಂತರದಲ್ಲಿ ತೆಗೆಯಬೇಕು ಎನ್ನುವ ಕಾನೂನು ಇದೆ. ಅದನ್ನು ಅಧಿಕಾರಿಗಳು ನೋಡುವುದೆ ಇಲ್ಲ. ಸರ್ಕಾರ ಬಡವರಿಗೆ ಹಣ ತೆಗೆದುಕೊಳ್ಳದೆ ಬೋರ ಹೊಡೆದು ಕೊಡುತ್ತದೆ. ಅಂತಹ ಬಾವಿಗಳನ್ನು ಕೊರೆಯುವಾಗ ಅಧಿಕಾರಿಗಳು ಅಲ್ಲಿ ನೀರು ಇದೆಯೇ ಇಲ್ಲವೆ ಎನ್ನುವುದನ್ನು ನೋಡುವದೆ ಇಲ್ಲ. ಫೇಲ್ ಆದರೆ ಅವರು ಅರ್ಧ, ಇವರು ಅರ್ಧ ಹಣ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಸರ್ಕಾರ ಹಣ ಕೊಟ್ಟು ಇಷ್ಟು ಕೆಲಸ ಮಾಡಿದರು ಸರ್ಕಾರಕ್ಕೆ ಕೆಟ್ಟ ಹೆಸರು, ನಮಗೂ ಕೆಟ್ಟ ಹೆಸರು.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಸರ್ಕಾರ 'No Water No Payment' ಎಂದು ಮಾಡಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, 'No Payment' ಎನ್ನುವುದನ್ನು ಈಗ ಮಾಡಿದ್ದೀರಿ. ಆದರೆ ಉಪಯೋಗ ಏನು. ಬಾಗಲಕೋಟಿ ತಾಲ್ಲೂಕಿನಲ್ಲಿ ತಿಮ್ಮಣ್ಣ ಎನ್ನುವ ಹುಡುಗ ಕೊರೆದ ಕೊಳವೆ ಬಾವಿಯಲ್ಲಿ ಬಿದ್ದಾಗ ಎಷ್ಟು ಲಾಸ್ ಆಯಿತು. ಎಷ್ಟು ಆಳ ತೆಗೆದು ಮತ್ತೆ ಅದನ್ನು ಮಣ್ಣು ಹಾಕಿ ಮುಚ್ಚಲಾಯಿತು ನೀವೆ ನೋಡಿದ್ದೀರಿ. 'No Water No Payment' ಯ ಲಾಭ ಏನಾಯಿತು? ಆದ್ದರಿಂದ ಬೋರ್‌ವೆಲ್ ಎಲ್ಲಿ ಹೊಡೆಯಬೇಕು ಎನ್ನುವುದನ್ನು ಸರ್ಕಾರ ಸ್ಪಷ್ಟವಾಗಿ ನಿರ್ಧಾರ ಮಾಡಬೇಕು. ಪೇಮೆಂಟ್ ಮಾಡುವುದು ದೊಡ್ಡ ಸಂಗತಿ ಅಲ್ಲ.

**Sri S.R. PATIL:** Geologist ಹತ್ತಿರ ವರದಿ ತೆಗೆದುಕೊಂಡು, ಎಲ್ಲಿ ತೆಗೆದರೆ ನೀರು ಬರುತ್ತದೆ ಎನ್ನುವುದನ್ನು ಚೆಕ್ ಮಾಡಿಯೇ ಈಗ ಕೊಳವೆ ಬಾವಿ ಕೊರೆಯಲಾಗುತ್ತಿದೆ. ದುರುಪಯೋಗವಾಗಬಾರದು ಎಂದು ಸರ್ಕಾರ 'No Water No Payment' ಎಂದು ಮಾಡಿದೆ. ನೀರು ಬರದೆ ಇದ್ದರೆ bore well driller ಜವಾಬ್ದಾರನಾಗುತ್ತಾನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ Geologist ರವರಾದರೂ ಅದನ್ನು ನೋಡಬೇಕು. ನಾವೆ ಎಲ್ಲಿ ಬೇಕು ಅಲ್ಲಿ ಬೋರ್ ಹೊಡೆಯಬಹುದಾಗಿತ್ತು, ಆದರೆ Geologist ರನ್ನು ಏಕೆ ಕರೆಯಿಸುತ್ತೇವೆ? ಅವರು ಎಕ್ಸ್‌ಪರ್ಟ್ ಇರುತ್ತಾರೆ ಎಂದು ಕರೆಯಿಸಲಾಗುತ್ತದೆ. ಅವರೆ ಹೇಳಿರುವ ಜಾಗದಲ್ಲಿ ನೀರು ಬೀಳದಿದ್ದರೆ ಇನ್ನು ಯಾರನ್ನು ಕೇಳಬೇಕು. ಇದು ಯಕ್ಷ ಪ್ರಶ್ನೆಯಾಗಿದೆ. ಸರ್ಕಾರಕ್ಕೆ ನಾವು ಬರಿ ಪ್ರಶ್ನೆ ಕೇಳುವುದಲ್ಲ, ನಮಗೆ ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ:-** ಬೋರ್ ಹೊಡೆದವನಿಗೆ ಪೇಮೆಂಟ್ ಮಾಡಲೇ ಬೇಕಾಗುತ್ತದೆ. ಅವರು ಏಕೆ ಬಿಡುತ್ತಾರೆ, ಪೇಮೆಂಟ್ ಕೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, Geologist ರವರು 'Fractured Zones' ಎಂದು ಗುರುತಿಸುತ್ತಾರೆ. ಅಖಂಡ ಶಿಲೆ ಇದ್ದರೆ ನೀರು ಬೀಳುವುದಿಲ್ಲ. Fractures ಇದ್ದ ಕಡೆ ನೀರು ಬೀಳುತ್ತದೆ, ನೀರಿನ possibility ಇದೆ ಎಂದು ಹೇಳುತ್ತಾರೆ ಹೊರತು 100% ನೀರು ಇದೆ ಎಂದು ಅವರು ಹೇಳುವುದಿಲ್ಲ. Fractured Zone ನಲ್ಲಿಯು ನೀರು ಇಲ್ಲದೆ ಇದ್ದರೆ ನೀರು ಬೀಳುವುದಿಲ್ಲ. ಮಾನ್ಯ ಸದಸ್ಯರ ಕಳಕಳಿ ನಮಗೆ ಅರ್ಥವಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಸರ್ಕಾರದವರು 'No Water No Payment' ಎಂದು ಹೇಳುತ್ತಾರೆ. ಆದರೆ Geologist ಹೇಳಿರುವ ಕಡೆಗಳಲ್ಲಿ ಬೋರ್ ಹೊಡೆಯುತ್ತಾರೆ. ಅಲ್ಲಿ ನೀರು ಬರದಿದ್ದರು ಬೋರ್ ಹೊಡೆದವರಿಗೆ ಹಣ ಕೊಡಲೇಬೇಕಾಗುತ್ತದೆ. ನೀವು ಹೇಳಿರುವ ಕಡೆ ಅವರು ಬೋರ್ ಹೊಡೆದಿರುತ್ತಾರೆ. ಅವರು ಎಲ್ಲಿ ಹೋಗಬೇಕು ಅವರಿಗೆ ಹಣ ಕೊಡುವುದಿಲ್ಲ ಎಂದರೆ ತಪ್ಪಾಗುತ್ತದೆ. ಆದ್ದರಿಂದ ಸರ್ಕಾರ ಸರಿಯಾಗಿ ಯೋಚನೆ ಮಾಡಿ ಕಟ್ಟುನಿಟ್ಟಾದ, perfect ಆದ ಕಾನೂನನ್ನು ಮಾಡದೆ ಇದ್ದರೆ ಇದೆ ರೀತಿ ಊರು ಮುಂದಿನ ಹೆಣವನ್ನು ತಳ್ಳಿಕೊಂಡು ಹೋಗುವ ಹಾಗೆ ಆಗುತ್ತದೆ. ಸರ್ಕಾರ ಇಂದಿನವರೆಗೂ ಅಂತರ್ಜಲ ಬಳಕೆಯ ಮೇಲೆ ನಿಯಂತ್ರಣವನ್ನು ಹೇರಿರುವುದಿಲ್ಲ. ಯಾರು ಎಲ್ಲಿ ಬೇಕಾದರೂ ಎಷ್ಟು ಬೇಕಾದರೂ ಕೊಳವೆ ಬಾವಿಗಳನ್ನು ತೊಡಬಹುದಾಗಿದೆ. ಅಂತರ್ಜಲ ಯಾವತ್ತು ಸಮುದಾಯದ ಸ್ವತ್ತು.

ಅದರ ಮೇಲೆ ಒಬ್ಬರ ಹಕ್ಕು ಇರುವುದಿಲ್ಲ. ಅಣ್ಣಾ ಹಜಾರೆಯವರ ಬಗ್ಗೆ ನಾವು ಮಾತನಾಡುತ್ತೇವೆ, ಅವರ ಗಾಳೆಗಣಸಿದ್ದಿಯಲ್ಲಿ ಮಾಡಿರುವ ಕೆಲಸಗಳನ್ನು ನಾವು ನೋಡಿ ಬಂದಿದ್ದೇವೆ. ಅಲ್ಲಿ ಆಗುವುದು ಇಲ್ಲಿ ಏಕೆ ಆಗುವುದಿಲ್ಲ. ಚೆಕ್ ಡ್ಯಾಂ ಕಟ್ಟುವುದನ್ನು ನಾನು ನೋಡಿದ್ದೇನೆ. ಒಂದು ಮೀಟರ್ ಮೇಲೆ ಮಾಡುತ್ತಾರೆ. ಬಹಳ ದೊಡ್ಡ ಹರಿ ಬರುತ್ತದೆ ಅದಕ್ಕಾಗಿ ಎರಡು ಮೀಟರ್ ಮಾಡಿ ಎಂದರೆ, ಇಲ್ಲ ಸರ್ ನಮ್ಮ ಕಾನೂನು ಇಷ್ಟೆ ಇದೆ ಎಂದು ಹೇಳುತ್ತಾರೆ. ಮಳೆ ಬಂದಾಗ ಅದು ಕಿತ್ತುಕೊಂಡು ಹೋಗಿಬಿಡುತ್ತದೆ. ಸರಿಯಾಗಿ ಕೆಲಸ ಮಾಡುವುದಿಲ್ಲ. ಮತ್ತೆ ಪ್ರತಿ ವರ್ಷ ಚೆಕ್ ಡ್ಯಾಂ ಕೆಲಸವನ್ನು ಮಾಡುತ್ತಾರೆ. ಇನ್ನು ಕೃಷಿ ಹೊಂಡ ಮಾಡಲಾಗುತ್ತದೆ. ಸಭಾನಾಯಕರೆ ತಾವು ಪ್ರಮಾಣಿಕವಾಗಿ ಹೇಳಬೇಕು ಎಷ್ಟು ಜನ ರೈತರು ಕೃಷಿ ಹೊಂಡದ ಲಾಭವನ್ನು ತೆಗೆದುಕೊಂಡಿದ್ದಾರೆ? ಎಲ್ಲಿ ಎಂದರೆ ಅಲ್ಲಿ ಹೊಡೆಯುತ್ತಾರೆ, ಅಧಿಕಾರಿಗಳು ಜವಾಬ್ದಾರಿತನ ಮತ್ತು ಸರ್ಕಾರವು ನೋಡುವುದಿಲ್ಲ. ಅಧಿಕಾರಿಗಳಿಗೆ ಎಲ್ಲ ವ್ಯವಸ್ಥೆಯನ್ನು ಮಾಡಿಕೊಟ್ಟುಬಿಡುತ್ತಾರೆ ಅಷ್ಟೆ. ರೈತನನ್ನು ದೇಶದ ಬೆನ್ನೆಲುಬು ಎಂದು ಹೇಳಿ ಅವನ ಎಲ್ಲ ಎಲಬುಗಳನ್ನೆ ತೆಗೆದು ಬಿಟ್ಟಿದ್ದಾರೆ. ನಾವು 25ವರ್ಷಗಳ ಹಿಂದೆ ಎಂತಹ ರೈತರನ್ನು ಹಳ್ಳಿಗಳಲ್ಲಿ ನೋಡುತ್ತಿದ್ದೆವು, ಧೋತರ ಉಟ್ಟು ಮಂಡ ಶರ್ಟ್ ಹಾಕಿಕೊಂಡು ಹೊಲದಲ್ಲಿ ಕೆಲಸ ಮಾಡುವಂತಹ ರೈತನನ್ನು ನಾವು ನೋಡಿದ್ದೇವೆ. ಆದರೆ ಇವತ್ತಿನ ರೈತ ಪ್ಯಾಂಟ್ ಹಾಕಿಕೊಂಡು ಹಸಿರು ಟವೆಲ್ ಹಾಕಿಕೊಂಡು ಬೆಂಗಳೂರಿಗೆ ಬರುತ್ತಾರೆ. ಆದರೆ ಇವರು ರೈತರಲ್ಲ. ಇವರು ಯಾವತ್ತು ಹೊಲ ನೋಡಿರುವುದಿಲ್ಲ. ಜೀನ್ಸ್ ಪ್ಯಾಂಟ್ ಹಾಕಿಕೊಂಡು ಹಸಿರು ಟವೆಲ್ ಹಾಕಿಕೊಂಡವರು ರೈತರೆ ಇವರು? ಇಂತವರೆ ಇಲ್ಲಿ ಬಂದು ಗಲಾಟೆ ಮಾಡುವುದು. ನಿಜವಾದ ರೈತರಲ್ಲ ಇವರು. ನಿಜವಾದ ರೈತ ಹೊಲದಲ್ಲಿ ಕತ್ತೆ ತರಹ ದುಡಿಯುತ್ತಿರುತ್ತಾನೆ. ಅವನು ಎಂದು ಬೆಂಗಳೂರು, ಹುಬ್ಬಳ್ಳಿ-ಧಾರವಾಡ ನೋಡಿರುವುದಿಲ್ಲ. ಯಾರು ರೈತ ಸಂಘದವರು, ಎಷ್ಟು ಜನ ಹೊಲದಲ್ಲಿ ದುಡಿಯುವ ರೈತರನ್ನು ಕರೆದುಕೊಂಡು ಬಂದಿದ್ದಾರೆ? ಪಾಟೀಲ್‌ರವರೆ ನಿಮ್ಮ ಊರಿನಲ್ಲಿ ಕೆಲಸ ಮಾಡುವ ರೈತರಲ್ಲಿ ಎಷ್ಟು ಜನ ಬೆಂಗಳೂರು ನೋಡಿದ್ದಾರೆ ಹೇಳಿ. ನಮ್ಮ ತೋಟದಲ್ಲಿ ಕೆಲಸ ಮಾಡುವ ರೈತ ಬೆಂಗಳೂರಿನ್ನೆ ನೋಡಿಲ್ಲ. ಜನ ಮರಳೊ-ಜಾತ್ರೆ ಮರಳೊ ಎಂದು ಹೊರಟ್ಟು ಬಿಟ್ಟಿದ್ದೆವೆ. ಕಬ್ಬು ಬೆಳೆದವರು ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳಿಬಿಡಿ. 1920 ಕೋಟಿ ರೂ.ಗಳ ಬಾಕಿಯನ್ನು ಕಬ್ಬು ಬೆಳೆಗಾರರಿಗೆ ಕೊಡುವುದು ಬಾಕಿ ಇದೆ ಎಂದು ಹೇಳಿದ್ದೀರಿ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ನಮ್ಮ ಮತ್ತು ನಿಮ್ಮ ಊರುಗಳಲ್ಲಿ ಮೊದಲು ಜೋಳವನ್ನು ಬೆಳೆಯುತ್ತಿದ್ದೆವು. ಈಗ ಬಾಗಲಕೋಟಿ, ಬೆಳಗಾವಿ, ಬಿಜಾಪೂರದವರು ಮಹಾರಾಷ್ಟ್ರದಿಂದ ಜೋಳ ತರಿಸಿಕೊಳ್ಳುವಂತಹ ಪರಿಸ್ಥಿತಿ

ಬಂದಿದೆ. ಎಲ್ಲರೂ ಕಬ್ಬು ಬೆಳೆಯುತ್ತಾರೆ. ಹೋರಾಟ ಮಾಡುವರೆಲ್ಲರೂ ಕಬ್ಬು ಬೆಳೆಯುವ ಶ್ರೀಮಂತ ರೈತರ ಪರವಾಗಿ ಇರುವವರು. ಬಡ ರೈತರ ಪರವಾಗಿ ಅಲ್ಲ. ಜೋಳ, ಗೋಧಿ ಇತ್ಯಾದಿ ಮಳೆ ನಂಬಿಕೊಂಡು ಬೇಸಾಯ ಮಾಡುವ ರೈತರ ಪರವಾಗಿ ಇರುವುದಿಲ್ಲ. ನಾನು ಎಪ್ಪತ್ತು ಎಕರೆಯಲ್ಲಿ ಕಬ್ಬು ಬೆಳೆಯುತ್ತೇನೆ, ತಾವು 50 ಎಕರೆಯಲ್ಲಿ ಕಬ್ಬು ಬೆಳೆಯುತ್ತೀರಿ. ನಾವು ಎಲ್ಲರೂ ಶ್ರೀಮಂತರೆ ನಾವು ಸಾಲ ಮಾಡುವುದೆ ಇಲ್ಲ. ಒಂದು ಎಕರೆಗೆ 6 ರಿಂದ 8 ಚೀಲ ಜೋಳ ಬೆಳೆಯುತ್ತೇವೆ. ಇವತ್ತು ಒಂದು ಎಕರೆಗೆ 45 ಟನ್ ಕಬ್ಬು ಬೆಳೆಯುತ್ತೇವೆ. ನಾನು ಬೆಳೆದಿದ್ದೇನೆ. ಇನ್ನು 90 ಟನ್ ಕೂಡಾ ಬೆಳೆದವರು ಇದ್ದಾರೆ. ಒಂದು ಟನ್‌ಗೆ 2000 ರೂ.ಗಳನ್ನು ಕೊಡುತ್ತಾರೆ. ಒಂದು ಟನ್ ಬೆಳೆಯಲು ಎಷ್ಟು ಖರ್ಚಾಗಿದೆ ಇವರು ಎಷ್ಟು ಕೊಡುತ್ತಾರೆ ಯಾವುದನ್ನು ನೋಡುವುದಿಲ್ಲ ಸರ್ಕಾರ. ಅವರು ಹೋರಾಟ ಮಾಡುತ್ತಾರೆ ಇವರು ಹೋಗಿ ಮಾತನಾಡಿ ಫೋಟೋ ತೆಗೆಸಿಕೊಳ್ಳುತ್ತಾರೆ ಅದು ಟಿವಿ ಯಲ್ಲಿ ಬರುತ್ತದೆ ಅಷ್ಟೆ ಮುಗಿದು ಹೋಯಿತು. ಯಾರು ಹೇಳುವುದಿಲ್ಲ, ಹೇಳಿದರೆ ರೈತರ ವಿರುದ್ಧ ಮಾತನಾಡಬೇಡಿ ಎಂದು ಹೇಳುತ್ತಾರೆ. ಲೂಟಿ ಹೊಡೆಯುವವರ ವಿರುದ್ಧ ಮಾತನಾಡಬೇಡಿ ಎಂದರೆ ನಾವು ಏಕೆ ಸದನದಲ್ಲಿ ಇರಬೇಕು? ಈಗ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಮಳೆ ಇಲ್ಲದೆ ಬೆಳೆ ನಷ್ಟವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು ಹೇಳಿ. ನಾನು ಪ್ರಮಾಣಿಕವಾಗಿ ಹೇಳುತ್ತೇನೆ, ನಾವು ಎಲ್ಲರೂ ರೈತ ಕುಟುಂಬದಿಂದ ಬಂದವರು.

(ಮುಂದು)

**ಶ್ರೀ ಬಸವರಾಜ ಹೊರಟ್ಟಿ (ಮುಂದು)**

ನಿಜವಾದ ರೈತನಿಗೆ ಸಾಲ ಮಾಡಿದರೂ ಒಂದು ಕಳಕಳಿ ಇರುತ್ತದೆ. ಅವನು ನಿಜವಾದ ಸಾಲಗಾರನಾಗಿರುತ್ತಾನೆ. ಹೊಲಕ್ಕೆ ಸಾಲ ತೆಗೆದುಕೊಂಡು ಲಾಸ್ ಆದ ನಂತರ ರೈತ ಮಗಳ ಮದುವೆ ಮಾಡುವುದೇ ಬೇಡ ಎನ್ನುತ್ತಾನೆ. ಇದನ್ನು ನಾನು ನೋಡಿ ಕೇಳಿದ್ದೇನೆ. ಇದನ್ನು ಯಾರೂ ನೋಡುವುದೇ ಇಲ್ಲ. ಗೂಂಡಾಗಿರಿ ಮಾಡಿ ಮುಂದುವರೆದಿರುವವರ ಪರವಾಗಿ ಎಲ್ಲರೂ ಮಾತನಾಡುತ್ತಾರೆ. ಜೀನ್ಸ್ ಫ್ಯಾಂಟ್ ಹಾಕಿಕೊಂಡಿರುವ ರೈತ ಕುಂಟೆ ಮತ್ತು ಕೂರ್ಗೆ ಯಾವುದು ಎನ್ನುವುದನ್ನು ಹೇಳಲಿ. ಅವರಿಗೆ ಗೊತ್ತೇ ಇಲ್ಲ. ನಾನು ಅದರ ಬಗ್ಗೆ ಹೇಳುತ್ತೇನೆ. ನಾನು ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ಅವರು first class train ನಲ್ಲಿ ಬರುತ್ತಾರೆ. ರೈತರು first class train ನಲ್ಲಿ ಬರುತ್ತಾರೆಯೇ? ಇಲ್ಲಿ ಬಂದು ಗಲಾಟೆ ಮಾಡುತ್ತಾರೆ. ಈ ದೇಶಕ್ಕೆ ಅನ್ನ ಕೊಡುವ ನಿಜವಾದ ರೈತರು ಸಾಯುತ್ತಾ ಮನೆಯಲ್ಲಿ ಕುಳಿತಿರುತ್ತಾರೆ. ಆದ್ದರಿಂದ ನಿಜವಾದ ರೈತರನ್ನು ಗುರುತಿಸಿ ಸಹಾಯ ಮಾಡಿದರೆ ಆಗುತ್ತದೆ. ಒಂದು ಸಾವಿರಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೊನ್ನೆ ಕಬ್ಬು ಬೆಳೆದ ರೈತ ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಪರಿಸ್ಥಿತಿ ಬೇರೆ ಇದೆ. ಕಬ್ಬು ಏನೋ ಸುಟ್ಟು, ನೀರಾವರಿ ಪೈಪ್‌ಲೈನ್ ಒಡೆಯಿತು ಎಂದು ಅಲ್ಲೊಂದು ಇಲ್ಲೊಂದು ಆಗುತ್ತದೆ ಎಂದು ಒಪ್ಪುತ್ತೇನೆ. ಅದಕ್ಕೆ ನನ್ನ ತಕರಾರು ಇಲ್ಲ. ಆದರೆ ರೈತರ ಹೆಸರಿನಲ್ಲಿ ಲೂಟಿ ಮಾಡುವವರ ಬಗ್ಗೆ ಸರ್ಕಾರ ಏಕೆ ಮುಲಾಜು ಇಡುತ್ತದೆ? ಇದ್ದದ್ದನ್ನು ಇರುವಂತೆ ಮಾತನಾಡುವುದಕ್ಕೆ ನಾನೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ನಮ್ಮ ಬಗ್ಗೆ ಧಿಕ್ಕಾರ ಎಂದರೂ ಪರವಾಗಿಲ್ಲ.

ಶ್ರೀ ಅರುಣ ಶಹಾಪುರ:- ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಒಪ್ಪಿಗೆಯಿದೆ ಎಂದು ಹೇಳಲಿ.

ಶ್ರೀ ಎಸ್.ಆರ್. ಪಾಟೀಲ್:- ಈಗ ಹೇಳಬಹುದಿತ್ತು, ಆದರೆ ಮಧ್ಯೆದಲ್ಲಿ interrupt ಆಗುವುದು ಬೇಡ, ನಂತರ ಉತ್ತರದಲ್ಲಿ ಹೇಳೋಣ ಸುಮ್ಮನಿದ್ದೇನೆ.

ಶ್ರೀ ಬಸವರಾಜ ಹೊರಟ್ಟಿ:- ನಾವು ನಾಲ್ಕೈದು ಟರ್ಮ್‌ಗಳಿಂದ ಬರುತ್ತಿದ್ದು, ಇನ್ನೂ ರಾಜ್ಯದ ಜನರ ಬಗ್ಗೆ ಕಳಕಳಿ ಇಲ್ಲವೆಂದರೆ ನಾವು ಇಲ್ಲೇಕೆ ಇರಬೇಕು? ನಾನೊಬ್ಬ ರೈತನಾಗಿದ್ದು,

ನನ್ನ ಮನೆಯಲ್ಲಿ 50-60 ದನಗಳು ಇವೆ. 20 ರಿಂದ 80ಹೆಚ್‌ಪಿ ಮೋಟಾರ್ ಇಟ್ಟವರಿಗೆ ಕರೆಂಟ್ ಚಾರ್ಜ್ ಮಾಡುವುದಿಲ್ಲ. ಬಡವರಿಗೆ ನೀರೇ ಇಲ್ಲ, ಅವರು ಸರ್ಕಾರದ ಸವಲತ್ತುಗಳನ್ನು ತೆಗೆದುಕೊಳ್ಳುವುದೇ ಇಲ್ಲ. ಎಷ್ಟು ಮಂದಿ ನಿಜವಾದ ಬಡವರು ಸವಲತ್ತುಗಳನ್ನು ತೆಗೆದುಕೊಂಡಿದ್ದಾರೆ? ಎಷ್ಟು ಮಂದಿ ಬಾವಿ ಮತ್ತು ಕೊಳವೆ ಬಾವಿಗಳನ್ನು ಹೊಂದಿದ್ದಾರೆ. 60% ಕ್ಕಿಂತ ಹೆಚ್ಚು ರೈತರು ಕರೆಂಟ್ ತೆಗೆದುಕೊಂಡಿಲ್ಲ, ನೀರೇ ಇಲ್ಲದಿದ್ದರೆ ಕರೆಂಟ್ ಎಲ್ಲಿ ತೆಗೆದುಕೊಳ್ಳುತ್ತಾರೆ? ಕಬ್ಬಿನ ಕಾರ್ಖಾನೆಗಳು ಏಕೆ ಹೆಚ್ಚಾಗುತ್ತವೆ? ಕಾರ್ಖಾನೆ ಮಾಲೀಕರಷ್ಟೇ ಶ್ರೀಮಂತರು. ಬೇರೆಯವರು ಯಾರೂ ಇಲ್ಲ. ನಾನು ಮಾತನಾಡುವುದು contradict ಆಗಬಾರದು. ರೈತರ ಬೆಂಬಲ ಬೆಲೆ ರೂ.2,600 ಕೊಡಲಿಲ್ಲ ಎಂದು ಗಲಾಟೆಗಳು ಆಯಿತು. ಆದರೆ ಲಾಸ್ ಆದವರು ಮತ್ತೆ ಏಕೆ ಕಾರ್ಖಾನೆ ತೆಗೆಯುತ್ತಾರೆ? ಹೊಸ ಕಾರ್ಖಾನೆಗಳಿಗೆ ಅರ್ಜಿ ಹಾಕಿದ್ದು, ಲಾಸ್ ಆದರೆ ಹೊಸ ಕಾರ್ಖಾನೆ ಏಕೆ ತೆಗೆಯುತ್ತಾರೆ? ಕಾರ್ಖಾನೆ ತೆಗೆಯುವಾಗ ಪೇಪರ್‌ಗಳಲ್ಲ ಅವರದ್ದೇ ಪೂರ್ಣ ಜಾಹಿರಾತು ಇರುತ್ತದೆ. ರಾಜ್ಯಕ್ಕೆ ಮತ್ತು ದೇಶಕ್ಕೆ ಅದು-ಇದು ಎಂದು ಪೂರ್ತಿ ಜಾಹಿರಾತುಗಳನ್ನು ಹಾಕಿಸುತ್ತಾರೆ. ಅಂದರೆ ರೈತರ ಕಬ್ಬಿನ ಬೆಲೆ ಕೊಡದವರು ಇಷ್ಟೊಂದು ಐಷಾರಾಮಿಯಾಗಿ ಹೇಗೆ ಇರುತ್ತಾರೆ? ಕಬ್ಬಿನ ಕಾರ್ಖಾನೆ ಜಾಸ್ತಿಯಾಗಿ ಜೋಳ, ಗೋಧಿ ಬೆಳೆಯುವುದು ಹೋಗುತ್ತದೆ. ಈ ಕೆಲಸ ಆಗುತ್ತಿದೆ.

ಶ್ರೀ ಎಸ್.ಆರ್. ಪಾಟೀಲ್:- ಕಾರ್ಖಾನೆ ಮಾಡುವವರು ಪೇಪರ್ ಸಾಲದೆಂಬಂತೆ ಜಾಹಿರಾತು ಕೊಟ್ಟಿರುತ್ತಾರೆ, ಇಷ್ಟು ಟನ್ ಕ್ರಷಿಂಗ್ ಸಾಮರ್ಥ್ಯ ಇದೆ ಎಂದೆಲ್ಲಾ ವಿಸ್ತರಣೆ ಮಾಡಿ ಪ್ರಮುಖ ಪತ್ರಿಗಳಲ್ಲಿ ಕೊಟ್ಟಿರುತ್ತಾರೆ, ಜಾಹಿರಾತು ವೆಚ್ಚವೇ ಕೋಟಿಗಟ್ಟಲೆ ಆಗಿರುತ್ತದೆ.

ಶ್ರೀ ನಾರಾಯಣ ಸಾ. ಬಾಂಡಗೆ:- ಈಗ ಮಾನ್ಯ ಸಭಾನಾಯಕರು ಮಧ್ಯೆ ಮಾತನಾಡಬಾರದು, ಇದನ್ನೂ ಉತ್ತರ ಕೊಡುವಾಗ ಹೇಳಲಿ.

ಶ್ರೀ ಬಸವರಾಜ ಹೊರಟ್ಟಿ:- ಸರ್ಕಾರ ಎಲ್ಲಿ ಯಾವ ಬೆಳೆ ಬೆಳೆಯಬೇಕೆಂದು ಮಾಡಬೇಕು. ನಮ್ಮಲ್ಲಿ ಸವಳು ಹತ್ತಿ ಜಾಲಿ ಬೆಳೆದಿದೆ. ನೂರಾರು ಸಾವಿರಾರು ಎಕರೆ ಹಾಳಾಗುತ್ತಿದೆ. ಇದಕ್ಕೆ ಒಂದು ರೀತಿ-ನೀತಿ ಇಲ್ಲ. ಕೃಷಿ, ತೋಟಗಾರಿಕೆ ಎಲ್ಲಾ ಇಲಾಖೆಗಳು ಇವೆ, ಅನೇಕ ವಿಶ್ವವಿದ್ಯಾಲಯಗಳನ್ನು ತೆಗೆಯುತ್ತೇವೆ, ವಿಜ್ಞಾನಿಗಳು ಇದ್ದಾರೆ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ವಿಶ್ವವಿದ್ಯಾಲಯಗಳನ್ನು ತೆಗೆಯುತ್ತಾರೆ. ಯಾರೋ ಒಬ್ಬರನ್ನು ವೈಸ್ ಚಾನ್ಸಲರ್

ಮಾಡುವುದಕ್ಕೆ ವಿಶ್ವವಿದ್ಯಾಲಯಗಳನ್ನು ತೆಗೆಯುತ್ತಾರೆ. ನಾನು ಕೃಷಿ ವಿಶ್ವವಿದ್ಯಾಲಯದ ಬಗ್ಗೆ ಮಾತ್ರ ಹೇಳುತ್ತೇನೆ. ಬೇರೆ ವಿಶ್ವವಿದ್ಯಾಲಯಗಳು ಬೇಡ. ಬೀದರ್‌ನಲ್ಲಿ ಇರುವ ಪಶುಸಂಗೋಪನಾ ವಿಶ್ವವಿದ್ಯಾಲಯದಲ್ಲಿನ ವೈಸ್ ಚಾನ್ಸಲರ್ ಮತ್ತು ರಿಜಿಸ್ಟ್ರಾರ್‌ಗಳು ಯಾರಿದ್ದಾರೆ? ಅವರೆಲ್ಲರೂ ಬೆಂಗಳೂರಿನವರಾಗಿದ್ದು, ಎರಡು ದಿವಸ ಅಲ್ಲಿದ್ದರೆ ನಾಲ್ಕು ದಿವಸ ಬೆಂಗಳೂರಿನಲ್ಲಿರುತ್ತಾರೆ. ಇಲ್ಲೊಂದು ಬ್ರಾಂಚ್ ಆಫೀಸ್, ಇಲ್ಲೊಂದು ಕಾರು ಮತ್ತು ಪಿ.ಎ ಇಡುತ್ತಾರೆ. ಈ ರೀತಿ ಆದರೆ ರೈತರು ಉದ್ದಾರವಾಗುತ್ತಾರೆಯೇ? ಹಿಂದೆ ಶ್ರೀ ರೇವುನಾಯಕ್ ಬೆಳಮಗಿ ಪಶುಸಂಗೋಪನಾ ಸಚಿವರಾಗಿದ್ದರು. ದೇವಣಿ ತಳಿಯ ಎತ್ತು ಇನ್ನೂ ಅಲ್ಲಿ ಉದ್ದಾರವಾಗಿಲ್ಲ. ಅದೇ ಮಹಾರಾಷ್ಟ್ರಕ್ಕೆ ಹೋದರೆ ಒಂದು ಜೊತೆ ದೇವಣಿ ಹೋರಿಗಳಿಗೆ ಎಷ್ಟು ಕಿಮ್ಮತ್ತು ಇದೆ ಎಂಬುದನ್ನು ನೋಡಲಿ. ಆ ತಳಿಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪಶುಸಂಗೋಪನಾ ವಿಶ್ವವಿದ್ಯಾಲಯದಲ್ಲಿ ಒಂದು ಭಾಗ ಮಾಡಿದರು. ಆ ತಳಿ ಇಲ್ಲವೇ ಇಲ್ಲ. ದೇವಣಿ semen ಸಿಗುವುದೇ ಇಲ್ಲ. ನಮ್ಮಲ್ಲಿ ತಂದಾಗ ಕುರುಡು, ಕುಂಟುಗಳು ಹುಟ್ಟಿ ಎಲ್ಲವೂ ಸತ್ತು ಹೋದವು. ಇದನ್ನು ಯಾರಿಗೆ ಹೇಳಬೇಕು? ರೈತರನ್ನು ಏನು ಉದ್ದಾರ ಮಾಡುವುದು? ರೈತರು–ರೈತರು ಎಂದು ಬಾಯಿಗೆ ಬಂದಹಾಗೆ ಮಾತನಾಡುತ್ತೇವೆ. ರೈತರು ಯಾರೂ ಉದ್ದಾರವಾಗಿಲ್ಲ. ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ರೈತರ ಬಗ್ಗೆ ಎರಡು ಭಾವನೆ ಇಲ್ಲ, ಎಲ್ಲವನ್ನು ಮಾಡುತ್ತೇವೆ ಎಂದು ಹೇಳಿದರು. ಅವರು ಮಾಡುತ್ತಾರೆ ಆದರೆ ಕೆಳಗೆ ಏನು ನಡೆಯುತ್ತದೆ ಎಂಬುದನ್ನು ನೋಡಬೇಕಲ್ಲವೇ? ಅದನ್ನು ನೋಡುವುದಿಲ್ಲ. ಹೀಗಾಗಿ ಪರಿಸ್ಥಿತಿಗಳನ್ನು ವಿಚಾರ ಮಾಡಬೇಕಾಗುತ್ತದೆ.

ಇನ್ನು ಕಬ್ಬು ಬೆಳೆಗಾರರಲ್ಲಿ 90ರಿಂದ 95% ಬಡವರಿದ್ದು, ನಮ್ಮ ಊರಿನಲ್ಲಿ ನಾವು ಹತ್ತನ್ನೆರಡು ಜನ ಸೈಕಲ್ ಹತ್ತಿಕೊಂಡು ಓಡಾಡುತ್ತಿದ್ದೆವು. ಈಗ ನಮ್ಮ ಊರಿನಲ್ಲಿ 98 ಸೈಕಲ್ ಮೋಟಾರ್ ಮತ್ತು 37 ಕಾರುಗಳು ಇವೆ. ನಾವು ಬರಗಾಲಕ್ಕೆ ಹೆಸರಾದವರು. ಒಂದು ಬೆಳೆ ಆದರೆ ಆಯಿತು, ಇಲ್ಲದಿದ್ದರೆ ಇಲ್ಲ. ನೀರು ಬಂದರೂ ಉಪಯೋಗ ಹೇಗೆ ಆಗುತ್ತದೆ ಮತ್ತು ದುರುಪಯೋಗ ಹೇಗೆ ಆಗುತ್ತದೆ ಎಂದು ಹೇಳುತ್ತೇನೆ. ಅವರು ಕೆನಾಲ್ ಮಾಡಿದ್ದರೂ, ಎಲ್ಲವೂ ಸವಳು ಹತ್ತಿದೆ. ಯಾವ ಬೆಳೆಯೂ ಸಿಗುವುದಿಲ್ಲ. ಆದ್ದರಿಂದ ದಯಮಾಡಿ ಎಲ್ಲಿ ಏನು ಬೆಳೆಯಬೇಕು ಎಂಬುದನ್ನು ಹೇಳಬೇಕು.

ಶ್ರೀ ರಾಮಚಂದ್ರಗೌಡ:- ವೈಸ್ ಚಾನ್ಸಲರ್ ಬೆಂಗಳೂರಿನಲ್ಲಿ ಎಷ್ಟು ದಿನ ಅಲ್ಲಿ ಸ್ವಲ್ಪ ದಿನ ಇರುತ್ತಾರೆ.

ಶ್ರೀ ಬಸವರಾಜ ಹೊರಟ್ಟಿ:- 1200, 1500, 4000 ಟನ್ ಕಬ್ಬು ಬೆಳೆಯುವವರಿಗೂ ಕರೆಂಟ್ ಬಿಲ್ ಇಲ್ಲ, 100ಕ್ಕೆ 60% ರೈತರಿಗೆ ನೀರು ಇಲ್ಲ, ಮಳೆ ಬಂದರೆ ಬೆಳಯುತ್ತಾರೆ, ಇಲ್ಲದಿದ್ದರೆ ಮನೆಯಲ್ಲಿ ಕುಳಿತುಕೊಳ್ಳುತ್ತಾರೆ. 35-40% ಜನರು ಎಲ್ಲವನ್ನು ಎಂಜಾಯ್ ಮಾಡುವಾಗ ಇದೇ ಹಣವನ್ನು ಆ ಬಡ ರೈತರಿಗೆ ಏಕೆ ಕೊಡಬಾರದು? ಅವರಿಗೆ ಜಾಸ್ತಿ ಮಾಡಲಿ. ನಮ್ಮಲ್ಲಿ ಮೀಟರ್ ಹಾಕುವುದಕ್ಕೆ ಬಂದಾಗ ನಾನು ಶಾಸಕನಿರುವುದರಿಂದ ಮೀಟರ್ ಹಾಕಿ ಎಂದು ಹೇಳಿದೆ. ನಂತರ 20 ಮಂದಿ ಬಂದು ಬಡಿಗೆ ತೆಗೆದುಕೊಂಡು ಎಲ್ಲವನ್ನು ಒಡೆದು ಹಾಕಿ ನಮ್ಮನ್ನು ಬೈಯ್ದು ಹೋದರು. ನಾನು ಹಾಕಿಸಿಕೊಂಡರೆ ನಾಳೆ ಅವರ ಪರಿಸ್ಥಿತಿ ಏನು ಎಂದು ಹೇಳಿ ಹೋದರು. ಇದಕ್ಕೆ ಏನಿಲ್ಲ? ಇದು ನಮ್ಮಲ್ಲಿರುವ ಪರಿಸ್ಥಿತಿಯನ್ನು ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಸರ್ಕಾರ ಸ್ಪಷ್ಟವಾದ ನಿಲುವು ತಾಳಬೇಕು. ಒಂದು ಸಾರಿ ಕಬ್ಬು ಬೆಳೆ ಬಗ್ಗೆ ಸ್ಟ್ರೈಕ್ ಮಾಡಲು ಮುಧೋಳಕ್ಕೆ ಹೋಗಿದ್ದಾಗ ಧೋತರ ಉಟ್ಟವನು ಒಬ್ಬನು ಸಿಗಲಿಲ್ಲ. ಜೀನ್ಸ್ ಪ್ಯಾಂಟ್ ಹಾಕಿಕೊಂಡು ಗಳ ಹೊಡೆಯುತ್ತಾನೆಯೇ? ಕುಂಟೆ ಮೇಲೆ ನಿಲ್ಲುತ್ತಾನೆಯೇ?

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:- ರೈತರ ಮಕ್ಕಳು ಪ್ಯಾಂಟ್ ಹಾಕಿಕೊಳ್ಳಬಾರದು ಎಂಬ ಪರಿಕಲ್ಪನೆ ತಪ್ಪು. ಈಗ ವ್ಯವಸ್ಥೆ ಬದಲಾಗಿದೆ. ಮಾನ್ಯ ಸದಸ್ಯರು ಹಿರಿಯರಿದ್ದು, ಕಬ್ಬು ಬೆಳೆಯುವವರು ರೈತನೇ ಅಲ್ಲ ಎಂದು ಹೇಳುತ್ತಿದ್ದಾರೆ. ನಾನು ಆಕ್ಷೇಪಣೆ ಮಾಡುತ್ತಿಲ್ಲ. ರೈತರು ಬೆಳೆಯುವ ಪದ್ಧತಿಯಲ್ಲಿ ಸುಧಾರಣೆ ಆಗಿದೆ.

ವೈಸ್ ಛೇರ್ಮನ್:- ನಿಮ್ಮ ಅವಕಾಶ ಬಂದಾಗ ಹೇಳಿ, ಈಗ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಅವರ ವೈಯಕ್ತಿಕ ಅಭಿಪ್ರಾಯ ಹೇಳುತ್ತಿದ್ದಾರೆ.

ಶ್ರೀ ಬಸವರಾಜ ಹೊರಟ್ಟಿ:- ನಾನು ರೈತರ ಮಕ್ಕಳು ಪ್ಯಾಂಟ್ ಹಾಕಬಾರದು ಎಂದು ಹೇಳಲಿಲ್ಲ. ನಾನು ಪ್ಯಾಂಟ್ ಹಾಕಿಕೊಂಡು ಗಳ ಹೊಡೆಯುವುದಕ್ಕೆ ಆಗುತ್ತದೆಯೇ? ನನ್ನ ಮಗ ಪ್ಯಾಂಟ್ ಸೂಟ್ ಹಾಕಿಕೊಳ್ಳುತ್ತಾನೆ. ಅವನು ರೈತನ ಮಗ ಅಲ್ಲವೇ?

(ಗೊಂದಲ) (ಮುಂದು)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ರೈತರ ಮಕ್ಕಳು ಜೀನ್ಸ್ ಪ್ಯಾಂಟ್ ಹಾಕಿಕೊಳ್ಳಬಾರದೆಂದು ನಾನು ಹೇಳಲಿಲ್ಲ. ನಾನು ಪ್ಯಾಂಟ್ ಹಾಕಿಕೊಂಡು ಗಳ್ಯಾ ಹೊಡೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ. ನನ್ನ ಮಗ ಸೂಟ್ ಪ್ಯಾಂಟ್ ಹಾಕಿಕೊಳ್ಳುತ್ತಾನೆ. ಅವನು ರೈತನ ಮಗ, ನಾನು ರೈತ. ಆದರೆ, ನನ್ನ ಮಗ ರೈತ ಅಲ್ಲ. ಮಾನ್ಯ ಕವಟಗಿಮಠ್‌ರವರು ಏನು ಹೇಳುತ್ತಿದ್ದಾರೆ ಅದನ್ನು ನಾನು ಒಪ್ಪುವುದಿಲ್ಲ. ಫಿಟ್ ಪ್ಯಾಂಟ್ ಹಾಕಿಕೊಂಡು ಬೇಸಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಹೇಳುವುದು ಸುಳ್ಳಲ್ಲ. ಮಾನ್ಯ ವಿನಯ್ ಕುಲಕರ್ಣಿರವರು ಪ್ರಗತಿಪರ ರೈತ ಇರಬಹುದು, ಆದರೆ ಅವರು ಟೈಟ್ ಪ್ಯಾಂಟ್ ಹಾಕಿಕೊಂಡು ಕೆಲಸ ಮಾಡುವುದಿಲ್ಲ. ಇಲ್ಲಿಗೆ ಜೀನ್ಸ್ ಪ್ಯಾಂಟ್ ಹಾಕಿಕೊಂಡು ಬರುತ್ತಾರೆ. ಮನೆಗೆ ಹೋದರೆ ರೈತನಂತೆ ವಸ್ತ್ರ ತೊಟ್ಟು ಹಸುವಿನ ಹಾಲು ಕರೆಯುತ್ತಾರೆ. ನಾನು ಸಹ ನಮ್ಮ ತೋಟದಲ್ಲಿ ಕೆಲಸ ಮಾಡುತ್ತೇನೆ. ನಾನು ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ವಿನಯ್ ಕುಲಕರ್ಣಿಯವರು ಬೆಂಗಳೂರಿನಲ್ಲಿಯೇ ಓಡಾಡುತ್ತಿರುತ್ತಾರೆ. ಫಸ್ಟ್ ಕ್ಲಾಸ್ ಟ್ರೈನ್‌ನಲ್ಲಿ ಬರುತ್ತಾರೆ. ಬಡ ರೈತ ಫಸ್ಟ್ ಕ್ಲಾಸ್ ಟ್ರೈನ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಸಾಧ್ಯವಿದೆಯೇ? ಸಾಧ್ಯವಿಲ್ಲ. ಆದರೆ, ಈ ದೇಶಕ್ಕೆ ಅನ್ನ ಕೊಡುವಂಥ ರೈತ ನಿಜವಾದ ರೈತ. ಬಡತನದಲ್ಲಿ ಬೆಂದು, ಮನೆಯಲ್ಲಿಯೇ ಬಿದ್ದು ಸಾಯುತ್ತಿರುತ್ತಾನೆ. ಆದ್ದರಿಂದ ನಿಜವಾದ ರೈತ ಯಾರು ಎನ್ನುವುದನ್ನು ಸರ್ಕಾರ ಗುರುತಿಸಿ, ಆತನಿಗೆ ಸಹಾಯ ಮಾಡಬೇಕಾಗುತ್ತದೆ. ಇತ್ತೀಚೆಗೆ ತಾನೇ ಒಂದು ಸಾವಿರ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಬ್ಬು ಬೆಳೆದು ನಷ್ಟ ಅನುಭವಿಸಿದ ಒಬ್ಬ ರೈತ ಮೊನ್ನೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಬ್ಬಿಗೆ ಸರಿಯಾದ ಬೆಲೆ ಬರಲಿಲ್ಲವೆಂದು ಕಬ್ಬನ್ನು ಸುಟ್ಟು ಹಾಕಿದ್ದಾರೆ. ಕೆಲವೊಮ್ಮೆ ಪೈಪ್‌ಲೈನ್‌ಗಳು ಒಡೆದು ಬೆಳೆಗೆ ನೀರು ಸಿಗದಂತಾಗುತ್ತದೆ. ಆಕಸ್ಮಿಕವಾಗಿ ಆಗುವ ಘಟನೆಯ ಬಗ್ಗೆ ನನ್ನ ತಕರಾರು ಇಲ್ಲ. ಆದರೆ, ರೈತರ ಹೆಸರಿನಲ್ಲಿ ಲೂಟಿ ಮಾಡುವವರು ಬಹಳಷ್ಟು ಜನರಿದ್ದಾರೆ ಇವರ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಸಕ್ಕರೆ ಕಾರ್ಖಾನೆ ಮಾಲೀಕರ ಬಗ್ಗೆ ಮಾತನಾಡಿದರೆ ತಪ್ಪೇನಿದೆ ಎನ್ನುವುದನ್ನು ಅವರುಗಳು ಹೇಳಬೇಕಾಗಿದೆ. ಹಿಂದಿನ ಬಾರಿ ಕಬ್ಬಿನ ಬಾಕಿ

ಕೊಡಲಿಲ್ಲವೆಂದು ರೈತರು ಧರಣಿ ಮಾಡಿದ್ದರು, ಆಗ ಗಲಾಟೆ ಸಹ ಆಯಿತು. ನಾನು ಕಬ್ಬಿನ ಪರವಾಗಿ ಇದ್ದೇನೆ, ವಿರೋಧವಾಗಿಯೂ ಇದ್ದೇನೆ. ಪಕ್ಷಾತೀತವಾಗಿ ಇಲ್ಲಿರುವ ಬಹಳಷ್ಟು ಜನ ರಾಜಕಾರಣಿಗಳು ಸಕ್ಕರೆ ಕಾರ್ಖಾನೆ ಮಾಲೀಕರಾಗಿದ್ದಾರೆ. ಇವರುಗಳು ಯಾಕೆ ರೈತರಿಗೆ ಬಾಕಿ ಹಣ ಕೊಡಲಿಲ್ಲ? ಮೊದಲು ಇವರು ಸರಿಯಾಗಿ ಇರಬೇಕಾಗುತ್ತದೆ. ನಂತರ ಜನರಿಗೆ ಬುದ್ಧಿ ಹೇಳಬೇಕಾಗುತ್ತದೆ. ಇವರೇ ಸರಿಯಾಗಿಲ್ಲದೇ ಜನರಿಗೆ ಬುದ್ಧಿ ಹೇಳುವುದಕ್ಕೆ ಹೋದರೆ ಹೇಗೆ?

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಯೋಜನೆಗಳು ಸರಿಯಾಗಿವೆ. ಆದರೆ, ಅವುಗಳನ್ನು ಸರಿಯಾಗಿ ಅನುಷ್ಠಾನಗೊಳಿಸುತ್ತಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಆ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸಬೇಕೆನ್ನುವುದು ನನ್ನ ಕಳಕಳಿಯ ಮನವಿಯಾಗಿದೆ. ನಾನು ಕೆಲವೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಮಾತುಗಳು ಆಡಳಿತ ಪಕ್ಷದವರಿಗೆ ಸರಿಯೆನಿಸದೇ ಇರಬಹುದು. ರಾಜ್ಯಪಾಲರ ಭಾಷಣದ ಪುಸ್ತಕದ ಪುಟ ಸಂಖ್ಯೆ:17ರಲ್ಲಿ:

> **ರಾಜ್ಯದ ಸುಮಾರು 14 ಲಕ್ಷ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ನೇರ ನಗದು ವರ್ಗಾವಣೆ ಮೂಲಕ ವಿದ್ಯಾರ್ಥಿವೇತನಗಳು ಮತ್ತು ಶುಲ್ಕ ಮರುಪಾವತಿಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಇದರೊಂದಿಗೆ ಸಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಅಭ್ಯಸಿಸಲು ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ.**

ಎಂದು ಇದೆ. ಇದು ಸ್ವಾಗತಾರ್ಹವಾಗಿದೆ. ಆದರೆ, ನನ್ನ ಪ್ರಶ್ನೆಯೇನೆಂದರೆ, ಮೇಲ್ಜಾತಿಯಲ್ಲಿ ಹುಟ್ಟಿದ ಬಡ ಮಕ್ಕಳು ಮಕ್ಕಳಲ್ಲವೇ? ಬಡವರು ಎಲ್ಲ ಜಾತಿಯಲ್ಲಿಯೂ ಇದ್ದಾರೆ. ಬಡವರಾಗಿದ್ದರೂ ಮೇಲ್ಜಾತಿಯಲ್ಲಿ ಹುಟ್ಟಿರುವುದೇ ಅವರ ತಪ್ಪಾಗಿದೆಯೇ? ಮಕ್ಕಳು ದೇವರ ಸಮಾನವೆಂದು ಹೇಳುತ್ತಾರೆ. ಒಂದು ಜಾತಿಯ ಮಕ್ಕಳಿಗೆ ಒಂದು ರೀತಿ, ಮತ್ತೊಂದು ಜಾತಿಯ ಮಕ್ಕಳಿಗೆ ಮತ್ತೊಂದು ರೀತಿ ಮಾಡುವುದು ಸರಿಯೇ? ಈ ರೀತಿಯ ತಾರತಮ್ಯವನ್ನು ಮಾಡುವುದು ಏಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮೇಲ್ಜಾತಿಯ ಬಡವರಿಗೂ ಸಹ ಎಲ್ಲ ಸೌಲಭ್ಯಗಳನ್ನು ವಿಸ್ತರಣೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಅಲ್ಪ ಸಂಖ್ಯಾತರಲ್ಲಿಯೂ ಕಾರಿನಲ್ಲಿ ಓಡಾಡುವ ಶ್ರೀಮಂತರಿದ್ದಾರೆ. ಅವರಿಗೆ ವಿದೇಶದಲ್ಲಿ ಓದುವುದಕ್ಕೆ ಹಣ ಸಹಾಯ

ಮಾಡುವುದರಲ್ಲಿ ಅರ್ಥವಿದೆಯೇ? ಬಡತನದಲ್ಲಿರುವ ಒಬ್ಬ ಮೇಲ್ಜಾತಿಯ ವಿದ್ಯಾರ್ಥಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಸರ್ಕಾರ ನೆರವು ನೀಡುವುದಿಲ್ಲವೆಂದರೆ ಇದು ಬಡವರ ಪರವಾಗಿರುವ ಸರ್ಕಾರವೇ ಎನ್ನುವ ಪ್ರಶ್ನೆ ಮೂಡುತ್ತದೆ. ಇದು ಸರಿಯಾದ ವ್ಯವಸ್ಥೆ ಅಲ್ಲ. ಸರ್ಕಾರ ಮಕ್ಕಳನ್ನು ದೇವರ ಸಮಾನ ಎಂದು ತಿಳಿದುಕೊಂಡು, ಎಲ್ಲ ಮಕ್ಕಳಿಗೂ ಸಮಾನವಾದ ಸೌಲಭ್ಯಗಳನ್ನು ನೀಡಬೇಕಾಗುತ್ತದೆ. ನಿನ್ನೆ ನ್ಯಾಯಮೂರ್ತಿ ಸಂತೋಷ ಹೆಗಡೆಯವರು ಒಂದು ಹೇಳಿಕೆಯನ್ನು ನೀಡಿದ್ದಾರೆ. ಅದನ್ನು ಇವರುಗಳು ಓದಿರಬಹುದು. ಎಲ್ಲ ಮಕ್ಕಳಿಗೂ ಸಮಾನವಾದ ನೆರವು ದೊರೆಯಬೇಕೆನ್ನುವುದು ನನ್ನ ಬಯಕೆಯಾಗಿದೆ. ಎಲ್ಲ ಅನುಕೂಲತೆ ಇರುವವರಿಗೆ ನೆರವನ್ನು ನೀಡಬಾರದು. ನನ್ನ ಮಗನಿಗೆ ಸರ್ಕಾರದ ಸೌಲಭ್ಯಗಳು ಯಾಕೆ ಬೇಕು? ನಮ್ಮ ಮನೆಯಲ್ಲಿ ಒಬ್ಬ ಹೆಣ್ಣುಮಕ್ಕಳು ಮನೆಗೆಲಸ ಮಾಡುತ್ತಿದ್ದಾಳೆ. ಮನೆಗೆಲಸ ಮಾಡಿಕೊಂಡು ಅವಳ ಮಗನನ್ನು ಶಾಲೆಗೆ ಕಳುಹಿಸುತ್ತಿದ್ದಳು, ಆ ಹುಡುಗ ಪದವಿಯನ್ನು ಪಡೆದುಕೊಳ್ಳುವುದಕ್ಕೆ ನಮ್ಮ ತಾಯಿಯವರ ಹೆಸರಿನಲ್ಲಿ ನಡೆಸುತ್ತಿರುವ ಟ್ರಸ್ಟ್‌ನಿಂದ ಹಣ ಸಹಾಯ ಮಾಡಿದ್ದೆವು. ಇಂತಹ ಬಡವರನ್ನು ಯಾರೂ ಕೇಳುವುದಿಲ್ಲ. 8ನೇ ತರಗತಿಗೆ ಬಂದು ಇಂಗ್ಲೀಷ್ ಕಲಿತಿರುವವರು 3ನೇ ವರ್ಷಕ್ಕೆ ಇಂಗ್ಲೀಷ್ ಕಲಿತಿರುವವನಿಗೆ ಸಮನಾಗುತ್ತಾನೆಯೇ? ಇಲ್ಲಿ ಜಾತಿ ಪ್ರಶ್ನೆಯೇ ಪ್ರಧಾನವಾಗಿದೆ. ನಾವೆಲ್ಲರೂ ಜಾತಿಯ ಆಧಾರದ ಮೇಲೆಯೇ ರಾಜಕೀಯ ಮಾಡುತ್ತೇವೆ. ಜಾತಿ ವ್ಯವಸ್ಥೆ ಎಲ್ಲಿಯವರೆಗೆ ಹೋಗುವುದಿಲ್ಲ, ಅಲ್ಲಿಯವರೆಗೆ ಈ ಪೀಡುಗು ಇರುತ್ತದೆ. ಸರ್ಕಾರ ಮಾತ್ರವಲ್ಲ ನಾವೆಲ್ಲರೂ ಇದನ್ನೇ ಮಾಡುತ್ತೇವೆ. ಪಕ್ಷದಿಂದ ಟಿಕೆಟ್ ಕೊಡಬೇಕಾದರೆ, ಯಾವ ಜಾತಿ, ಹಣ ಎಷ್ಟಿದೆ ಎನ್ನುವುದನ್ನು ನೋಡುತ್ತೇವೆ. ಈ ರೀತಿಯಾದರೆ ಸುಧಾರಣೆ ಎನ್ನುವುದು ಎಲ್ಲಿಂದ ಬರುತ್ತದೆ? ನಾವೇ ಸುಧಾರಣೆಯನ್ನು ಮಾಡಿಕೊಳ್ಳದಿದ್ದರೆ, ಜನರಲ್ಲಿ ಯಾವ ರೀತಿ ಸುಧಾರಣೆ ತರುವುದಕ್ಕೆ ಸಾಧ್ಯವಾಗುತ್ತದೆ? ನಮ್ಮ ಮನೆಯಲ್ಲಿ ಮುಸ್ಲಿಂ ಮಹಿಳೆಯೊಬ್ಬರು ಕೆಲಸ ಮಾಡುತ್ತಾಳೆ, ಆಕೆಯ ಮಗ ಬಹಳ ಬುದ್ಧಿವಂತನಿದ್ದಾನೆ. ನಾವು ಕನ್ನಡಿಗರಾಗಿದ್ದರೂ ಸಹ ಅವನ ರೀತಿ ಶುದ್ಧ ಕನ್ನಡ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆತ ಕನ್ನಡದಲ್ಲಿ ಎಂ.ಎ., ಪದವಿಯನ್ನು ಪಡೆದುಕೊಂಡಿದ್ದಾನೆ. ಪಿ.ಯು.ಸಿ.ಯಿಂದ ಪ್ರಥಮ ದರ್ಜೆಯಲ್ಲಿಯೇ ಪಾಸಾಗುತ್ತಾ ಬಂದಿದ್ದಾನೆ. ಆತನಿಗೆ ಸರ್ಕಾರದಿಂದ ಯಾವುದೇ ನೆರವು ಸಿಗುತ್ತಿಲ್ಲ. ಅರ್ಜಿ ಹಾಕಿದರೆ ಕೇಳುವವರು ಇಲ್ಲ. ಅಲ್ಲಿಯೂ ವಸೂಲಿ ವ್ಯವಸ್ಥೆ, ಅಲ್ಲಿಯೂ ಭಾನಗಡಿ(ಅವ್ಯವಸ್ಥೆ). ಪಾಪ ಈ ಹುಡುಗ ಏನು ಮಾಡಬೇಕು? ನಾವು ಪಿ.ಹೆಚ್.ಡಿ ಮಾಡು ಎಂದು ಹೇಳುತ್ತಿದ್ದೇವೆ. ಆದರೆ, ಆತನಿಗೆ ಯಾವುದೇ ನೆರವು ಸಿಗುತ್ತಿಲ್ಲ. ಯಾರು

ಬುದ್ಧಿವಂತರಿದ್ದಾರೆ, ಯಾರು ಬಡವರಿದ್ದಾರೆ ಅವರಿಗೆ ಸರ್ಕಾರದ ನೆರವು ಬೇಕಾಗಿದೆ. ಆದ್ದರಿಂದ ಸರ್ಕಾರ 14 ಲಕ್ಷ ಜನ ಮಕ್ಕಳಿಗೆ ನೀಡಿರುವ ಸೌಲಭ್ಯವನ್ನು ಇನ್ನೊಂದು 4 ಲಕ್ಷ ಮಕ್ಕಳಿಗೆ ವಿಸ್ತರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರ ಈ ನಿಲುವನ್ನು ತೆಗೆದುಕೊಳ್ಳದಿದ್ದರೆ, ರಾಜಕಾರಣ ಮಾಡುವುದಕ್ಕಾಗಿಯೇ ಈ ರೀತಿ ಮಾಡುತ್ತಿದ್ದಾರೆಂದು ಮಾತನಾಡಿಕೊಳ್ಳುತ್ತಾರೆ. ಯೋಗ್ಯರಿರುವವರಿಗೆ, ಸಮಾಜದಲ್ಲಿ ದುರ್ಬಲರಾಗಿರುವವರಿಗೆ ಸರ್ಕಾರ ಮುಂದೆ ಬಂದು ನೆರವು ಕೊಡಬೇಕಾಗುತ್ತದೆ. ಕಸ ಹೊಡೆಯುವವರು ಕಸ ಹೊಡೆಯುತ್ತಲೇ ಇರುತ್ತಾರೆ. ಆತನ ಬಗ್ಗೆ ಯಾರೂ ಕಾಳಜಿ ಮಾಡುವುದಿಲ್ಲ. ನಾವು ಕಾರಿನಲ್ಲಿ ಕುಳಿತಾಗ ಯಾರು ಮೊಬೈಲ್ ತಂದು ಕೊಡುತ್ತಾರೆ ಅವರ ಬಗ್ಗೆ ಕಾಳಜಿ ಮಾಡುತ್ತೇವೆ. ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಚಿಂತನೆಯನ್ನು ಹೊಂದಬೇಕೆನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಒಂದು ಸಾವಿರ ದಿನಗಳ ಅಧಿಕಾರ ಅವಧಿಯನ್ನು ಪೂರೈಸಿದ ಬಗ್ಗೆ ಪತ್ರಿಕೆಗಳಲ್ಲಿ ಒಂದು ಪ್ರಕಟಣೆ ಬಂದಿದೆ. ಕೇವಲ ಆಡಳಿತ ಪಕ್ಷದವರೇ ಮುಖ್ಯಮಂತ್ರಿಗಳನ್ನು ಹೊಗಳಬೇಕೇ? ನಾವು ಸಹ ಹೊಗಳುತ್ತೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದು ಸಾವಿರ ದಿನಗಳಾದರೂ ಸಹ ಯಾವುದೇ ರೀತಿಯ ಪ್ರಗತಿಯನ್ನು ಕಾಣುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸಿದ್ದರಾಮಯ್ಯನವರು ಬಹಳ ಕಟ್ಟುನಿಟ್ಟಿನ ಮಂತ್ರಿಗಳಾಗಿದ್ದರು. ನಮ್ಮ ಪಕ್ಷದಿಂದ ಅವರು ಹಣಕಾಸಿನ ಸಚಿವರಾಗಿದ್ದಾಗ, ಅವರ ಎದುರಿಗೆ ಕುಳಿತುಕೊಳ್ಳುವುದಕ್ಕೆ ಜನ ಹೆದರುತ್ತಿದ್ದರು. ಅಂತಹ ಗಟ್ಟಿಯಾದ ಆಡಳಿತವನ್ನು ಅವರು ನೀಡಿದ್ದರು. ಯಾವ ಅಧಿಕಾರಿ ಬಂದರೂ ಅವರಿಗೆ ಸೊಪ್ಪು ಹಾಕುತ್ತಿರಲಿಲ್ಲ. ಈಗ ಎಲ್ಲ 'ಟುಸ್ಸ್' ಆಗಿದೆ. ಈ ಸರ್ಕಾರದಲ್ಲಿ ಯಾವ ಇಲಾಖೆಯಲ್ಲಿ ಆಡಳಿತ ಸರಿಯಾಗಿ ನಡೆದಿದೆ ಎನ್ನುವುದನ್ನು ಅವರು ಹೇಳಿದರೆ ಸಾಕು.

ಸನ್ಮಾನ್ಯ ಸಭಾಪತಿಯವರೇ, ಸಚಿವಾಲಯದಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಎಷ್ಟು ಜನ ಅಧಿಕಾರಿ/ನೌಕರರು ಕಛೇರಿಗೆ ತಡವಾಗಿ ಬಂದಿದ್ದಾರೆ, ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಪ್ರಶ್ನೆಯನ್ನು ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಒಬ್ಬ ಅಧಿಕಾರಿಯ ಮೇಲೆ ಇವರು ಕ್ರಮ ತೆಗೆದುಕೊಂಡಿದ್ದರೆ ನಾನು ರಾಜಿನಾಮೆ ಕೊಡುತ್ತೇನೆ.

ಅವರಿಗೆ ಇಷ್ಟ ಬಂದಾಗ ಬರುತ್ತಾರೆ, ಇಷ್ಟ ಬಂದಾಗ ಹೋಗುತ್ತಾರೆ. administrative ಎನ್ನುವುದು ಎಲ್ಲಿದೆ? ಈ ನಿಟ್ಟಿನಲ್ಲಿ ಮುಖ್ಯಮಂತ್ರಿಯೊಬ್ಬರು ಪ್ರಯತ್ನಪಟ್ಟರೆ ಆಗುವುದಿಲ್ಲ, ಸಚಿವ ಸಂಪುಟದ ಎಲ್ಲ ಸಚಿವರು ಮತ್ತು ಎಲ್ಲ ಅಧಿಕಾರಿಗಳು ಎಲ್ಲರೂ ಸೇರಿ ಈ ರಾಜ್ಯದ ಬಗ್ಗೆ ಕಾಳಜಿ ವಹಿಸಿದರೆ ಮಾತ್ರ ಉತ್ತಮ ಪರಿಸ್ಥಿತಿಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಕೇವಲ ಮುಖ್ಯಮಂತ್ರಿಯೊಬ್ಬರೇ ಏನು ಮಾಡುವುದಕ್ಕೂ ಆಗುವುದಿಲ್ಲ. ಆಡಳಿತ ಯಾವ ರೀತಿ ನಡೆಯುತ್ತಿದೆ ಎಂದರೆ, ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದೇ ಇಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಪ್ಪು ಮಾಡಿದ ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಮಾಹಿತಿಯನ್ನು ನಾಳೆ ಅವರು ಈ ಸದನದ ಮುಂದಿಡಲಿ.

ಸನ್ಮಾನ್ಯ ಸಭಾಪತಿಯವರೇ, ನಾನು ಭರವಸೆಗಳ ಸಮಿತಿ ಅಧ್ಯಕ್ಷನಾಗಿ ಹಲವಾರು ಭರವಸೆಗಳಿಗೆ ಸಂಬಂಧಪಟ್ಟಂತೆ ಇಲಾಖೆಗಳಿಂದ ಮಾಹಿತಿಯನ್ನು ಪಡೆದಾಗ ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆಸಿರುವಂತಹ ಅಧಿಕಾರಿಗಳು ಇದ್ದಾರೆ. ಅವರ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿಲ್ಲ, ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಇಂಕ್ರಿಮೆಂಟ್ ತಡೆಯುವುದು, ನಂತರ ಬಡ್ತಿ ನೀಡುವುದು ನಡೆಯುತ್ತಲೇ ಇದೆ. ಎರಡು ವರ್ಷಗಳಿಂದ ಒಬ್ಬ ತಪ್ಪಿತಸ್ಥ ಅಧಿಕಾರಿಯನ್ನಾದರೂ ಹಿಡಿಯಬೇಕೆಂದು ಪ್ರಯತ್ನಪಡುತ್ತಿದ್ದೇನೆ ಸಾಧ್ಯವಾಗುತ್ತಿಲ್ಲ. ಇಲಾಖೆಯವರು ಆ ಅಧಿಕಾರಿ ನಿವೃತ್ತಿಯಾಗುವವರೆಗೆ ಸುಮ್ಮನಿರುತ್ತಾರೆ. ನಂತರ 'ನಿವೃತ್ತರಾಗಿದ್ದಾರೆ' ಎನ್ನುವ ಉತ್ತರವನ್ನು ಕೊಡುತ್ತಾರೆ. ಇಂತಹ ಪ್ರಸಂಗಗಳು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ನಡೆದಿದೆ, ಅವರ ಸರ್ಕಾರದ ಅವಧಿಯಲ್ಲಿಯೂ ನಡೆದಿದೆ. ಆದರೆ, ಈಗ ಅದರ ಪ್ರಮಾಣ ಹೆಚ್ಚಾಗಿದೆ. ಸರ್ಕಾರದ ಕೋಟಿ ಕೋಟಿ ರೂಪಾಯಿಗಳನ್ನು ಲೂಟಿ ಹೊಡೆದಿದ್ದಾರೆ. ನಮಗೆ ಕಣ್ಣಲ್ಲಿ ನೀರು ಬರುತ್ತದೆ. ಅಲ್ಪ ಸಂಖ್ಯಾತರ ಹಾಸ್ಟೆಲ್ ಕಟ್ಟಿದ್ದಾರೆ ಅದನ್ನು ಉದ್ಘಾಟನೆ ಮಾಡುವುದಕ್ಕೂ ಮೊದಲೇ ಬಿದ್ದು ಹೋಗಿದೆ. ಆಕಸ್ಮಿಕವಾಗಿ ಆ ಹಾಸ್ಟೆಲ್‌ನಲ್ಲಿ ಮಕ್ಕಳು ಇದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ತಾವೇ ಯೋಚನೆ ಮಾಡಬೇಕಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ಹೊರಟ್ಟಿಯವರೇ, ತಮಗೆ ಕೊಟ್ಟಂಥ ಸಮಯ ಮುಕ್ತಾಯವಾಗುತ್ತಿದೆ. ಬೇಗನೇ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

(ಮುಂದುವರಿದಿದೆ)

(75) 04-03-2016 12.20 MD-VK

(ವೈಸ್ ಛೇರ್ಮನ್ ಕೆ.ಸಿ.ಕೊಂಡಯ್ಯನವರು
ಪೀಠದಲ್ಲಿ ಉಪಸ್ಥಿತರಿದ್ದರು)

**ವೈಸ್ ಛೇರ್ಮನ್:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಬಿಜೆಪಿ ಪಕ್ಷದಿಂದ ಮಾನ್ಯ ರಾಮಚಂದ್ರಗೌಡರು ಸಹ ಮಾತನಾಡುವುದಿದೆ. ಆದಷ್ಟು ಬೇಗ ಮುಗಿಸಿ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಯಾವಾಗ ಹೇಳುತ್ತೀರೋ ಆಗ ಕುಳಿತುಕೊಳ್ಳುತ್ತೇನೆ. ಒಬ್ಬ ಅಧಿಕಾರಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಸಿಕ್ಕಿ ಹಾಕಿಕೊಂಡ. ಎಷ್ಟೋ ಕೋಟಿ ರೂಪಾಯಿ ಸಿಕ್ಕಿತು ಎಂದರು. ಅದರ ಬಗ್ಗೆ ಏನೂ ಇಲ್ಲ. ಶ್ರೀಮತಿ ರಶ್ಮಿ ಎನ್ನುವ ಐಎಎಸ್ ಅಧಿಕಾರಿಯ ಮೇಲೆ ಹಲ್ಲೆಯಾಯಿತು. ಹಲ್ಲೆ ಮಾಡಿದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿತು? ಎಲ್ಲೆಲ್ಲಿ ಆ ಹೆಣ್ಣುಮಗಳು ಇರುತ್ತಾಳೆ, ಆಕೆ strict ಮಾಡಿದರೆ ಆಕೆಯನ್ನು ವರ್ಗಾವಣೆ ಮಾಡುವುದು ಈ ರೀತಿ ಮಾಡುತ್ತಾರೆ. ಇದನ್ನು ಇವರ ಸರ್ಕಾರ ಮಾಡಿದ್ದು. ಎಲ್ಲಿ ಆ ಹೆಣ್ಣುಮಗಳು ಸ್ವಚ್ಛ ಮಾಡುವುದಕ್ಕೆ ಹೋಗುತ್ತಾಳೆಯೋ ಅಲ್ಲಿಂದ ಅವರನ್ನು ಎಬ್ಬಿಸುತ್ತಾರೆ. ನಂತರ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ಅಧಿಕಾರಿಯಾದ ಹರ್ಷ ಗುಪ್ತಾರವರು ಒಬ್ಬ ಒಳ್ಳೆಯ ಅಧಿಕಾರಿ ಎನ್ನುವುದು ನನಗೆ ಗೊತ್ತಿದೆ. ಅವರನ್ನು ಯಾವುದೇ ಇಲಾಖೆಗೆ ಕಳುಹಿಸಿದರೂ ಸಹ ಸ್ಪಷ್ಟವಾದಂಥ ಅಧಿಕಾರವನ್ನು ಚಲಾಯಿಸಿ ಕೆಲಸ ಮಾಡುತ್ತಾರೆ. ಅವರು ಬೀದರ್‌ನಲ್ಲಿದ್ದರು, ಅವರನ್ನು ಅಲ್ಲಿಂದಲೂ ಸಹ ವರ್ಗಾವಣೆಯನ್ನು ಮಾಡಿದರು. ಸರ್ಕಾರ ಅವರನ್ನು ಏಕೆ ವರ್ಗಾವಣೆ ಮಾಡಿತು? ಇನ್ನೊಬ್ಬ ವಿಜಯ ಕುಮಾರ್ ಎನ್ನುವ ಐಎಎಸ್ ಅಧಿಕಾರಿ ಇದ್ದ. ಆತನಿಗೆ ಸರ್ಕಾರ ಪೆನ್‌ಶನ್ ಸಹ ಕೊಡಲಿಲ್ಲ. ಆತ ನಾಳೆಯ ದಿವಸ ನಿವೃತ್ತಿಯನ್ನು ಹೊಂದಬೇಕೆಂದರೆ ಇವತ್ತು ಅವರನ್ನು ಅಮಾನತ್ತು ಮಾಡಿದರು. ಅವರು ನಮ್ಮಲ್ಲಿ ಜಿಲ್ಲಾ ಪಂಚಾಯ್ತಿಯ ಸಿಇಓ ಆಗಿದ್ದರು. ಅವರನ್ನು ಏನು ಮಾಡಿದರು? ಇನ್ನು ಮಂಡ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯ ಸುಧಾರಣೆಗೆ ಕಠಿಣ ನಿರ್ಧಾರವನ್ನು ತೆಗೆದುಕೊಂಡ ಹೆಚ್.ಆರ್.ಮಹದೇವ್‌ರವರನ್ನು ರಾಜಕೀಯ ಕಾರಣಕ್ಕಾಗಿ ವರ್ಗಾವಣೆ ಮಾಡಿದರು. ಇದು ಆಡಳಿತವನ್ನು ನಡೆಸುವ ರೀತಿಯೇ? ನಾನು ಆಡಳಿತದ ಬಗ್ಗೆ ಕೇಳುತ್ತೇನೆ. ಇದು ಸರಿಯಾದುದಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಶಿಕ್ಷಣದ ಬಗ್ಗೆ ಹೇಳುವುದಾದರೆ...

(75) 04-03-2016 12.20 MD-VK

**ವೈಸ್ ಛೇರ್ಮನ್:-** ಮಾನ್ಯ ಬಸವರಾಜ ಹೊರಟ್ಟಿಯವರೆ, ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ. ದಯಮಾಡಿ ನಿಮ್ಮ ಮಾತುಗಳನ್ನು ಮುಗಿಸಿ. ಇನ್ನು ಮಾತನಾಡುವ ಸದಸ್ಯರುಗಳು ಬಹಳಷ್ಟು ಜನರಿದ್ದಾರೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ನೀವುಗಳು ಇನ್ನು ಮಾತನಾಡಬಹುದು. ಎಲ್ಲರ ಪರವಾಗಿ ತಾವು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಸುಧಾರಣೆಯನ್ನು ಮಾಡುವಂಥ ವಿಚಾರ ಬಹಳ ಇದ್ದಾವೆ. ದಯಮಾಡಿ ತಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದಿಂದ ಎಲ್ಲರ ಪರವಾಗಿ ನಾನು ಮತ್ತು ಪುಟ್ಟಣ್ಣನವರು ಇಬ್ಬರೇ ಮಾತನಾಡುವುದು. ನಮಗೆ ಏನು ಸಮಯವನ್ನು ನಿಗದಿಗೊಳಿಸಲಾಗಿದೆಯೋ ಆ ಸಮಯದಲ್ಲಿಯೇ ನಾನು ಮಾತನಾಡುತ್ತೇನೆ.

**ವೈಸ್ ಛೇರ್ಮನ್:-** ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ನಿಮ್ಮ ಸಮಯ ಮುಗಿದಿದೆ. ಹಾಗಾಗಿ ನಾನು ಹೇಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನನ್ನ ಸಮಯವನ್ನು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಕೊಡಿ, ಅವರೇ ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಹೊರಟ್ಟಿಯವರು Floor Leader ಇದ್ದಾರೆ. ಅವರಿಗೆ ಮಾತನಾಡಲು ಸ್ವಲ್ಪ ಹೆಚ್ಚಿನ ಸಮಯವನ್ನು ಕೊಟ್ಟರೆ ಏನೂ ತಪ್ಪಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಮಾತನಾಡಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ, 2009ನೇ ಇಸವಿಯಲ್ಲಿ ನಮ್ಮಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ three-tier system ಅನ್ನು ಜಾರಿಗೆ ತಂದರು. Lower Primary Class I to Class V, Higher Primary Class VI and Class VII, Lower Secondary Class VIII to Class X, Higher Secondary Class XI and Class XII ಎಂದು ಮಾಡಿದರು. ಇವತ್ತಿನವರೆವಿಗೂ

ಇದು implement ಆಗಿಯೇ ಇಲ್ಲ. ಇವರು ಕೇಂದ್ರ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಾರೆ. 6, 7 ಮತ್ತು 8ನೇ ತರಗತಿಗೆ ಮತ್ತು 9, 10, 11 ಮತ್ತು 12ನೇ ತರಗತಿಗೆ ಯಾವ ಶಿಕ್ಷಕರನ್ನು ನಿಯೋಜಿಸಬೇಕೆಂದು ತಿಳಿದೇ ಇಲ್ಲ. ಜೂನಿಯರ್ ಕಾಲೇಜಿನವರಿಗೆ ಕಡ್ಡಾಯವಾಗಿ ಬಿಎಡ್ ಆಗಿರಬೇಕೆಂದು ಹೇಳುತ್ತಾರೆ. ಆದರೆ ಬಿಎಡ್‌ನವರು ಅಲ್ಲಿ ಕಲಿಸುವುದಕ್ಕೆ ಆಸ್ಪದವಿಲ್ಲ. ಪಿಯುಸಿಯವರಿಗೆ ಬಿಎಡ್ ಆದವರು ಹೇಗೆ ಕಲಿಸುತ್ತಾರೆ? ಇದು ಈಗಿರುವ ವ್ಯವಸ್ಥೆ, ವಿಶ್ವವಿದ್ಯಾನಿಲಯಗಳನ್ನು ತೆಗೆದರು. ಇವತ್ತು ಶೇಕಡ 70 ರಿಂದ 80ರಷ್ಟು ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಕರಿಲ್ಲ. ಶಿಕ್ಷಕರನ್ನು ತೆಗೆದರೆ ಕಾಲೇಜುಗಳು ಹೇಗೆ ನಡೆಯಬೇಕು. ಶಿಕ್ಷಣವೇ ಸರಿಯಾಗಿ ಆಗಲಿಲ್ಲವೆಂದರೆ ಮುಂದೆ ಏನು ಸರಿಯಾಗುತ್ತದೆ ಎಂಬುದನ್ನು ಹೇಳಿ. ನಿರ್ದಾಕ್ಷಿಣ್ಯವಾಗಿ ಶಿಕ್ಷಕರನ್ನು ತೆಗೆದುಕೊಳ್ಳಲಿಲ್ಲವೆಂದರೆ ಆ ಕಾಲೇಜನ್ನೇ ಬಂದ್ ಮಾಡಿಬಿಡಿ. ಸುಮಾರು 10–15 ವರ್ಷಗಳಿಂದ ಖಾಸಗಿಯವರು ಶಿಕ್ಷಕರನ್ನು ತುಂಬಲಿಕ್ಕೆ ಅನುಮತಿ ಇಲ್ಲ. ಸರ್ಕಾರ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಸರ್ಕಾರ ಅವರಿಗೆ ಕೇವಲ ಸಂಬಳವನ್ನಷ್ಟೇ ಕೊಡುತ್ತದೆ ಹೊರತು ಇನ್ನೇನನ್ನು ಕೊಡುವುದಿಲ್ಲ. ಕಟ್ಟಡ ಇನ್ನಿತರ ಎಲ್ಲಾ ರೀತಿಯ ಸೌಲಭ್ಯಗಳನ್ನು ಅವರೇ ಕಲ್ಪಿಸಿಕೊಳ್ಳುತ್ತಾರೆ. ಶಿಕ್ಷಣ ಕ್ಷೇತ್ರಕ್ಕೆ ಏನಾದರೂ ಕೇಳಿದರೆ ಆರ್ಥಿಕ ಮಿತವ್ಯಯವಿದೆ ಎಂದು ಹೇಳುತ್ತಾರೆ. ಬೇರೆಯದಕ್ಕೆ ಆರ್ಥಿಕ ಮಿತವ್ಯಯವಿಲ್ಲ, ಇದಕ್ಕೆ ಆರ್ಥಿಕ ಮಿತವ್ಯಯವಿದೆಯೇ? ಈಗ ಬೇಕಾದಷ್ಟು ಖರ್ಚಾಗುತ್ತಿದೆ. ಒಂದೊಂದು ಇಲಾಖೆಯಲ್ಲಿ ಸುಮಾರು 10 ಕಾರುಗಳನ್ನು ಬಳಸುತ್ತಾರೆ. ನೋಡೋಣ ಆ ಕಾರುಗಳನ್ನು ತೆಗೆಯಿರಿ. ಅವರಿಗೆ ಕಾರುಗಳು ಏತಕ್ಕಾಗಿ ಬೇಕು? ಸಿಬಿಎಸ್‌ಇ ಮತ್ತು ಐಸಿಎಸ್‌ಇ introduce ಮಾಡಲಿ. ಸಿಬಿಎಸ್‌ಇ ಸಿಲಬಸ್ ಅನ್ನು introduce ಮಾಡಿದ್ದಾರೆ. Teacher-Pupil ratio 1:40 ಇರಬೇಕು. ಆದರೆ ಇಲ್ಲಿ Teacher-Pupil ratio 1:70 ಇದೆ. ಸುಮಾರು 620 ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾರ್ಥಿಗಳಿಲ್ಲ. ಹೆದರಿಕೊಂಡು ಶಾಲೆಯನ್ನು ನಡೆಸುತ್ತಿದ್ದಾರೆ. 10 ವಿದ್ಯಾರ್ಥಿಗಳು ಇಲ್ಲ ಕೇವಲ 6 ಜನ ವಿದ್ಯಾರ್ಥಿಗಳಿದ್ದಾರೆ. ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಶೇಕಡ 38ರಷ್ಟು ಕಡಿಮೆಯಾಗಿದ್ದಾರೆ. ಅದೇ ರೀತಿ ಕನ್ನಡ ಮಾಧ್ಯಮದ ಪ್ರೌಢ ಶಾಲೆಯಲ್ಲಿ ಶೇಕಡ 32ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಇವತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರು ಆರಿಸಿ ಬಂದಿದ್ದಾರೆ. ಅವರು ನಾವು ಕನ್ನಡವನ್ನು ಬೆಳೆಸುತ್ತೇವೆಂದು ಹೇಳಿದ್ದಾರೆ. ನಾವು ಉದ್ಧಾರ ಮಾಡಿ ಇಲ್ಲಿ ಕುಳಿತುಕೊಂಡಿದ್ದೇವೆ. ನಾನೇ ಮಂತ್ರಿಯಾಗಿದ್ದಾಗ ಇವರನ್ನೆಲ್ಲಾ ಮಟ್ಟ ಹಾಕಿ ತೆಗೆದೆವು. ದುರ್ದೈವದ ಸಂಗತಿ ಏನೆಂದರೆ, 1992ರಲ್ಲಿ ಸರ್ವೋಚ್ಚ ನ್ಯಾಯಾಲಯ 'up to lower

level every child should learn in mother tongue only' ಎನ್ನುವ ಒಂದು ತೀರ್ಪನ್ನು ಕೊಡುತ್ತದೆ. ಆಗ lower level ನಾಲ್ಕನೇ ತರಗತಿಯವರೆವಿಗೂ ಇತ್ತು. ಅದನ್ನು implement ಮಾಡಲು ಹೆಚ್.ನರಸಿಂಹಯ್ಯನವರ ಒಂದು ಸಮಿತಿಯನ್ನು ಸರ್ಕಾರ ನೇಮಿಸಿತು. ಇವರು ಆಂಗ್ಲ ಮಾಧ್ಯಮದ ಎಲ್ಲಾ ಶಾಲೆಗಳನ್ನು ತೆಗೆಯಬೇಕೆಂದು ಒಂದು ವರದಿಯನ್ನು ಕೊಟ್ಟರು. ಆಗ ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದಲ್ಲಿ here onward we are not permitting any English Medium Schools ಎಂದು ಸರ್ಕಾರ ಅಫಿಡವಿಟ್ ಕೊಟ್ಟಿದೆ. ಕನ್ನಡ, ಹಿಂದಿ, ತೆಲುಗು, ತಮಿಳು ಭಾಷೆಗಳಿಗೆ ಅನುಮತಿಯನ್ನು ತೆಗೆದುಕೊಂಡು English Medium Schools ನಡೆಸಿದರು. ನಾನು ಬಂದ ನಂತರ ಅದಕ್ಕೆ ಮಟ್ಟ ಹಾಕಿದೆ. ಅದನ್ನು ಮಟ್ಟ ಹಾಕಿದ ನಂತರ ನಾವು judiciary ಬಗ್ಗೆ ಮಾತನಾಡುವುದು ಕಷ್ಟವಾಗುತ್ತದೆ. ಉಚ್ಛ ನ್ಯಾಯಾಲಯದಲ್ಲಿದ್ದಂಥ ಪ್ರಕರಣದ ಬಗ್ಗೆ ಮುಖ್ಯ ನ್ಯಾಯಾಧೀಶರು ಸರ್ಕಾರದ ಕ್ರಮ ಸರಿಯಾಗಿದೆ ಎಂದು ತೀರ್ಪನ್ನು ಕೊಟ್ಟರು. ಅವರು ಹೋಗುವ ಮೊದಲು it is left to the parents and pupils ಎಂದು ಹೇಳಿದರು. ಯಾರ ಜೊತೆಗೆ ಗುದ್ದಾಡುವುದು? ಕೊನೆಗೆ ಸರ್ವೋಚ್ಛ ನ್ಯಾಯಾಲಯಕ್ಕೆ ಹೋದಾಗಲೂ ಸಹ ಅದೇ ರೀತಿಯ ತೀರ್ಪು ಬಂತು. ಎಲ್ಲಿ ಬೇಕಲ್ಲಿ ಅಲ್ಲಿ English Medium Schools ಪ್ರಾರಂಭವಾದವು. ನಾನು ಅಂಕಿ-ಸಂಖ್ಯೆಗಳನ್ನು ಹೇಳುತ್ತೇನೆ. ಎಲ್ಲರ ತಲೆಯಲ್ಲಿ ಏನಿದೆ ಎಂದರೆ, ನಮ್ಮ ಮಕ್ಕಳು ಇಂಗ್ಲಿಷ್ ಕಲಿಯಲಿಲ್ಲವೆಂದರೆ ಹೇಗೆ, ಮುಂದೆ ನಮ್ಮ ಗತಿ ಏನು ಎನ್ನುತ್ತಾರೆ. ನಾವು ಮುಂದೆ ಬದುಕುವ ಹಾಗೇ ಇಲ್ಲ ಎನ್ನುವುದು ತಲೆಯಲ್ಲಿ ಬಂದುಬಿಟ್ಟಿದೆ. ನಮ್ಮಲ್ಲಿ ಎಷ್ಟು ಜನ engineering graduate unemployed ಇದ್ದಾರೆ ಹೇಳಿ. ವಿನಯ್ ಕುಲಕರ್ಣಿಯವರ ಬಳಿಯೂ ಸಹ ಇಬ್ಬರು ಇಂಜಿನಿಯರಿಂಗ್ ಆಗಿರುವವರಿಗೆ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಎಷ್ಟು ಸಂಬಳವನ್ನು ಕೊಡುತ್ತಾರೆಂದು ಅವರನ್ನೇ ಕೇಳಿ. ಎಷ್ಟು ಜನ ನಿರುದ್ಯೋಗಿಗಳಿದ್ದಾರೆ. ವ್ಯವಸ್ಥೆಯೇ ಇಲ್ಲ, English Medium Schools ಗೆ ಏಕೆ ಕಳುಹಿಸಬೇಕು?

**ಕ್ಯಾ. ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಷ್ಟ್ರ ಮಟ್ಟದ ಮಾಹಿತಿಯನ್ನು ಹೇಳುತ್ತೇನೆ. ಸುಮಾರು 10 ಲಕ್ಷ ಇಂಜಿನಿಯರ್‌ಗಳು ಪ್ರತಿ ವರ್ಷ ವಿದ್ಯಾಭ್ಯಾಸ ಮುಗಿಸಿ

ಹೊರಗಡೆಗೆ ಬರುತ್ತಾರೆ. ಅದರಲ್ಲಿ ಕೇವಲ 3 ಲಕ್ಷ ಜನರಿಗೆ ಮಾತ್ರ ಕೆಲಸ ಸಿಗುತ್ತದೆ. ಅಂದರೆ 70% of the engineers coming out of the institutions are unemployed. This is the fact.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಗಣೇಶ್ ಕಾರ್ಣಿಕ್‌ರವರು ನಮಗೆ ಬಹಳ ಆಸೆ ಇತ್ತು. 2014ನೇ ಇಸವಿಯಲ್ಲಿ ಲೋಕಸಭಾ ಚುನಾವಣೆ ನಡೆಯಿತಲ್ಲಾ, ಆಗ ಬಹುತೇಕ ಇಂಜಿನಿಯರ್‌ಗಳು ದೊಡ್ಡ ಪ್ರಮಾಣದಲ್ಲಿ ಒಂದು ನಿರ್ಣಯ ತೆಗೆದುಕೊಂಡು...

**ಕ್ಯಾ. ಗಣೇಶ್ ಕಾರ್ಣಿಕ್:-** ನೀವು ಮತ್ತೆ ರಾಜಕಾರಣವನ್ನು ಬೆರೆಸಿದಿರಿ. ಮಾನ್ಯ ಬಸವರಾಜ ಹೊರಟ್ಟಿಯವರು ತುಂಬಾ ಚೆನ್ನಾಗಿ ಶಿಕ್ಷಣ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಒಂದು ವಿಷಯವನ್ನು ಹೇಳುತ್ತೇನೆ. ನಾನು ಐಟಿ-ಬಿಟಿ ಸಚಿವನಾಗಿರುವುದರಿಂದ ಹೇಳುತ್ತೇನೆ. BE (Computer Science), BE (Information Science) ಆದವರು, ದೊಡ್ಡ ಪ್ರಮಾಣದಲ್ಲಿ ಒಂದು ಕಡೆ inclination ಇತು....

**ಕ್ಯಾ. ಗಣೇಶ್ ಕಾರ್ಣಿಕ್:-** 60 ವರ್ಷಗಳ ಕಾಲ ನೀವು ಏನನ್ನು ಮಾಡಲಿಲ್ಲ. ಈಗ ಬಂದು 18 ತಿಂಗಳುಗಳಲ್ಲಿ ಆಗಬೇಕೆಂದರೆ ಹೇಗೆ? 60 ವರ್ಷಗಳ ಕಾಲ ಏನು ಮಾಡುತ್ತಿದ್ದಿರಿ. ಮಾನ್ಯ ಹೊರಟ್ಟಿಯವರು ಶಿಕ್ಷಣದ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಹೊಸ ಸರ್ಕಾರ ಬಂದ ನಂತರ ನಿರುದ್ಯೋಗದ ಸಮಸ್ಯೆ ಅದರಲ್ಲಿ ವಿಶೇಷವಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ಗಣೇಶ್ ಕಾರ್ಣಿಕ್‌ರವರೆ, ಅವರು ಈಲ್ಡ್ ಆಗಿಲ್ಲ, ಕುಳಿತುಕೊಳ್ಳಿ. ಮಾನ್ಯ ಬಸವರಾಜ ಹೊರಟ್ಟಿಯವರು ತಮ್ಮ ಮಾತುಗಳನ್ನು ಮುಗಿಸಲಿ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ನಾವು ಈ ದೇಶಕ್ಕೆ ಭದ್ರ ಬುನಾದಿಯನ್ನು ಹಾಕಿದವರು. ಒಳ್ಳೆಯ ಕೆಲಸವನ್ನು ಮಾಡಿ ತೋರಿಸಿ. ನೀವು ತಪ್ಪು ಮಾಡುತ್ತಿದ್ದೀರಿ ಎಂಬುದನ್ನು ನಾವು ತಿಳಿಸುತ್ತಿದ್ದೇವೆ.

**ವೈಸ್ ಛೇರ್ಮನ್:-** ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ನೀವು ಹಿರಿಯ ಸದಸ್ಯರು. ನಿಮಗೆ ಮಾತನಾಡಲು ಅವಕಾಶ ಸಿಕ್ಕಾಗ ಹೇಳಿ, ಈಗ ಕುಳಿತುಕೊಳ್ಳಿ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಅವರು ಬಿಜೆಪಿ ಪಕ್ಷಕ್ಕೆ ಬೆಂಬಲ ಮಾಡುತ್ತಾರೆ. ಅವರಿಗೆ ನಾಚಿಕೆ ಆಗಬೇಕು.

**ಶ್ರೀ ಕೆ.ಬಿ.ಶಾಣಪ್ಪ:-** ವೀರಣ್ಣ ಮತ್ತಿಕಟ್ಟಿಯವರೆ, ಪುನಃ ಏಕೆ ಹೀಗೆ ಸಿಟ್ಟಿಗೆ ಏಳುತ್ತೀರಿ?

**ವೈಸ್ ಛೇರ್ಮನ್:-** ಶಾಣಪ್ಪನವರೆ, ನೀವು ಕುಳಿತುಕೊಳ್ಳಿ, ಅವರು ಈಲ್ಡ್ ಆಗಿಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಅವರು ಚುನಾವಣೆ ಗೆದ್ದರು, ಆಯಿತು. ಏನು ಮಾಡುತ್ತಾರೆ, ಬರೀ ಭಾಷಣವನ್ನು ಮಾಡುತ್ತಾರೆ. ಕೆಲಸವನ್ನು ಮಾಡಿ ತೋರಿಸಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಪ್ರತಿ ಮತದಾರರ ಹೆಸರಿಗೆ 15 ಲಕ್ಷ ರೂಪಾಯಿ ಹಣವನ್ನು ವರ್ಗಾವಣೆ ಮಾಡುತ್ತೇವೆಂದು ಹೇಳಿದರು. ಶಾಣಪ್ಪನವರೆ, ನಿಮ್ಮ ಖಾತೆಗೆ ಈ ಹಣ ಜಮಾ ಆಗಿದೆಯೇ? ನೀವು ಸಹ ಮತದಾರರೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಖಾತೆಗೆ ಜಮಾ ಆಗಿದೆಯೇ? 15 ರೂಪಾಯಿ ದೇಶಕ್ಕೂ ಸಹ ಬಂದಿಲ್ಲ.

(ಮುಂದು)

(ಪೀಠದಲ್ಲಿ ಮಾನ್ಯ ಕೆ.ಸಿ.ಕೊಂಡಯ್ಯನವರ ಉಪಸ್ಥಿತಿ)

(ಗೊಂದಲ)

**ಡಾ:ಮತ್ತಿಕಟ್ಟಿ ವೀರಣ್ಣ:-**ನಿಮ್ಮದೆಲ್ಲಾ ಸುಳ್ಳು ಎಂದು ಗೊತ್ತಾಗುತ್ತಿದೆ, ಈಗಾಗಲೇ ನಿಮ್ಮ ಗ್ರ್ಯಾಫ್ ಕೆಳಕ್ಕೆ ಇಳಿಯುತ್ತಿದೆ. ಕೇವಲ ಭಾಷಣ ಮಾಡುವುದಲ್ಲ, ಸಾಧನೆ ಮಾಡಿ ತೋರಿಸಬೇಕು. ನಮ್ಮ ಪ್ರಣಾಳಿಕೆಯಲ್ಲಿ ಏನನ್ನು ಹೇಳಿದ್ದೆವೋ ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ನೀವು ತಂದಿದ್ದೀರಾ? . . .(ಗೊಂದಲ)

**ವೈಸ್ ಚೇರ್ಮನ್:-** ದಯವಿಟ್ಟು ಕುಳಿತುಕೊಳ್ಳಿ. ಇದು ಯಾವುದೂ ದಾಖಲೆಗೆ ಹೋಗುವುದಿಲ್ಲ . . . . (ಗೊಂದಲ)

**ಡಾ:ಮತ್ತಿಕಟ್ಟಿ ವೀರಣ್ಣ:-** ಏಕೆ ಹೋಗುವುದಿಲ್ಲ? ನಾನು ಅಸಂಸದೀಯ ಪದಗಳನ್ನೇನೂ ಮಾತನಾಡಿಲ್ಲ. It must be recorded. 60 ವರ್ಷದಲ್ಲಿ ಏನೂ ಮಾಡಿಲ್ಲ ಎಂದು ಹೇಳಿದರೆ, ನಾವು ಅದನ್ನು ಹೇಳಲೇ ಬೇಕಾಗುತ್ತದೆ. (ಈ **ಹಂತದಲ್ಲಿ ಮಾನ್ಯ ಸಭಾಪತಿಗಳು ಪೀಠಾಸೀನರಾದರು**)

**ಶ್ರೀ ನಾರಾಯಣಸಾ ಭಾಂಡಗೆ:-**ಮಾನ್ಯ ಸಭಾಪತಿಗಳೆ, ಮಾನ್ಯ ವೀರಣ್ಣಮತ್ತಿಕಟ್ಟಿ ಒಬ್ಬರಿಗೆ ಮಾತ್ರ ಏಕೆ ಸಿಟ್ಟು ಬರುತ್ತಿದೆ? ಬೇರೆ ಸದಸ್ಯರು ಹೌದು ಎಂದು ಸುಮ್ಮನೆ ಕುಳಿತುಕೊಂಡಿದ್ದಾರೆ. ನೀವೊಬ್ಬರೇ ಏಕೆ ಸಿಟ್ಟು ಮಾಡಿಕೊಳ್ಳುತ್ತಿದ್ದೀರಿ? . . .(ಗೊಂದಲ)

**ಸಭಾಪತಿಗಳು:-** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಹೊರಟ್ಟಿಯವರೇ ನಿಮ್ಮ ಮಾತನಾಡುವ ಸಮಯ ಮುಗಿದಿದೆ. ನಾನು ಹೋಗುವಾಗ ಇಲ್ಲಿ ಬರೆದಿಟ್ಟು ಹೋಗಿದ್ದೆ. 11.40 ಗಂಟೆಗೆ ನೀವು ಮಾತನಾಡಲು ಪ್ರಾರಂಭಿಸಿದಿರಿ. ಈಗ 12.30 ಗಂಟೆ ಆಗಿದೆ. ನಾನು ಮಾತನಾಡುವಾಗ ಮಧ್ಯದಲ್ಲಿ ಬೇರೆಯವರು ಎದ್ದುನಿಂತು ಮಾತನಾಡಿದರು ಎಂದು ಎಲ್ಲರೂ ಹೇಳುತ್ತೀರಿ. ಆದರೂ ನಾನು ಹೆಚ್ಚು ಸಮಯ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಹೊರಟ್ಟಿಯವರೇ 3-4 ನಿಮಿಷದಲ್ಲಿ conclude ಮಾಡಿ.

**ಶ್ರೀ ಪುಟ್ಟಣ್ಣ:-**ಮಾನ್ಯ ಸಭಾಪತಿಗಳೆ, ಮಾನ್ಯ ಮತ್ತಿಕಟ್ಟಿಯರವರು ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತಿರುವುದರಿಂದ ಈ ರೀತಿ ಆಗುತ್ತಿದೆ. ಅವರು ಕುಳಿತುಕೊಂಡರೆ ಮಾನ್ಯ ಹೊರಟ್ಟಿಯವರು ತಮ್ಮ

ಮಾತನ್ನು ಮುಗಿಸಬಹುದು. ತಾವು ದಯವಿಟ್ಟು ಮುಖ್ಯಮಂತ್ರಿಗಳಿಗೆ ಹೇಳಿ ಅವರನ್ನು ಮಂತ್ರಿ ಮಾಡಿಸಿಬಿಡಿ. . .

**ಸಭಾಪತಿಗಳು:-** ಮತ್ತೆ ಅದೇರೀತಿ ಚರ್ಚೆ ಮಾಡುತ್ತೀರಾ? ಮಾನ್ಯ ವೀರಣ್ಣನವರೇ ದಯವಿಟ್ಟು ಕುಳಿತುಕೊಳ್ಳಿ. ಏಕೆ ಹೀಗೆ ಮಾಡುತ್ತಿದ್ದೀರಿ? I request you to sit down.

**ಶ್ರೀ ಕೆ.ಬಿ.ಶಾಣಪ್ಪ:-** ಏಕೆ ಇಷ್ಟೊಂದು ಸಿಟ್ಟು ಮಾಡಿಕೊಳ್ಳುತ್ತಿದ್ದಾರೆ, ಯಾರ ಮೇಲೆ ಸಿಟ್ಟು ಮಾಡಿಕೊಳ್ಳುತ್ತಿದ್ದಾರೆ. I don't understand.

**ಸಭಾಪತಿಗಳು:-** ಮಾನ್ಯ ಶಾಣಪ್ಪನವರೇ ದಯವಿಟ್ಟು ನೀವು ಕುಳಿತುಕೊಳ್ಳಿ . . . (ಗೊಂದಲ)ಒಬ್ಬರು ಮಾತನಾಡುವಾಗ ಬೇರೆಯವರು ಅದನ್ನು ಕೇಳಬೇಕು, ಆ ರೀತಿ ಕೇಳಿಸಿಕೊಳ್ಳುವುದಕ್ಕೆ ಯಾರು ತಯಾರಿಲ್ಲ.

**ಡಾ:ಮತ್ತಿಕಟ್ಟಿ ವೀರಣ್ಣ:-** ಸತ್ಯ ಹೇಳಬೇಕಲ್ಲವೇ? . . .

**ಸಭಾಪತಿಗಳು:-** ಮಾನ್ಯ ಹೊರಟ್ಟಿಯವರೇ ನೀವು ಕುಳಿತು ಬಿಡಿ. ಅವರು ಎಷ್ಟು ಹೊತ್ತು ಮಾತನಾಡುತ್ತಾರೋ ಮಾತನಾಡಲಿ. ತಾವು ಹಿರಿಯರಿದ್ದೀರಿ. ಸಭಾಪತಿಯಾಗಿ ಕೆಲಸ ಮಾಡಿದ್ದೀರಿ. ಮಾತನಾಡಿ . . .

**ಡಾ: ಮತ್ತಿಕಟ್ಟಿ ವೀರಣ್ಣ:-** ಮಾತನಾಡುತ್ತೇನೆ, 60 ವರ್ಷದ ಸಾಧನೆಯನ್ನು ಹೇಳುತ್ತೇನೆ. 60 ವರ್ಷದ ಹಿಂದೆ ಗುಲಬರ್ಗಾ ಹೇಗಿತ್ತು? ಈಗ ಹೇಗಿದೆ? . . .

**ಸಭಾಪತಿಗಳು:-** ಏನ್ ಸರ್ ಇದು . . . ದಯವಿಟ್ಟು ಕುಳಿತುಕೊಳ್ಳಿ.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಗಳೆ, ನಾವು ಸುಮ್ಮನೆ ಕುಳಿತಿದ್ದೆವು. ಮಾನ್ಯ ಹೊರಟ್ಟಿಯವರು ಇಂಜಿನಿಯರ್‌ಗಳ ಬಗ್ಗೆ ಮಾತನಾಡಿದರು. ಐಟಿ-ಬಿಟಿ ಇಂಜಿನಿಯರ್‌ಗಳು ಯಾರಿದ್ದಾರೋ ಅವರಲ್ಲಿ ಹೆಚ್ಚು ಜನ ನಿರುದ್ಯೋಗಿಗಳಾಗಿದ್ದಾರೆ. Civil, Mechanical, Electrical Engineers ಗಳಿಗೆ ಇವತ್ತು ಅವಕಾಶಗಳಿವೆ . . .

**ಸಭಾಪತಿಗಳು:–** ಮಾನ್ಯ ಸಭಾನಾಯರೆ, ಹೀಗಾದರೆ ನಾನು ಹೇಗೆ ಸದನ ನಡೆಸಬೇಕು? ಮಾನ್ಯ ಹೊರಟ್ಟಿಯವರೇ ನೀವು ಮಾತನಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ನಾನು ಕನ್ನಡ ಮಾಧ್ಯಮ ಶಾಲೆಗಳ ಬಗ್ಗೆ ಮಾತನಾಡುತ್ತಿದ್ದೆ. ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. ಕೆಪಿಎಸ್‌ಸಿ ಸೆಲೆಕ್ಷನ್‌ನಲ್ಲಿ ಮತ್ತು ನಮ್ಮ ಇಲಾಖೆಗಳಲ್ಲಿ, ಎಸ್‌ಎಸ್‌ಎಲ್‌ಸಿ ತನಕ ಕನ್ನಡ ಮಾಧ್ಯಮದಲ್ಲಿ ಓದಿದರಿಗೆ ಮಾತ್ರ ನೌಕರಿ ಕೊಡುವಂತಹ ಕಾನೂನು ತಂದರೆ ಖಂಡಿತವಾಗಿ ನಮ್ಮ ರಾಜ್ಯದಲ್ಲಿ ಕನ್ನಡ ಉಳಿಯುತ್ತದೆ, ಹಾಗೆ ಮಾಡದೇ ಇದ್ದರೆ ಕನ್ನಡ ಸಂಪೂರ್ಣ ಸತ್ಯನಾಶ ಆಗಿಬಿಡುತ್ತದೆ. ಬೆಂಗಳೂರಿನಲ್ಲಿರುವ ಹಾಗೆ ಎಲ್ಲಾ ಕಡೆಯೂ ಕನ್ನಡ ಮಾತನಾಡುವವರೇ ಸಿಗುವುದಿಲ್ಲ. ಅಂತಹ ಪರಿಸ್ಥಿತಿ ಉಂಟಾಗುತ್ತದೆ. ನಮ್ಮ ರಾಜ್ಯ ಸರ್ಕಾರ ನೇಮಕಾತಿ ಮಾಡುವಾಗ, ಕೆಪಿಎಸ್‌ಸಿ ಸೆಲೆಕ್ಷನ್ ಮಾಡುವಾಗ ಕನ್ನಡದಲ್ಲಿ ಎಸ್‌ಎಸ್‌ಎಲ್‌ಸಿ ಮಾಡಿರಬೇಕು ಎಂಬುದನ್ನು ಕಡ್ಡಾಯ ಮಾಡಬೇಕು. ಮಾನ್ಯ ಸಭಾಪತಿಗಳೆ, ಕಳಸಾ–ಭಂಡೂರಿ ನಾಲ ವಿಚಾರಕ್ಕೆ ಸಂಬಂಧಪಟ್ಟಂತೆ ಸುಮಾರು 220 ದಿನದಿಂದ ರೈತರು ಹೋರಾಟ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅವರ ಮೇಲೆ ಇವರು ಹಾಕುವುದು, ಇವರ ಮೇಲೆ ಅವರು ಹಾಕುವುದು ಇದೇ ನಡೆಯುತ್ತಿದೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಕೋಲಾರದಲ್ಲಿ ಬಂದಿರುವ ಪರಿಸ್ಥಿತಿ ನಮಗೂ ಬರುತ್ತಿದೆ. 7.56 ಟಿಎಂಸಿ ನೀರನ್ನು ತೆಗೆದುಕೊಳ್ಳುವುದಕ್ಕೆ ನಾವು ಇಷ್ಟೆಲ್ಲಾ ಹೋರಾಟ ಮಾಡುತ್ತಿದ್ದೇವೆ. ಮಾನ್ಯ ಸಭಾನಾಯಕರೆ ನಾನು ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಸರ್ಕಾರ ಪ್ರತಿಷ್ಠೆ ಬಿಡಬೇಕು, ರೈತರ ಹತ್ತಿರ ಹೋಗಬೇಕು. 225 ದಿನದಿಂದ ಹೋರಾಟ ನಡೆಯುತ್ತಿದ್ದರೂ ನಮಗೂ ಅದಕ್ಕೂ ಸಂಬಂಧ ಇಲ್ಲ ಎನ್ನುವ ಹಾಗೆ ನಡೆದುಕೊಳ್ಳುತ್ತಿದ್ದೀರಿ, ಮಂತ್ರಿಗಳು, ನಾವು ನೀವೆಲ್ಲಾ ಕಿತ್ತೂರು ಚೆನ್ನಮ್ಮ ಸರ್ಕಲ್ ದಾಟಿಯೇ ಬರುತ್ತೇವೆ, ಆದರೂ ಏನು ಮಾಡುತ್ತಿಲ್ಲ. ಮಾನ್ಯ ಸಭಾಪತಿಗಳೆ, ಹುಬ್ಬಳ್ಳಿ–ಧಾರವಾಡಕ್ಕೆ ಕುಡಿಯುವ ನೀರು ಸಿಗುತ್ತಿಲ್ಲ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ಕರ್ನಾಟಕ ಯುನಿವರ್ಸಿಟಿಯಲ್ಲಿ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಒಂದು ಸಭೆ ನಡೆದಿತ್ತು. ಒಬ್ಬ ಎದ್ದು, ಸರ್ 13 ದಿನಕ್ಕೆ ಒಂದು ಸಲ ಕುಡಿಯುವ ನೀರು ಕೊಡುತ್ತಿದ್ದಾರೆ ಎಂದು ಹೇಳಿದ. ಆಗ ಮಾನ್ಯ ಕೃಷ್ಣರವರು ಸಂಬಂಧಪಟ್ಟ ಇಂಜಿನಿಯರ್ ಅವರನ್ನು ಕರೆದು, ಎಷ್ಟು ದಿವಸಕ್ಕೆ ಒಂದು ಸಲ ಕೊಡುತ್ತೀರಿ ಎಂದು ಕೇಳಿದರು. ಆಗ ಆ ಇಂಜಿನಿಯರ್ ಎಲ್ಲಾ ಲೆಕ್ಕ ಮಾಡಿಕೊಂಡು ಬಂದು, 10 ದಿವಸಕ್ಕೊಮ್ಮೆ ನೀರು ಕೊಡುತ್ತೇವೆ ಎಂದು ಹೇಳಿದರು. ನಮ್ಮ ಮಂದಿ ಎಲ್ಲರೂ ಚಪ್ಪಾಳೆ ಹೊಡೆದರು. 10 ದಿವಸಕ್ಕೊಮ್ಮೆ ನೀರು ಕೊಡುತ್ತೇವೆ

ಎಂದಾಗ ಅವರಿಗೆ ಅಷ್ಟು ಖುಷಿಯಾಯಿತು. ಈ ಕಳಸಾ–ಭಂಡೂರಿ ಸಲುವಾಗಿ ನೀವು ಒಂದು ತೀರ್ಮಾನ ಮಾಡಬೇಕು. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಹೋಗುವುದಿಲ್ಲ. ನಾವು ದಿಲ್ಲಿಗೆ ಹೋಗಿದ್ದೆವು. ಆಗ ನಮ್ಮ ಮೇಲೆ ಟೀಕೆ ಮಾಡಿದರು. ಪ್ರಧಾನ ಮಂತ್ರಿಗಳು ಆಗ ಏನು ಮಾತನಾಡಿದ್ದರೋ ಅದನ್ನು ನಾನು ಹೇಳಿದ್ದೆ. ನಾನು, 'we are not satisfied about the performance of the Prime Minister' ಎಂದು ಹೇಳಿದ್ದೆ. ಅದನ್ನೇ ದೊಡ್ಡದು ಮಾಡಿದರು. ಸಮಸ್ಯೆ ಪರಿಹಾರವಾಗುವುದಿಲ್ಲ ಎಂದಮೇಲೆ ನಾವೇಕೆ ಸುಮ್ಮನೆ ಹೋಗಬೇಕು? ನಾವು ನ್ಯಾಯಯುತವಾಗಿ ಹೇಳಿದ್ದೆವು, ಸತ್ಯ ಹೇಳಿದ್ದೆವು. ಕಳಸಾ–ಭಂಡೂರಿ ನಾಲಾಗೆ ಸಂಬಂಧಪಟ್ಟಂತೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕು, ಆ ಜನ 220 ದಿನಗಳಿಂದ ಹೋರಾಟ ಮಾಡುತ್ತಿದ್ದಾರೆ. ಆ ಹೋರಾಟವನ್ನು ನಿಲ್ಲಿಸುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮಾನ್ಯ ಸಭಾಪತಿಗಳೆ, ಉತ್ತರ ಕರ್ನಾಟಕದಲ್ಲಿ ಒಂದು ಮಾರ್ಕೋಪೋಲೋ ಬಸ್ ಘಟಕ ಇದೆ, ಅದು ಅಲ್ಲಿಂದ ಹೋಗುತ್ತಿದೆ. ಏಷ್ಯನ್ ಪೇಂಟ್ ಘಟಕ ಇತ್ತು, ಅದು ಹೋಗುತ್ತಿದೆ. Europcar company ಧಾರವಾಡದಿಂದ ಬೇರೆ ರಾಜ್ಯಕ್ಕೆ ಹೋಯಿತು. Arcelor-Mittal Company ಅದೂ ಕೂಡ ಹೊರಗೆ ಹೋಗುತ್ತಿದೆ. ನ್ಯಾನೋ ಘಟಕ, ಅದೂ ಇಲ್ಲ. ಒಟ್ಟಿನಲ್ಲಿ ಉತ್ತರ ಕರ್ನಾಟಕದಲ್ಲಿ ಏನೂ ಸುಧಾರಣೆ ಆಗಿಲ್ಲ.

ಮಾನ್ಯ ಸಭಾಪತಿಗಳೆ, ಇಲ್ಲಿ ಜಾನಪದ ವಿಶ್ವವಿದ್ಯಾನಿಲಯ ಮಾಡಿದರು. ರೂ. 5 ಕೋಟಿ ಹಣ ಕೇಳಿದರು, ಕೊಡಲಿಲ್ಲ. ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮಲ್ಲಿಕಾ ಘಂಟಿ ಎನ್ನುವ ಹೊಸ ವಿಸಿ ಬಂದಿದ್ದಾರೆ. ಆಕೆ ಪ್ರಾಮಾಣಿಕ ಹೆಣ್ಣು ಮಗಳು. ಹಣಕ್ಕೋಸ್ಕರ ಭಿಕ್ಷೆ ಬೇಡುವ ಹಾಗೆ ನಮ್ಮ ಕಡೆ ಬಂದು ಅಡ್ಡಾಡುತ್ತಾರೆ. ರೂ 5 ಲಕ್ಷ ಕೊಡಿ, 10 ಲಕ್ಷ ಕೊಡಿ ಎಂದು ಕೇಳುತ್ತಾರೆ. ಈ ರೀತಿ ನೀವು ವಿಶ್ವವಿದ್ಯಾನಿಲಯಗಳನ್ನು ಏಕೆ ನಡೆಸುತ್ತೀರಿ? ಇಂಥದ್ದನ್ನೆಲ್ಲಾ ಮುಚ್ಚಿಬಿಡಿ. ರೂ. 5 ಕೋಟಿ ಕೊಡುವುದಕ್ಕಾಗುವುದಿಲ್ಲ ಎಂದರೆ ವಿಶ್ವವಿದ್ಯಾನಿಲಯಗಳನ್ನು ಏಕೆ ನಡೆಸಬೇಕು? ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಬಂದ ಸರ್ಕಾರ ಒಳ್ಳೆಯ ಸರ್ಕಾರ ಆಗಬೇಕು ಎನ್ನುವುದು ನಮ್ಮ ಆಸೆ. ನಾವು ನಿಮ್ಮನ್ನು ಟೀಕೆ ಮಾಡುವುದಕ್ಕೆ ಬಂದಿಲ್ಲ. ನನ್ನ ದೃಷ್ಟಿಯಲ್ಲಿ 3ವರ್ಷದ ಒಟ್ಟು ಆಡಳಿತ ಯಂತ್ರ fail ಆಗಿದೆ. ಇದರಲ್ಲಿ ಎರಡನೆ ಮಾತಿಲ್ಲ. ಒಳ್ಳೆಯದು ಮಾಡಿದ್ದರೆ ಒಳ್ಳೆಯದು ಎಂದು ಹೇಳುತ್ತೇವೆ, ಕೆಟ್ಟದ್ದು ಮಾಡಿದ್ದರೆ ಕೆಟ್ಟದ್ದು ಎಂದು ಹೇಳುತ್ತೇವೆ. ಸರ್ಕಾರ ಇದ್ದೂ ಇಲ್ಲದ ಹಾಗೆ ಇದೆ. ನಾನು ರಾಜಕೀಯ

ಮಾಡುವುದಕ್ಕೆ ಹೋಗುವುದಿಲ್ಲ. ಮುಂದೆ ನಿಮ್ಮ ಮುಖ್ಯಮಂತ್ರಿ ಯಾರು ಬರುತ್ತಾರೋ ಗೊತ್ತಿಲ್ಲ. ಅಲ್ಲದೇ ನೀವೇ, ಇಂಥ ಮಂತ್ರಿಗಳು ಹೋಗುತ್ತಾರೆ, ಇಂಥವರು ಬರುತ್ತಾರೆ ಎಂಬ ವಿಷಯವನ್ನು ಹಬ್ಬಿಸಿದಾಗ ಎಲ್ಲಾ ವ್ಯವಸ್ಥೆ ಹಾಳಾಗುತ್ತದೆ. ನಾನು ಪ್ರಸ್ತಾಪಿಸಿದ ವಿಚಾರಳಿಗೆ ಸಂಬಂಧಪಟ್ಟಂತೆ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಗಳು:–** ನಮ್ಮ ಪಟ್ಟಿ ಪ್ರಕಾರ ಮುಂದೆ ಮಾತನಾಡಬೇಕಾದವರ ಪೈಕಿ ಮಾನ್ಯ ಕೊಂಡಯ್ಯನವರ ಹೆಸರಿತ್ತು. ಆದರೆ ಯೋಗಾಯೋಗ, ಪರಿಸ್ಥಿತಿಯ ಒತ್ತಡದಿಂದ ಅವರನ್ನು ಈ ಕುರ್ಚಿಯಲ್ಲಿ ಕೂರಿಸಿದ ಕಾರಣಕ್ಕಾಗಿ ಪಟ್ಟಿಯಲ್ಲೂ ಬದಲಾವಣೆ ಮಾಡಿದೆ. ಮೊದಲು ಮಾನ್ಯ ರಾಮಚಂದ್ರಗೌಡರು ನಂತರ ಮಾನ್ಯ ಕೊಂಡಯ್ಯನವರು ಮಾತನಾಡಬೇಕೆಂದು ಬದಲಾವಣೆ ಮಾಡಿದ್ದೆ.

(ಮುಂದು . . . )

ಸಭಾಪತಿಯವರು(ಮುಂದು):-

ಮಾನ್ಯ ಬಸವರಾಜ ಹೊರಟ್ಟಿಯವರು ಸಮಯಕ್ಕೆ ಸರಿಯಾಗಿ ಮುಗಿಸಿದರೆ ಮಾನ್ಯ ರಾಮಚಂದ್ರಗೌಡರನ್ನು ಕರೆದುಬಿಡಿ ಎಂದು ಅವರಿಗೆ ಹೇಳಿ ಹೋಗಿದ್ದೆ, ಅದು ರಾಮಚಂದ್ರಗೌಡರಿಗೆ ಸಂದೇಶ ಹೋಗಿದೆ. ಈಗ ಮೊದಲು ಮಾನ್ಯ ಕೊಂಡಯ್ಯನವರು ಮಾತನಾಡುತ್ತಾರೆ. ಆಮೇಲೆ ರಾಮಚಂದ್ರಗೌಡರು ಮಾತನಾಡಲಿ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆ ಮತ್ತು ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಂಡಿಸಿದ ಪ್ರಸ್ತಾವನೆಯನ್ನು ನಾನು ಸಮರ್ಥಿಸುತ್ತೇನೆ. ಪ್ರತಿ ವರ್ಷ ಸರ್ಕಾರ ಏನು ಕೆಲಸಗಳನ್ನು ಮಾಡಿದೆ, ಯಾವ್ಯಾವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಯೋಚಿಸಿದೆ ಎನ್ನುವುದನ್ನು ಈ ರಾಜ್ಯಪಾಲರ ಭಾಷಣ ಪ್ರತಿಬಿಂಬಿಸುತ್ತದೆ. ಈ ಹಿನ್ನೆಲೆಯಲ್ಲಿ ಸಮಯ ಕಡಿಮೆ ಇರುವುದರಿಂದ ನಾನು ಹೆಚ್ಚಿನ ವಿಷಯಗಳನ್ನು ತೆಗೆದುಕೊಳ್ಳುವುದಿಲ್ಲ. ರಾಜ್ಯಪಾಲರ ಭಾಷಣದ ಮೂರನೇ ಪ್ಯಾರಾದಲ್ಲಿ 'ಪ್ರಜಾಪ್ರಭುತ್ವವನ್ನು ತಳಮಟ್ಟದಿಂದ ಬಲಪಡಿಸಲು ನನ್ನ ಸರ್ಕಾರ ಬದ್ಧವಾಗಿದೆ ಹಾಗೂ ಭಾರತದ ಸಂವಿಧಾನಕ್ಕೆ 73ನೇ ಮತ್ತು 74ನೇ ತಿದ್ದುಪಡಿಗಳನ್ನು ತರುವಲ್ಲಿ ಕಾರಣೀಭೂತರಾಗಿದ್ದಂಥ ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರ ಕನಸನ್ನು ನನಸಾಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದ್ದಾರೆ. ಸುಮಾರು 82 ತಿದ್ದುಪಡಿಗಳನ್ನು ಈ ಕಾಯ್ದೆಗೆ ತರಲಾಗಿದೆ. ನಾನು ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಂದ ಆಯ್ಕೆಯಾಗಿ ಬಂದವನು. ನನ್ನ ಜೊತೆಗೆ ಇತರ 24 ಮಂದಿ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ಇವತ್ತು ಗ್ರಾಮ ಪಂಚಾಯಿತಿಗಳಿಗೆ ಸರ್ವ ಅಧಿಕಾರ ಕೊಟ್ಟಿದ್ದೇವೆ, ಗ್ರಾಮ ಸ್ವರಾಜ್ಯ ಆಗಬೇಕು, ಗ್ರಾಮಗಳು ನಮ್ಮ ಪ್ರಜಾತಂತ್ರದ ಮೂಲ ಬೇರುಗಳು ಎಂದು ನಾವು ಮಾತನಾಡುತ್ತೇವೆ. ಆದರೆ ಇವತ್ತು ಗ್ರಾಮ ಪಂಚಾಯಿತಿಗಳಲ್ಲಿ ಏನು ನಡೆಯುತ್ತಿದೆ ಎಂದು ನಾನು ಸದನದ ಮುಂದೆ ನನ್ನ ಅನುಭವಗಳನ್ನು ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ಕೋಟ ಶ್ರೀನಿವಾಸ ಪೂಜಾರಿಯವರ ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಮಂತ್ರಿಗಳಾದ ಎಚ್.ಕೆ.ಪಾಟೀಲ್‌ರವರು

ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಈ ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿ ಸ್ಟಾಫ್ ಕೊಡುತ್ತಿದ್ದಾರೆಂದು ಹೇಳುತ್ತಿದ್ದರು, ಒಂದು ಗ್ರಾಮ ಪಂಚಾಯಿತಿಯನ್ನು ಉದಾಹರಣೆಗೆ ತೆಗೆದುಕೊಂಡರೆ ಅಧ್ಯಕ್ಷ, ಉಪಾಧ್ಯಕ್ಷ, ಅವರು ಪ್ರಜೆಗಳಿಂದ ಆಯ್ಕೆಯಾಗಿ ಬಂದವರು. ನಮ್ಮ ಐದು ಅಂತಸ್ತಿನ ಪ್ರಜಾತಂತ್ರದಲ್ಲಿ ಪಾರ್ಲಿಮೆಂಟ್‌ಗೆ ಚುನಾವಣೆ ನಡೆದಾಗ ಮತ ಹಾಕುತ್ತೇವೆ, ಎರಡನೆಯದು, ವಿಧಾನ ಸಭೆಗೆ ಚುನಾವಣೆ ನಡೆದಾಗ ಎಂ.ಎಲ್.ಎ.ಗಳಿಗೆ ಮತ ಹಾಕುತ್ತೇವೆ, ಮೂರನೆಯದು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮಪಂಚಾಯಿತಿಗಳಿಗೆ ಚುನಾವಣೆ ನಡೆದಾಗ ಮತ ಹಾಕುತ್ತೇವೆ. ನಮ್ಮ ಭಾರತ ಸಂವಿಧಾನದ ಪ್ರಕಾರ ಲೋಕಸಭೆಗೆ 543 ಜನ ಚುನಾಯಿತರಾಗುತ್ತಾರೆ. ಚುನಾಯಿತರಾದಂತಹ 543 ಸಂಸದರಲ್ಲಿ 272 ಜನರ ಬೆಂಬಲ ಯಾವ ಪಕ್ಷಕ್ಕೆ ದೊರೆಯುತ್ತದೆಯೋ ಆ ಪಕ್ಷ ಕೇಂದ್ರದಲ್ಲಿ ಸರ್ಕಾರ ರಚನೆ ಮಾಡುತ್ತದೆ ಮತ್ತು ಆ ಪಕ್ಷವು ಯಾರನ್ನು ನಾಯಕನನ್ನಾಗಿ ಆರಿಸುತ್ತಾರೆಯೋ ಅಂತಹ ವ್ಯಕ್ತಿ ಪ್ರಧಾನ ಮಂತ್ರಿಯಾಗುತಾರೆ. ಪ್ರಧಾನ ಮಂತ್ರಿಯವರಿಗೆ ಎಂತಹ ಅಧಿಕಾರ ಇದೆ ಎಂದರೆ ಸರ್ವಾಧಿಕಾರಗಳು ಅವರಿಗೆ ಪ್ರಾಪ್ತವಾಗುತ್ತವೆ. ಅಂದರೆ ಅವರಿಗೆ ಎಗ್ಸಿಕ್ಯುಟೀವ್ ಪವರ್ಸ್‌ನ್ನು ನಾವು ರಾಜ್ಯಾಂಗ ಪರವಾಗಿ ಕೊಟ್ಟಿದ್ದೇವೆ. ಕೆಳಹಂತದಲ್ಲಿ ಎಂ.ಎಲ್.ಎ.ಗಳು ಆಯ್ಕೆ ಮಾಡಿದ ಮುಖ್ಯಮಂತ್ರಿಗಳಿಗೆ ಅಧಿಕಾರ ಇರುತ್ತದೆ. ಜಿಲ್ಲಾಪಂಚಾಯತ್ ಅಧ್ಯಕ್ಷರಿಗೆ ಸ್ಟೇಟ್ ಮಿನಿಸ್ಟರ್ ರ್‍ಯಾಂಕ್ ಕೊಡುತ್ತೇವೆಂದು ಇತ್ತೀಚಿಗೆ ನಮ್ಮ ಸರ್ಕಾರ ಘೋಷಣೆ ಮಾಡಿದೆ. ಅಂದರೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೂ ಕಾರ್ಯಾಂಗದ ಅಧಿಕಾರ ಕೊಡುತ್ತೇವೆ. ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದಾರೆ. ಆದರೆ ಗ್ರಾಮ ಪಂಚಾಯಿತಿಯೂ ಒಂದು ಸಣ್ಣ ಕಾರ್ಯಾಲಯವಿದ್ದಂತೆ. ಡೆಪ್ಯುಟಿ ತಹಸೀಲ್ದಾರ್ ಕೇಡರ್ ಹೊಂದಿದಂತಹ Panchayath Development Officer ಇರುತ್ತಾನೆ. ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಇತರೆ ಸಿಬ್ಬಂದಿಗಳನ್ನು ಕೊಟ್ಟಿದ್ದೇವೆ. ಆದರೆ ಆ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಏನು ಪವರ್ಸ್ ಇದೆ? PDO ಹತ್ತಿರ ಹೋಗಿ ನೀನು ಯಾರಿಗೆ ರಿಪೋರ್ಟ್ ಮಾಡುತ್ತೀಯಪ್ಪ ಎಂದು ಕೇಳಿದರೆ ತಾಲ್ಲೂಕು ಪಂಚಾಯಿತ್ Executive Officerಗೆ ರಿಪೋರ್ಟ್ ಮಾಡುತ್ತೇನೆ ಎಂದು ಹೇಳುತ್ತಾನೆ. ಅಂದರೆ, ಈ ಅಧ್ಯಕ್ಷರನ್ನು ಅವರು ಕೇರ್ ಮಾಡುವುದಿಲ್ಲ. ನಾವು ಯಾವುದೇ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರನ್ನು ಭೇಟಿ ಮಾಡಿದಾಗ, ಸರ್, ನಮ್ಮ PDO ಸರಿಯಿಲ್ಲ, PDO ಬರುವುದಿಲ್ಲ,

PDO ಕೆಲಸ ಮಾಡುವುದಿಲ್ಲ, ಅವರನ್ನು ವರ್ಗಾವಣೆ ಮಾಡಿ ಎನ್ನುವ ಕೂಗು ಬರುತ್ತದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಎಗ್ಸಿಕ್ಯುಟಿವ್ ಪವರ್ಸ್ ಕೊಡಿ, ಎಗ್ಸಿಕ್ಯುಟಿವ್ ಪವರ್ಸ್ ಕೊಟ್ಟಾಗ ಮಾತ್ರ, PDO ಆಗಲಿ, ಕಾರ್ಯದರ್ಶಿಯಾಗಲಿ ರಜೆ ಹಾಕಬೇಕಾದಾಗ ಅವನು ಅಧ್ಯಕ್ಷರ ಅನುಮತಿ ಪಡೆಯಲೇ ಬೇಕಾಗುತ್ತದೆ. ಅವನ ಸ್ಯಾಲರಿ ಸರ್ಟಿಫಿಕೇಟ್‌ನ್ನು ಪ್ರತಿ ತಿಂಗಳು ಇವರು ಸರ್ಟಿಫೈ ಮಾಡಬೇಕಾಗುತ್ತದೆ. ಪ್ರತಿ ವರ್ಷ confidential report ಬರೆಯಬೇಕಾಗುತ್ತದೆ. ಅಂದರೆ, ಅಧ್ಯಕ್ಷರಿಗೆ ಎಗ್ಸಿಕ್ಯುಟಿವ್ ಪವರ್ಸ್ ಕೊಟ್ಟರೆ ಮಾತ್ರ ಅಧಿಕಾರ ವಿಕೇಂದ್ರಿಕರಣ ಆಗಿ ಅವರು ಕೆಲಸ ಮಾಡುವುದಕ್ಕಾಗುತ್ತದೆ. ಇದನ್ನು ಮುಂಬರುವ ದಿನಗಳಲ್ಲಿ ನಮ್ಮ ಸರ್ಕಾರ ಮಾಡಬೇಕೆನ್ನುವುದು ನನ್ನ ಸಲಹೆ. ನಮ್ಮ ರಾಜ್ಯಪಾಲರು 31ನೇ ಪ್ಯಾರಾದಲ್ಲಿ "ಸಾಮಾಜಿಕ ನ್ಯಾಯವನ್ನು ಮತ್ತು ಸಮಾನತೆಯನ್ನು ಪ್ರೋತ್ಸಾಹಿಸುವುದು ನನ್ನ ಸರ್ಕಾರದ ಮೂಲ ಧ್ಯೇಯಗಳಲ್ಲಿ ಒಂದಾಗಿದೆ" ಎಂದು ಹೇಳಿದ್ದಾರೆ. ವಿವಿಧ ಇಲಾಖೆಗಳಿಂದ ನಾವು ಆದಾಯ ಉತ್ಪಾದಕ ಕಾರ್ಯಕ್ರಮಗಳಾದ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ಇಲಾಖೆಗಳನ್ನು ಕಲ್ಪಿಸುತ್ತಾರೆ. ಇವತ್ತು ನಾವು ಯಾವುದೇ ತೆಗೆದುಕೊಳ್ಳಲಿ, human index ಪ್ರಕಾರ ನಾವು funds allocate ಮಾಡಬೇಕು ಎನ್ನುವ ಸಿದ್ಧಾಂತವನ್ನು ತೆಗೆದುಕೊಂಡು ಬಂದಿದ್ದೇವೆ. 2011ರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು 14ನೇ ಹಣಕಾಸು ಅಯೋಗವು ನೀಡಿದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರ ನೇರವಾಗಿ ಗ್ರಾಮಪಂಚಾಯಿತಿಗಳಿಗೆ ಫಂಡ್ ಅಲೋಕೇಶನ್ ಮಾಡಿದ್ದಾರೆ. ಅದೇ ರೀತಿಯಾಗಿ ನಮ್ಮ ಸರ್ಕಾರವು ಸಹ ಈ ವಿವಿಧ ಇಲಾಖೆಗಳಿಂದ ಬರುವಂಥ ಗ್ರಾಂಟ್‌ಗಳೇನಿವೆ, ಜನಸಂಖ್ಯೆ ಆಧಾರಿತವಾಗಿ ಗ್ರಾಮ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿ ಅವರೇ ಅಲ್ಲಿ ನಿರ್ಣಯ ಮಾಡುವ ಪದ್ಧತಿಯನ್ನು ಜಾರಿಗೆ ತಂದರೆ ಆ ಇಲಾಖೆಗೆ ಗೊತ್ತಾಗುತ್ತದೆ. ಉದಾಹರಣೆಗೆ ಕೆಲವು ಕಡೆ ಏನಾಗಿದೆ ಎಂದರೆ ಗಂಗಾಕಲ್ಯಾಣ ಯೋಜನೆಯ ಬಗ್ಗೆ ಹೇಳುತ್ತೇನೆ. It is implemented through Dr B.R.Ambedkar Development Corporation, Karnataka State Tribal Development Corporation(ST), Devraju Urs backward Class Development Corporation, and Maharshi Valmiki Development Corporation. ಈ

ಸಂಸ್ಥೆಗಳಿಗೆ ಎಲ್ಲರೂ ಅಪ್ಲೈ ಮಾಡುತ್ತಾರೆ. ಗ್ರಾಮ ಪಂಚಾಯಿತಿಯಿಗೆ ಅಪ್ಲೈ ಮಾಡಿದ ನಂತರ ಆ ಅರ್ಜಿಯನ್ನು ಅವರು ತಾಲ್ಲೂಕು ಪಂಚಾಯತಿಗೆ ಕಳುಹಿಸುತ್ತಾನೆ. ತಾಲ್ಲೂಕು ಪಂಚಾಯಿತಿಯವರು ಡಿಸ್ಟ್ರಿಕ್ಟ್ ಆಫೀಸ್‌ರ್‌ಗೆ ಕಳುಹಿಸುತ್ತಾನೆ. ಡಿಸ್ಟ್ರಿಕ್ಟ್ ಆಫೀಸರ್ ಇಲ್ಲಿ ಕಾರ್ಯದರ್ಶಿಗೆ ಲಿಸ್ಟ್ ಕಳುಹಿಸುತ್ತಾನೆ. ಉದಾಹರಣೆಗೆ ಹೇಳುವುದಾದರೆ ಒಂದು ವರ್ಷ ಕೆಳಗಡೆ ಒಬ್ಬ ರೈತ 10 ಲಕ್ಷ ರೂಪಾಯಿಗೆ ಗಂಗಾಕಲ್ಯಾಣ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸಿ, ಪ್ರೋಸಸ್ ಮಾಡಿ, ಫಾಲೋಅಪ್ ಮಾಡಿ ಸಣ್ಣ ನೀರಾವರಿ ಇಲಾಖೆಗೆ ಬರುತ್ತದೆ ಎಂದು ಹೇಳಿದರು. ಸಣ್ಣ ನೀರಾವರಿ ಇಲಾಖೆಯಿಂದ ಎಗ್ಸಿಕ್ಯುಟಿವ್ ಇಂಜಿನಿಯರ್ ನಮ್ಮಲ್ಲಿ ಇರುತ್ತಾರೆ. ಸೂಪರಿಟೆಂಡೆಂಟ್ ಇಂಜಿನಿಯರ್ ಬಿಜಾಪುರದಲ್ಲಿದ್ದಾನೆ, ಚೀಫ್ ಇಂಜಿನಿಯರ್ ಗುಲ್ಬರ್ಗಾದಲ್ಲಿದ್ದಾನೆ, ಇಷ್ಟೆಲ್ಲಾ ಪ್ರೋಸಸ್ ಮಾಡಿ ಕಾರ್ಯದರ್ಶಿ ಹತ್ತಿರ ತಂದಾಗ ಅವರಿಂದ ಉತ್ತರ ಬಂದಿರುವುದೇನೆಂದರೆ ಈ ವರ್ಷ ಗ್ರಾಂಟ್ ಇಲ್ಲ ಎಂದು, ಮುಂದಿನ ವರ್ಷ ಕೊಡುತ್ತೇನೆ ಎಂದು ಹೇಳಿದರು. Special Component Plan ನಲ್ಲಿ ಫಂಡ್ಸ್ ಎಲ್ಲಾ ವರ್ಗಾವಣೆ ಮಾಡಿ ಸಮಾಜ ಕಲ್ಯಾಣ ಇಲಾಖೆಗೆ ಹೋಗಿಬಿಟ್ಟಿತು ಎಂದು ಹೇಳಿದರು. ಆ ಬಡ ರೈತ ತಿರುಗಾಡುವುದನ್ನು ನೋಡಿ ಬಸವರಾಜು ಎನ್ನುವವರು ಫೋನ್ ಮಾಡುತ್ತಾರೆ. ಸರ್, ಏನಾಯಿತು ಎಂದು, ಅಂದರೆ, ಈ ವ್ಯವಸ್ಥೆಯನ್ನು ನಾವು ಸರಿಪಡಿಸಬೇಕಾಗುತ್ತದೆ. ಪಂಚಾಯಿತಿ ಮಟ್ಟದಲ್ಲಿ ಎಷ್ಟು ಕೊಡುತ್ತೇವೆ? ಬಳ್ಳಾರಿ ತಾಲ್ಲೂಕಿಗೆ ನೂರು ಕೊಟ್ಟಿದ್ದಾರೆ. ಬಳ್ಳಾರಿ ತಾಲ್ಲೂಕಿನಲ್ಲಿ ಸುಮಾರು 40 ಪಂಚಾಯಿತಿಗಳಿವೆ. 3-3 ಪಂಚಾಯಿತಿಗೆ 4 ಕೊಡುತ್ತೇವೆ. ಎಸ್‌ಸಿ ಕೆಳಗಡೆ, ಎಸ್‌ಟಿ ಕೆಳಗಡೆ, ಹಿಂದುಳಿದ ವರ್ಗದ ಕೆಳಗಡೆ ಮೂರ್‍ನಾಲ್ಕು ಗಂಗಾಕಲ್ಯಾಣ ಯೋಜನೆಗೆ ಕೊಡುತ್ತೇವೆ. Feasibility ಇದೆಯೋ ಇಲ್ಲವೋ ಎಂದು ನೋಡಿಕೊಂಡು ಅವನು ನಿರ್ಣಯ ಮಾಡಲಿ. ನಾವು ಪ್ರತಿಯೊಂದಕ್ಕೂ ಗ್ರಾಮಸಭೆಗಳನ್ನು ಆಧಾರ ಮಾಡುತ್ತಿದ್ದೇವೆಯಲ್ಲಾ ಗ್ರಾಮಸಭೆಗಳ ರೀತಿಯೇ ಅವುಗಳನ್ನು ಡಿಸೈಡ್ ಮಾಡಲಿ. ಆಗುತ್ತದೆಯೋ ಇಲ್ಲವೋ ಎಂಬುದು ಅಲ್ಲಿನ ಮಟ್ಟದಲ್ಲಿಯೇ ತಿಳಿಯುತ್ತದೆ. ಬೇಕಿದ್ದರೆ ತಾಲ್ಲೂಕು ಅಧಿಕಾರಿಗಳು ಅಲ್ಲಿಗೆ ಹೋಗಿ ಸಭೆಯಲ್ಲಿ ಭಾಗವಹಿಸಲಿ. ಈ ವ್ಯವಸ್ಥೆಯನ್ನು ನಾವು ಸುಧಾರಣೆ ಮಾಡಬೇಕಾಗುತ್ತದೆ. ಪಂಚಾಯಿತಿಗಳಲ್ಲಿ ವಿಷಯಗಳು ಕೆಲವಾದರೆ ಬೇರೆ ಬೇರೆ ಇಲಾಖೆಯಿಂದ ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮಾಹಿತಿಗಳು ಇರುವುದಿಲ್ಲ. ಆ ಊರಿನಲ್ಲಿ ಏನಾಗುತ್ತದೆಯೋ ಗೊತ್ತಾಗುವುದಿಲ್ಲ. ಅವರು ಕನಿಷ್ಟ ಪಕ್ಷ ಪಂಚಾಯಿತಿ

ಪ್ರೆಸಿಡೆಂಟ್‌ಗೆ ಅವರು ಇಲಾಖೆಯಿಂದ ಸ್ಯಾಂಕ್ಷನ್ ಆಗಿರುವ ಪತ್ರ ಬರೆಯಬೇಕು. ನಿಮ್ಮ ಪಂಚಾಯಿತಿಗೆ ಈ ಯೋಜನೆಯಡಿಯಲ್ಲಿ ಸ್ಯಾಂಕ್ಷನ್ ಆಗಿದೆ ಎಂದು ಪತ್ರ ಬರೆಯಬೇಕು. ಇವತ್ತು ನಾನು ಆ ಪಂಚಾಯಿತಿಗಳ ಆಫೀಸ್‌ಗೆ ಹೋದರೆ ನಾವು ಬಂದು ಈಗ 6 ತಿಂಗಳು, 8 ತಿಂಗಳು ಆಗಿದೆ, ನಾವು ಸುಮ್ಮನೆ ಜಿದ್ದಿಗೆ ಗೆದ್ದುಬಿಟ್ಟೆವು, ಇಲ್ಲಿ ನೋಡಿದರೆ ಏನು ಇಲ್ಲ, ಒಂದು ರೂಪಾಯಿ ಬರುವುದಿಲ್ಲ ಎಂದು ಹೇಳುತ್ತಾರೆ. ಅದಲ್ಲದೆ, ಬರುವ ವ್ಯವಸ್ಥೆ ಯಾವ ರೀತಿ ಇದೆ ಎಂದು ಉದಾಹರಣೆ ಹೇಳುತ್ತೇನೆ. ಈ ಪಿ.ಡಿ.ಓ.ಗಳಿಗೆ ಸರಿಯಾದ ಮಾಹಿತಿ ಕೊಡದಿದ್ದರೆ ಗ್ರಾಂಟ್ಸ್‌ಗೆ ಏನಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಹತ್ತು ಲಕ್ಷ ರೂಪಾಯಿಗಳನ್ನು ಪ್ರತಿ ಪಂಚಾಯಿತಿಗೆ ಕೊಡುತ್ತಾರೆ. ಅದರಲ್ಲಿ ಕರೆಂಟ್ ಬಿಲ್, ನೀರಿನ ಬಿಲ್ ಮುರಿದುಕೊಳ್ಳುತ್ತಾರೆ. ಇದಲ್ಲದೆ, 14ನೇ ಹಣಕಾಸು ಆಯೋಗದಿಂದ ನೇರವಾಗಿ 28-30 ಲಕ್ಷ ರೂಪಾಯಿ ಅಲೋಕೇಟ್ ಮಾಡಿದ್ದಾರೆ. ಅದರಲ್ಲಿ ಮೊದಲನೆ ಕಂತು 7-8 ಲಕ್ಷ ಬರುತ್ತದೆ. ಅದನ್ನು ಏನು ಮಾಡುತ್ತಾರೆಂದರೆ 20 ಸದಸ್ಯರಿಗೆ ಕ್ಯಾಲ್ಕುಲೇಟರ್ ಇಟ್ಟು ಹಂಚುತ್ತಾರೆ. 40,000-50,000 ನಿನಗೆ ಅಲಾಟ್ ಮಾಡುತ್ತೇನೆ, ನೀನು ಬಿಲ್ ಮಾಡಿಕೋ ಎಂದು. ಅಂದರೆ 10 ಲಕ್ಷ ರೂಪಾಯಿ ಏನು ಬರುತ್ತದೆ ಆ ಪಂಚಾಯಿತಿಯಲ್ಲಿ ನೇರವಾಗಿ ಯಾವ ವಿಧವಾದ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಆಗುವುದಿಲ್ಲ. ಒಬ್ಬ ಪಂಚಾಯಿತಿ ಸದಸ್ಯರಿಗೆ ನಾನು ಕರೆದು ಕೇಳಿದೆ. ಅವನು ನಂದೆಹಳ್ಳಿಯ ಪಂಚಾಯಿತಿ ಪ್ರೆಸಿಡೆಂಟ್. 11 ಲಕ್ಷ ರೂಪಾಯಿ ಪಂಚಾಯಿತಿಗೆ ಬಂತು ಎಂದು ಅವನು ಹೇಳಿದನು. ಏನು ಮಾಡಿದೆ ಎಂದು ಕೇಳಿದೆ, works ಕೊಡಿ ಎಂದು ನಾವು 50,000-55,000 ಕೊಟ್ಟುಬಿಟ್ಟೆವು ಎಂದು ಹೇಳಿದನು. ಅವರು ನೇರವಾಗಿ ಹೇಳಿದರು, ಸರ್ ನಿಮ್ಮ ಹತ್ತಿರ ಸುಳ್ಳು ಹೇಳುವುದಿಲ್ಲ, 8 ಪರ್ಸೆಂಟ್ ಮಾತ್ರ ಮಣ್ಣು ಗಿಣ್ಣು ಎಂದು ಹಾಕಿಬಿಡುತ್ತೇವೆ. 92 ಪರ್ಸೆಂಟ್ ವಿವಿಧ ರೂಪದಲ್ಲಿ ಹಂಚಿಕೆಯಾಗಿಬಿಡುತ್ತದೆ ಎಂದು ಹೇಳಿದರು. ನಾನು ಹೇಳಿದೆ, ಹತ್ತು ಲಕ್ಷ ರೂಪಾಯಿಗಳಲ್ಲಿ ನೀವೇ ಯಾರಾದರೂ ಗುತ್ತಿಗೆ ತೆಗೆದುಕೊಂಡು ಮೇನ್ ರೋಡ್ ನಿಂದ ನಿಮ್ಮ ಊರಿಗೆ ರೋಡ್ ಮಾಡಿದ್ದರೆ ಊರಿನವರು ನಮ್ಮ ಪಂಚಾಯಿತಿಯವರು ರಸ್ತೆ ಮಾಡಿದರು ಎಂದಾದರು ಹೇಳುತ್ತಿದ್ದರು. ಅಂದರೆ ನಾವು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾಗುತ್ತದೆ.

(ಮುಂದು)

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು. .)**

ಅಂದರೆ, ನಾವು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಇವತ್ತು ಜಿಲ್ಲಾ ಪಂಚಾಯಿತಿಗಳು ಹೊಸದಾಗಿ ಬಂದಿವೆ. ಸುಮಾರು 10 ವರ್ಷಗಳ ಕೆಳಗಡೆ ನಮ್ಮ ಶ್ರೀಯುತ ಎಸ್.ಎಂ.ಕೃಷ್ಣ ರವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 'ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ' ಎಂದು ಮಾಡಿದ್ದರು. ಅದಕ್ಕೆ ಒಂದು ಕೋರಂ ಇದೆ. ಅದರಲ್ಲಿ ಎಲ್ಲಾ ಪಂಚಯಿತಿಗಳು, ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಬರುತ್ತವೆ. ಅಂದರೆ, ಆ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂತೆ ಪ್ಲಾನಿಂಗ್ ಮಾಡಬೇಕು. ಪ್ರಸ್ತುತ ಏನಿದೆ, ನಿಮಗೆ ಮೂಲಭೂತ ಸೌಲಭ್ಯಗಳು ಇರುವಂತಹ ಪಂಚಾಯಿತಿಗಳ ಬಗ್ಗೆ ನಾವು ಏನು ಹೇಳುತ್ತೇವೆ, ಮೊದಲು ಏನು ಹಾಕುತ್ತೇವೆ, ಕುಡಿಯುವ ನೀರು, ಮುಖ್ಯರಸ್ತೆ ಸೇರುವಂತಹ ಒಳ ರಸ್ತೆಗಳು, ಮತ್ತೆ ಶೌಚಾಲಯಗಳು, ರಾತ್ರಿ ವೇಳೆಯಾದರೆ ಬೀದಿ ದೀಪಗಳು ಇವುಗಳನ್ನು ನಾವು ಮೂಲಭೂತ ಸೌಲಭ್ಯಗಳು ಎಂದು ಕರೆಯುತ್ತೇವೆ. ಇದಕ್ಕೆ ಸಾಕಷ್ಟು ಅನುದಾನಗಳು ಬರುತ್ತವೆ. ಆದರೆ, ಅವುಗಳು ಸರಿಯಾದ ರೀತಿಯಲ್ಲಿ ಜಾರಿಗೆ ಬರುತ್ತಿಲ್ಲ. ಅವುಗಳು ವಿವಿಧ ರೂಪದಲ್ಲಿ ಹೋಗುತ್ತಿವೆ. ರೊಕ್ಕ ಬರುತ್ತದೆ, ಆದರೆ, ಅದಕ್ಕೆ ಸಂಬಂಧಪಟ್ಟಂತೆ ಖರ್ಚು ಮಾತ್ರ ತೋರಿಸುತ್ತಾರೆ. ಆದರೆ, ಅಲ್ಲಿ, ಭೌತಿಕವಾಗಿ ಜಾರಿಯಾಗುತ್ತಿಲ್ಲ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಏಕೆಂದರೆ, ಎಲ್ಲಾ ಅನುದಾನಗಳು ಬರುತ್ತವೆ. ನಾನು ಹೋದ ಕಡೆಗಳೆಲ್ಲಾ ನೋಡಿದ್ದೇನೆ. ಗ್ರಾಂಟ್‌ಗಳನ್ನು ಎಷ್ಟೆಷ್ಟು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇವುಗಳನ್ನು ನಾವು ಸರಿಪಡಿಸಬೇಕಾಗುತ್ತದೆ. ಪಕ್ಕದ ರಾಜ್ಯವಾದ ಕೇರಳದಲ್ಲಿ ಇರುವಂತಹ ವ್ಯವಸ್ಥೆ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. 1973–74ರ ತಿದ್ದುಪಡಿಯಾದ ಮೇಲೆ 1999 ರಲ್ಲಿ ಅವರು ತಿದ್ದುಪಡಿ ಮಾಡಿ ಗ್ರಾಮ ಪಂಚಾಯಿತಿಗಳಿಗೆ ಎಕ್ಸೀಕ್ಯೂಟೀವ್ ಪವರ್ಸ್ ಕೊಟ್ಟು ಅವರಿಗೆ ಪ್ಲಾನಿಂಗ್ ಸಹ ಕೊಟ್ಟಿದ್ದಾರೆ. ಅದಲ್ಲದೆ, ಅಲ್ಲಿ ವ್ಯವಸ್ಥೆ ಹೇಗೆ ಇದೆ ಎಂದರೆ it is need based. ನಾವು ಏನು ಮಾಡುತ್ತಿದ್ದೇವೆಂದರೆ tied up funds ಬರುತ್ತದೆ. 10 ಸಾವಿರ ರೂಪಾಯಿಗಳನ್ನು ಕಳುಹಿಸಿದರೆ ನೀರಿಗೆ ಇಷ್ಟು ಬಳಸಬೇಕು, ರೋಡ್‌ಗೆ ಇಷ್ಟು ಬಳಸಬೇಕು, ಎಂದು ಕೊಡಲಾಗುತ್ತದೆ. ಅಂದರೆ ಅ ಊರಿನಲ್ಲಿ ಒಂದೆರಡು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದ್ದರೆ ಅದರ ಅವಶ್ಯಕತೆ ಇರುವುದಿಲ್ಲ. ಅವನು ಆ ಒಂದು ಅನುದಾನವನ್ನು ಏನು ಮಾಡಬೇಕು, ಅದಕ್ಕೆ ಅವರು ಏನು ಮಾಡುತ್ತಿದ್ದಾರೆ, untied funds ಕೊಡುತ್ತಾರೆ. ಆ ಪಂಚಾಯಿತಿಗೆ ಜನಸಂಖ್ಯೆ ಆಧಾರಿತವಾಗಿ 25 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿದರೆ ಅವರ ಪಂಚಾಯಿತಿಯಲ್ಲಿ

ಕುಳಿತುಕೊಂಡು ಯಾವುದು ಅತ್ಯಂತ ಅವಶ್ಯಕತೆ ಇದೆ, ಅದನ್ನು ಅವರು ಜಾರಿಗೆ ತರಬೇಕು. ಆ ಕೆಲಸವನ್ನು ಅಲ್ಲಿ ಅವರು ಮಾಡುತ್ತಿದ್ದಾರೆ. ಅದಕ್ಕೆ ನಾವು ಇಷ್ಟೆಲ್ಲಾ ತಿದ್ದುಪಡಿಯನ್ನು ಮಾಡುತ್ತಿದ್ದೇವೆ. ಈಗ ಕೇಂದ್ರ ಸರ್ಕಾರವೂ ಸಹ ಮೊನ್ನೆ ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಡುತ್ತಿದೆ. ನಮ್ಮ ಸರ್ಕಾರವು ಸಹ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಾಕಷ್ಟು ತಿದ್ದುಪಡಿಗಳನ್ನು ಮಾಡಿ ಇವತ್ತು ಈ ಒಂದು ವ್ಯವಸ್ಥೆಯನ್ನು ತಂದಿದೆ. ಇದನ್ನು ನಾವು ಮಾಡಿದರೆ ಗ್ರಾಮಗಳು ಅಭಿವೃದ್ಧಿಯಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಇನ್ನು ನೀರಾವರಿ ಬಗ್ಗೆ ಸಾಕಷ್ಟು, ಈ ಎಡದಂಡೆ ಕಾಲುವೆ, ತುಂಗಾಭದ್ರಾ ಡ್ಯಾಮ್ ಕೆಳಗಡೆ ನಾವಿದ್ದೇವೆ. ಇದು ಸುಮಾರು 1945 ರಿಂದ ಪ್ರಾರಂಭವಾಗಿ 1953ಕ್ಕೆ ಡ್ಯಾಮ್ ಕೆಲಸ ಪೂರ್ಣವಾಯಿತು, ಆಗ ನಾವು ಕರ್ನಾಟಕದಲ್ಲಿ ಸೇರಿರಲಿಲ್ಲ. ಇವತ್ತು ಕೊಪ್ಪಳ, ರಾಯಚೂರಿಗೆ ಒಂದು ಕೆನಾಲ್ ಹೋಗುತ್ತದೆ. ನಮ್ಮ ಬಳ್ಳಾರಿ ಜಿಲ್ಲೆಗೆ ಎರಡು ಕೆನಾಲ್‌ಗಳು ಹರಿಯುತ್ತವೆ. ಸುಮಾರು 45 ವರ್ಷಗಳಾದರೂ ಸಹ ಇವತ್ತು ಆ ಡಿಸ್ಟ್ರಿಬ್ಯೂಟರ್ಸ್ ಆಗಲಿ, ಸಬ್ ಡಿಸ್ಟ್ರಿಬ್ಯೂಟರ್ಸ್ ಆಗಲಿ ಇವತ್ತಿನವರೆಗೂ ರಿಪೇರಿಗಳನ್ನು ಮಾಡಿರುವುದಿಲ್ಲ. ರೈತರು ಇವತ್ತು 100% ರಷ್ಟು ಆ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದೆಲ್ಲಾ ಕೆಲಸಗಳನ್ನು ಮಾಡಬೇಕು. ಏಕೆಂದರೆ, ಇವುಗಳನ್ನೆಲ್ಲಾ ಮಾಡಿದರೆ ಜನರಿಗೆ ಮತ್ತು ರೈತರಿಗೆ ಅನುಕೂಲ ಮಾಡಿಕೊಳ್ಳುವುದಕ್ಕೆ ಇವೆಲ್ಲವೂಗಳು ಬರುತ್ತವೆ. ಇನ್ನು Hyderabad - Karnataka Region Development Board ನಮ್ಮ 6 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಇದೆ. ಆರ್ಟಿಕಲ್ 371(ಜೆ) ಕೆಳಗಡೆ ಇದರಿಂದ ಒಳ್ಳೆಯದಾಗಿದೆ. ಇವತ್ತು ಅಲ್ಲಿಯೂ ಏನಾಗಿದೆ ಎಂದರೆ ಸರಿಯಾದ ರೀತಿಯಲ್ಲಿ ಗ್ರಾಂಟ್ ಹಂಚಿಕೆಯಾಗುತ್ತಿಲ್ಲ. ನಮ್ಮ ಹೈದ್ರಾಬಾದ್ ಕರ್ನಾಟಕ ರೀಜನ್‌ನಲ್ಲಿ ಸುಮಾರು 1 ಕೋಟಿ, 12 ಲಕ್ಷ ಜನಸಂಖ್ಯೆ ಇದೆ. ಇವತ್ತು Human Index ಪ್ರಕಾರ Rs.1,000/- per capita ಕೊಡುತ್ತಿದ್ದಾರೆ. ಇದನ್ನು ಕನಿಷ್ಠ ಪಕ್ಷ Rs.2,000/- per capita ಕೊಡಬೇಕು. ಅಂದರೆ, 2000 ಕೋಟಿ ಪ್ರತಿವರ್ಷ ನಮ್ಮ ಈ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಬಂದರೆ ಸಾಕಷ್ಟು ಅಭಿವೃದ್ಧಿಯಾಗುತ್ತದೆ. ಏಕೆಂದರೆ, ಒಂದೇ ಒಂದು ಇಂಡೆಕ್ಸ್ ಹೋಗುತ್ತಿದೆ. ನಮ್ಮ ಪ್ರದೇಶ ಯಾವ ರೀತಿಯಲ್ಲಿ ಇದೆ ಎಂದರೆ Regional Share in NSDP – Population and Workers ಕೆಳಗಡೆ ತೆಗೆದುಕೊಂಡರೆ, Share of NSDP: Belgaum 18.2 per cent, population 24 per cent. Gulbarga, 11.5 and 18.5. etc. Bangalore 50.4 and 35.6 ಇದನ್ನು ಆಧಾರವಾಗಿಟ್ಟು ಮಾಡಿದರೂ ಸಹ ನಮಗೆ ಅತ್ಯಂತ

ಹೆಚ್ಚಿನ ಗ್ರಾಂಟ್‌ಗಳು ಬೇಕಾಗುತ್ತವೆ. ಅದು ಆದಲ್ಲಿ ನಮ್ಮಲ್ಲಿ ಅಭಿವೃದ್ಧಿಯಾಗುತ್ತದೆ. ಇವತ್ತು ನಾವು ಮೈಸೂರು ಮತ್ತು ಬೆಂಗಳೂರು ಡಿವಿಜನ್‌ಗಳನ್ನು ನೋಡಿದಾಗ ರಸ್ತೆಗಳು. . .

**ಶ್ರೀ ಕೆ.ಬಿ.ಶಾಣಪ್ಪ:–** ಮಂತ್ರಿಗಳೇ ಇರುವುದಿಲ್ಲ.

**ಸಭಾಪತಿಯವರು**:–4 ಜನ ಮಂತ್ರಿಗಳು ಇದ್ದಾರೆ, ಅವರು ಹೇಳುತ್ತಾರೆ ಬಿಡಿ.

**ಶ್ರೀ ಕೆ.ಸಿ.ಕೊಂಡಯ್ಯ:–** 4 ಜನ ಮಂತ್ರಿಗಳು ಇದ್ದಾರೆ, ಆದಕಾರಣ ಇದನ್ನು ಹೆಚ್‌ಕೆಆರ್‌ಡಿಬಿ ಕೆಳಗಡೆ ಆರ್ಟಿಕಲ್ 371(ಜೆ) ಬಂದಾಗ ನಮ್ಮ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ. ಮುಂದೆ ಬಜೆಟ್ ಅಧಿವೇಶನ ಸಮಯದಲ್ಲಿ ಈ ವಿಷಯವಾಗಿ ಪ್ರಸ್ತಾಪ ಮಾಡುತ್ತೇನೆ. ಆದಕಾರಣ, ಮಾನ್ಯ ರಾಜ್ಯಪಾಲರು ಏನು ಪ್ರಸ್ತಾಪ ಮಾಡಿದ್ದಾರೆ, ಮತ್ತೊಮ್ಮೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಘನತೆವೆತ್ತ ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಮಾತನಾಡಿದ ಭಾಷಣದ ವಂದನಾ ನಿರ್ಣಯದ ಮೇಲೆ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಮೊದಲನೆಯದಾಗಿ, ನಿಮಗೆ ವಂದಿಸಿ, ಕೆಲವು ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಮೂರು ವರ್ಷಗಳಿಂದ ಕಂಡು ಕೇಳಿರದಷ್ಟು ರೈತರು ಆತ್ಮಹತ್ಯೆಗಳನ್ನು ಮಾಡಿಕೊಂಡಿರುತ್ತಾರೆ. ಮಹಿಳೆಯ ಸರ ಅಪಹರಣಗಳ ದಾಖಲೆ. ರಸ್ತೆಗಳಲ್ಲಿ ಬರೀ ಗುಂಡಿಗಳು ಇವುಗಳು ಸರ್ಕಾರ ನೀಡುತ್ತಿರುವ ಆಡಳಿತಕ್ಕೆ ಕೈಗನ್ನಡಿಯಾಗಿದೆ. ಇಂಗ್ಲಿಷ್‌ನಲ್ಲಿ ಒಂದು ಮಾತು ಇದೆ. ಅದು ಏನೆಂದರೆ, Face is the index of mind, staff is the index of administration, and administration is the index of governance. ಈ ವಿಚಾರ ಮುಖ ನೋಡಿದರೆ ಗೊತ್ತಾಗುತ್ತದೆ. ಆಡಳಿತ ಹೇಗೆ ನಡೆಯುತ್ತಿದೆ ಎಂದು ಹೇಳಿದರೆ ಗೊತ್ತಾಗುತ್ತದೆ. ಆ ರೀತಿಯಾಗಿದೆಯೇ? ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಸಣ್ಣ ಕೊರತೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಂಬಂಧ ಸರಿಯಾಗಿ ಕಾಣುತ್ತಿಲ್ಲ. ಕೇಂದ್ರ ಸರ್ಕಾರದ ಜೊತೆಯಲ್ಲಿ ಮತ್ತು ಮಾನ್ಯ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡುವುದಕ್ಕೂ ನಮ್ಮ ಮುಖ್ಯಮಂತ್ರಿಗಳಿಗೆ ಆಗುತ್ತಿಲ್ಲ. ಉದಾಹರಣೆಗೆ, ಕೇಂದ್ರ ಸರ್ಕಾರದ ಸ್ವಚ್ಚ ಭಾರತ ಅಭಿಯಾನ ಟಾಸ್ಕ ಫೋರ್ಸ್ ಸಮಿತಿಗೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಬರಮಾಡಿಕೊಂಡರು. ಬರಮಾಡಿಕೊಂಡಾಗ ಮಾನ್ಯ ಮುಖ್ಯಮಂತ್ರಿಗಳು ಬರುವುದಕ್ಕಾಗುವುದಿಲ್ಲವೆಂದು ಕೊಟ್ಟಂತಹ ಕಾರಣ ಗ್ರಾಮ ಪಂಚಾಯಿತಿ ಚುನಾವಣೆ. ಒಂದು ರಾಷ್ಟ್ರ ಮಟ್ಟದ ಸ್ವಚ್ಚ ಭಾರತದ ವಿಚಾರ ಬಂದಾಗ, ಸ್ವಚ್ಚ ಭಾರತ ಎಂದರೆ, ಎಲ್ಲಾ ರಂಗದಲ್ಲಿಯೂ ಸ್ವಚ್ಚ ಭಾರತವಾಗಬೇಕು ಎನ್ನುವಂತಹ ಒಂದು ಇಚ್ಚೆ. ನಮ್ಮ ರಾಜ್ಯದ ಬಗ್ಗೆ ಗಮನ ಹರಿಸಿ ಮಾನ್ಯ ಮುಖ್ಯಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆಂದು ಕರೆದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ನಿರಾಕರಣೆ ಮಾಡಿದರು. ಹೀಗಾಗಿ, ಕಾರ್ಯಪಡೆಯ ಸಂಚಾಲಕರಾಗುವಂಥದ್ದನ್ನು ಬಿಟ್ಟರು, ತಿರಸ್ಕಾರ ಮಾಡಿದರು. ವಿದೇಶಿ ಹೂಡಿಕೆಯನ್ನು ಹೆಚ್ಚಿಸುವ ಸಲುವಾಗಿ ಮಾನ್ಯ ಪ್ರಧಾನ ಮಂತ್ರಿಗಳು ಚೀನಾ ದೇಶಕ್ಕೆ ಪ್ರವಾಸವನ್ನು ಕೈಗೊಂಡಾಗ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ನೀಡಿದಂತಹ ಅವಕಾಶವನ್ನು ಗ್ರಾಮ ಪಂಚಾಯಿತಿಯ ಚುನಾವಣೆ ಎಂದು ಹೇಳಿ ನಿರಾಕರಿಸಿದರು. ಬರೀ ಸಂಚಾಲಕರಾಗಿ ಮಾತ್ರವಲ್ಲ ಹೊರದೇಶಕ್ಕೆ ಹೋಗೋಣ ಎಂದು ಕೂಡ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಬನ್ನಿ ಎಂದು ಒಳ್ಳೆಯ ಅವಕಾಶ ಕೊಟ್ಟರು. ಆಗಲೂ ಸಹ ಇವರು ಹೋಗಲಿಲ್ಲ. ಅಂದರೆ, ಕೇಂದ್ರ ಸರ್ಕಾರದ ಜೊತೆಯಲ್ಲಿ ಯಾವ ರೀತಿಯಾದ

ಸಂಬಂಧವನ್ನಿಟ್ಟುಕೊಳ್ಳಬೇಕು, ರಾಜ್ಯ ಬೇರೆ ಅಲ್ಲ, ದೇಶ ಬೇರೆ ಅಲ್ಲ. ಈ ದೇಶದ ಜನರೆಲ್ಲರೂ ಒಂದೇ. ಒಟ್ಟಿಗೆ ಇರಬೇಕೆನ್ನುವ ಭಾವನೆ ಇರಬೇಕಾಗಿತ್ತು. ಅಲ್ಲಿ ಎಲ್ಲಿಯೋ ಒಂದು ಕಡೆ ಎಡವಿದ್ದಾರೆ, ಎನ್ನುವ ಮಾತು ನನಗೆ ನೆನಪಾಗುತ್ತಿದೆ. ಅದಕ್ಕೆ ನಾನು ಹೇಳುತ್ತಿದ್ದೇನೆ. 1000 ದಿವಸಗಳನ್ನು ಕಳೆದಿದ್ದಾರೆ, 1000 ದಿನಗಳನ್ನು ಕಳೆದಿದ್ದಾರೆಂದರೆ ಸಾವಿಲ್ಲವೆಂದರ್ಥ. ಆ ರೀತಿಯಲ್ಲಿ ಸರ್ಕಾರ ಆಗಬೇಕು. 1001 ಎಂದರೆ ಆ ಒಂದಕ್ಕೆ ಸಾವಿಲ್ಲ ಎಂದರ್ಥ. 1000 ದಿನ ಎಂದರೆ ಸಾವಿಲ್ಲದ ದಿನ ಎನ್ನುವಂತಾಗಬೇಕೆನ್ನುವುದು ನಮಗೂ ಆಸೆ ಇದೆ. ಮುಖ್ಯಮಂತ್ರಿಗಳ ಬಗ್ಗೆ ನಮಗೆ ಬಹಳ ಗೌರವ ಇದೆ. ನಡೆದುಕೊಂಡು ಹೋಗಬೇಕು. They must work in a good team, not only with the Cabinet but also with the officers. ಹೇಳಬೇಕೋ ಬೇಡವೋ, ಹೇಳಬೇಕೆನಿಸುತ್ತದೆ. ಪ್ರಧಾನ ಮಂತ್ರಿಗಳು ಕರ್ನಾಟಕದ ಏಳಿಗೆ ಬಗ್ಗೆ ಮಾತನಾಡುತ್ತಿದ್ದರೆ ಅದೇ ವೇದಿಕೆಯಲ್ಲಿ ಕುಳಿತಂತಹ ಮುಖ್ಯಮಂತ್ರಿಗಳು ತೂಗಡಿಸುತ್ತಿದ್ದರು. ನಾನು ಏನು ಮಾಡಲಿ.

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ರಾಮಚಂದ್ರಗೌಡರು ಹಿರಿಯ ಸದಸ್ಯರಿದ್ದಾರೆ. ಅವರು ಈ ರೀತಿಯಲ್ಲಿ ಮಾತನಾಡುವುದು ಅವರಿಗೆ ಸೂಕ್ತವಲ್ಲ.

**ಶ್ರೀ ರಾಮಚಂದ್ರಗೌಡ:-** ನಾನು ಈ ರೀತಿಯಲ್ಲಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಎಚ್ಚರಿಕೆಯಾಗಿ ಹೇಳುತ್ತಿದ್ದೇನೆ. ನಾನು ಕ್ರಿಟಿಸೈಸ್ ಮಾಡುವುದಲ್ಲ. ಇದು ಎಚ್ಚರಿಕೆ. ನೀವು ಎಚ್ಚರಿಕೆ ಬೇಡವೆಂದರೆ ಬೇಡ. ನನಗೇನೂ ಇಲ್ಲ.

**ಸಭಾಪತಿಯವರು:** ಆಯಿತು, ಆ ವಿಷಯವನ್ನು ಬಿಟ್ಟು ಬಿಡಿ.

**ಶ್ರೀ ರಾಮಚಂದ್ರಗೌಡ:** ಅವರು ನಿದ್ದೆ ಮಾಡಿಕೊಂಡು ಕೇಳುತ್ತಿರಬಹುದು. ಅದು ಬೇರೆ ವಿಚಾರ.

ಮುಂದು. . .

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಆಯಿತು ಬಿಡಿ, ಆ ವಿಷಯವನ್ನು ಅಲ್ಲಿಗೆ ಬಿಟ್ಟು ಮುಂದಕ್ಕೆ ಹೋಗಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಹುಬ್ಬಳ್ಳಿಯ ಅಭಿವೃದ್ಧಿಗಾಗಿ ನೀಡಿರುವ 100 ಕೋಟಿ ರೂಪಾಯಿಗಳ ವಿಶೇಷ ಅನುದಾನದಲ್ಲಿ ಇದುವರೆಗೂ ಒಂದು ಪೈಸೆಯನ್ನು ಕೂಡ ಖರ್ಚು ಮಾಡಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2013 ಮತ್ತು 2014 ಈ ಎರಡು ವರ್ಷಗಳಲ್ಲಿ 465 ಮಹಿಳೆಯರ ಸರಗಳ್ಳತನವಾಗಿದ್ದು, ಬೆಂಗಳೂರು ನಗರವೊಂದರಲ್ಲಿಯೇ 237 ಪ್ರಕರಣಗಳು ವರದಿಯಾಗಿವೆ. 470 ಬೀದಿ ದರೋಡೆಗಳು ಕೂಡ ಬೆಂಗಳೂರಿನಲ್ಲಿ ವರದಿಯಾಗಿವೆ. ಅವುಗಳಲ್ಲಿ 231 ಪ್ರಕರಣಗಳು ಹಾಗೆಯೇ ಇದ್ದು, ಇವರ ಕಾನೂನು ವ್ಯವಸ್ಥೆ ಹೇಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. 3948 ಜನ ಅಕ್ರಮ ವಿದೇಶಿ ವಲಸಿಗರು ನಗರದಲ್ಲಿ ಬೀಡುಬಿಟ್ಟಿದ್ದಾರೆ. ಅವರ ವೀಸಾ ಅವಧಿ ಮುಗಿದು ಹೋಗಿದ್ದರೂ ಇಲ್ಲಿಯೇ ವಾಸವಾಗಿದ್ದಾರೆ. ಅವರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿರುವುದಿಲ್ಲ. ಆ ವಿಚಾರದಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ ಎನ್ನುವುದನ್ನು ನಾನು ಸಹ ಒಪ್ಪುತ್ತೇನೆ. ಆದರೆ ಇಲ್ಲಿಯ ರಾಜ್ಯ ಪೊಲೀಸ್ ಇಲಾಖೆ ಮತ್ತು ಸಂಬಂಧಪಟ್ಟ ಇಲಾಖೆಗಳು ಆ ವಿಚಾರದಲ್ಲಿ ಯಾವ ರೀತಿ ಕಾರ್ಯನಿರ್ವಹಿಸುತ್ತಿವೆ ಎನ್ನುವುದು ಸಹ ಮುಖ್ಯವಾಗಿದ್ದು, ಆ ಬಗ್ಗೆ ಅವರು ಗಮನ ಹರಿಸಬೇಕಾಗಿದೆ.

ಕೃಷಿಗೆ ಸಂಬಂಧಿಸಿದಂತೆ ವಿಚಾರ ಮಾಡುವುದಾದರೆ ಕಳೆದ ಒಂದೇ ಒಂದು ವರ್ಷದಲ್ಲಿ 400ಕ್ಕೂ ಹೆಚ್ಚು ರೈತರು ನಮ್ಮ ರಾಜ್ಯದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಬೆಳಗಾವಿ ಸುವರ್ಣಸೌಧದ ಮುಂದೆ ಕಬ್ಬು ಬೆಳೆಗಾರರು ಮುಷ್ಕರ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ವಿಠಲ ಭೀಮಪ್ಪ ಅರಭಾವಿ ಎನ್ನುವ ಕಬ್ಬು ಬೆಳೆಗಾರನ ಆತ್ಮಹತ್ಯೆಯ ನಂತರವೇ ಸರ್ಕಾರಕ್ಕೆ ಕಬ್ಬಿನ ಬಾಕಿ ಪಾವತಿ ಮಾಡುವ ಬಗ್ಗೆ ಯೋಚಿಸುವ ಮನಸ್ಸಾಯಿತು. ಅಲ್ಲಿ ವಾಗ್ದಾನ ಮಾಡಿದರು, ರೈತರ ಕಬ್ಬಿನ ಬಾಕಿ ಹಣವನ್ನೆಲ್ಲಾ ಕೊಟ್ಟುಬಿಡುತ್ತೇವೆ ಎಂದು ವಾಗ್ದಾನ ಮಾಡಿದರು. ಅದರಲ್ಲಿ ಎಷ್ಟು ಪಾವತಿಯಾಗಿದೆ ಎಂಬುದು ಸರ್ಕಾರದವರಿಗೇ ಗೊತ್ತು. ಸಕ್ಕರೆ ಕಾರ್ಖಾನೆಗಳ ಮಾಲೀಕರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಈ ಎರಡು ಕಡೆಗಳಲ್ಲಿಯೂ ಇದ್ದಾರೆ. ಅವರಿಂದ ಬಾಕಿ ಹಣವನ್ನು ವಸೂಲಿ ಮಾಡುವುದಕ್ಕೆ ಇನ್ನೂ ಸರ್ಕಾರಕ್ಕೆ ಸಾಧ್ಯವಾಗಿರುವುದಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಶ್ಲೋಕ ನೆನಪಾಗುತ್ತಿದೆ. **"ಅಶ್ವಂ ನೈವ, ಗಜಂ ನೈವ, ವ್ಯಾಘ್ರಂ ನೈವಚ ನೈವ"** ದೇವರಿಗೆ ಬಲಿ ಕೊಡುವುದಕ್ಕೆ ಅಪ್ಪಣೆ ಕೇಳಿದಾಗ ಕುದುರೆ, ಆನೆ ಬಲಿ ಬೇಡ, ಹುಲಿ ಬಲಿಯಂತೂ ಬೇಡವೇ ಬೇಡವೆಂದ ದೇವರು **"ಅಜಾಪುತ್ರಂ ಬಲಿಂ ದದ್ಯಾತ್ ದೈವೋ ದುರ್ಬಲ ಘಾತಕಃ"** ಆಡಿನ ಮರಿಯನ್ನು ಬಲಿ

ಕೊಡೋಣವೇ ಎಂದ ಕೂಡಲೇ ಆಗಲಿ ಎಂದು ಒಪ್ಪಿಕೊಂಡಂತಾಯಿತು. ಆ ರೀತಿ ನಮ್ಮ ಸರ್ಕಾರಗಳು ಕೂಡ ಏನು ಮಾಡುತ್ತಿವೆ ಎಂದರೆ, 'ದಲಿತಪುತ್ರಂ ನೈವ, ರೈತಪುತ್ರಂ ನೈವ, ಟಾಟಾ-ಬಿರ್ಲಾ ಪುತ್ರಂ ನೈವಚನೈವ,' ಎಲ್ಲ ಕಡೆಗಳಲ್ಲಿಯೂ ಈ ರೀತಿ ಆಗುತ್ತಿದೆ. What I am telling is that everywhere it is happening.

ಕಳಸಾ ಬಂಡೂರಿ ಯೋಜನೆ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸುಮಾರು 222 ದಿನಗಳಿಂದ ಅಲ್ಲಿ ಧರಣಿ ನಡೆಯುತ್ತಿದೆ. ರಾಜ್ಯ ಸರ್ಕಾರ ಕೂಡ ತನ್ನ ದೊಡ್ಡಸ್ತಿಕೆಯನ್ನು ಬಿಡಬೇಕು. ಅದು ಯಾರೇ ಆಗಿರಲಿ, ದೊಡ್ಡಸ್ತಿಕೆಯನ್ನು ಬಿಟ್ಟು ರೈತರಿಗೆ ಸಹಾಯ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಬಗ್ಗಬೇಕಾಗುತ್ತದೆ. ಗಿಡ-ಮರಗಳಲ್ಲಿ ಫಲ ಬಿಟ್ಟಾಗ ಅದು ನಿಮಿರಿ ನಿಲ್ಲುವುದಿಲ್ಲ, ಬಗ್ಗುತ್ತದೆ. ಅದೇರೀತಿ ಅಧಿಕಾರ ಬಂದಾಗ ನಾವು ಸಹ ಬಗ್ಗಬೇಕಾಗುತ್ತದೆ.

ಕೃಷಿ ಹೊಂಡಗಳ ಬಗ್ಗೆ ಕೂಡ ಮಾನ್ಯ ಸದಸ್ಯರು ಮಾತನಾಡಿದರು, ಅವುಗಳಿಂದ ಕೃಷಿಕರಿಗೆ ಎಷ್ಟರಮಟ್ಟಿಗೆ ಅನುಕೂಲವಾಗಿದೆ, ಅದರಲ್ಲಿ ಯಾರ್‍ಯಾರು ಎಲ್ಲೆಲ್ಲಿ ನುಂಗಿಬಿಟ್ಟಿದ್ದಾರೆ ಎನ್ನುವ ವಿಚಾರದ ಬಗ್ಗೆ ತಾವೇ ವಿಚಾರ ಮಾಡಿ. ಬಹಳ ಪ್ರಮುಖವಾದ ಮತ್ತೊಂದು ವಿಚಾರವೆಂದರೆ, ಕಳೆದ ಸಾಲಿನ ಆಯವ್ಯಯ ಮಂಡನೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ತೆಂಗು ಉತ್ಪಾದಕರ ಸಂಘಗಳ ಸದಸ್ಯರು ಅವರ ತೆಂಗಿನ ಮರಗಳಿಂದ ಕೆಲವು ಪ್ರಮಾಣದಲ್ಲಿ ನೀರಾ ಇಳಿಸಲು ಅನುಮತಿ ನೀಡುವುದಕ್ಕಾಗಿ ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿ ತರಲಾಗುವುದು, ಇದು ತೆಂಗು ಬೆಳೆಗಾರರ ಆದಾಯವನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಸಹಾಯವಾಗುವುದು ಎನ್ನುವಂತಹ ಒಂದು ಒಳ್ಳೆಯ ಮಾತನ್ನೇನು ತಿಳಿಸಿದ್ದರು, ಅದರಿಂದ ನಮಗೆ ಬಹಳ ಖುಷಿಯಾಗಿತ್ತು. ಆದರೆ ಆ ಮಾತನ್ನು ಹೇಳಿ ಈಗಾಗಲೇ ಒಂದು ವರ್ಷವಾಗಿದ್ದು, ಮತ್ತೊಂದು ಆಯವ್ಯಯವನ್ನು ಮಂಡಿಸುವಂತಹ ಸಮಯ ಕೂಡ ಹತ್ತಿರ ಬರುತ್ತಿದೆ. ನೀರಾ ಇಳಿಸುವುದಕ್ಕೆ ಅಬಕಾರಿ ಇಲಾಖೆಯ ಒಂದು ಕಾನೂನನ್ನು ಬದಲಾವಣೆ ಮಾಡಬೇಕು. ಅದನ್ನು ಇದುವರೆಗೂ ಮಾಡಿಲ್ಲ. ನೀರಾ ಇಳಿಸುವುದರಿಂದ ಏನೇನು ಅನುಕೂಲಗಳಿವೆ ಎನ್ನುವಂತಹ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

***ಸರಕಾರ ಮತ್ತು ನೀರಾ:***

*"ಸನ್ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಬಜೆಟ್‌ನಲ್ಲಿ ನೀರಾ ಇಳಿಸಲು ಅನುಮತಿ ನೀಡಲಾಗುವುದು ಹಾಗೂ ಅದಕ್ಕೆ ಅಗತ್ಯವಾದ "ಅಬಕಾರಿ ಕಾಯ್ದೆ" ತಿದ್ದುಪಡಿಗಳನ್ನು ತರುವುದಾಗಿ ಘೋಷಿಸಿದ್ದರು. (ಬಜೆಟ್ ಪುಟ ಸಂಖ್ಯೆ 17, ಬಜೆಟ್ ಸಂಖ್ಯೆ 41)*

*ರಾಜ್ಯದ ಹೈಕೋರ್ಟ್‌ನಲ್ಲಿ ನೀರಾ(ಹುಳಿಬರದ)ವನ್ನು ಅಬಕಾರಿ ಕಾಯ್ದೆ (Excise Act)ಯಲ್ಲಿ ನಿಷೇಧ ಮಾಡಿಸುವುದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮೂಲಕ ಪ್ರಶ್ನಿಸಲಾಗಿತ್ತು.*

*ಸರ್ಕಾರವು ಅಬಕಾರಿ ಕಾಯ್ದೆಗೆ ತಿದ್ದುಪಡಿ ತರುತ್ತೇವೆ ಎಂದು ಹೇಳಿಕೆ ನೀಡಿದ್ದರಿಂದ ಆ ಪ್ರಕರಣವನ್ನು ವಜಾ ಮಾಡಲಾಯಿತು.*

***ತೆಂಗಿನ ಎಕನಾಮಿಕ್ಸ್:***

*ಬಯಲು ಸೀಮಿಯಲ್ಲಿ ನೀರಿನ ಅಭಾವದಿಂದಾಗಿ ಬಹಳ ಕಷ್ಟದ ಪರಿಸ್ಥಿತಿ ಇರುವುದರಿಂದ ಕನಿಷ್ಟಪಕ್ಷ ತೆಂಗು ಬೆಳೆದು ಜೀವನ ಮಾಡಬಹುದು ಎಂದು ವಿಶೇಷವಾಗಿ ಮೈಸೂರು, ಮಂಡ್ಯ, ತುಮಕೂರು, ಹಾಸನ, ಕೋಲಾರ, ಚಿಕ್ಕಬಳ್ಳಾಪುರ ಮುಂತಾದ ಜಿಲ್ಲೆಗಳಲ್ಲಿ "ತೆಂಗಿನ ಗಿಡವೊಂದಕ್ಕೆ 80 ರಿಂದ 100 ತೆಂಗಿನಕಾಯಿಗಳನ್ನು ರೈತ ಪಡೆಯುತ್ತಾನೆ. ಗರಿಷ್ಠ ಬೆಲೆ ಒಂದಕ್ಕೆ 10/- ರೂ. ಬಂದರೆ ಒಂದು ಗಿಡದಿಂದ ಒಂದು ವರ್ಷಕ್ಕೆ 1000/- ರೂ. ಆದಾಯ, ಅಂದರೆ ಒಂದು ಎಕರೆಗೆ 40,000/- ರೂ. ಆದಾಯ(ಇದು ಗರಿಷ್ಠ)*

*ನೀರಾ ಮಾರಾಟ ಮಾಡಲು ಅನುಮತಿಸಿದಲ್ಲಿ, ಒಂದು ಗಿಡಕ್ಕೆ ಕನಿಷ್ಟ 8,000/- ರೂ.ಗಳು ದೊರೆಯುತ್ತವೆ. ಅಂದರೆ ಒಂದು ಎಕರೆ ತೆಂಗಿಗೆ 3,20,000/- ರೂ.ಗಳ ಆದಾಯ ದೊರೆಯುತ್ತದೆ. ಇವತ್ತು ಕೇರಳಾದಲ್ಲಿ ಸುಮಾರು ಐದಾರು ದೊಡ್ಡ-ದೊಡ್ಡ ಕಂಪನಿಗಳನ್ನು ಸ್ಥಾಪನೆ ಮಾಡಿಕೊಂಡು ಫ್ಯಾಕ್ಟರಿಗಳನ್ನು ಪ್ರಾರಂಭಿಸಿದ್ದು, There is lot of demand for the toddy that is manufactured by these companies. It is consummed so much by the people. In our State also we should have manufactured toddy (Neera). ಸರ್ಕಾರ ಕೂಡ ಅದಕ್ಕೆ ಒಪ್ಪಿಕೊಂಡಿತ್ತು, ಆದರೆ ಅ ಬಗ್ಗೆ ಯಾವ ಕಾರಣಕ್ಕಾಗಿ ಕಾನೂನನ್ನು ಮಾಡಲಿಲ್ಲವೋ ಗೊತ್ತಿಲ್ಲ, ಅದಕ್ಕಾಗಿ ಮತ್ತೊಮ್ಮೆ ಅದನ್ನು ಸರ್ಕಾರಕ್ಕೆ ನೆನಪು ಮಾಡಬಯಸುತ್ತಿದ್ದೇನೆ.*

***ನೀರಾ ಮತ್ತು ತಂತ್ರಜ್ಞಾನ:***

*ನೀರಾ ಎಂದಾಕ್ಷಣ ಸೂರ್ಯೋದಯಕ್ಕಿಂತ ಮೊದಲು ಅದನ್ನು ಕುಡಿಯಬೇಕು, ಇಲ್ಲದಿದ್ದರೆ ಅದು ಸಾರಾಯಿ ಆಗುತ್ತದೆ ಎನ್ನುವುದು ನಮ್ಮ ತಿಳುವಳಿಕೆ. ಇದು ತಂತ್ರಜ್ಞಾನಗಳು ಲಭ್ಯ ಇಲ್ಲದಿದ್ದಾಗಿನ ಸ್ಥಿತಿ.*

Today there is technology available for preservation of Neera in its original natural flavour and form.

*ಕೇರಳ, ತಮಿಳುನಾಡು, ಗೋವಾ, ಪಶ್ಚಿಮ ಬಂಗಾಳಗಳಲ್ಲಿ ಸಹ ನೀರಾ ಇಳಿಸಲು ನಿಷೇಧವಿಲ್ಲ. ಕಳೆದ ವರ್ಷ ಕೇರಳದ ಮುಖ್ಯ ಮಂತ್ರಿಗಳು 3 ನೀರಾ ಪರಿಷ್ಕರಣಾ ಕಾರ್ಖಾನೆಗಳನ್ನು ಉದ್ಘಾಟಿಸಿದ್ದಾರೆ. ಒಟ್ಟು 3 ನೀರಾ ಕಾರ್ಖಾನೆಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ.*

*ಕೇರಳದಲ್ಲಿ ತೆಂಗಿನ ಗಿಡದಿಂದ ನೀರಾ ಇಳಿಸಿ (Toddy) (ಸಾರಾಯಿ) ಮಾಡಲು ಅನುಮತಿ ಹಲವಾರು ವರ್ಷಗಳಿಂದ ಇದೆ. ಈಗ 2 ವರ್ಷದಿಂದ ನೀರಾವನ್ನು ನೀರಾ ಆಗಿಯೇ ಸಂಸ್ಕರಿಸಿ ಮಾರಾಟ ಮಾಡಲು 12 ರೈತರ ಕಂಪನಿಗಳಿಗೆ ಅನುಮತಿ ನೀಡಲಾಗಿದೆ.*

*ಕಳೆದ 2 ವರ್ಷಗಳಲ್ಲಿ ಒಂದೇ ಒಂದು ಪ್ರಕರಣವು ನೀರಾದಿಂದ ಟಾಡ್ಡಿ ಮಾಡಿದ ಪ್ರಕರಣ ದಾಖಲಾಗಿಲ್ಲ. ಏಕೆಂದರೆ ಟಾಡ್ಡಿಗಿಂತ ನೀರಾಗೆ 4 ಪಟ್ಟು ಹೆಚ್ಚು ಬೆಲೆ ರೈತನಿಗೆ ದೊರೆಯುತ್ತದೆ."*

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸುಮಾರು 6 ಕೋಟಿ ತೆಂಗಿನ ಮರಗಳಿದ್ದು, ನೀರಾ ಉತ್ಪಾದನೆಗೆ ಸೂಕ್ತ ಅವಕಾಶ ಮಾಡಿಕೊಟ್ಟಲ್ಲಿ ಎಷ್ಟು ಅನುಕೂಲವಾಗಬಹುದು ಎಂಬುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಹೈನುಗಾರಿಕೆ ಬಗ್ಗೆ ವಿಚಾರ ಮಾಡುವುದಾದರೆ, ಪ್ರತಿ ಲೀಟರ್ ಹಾಲಿನ ದರವನ್ನು ಇತ್ತೀಚೆಗೆ 4 ರೂಪಾಯಿಗಳಷ್ಟು ಹೆಚ್ಚಿಸಲಾಯಿತು. ಅದರಲ್ಲಿ 2 ರೂಪಾಯಿ ರೈತರ ಪಾಲು ಎಂದು ಸರ್ಕಾರ ತಿಳಿಸಿತ್ತು. ಅದರ ಪ್ರಕಾರ ರೈತರ ಪಾಲಿನ ಹಣ 15 ಕೋಟಿ ರೂಪಾಯಿಗಳನ್ನೇನು ಕೊಡಬೇಕಾಗಿತ್ತು, ಅದನ್ನು ಇದುವರೆವಿಗೂ ರೈತರಿಗೆ ಪಾವತಿಸಿರುವುದಿಲ್ಲ.

(ಮುಂದುವರೆದಿದೆ...

(ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಚಂದ್ರಗೌಡ(ಮುಂದು):-**

**ವಿದ್ಯುತ್:-**

ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, **"ಛಾವಣಿಯಲ್ಲಿ ಸೌರ ವಿದ್ಯುತ್"** (Solar on Roof) ಮಾಡುತ್ತೇವೆಂದು ಹೇಳಿದರು. ಇವರ ಗುರಿ ಇದ್ದಿದ್ದು 200 ಮೆಗಾ ವ್ಯಾಟ್. ಆದರೆ ಆಗಿರುವ ಸಾಧನೆ ಮಾತ್ರ ಕೇವಲ 3 ಮೆಗಾವ್ಯಾಟ್. ಅಂದರೆ ಕೇವಲ 1.5%.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಈ ವರ್ಷದ ಜನವರಿಯಿಂದ 217 ಮೆಗಾ ವ್ಯಾಟ್ ಹಾಗೂ 250 ಮೆಗಾ ವ್ಯಾಟ್‌ನ 2 ಘಟಕಗಳು ಗೇರುಸೊಪ್ಪೆಯಲ್ಲಿ ಕೆಟ್ಟು ಹೋಗಿವೆ. ಅಂದರೆ ಅಲ್ಲಿ ಸರಿಯಾಗಿ ನಿರ್ವಹಣೆಯನ್ನು ಮಾಡುತ್ತಿಲ್ಲ. ಉದಾಹರಣೆಗೆ ಮಕ್ಕಳು ಹುಟ್ಟುತ್ತಾರೆ. ಆ ಮಕ್ಕಳನ್ನು ಸರಿಯಾಗಿ ಬೆಳೆಸಿ ಉತ್ತಮವಾದಂತಹ ವಿದ್ಯಾಭ್ಯಾಸವನ್ನು ಕೊಡಿಸಬೇಕು. ಅದೇ ರೀತಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದಮೇಲೆ ಅವುಗಳನ್ನು ಸರಿಯಾಗಿ ನೋಡಿಕೊಳ್ಳಬೇಕು. ಆದರೆ ಅವುಗಳನ್ನು ನೋಡಿಕೊಳ್ಳುತ್ತಿಲ್ಲ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್:-**

**"ಗ್ರಾಮ ವಿಕಾಸ ಯೋಜನೆ"** ಯನ್ನು ಜಾರಿಗೆ ತಂದಿದ್ದೀರಿ. 4,279 ಗ್ರಾಮೀಣ ಶಾಲೆಗಳಲ್ಲಿ ಮಕ್ಕಳಿಗೆ ಅಡುಗೆ ಮಾಡುವುದಕ್ಕೆ ಕೊಠಡಿಯೇ ಇಲ್ಲ.

**<u>ಬೆಂಗಳೂರು:</u>**

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 96 ಗ್ರಾಮ ಪಂಚಾಯಿತಿಗಳಿವೆ. ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಜಿಲ್ಲೆಯಾಗಿದೆ. ಬಹುತೇಕ ಎಲ್ಲಾ ಪಂಚಾಯಿತಿಗಳೂ ನಗರೀಕರಣಗೊಂಡಿವೆ. ಇದರಿಂದಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಸಮಸ್ಯೆ ಮತ್ತು ಒಳ ಚರಂಡಿ ಸಮಸ್ಯೆ ಉಂಟಾಗಿರುತ್ತದೆ. ಆದುದರಿಂದ ಬೆಂಗಳೂರು ಜಿಲ್ಲೆಯ ಸ್ವಚ್ಛ ಸುಂದರ ಪರಿಸರ ನಿರ್ಮಾಣಕ್ಕಾಗಿ ಒಳಚರಂಡಿ ವ್ಯವಸ್ಥೆ (ಯುಜಿಡಿ) ಮತ್ತು ಕೊಳಚೆ ನೀರು ಶುದ್ಧೀಕರಣ(ಎಸ್‌ಟಿಪಿ) ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2016-2017ನೇ ಸಾಲಿನ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ವಿಶೇಷವಾದ

ಯೋಜನೆಯನ್ನು ಘೋಷಿಸಿ, ಪ್ರಾರಂಭಿಕವಾಗಿ 100 ಕೋಟಿ ಅನುದಾನವನ್ನು ಬೆಂಗಳೂರು ನಗರ ಜಿಲ್ಲೆಗೆ ಹಂಚಿಕೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

**ಸಭಾಪತಿಯವರು:–**ಧನ್ಯವಾದಗಳು. ಮಾನ್ಯ ಪುಟ್ಟಣ್ಣನವರು ಒಂದು ವಿಷಯವನ್ನು ಗಮನಿಸಬೇಕು. ಜೆಡಿಎಸ್ ಪಕ್ಷಕ್ಕೆ ನಾನು 30 ನಿಮಿಷ ಕಾಲಾವಕಾಶವನ್ನು ಕೊಡುತ್ತೇನೆ. ಆದರೆ ಮಾನ್ಯ ಟಿ.ಎ.ಶರವಣ ಅವರು ನಾನೂ ಸಹ ಮಾತನಾಡುತ್ತೇನೆಂದು ನನಗೆ ಒಂದು ಚೀಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ನೀವಿಬ್ಬರು ಆ 30 ನಿಮಿಷವನ್ನು ಯಾವ ರೀತಿ ಹಂಚಿಕೊಳ್ಳುತ್ತೀರೋ ಹಂಚಿಕೊಳ್ಳಿ. ಅದು ತಮಗೆ ಬಿಟ್ಟಿರುವಂತಹ ವಿಷಯ. ಅಂದರೆ ಒಬ್ಬೊಬ್ಬರು 15 ನಿಮಿಷ ಹಂಚಿಕೊಳ್ಳಬಹುದು, ಅಥವಾ 20 ನಿಮಿಷ, 10 ನಿಮಿಷ ಹಂಚಿಕೊಳ್ಳಬಹುದು. ಯಾವ ರೀತಿ ಹಂಚಿಕೊಳ್ಳುತ್ತೀರೋ ಹಂಚಿಕೊಂಡು ಅದನ್ನು ನೆನಪಿನಲ್ಲಿಟ್ಟುಕೊಂಡು ತಾವು ಮಾತನಾಡಿ.

**ಶ್ರೀ ಪುಟ್ಟಣ್ಣ(ಪದವೀಧರರ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರಿಂದ ರಾಜ್ಯಪಾಲರ ಭಾಷಣವನ್ನು ಮಾಡಿಸಿದ್ದಾರೆ. ಅಂದರೆ ಭಾಷಣವನ್ನು ಬರೆದುಕೊಟ್ಟು ಅವರಿಂದ ಓದಿಸಿದ್ದೀರಿ. ಆದರೆ ರಾಜ್ಯಪಾಲರ ಭಾಷಣದಲ್ಲಿ ನೈಜ ಸಮಸ್ಯೆಗಳನ್ನು ತೋರಿಸುವಂತಹ ಕೆಲಸಗಳನ್ನು ಸರ್ಕಾರ ಮಾಡಿಲ್ಲ. ಇವತ್ತಿನ ದಿವಸ ಶಿಕ್ಷಣ ಕ್ಷೇತ್ರವನ್ನು ತೆಗೆದುಕೊಂಡರೆ, ಉನ್ನತ ಶಿಕ್ಷಣದ ಬಗ್ಗೆ ಮಾನ್ಯ ಬಸವರಾಜ ಹೊರಟ್ಟಿಯವರು ಪ್ರಸ್ತಾಪ ಮಾಡಿದರು. ಎಷ್ಟು ವಿಶ್ವವಿದ್ಯಾನಿಲಯಗಳನ್ನು ಈಗಿನ ಸರ್ಕಾರ ಇರಬಹುದು, ಅಥವಾ ಹಿಂದಿನ ಸರ್ಕಾರಗಳಿರಬಹುದು, ಅವುಗಳನ್ನು ಸ್ಥಾಪನೆ ಮಾಡಿದ್ದೀರಿ. ಆದರೆ ಅವುಗಳಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದೀರಿ? ಒಂದೇ ಒಂದು ವಿಶ್ವವಿದ್ಯಾನಿಲಯದಲ್ಲಿ ಒಂದೇ ಒಂದು ಅಧ್ಯಾಪಕರನ್ನೂ ಸಹ ನೇಮಕಾತಿ ಮಾಡಿಲ್ಲ, ಸಂಶೋಧನೆಗಳು ನಡೆಯುತ್ತಿಲ್ಲ. ಈಗಿದ್ದರೂ ಸಹ ಇನ್ನೂ ಕೆಲವು ಕಡೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದೀರಿ. ಒಂದು ಕಡೆ ಹೈಯರ್ ಎಜ್ಯುಕೇಶನ್‌ನಲ್ಲಿ ಖಾಸಗಿ ವಿಶ್ವ ವಿದ್ಯಾನಿಲಯಗಳನ್ನು ಕೊಡುತ್ತಿದ್ದೀರಿ. ಮತ್ತೊಂದು ಕಡೆ ಕಾಲೇಜುಗಳನ್ನೇ ವಿಶ್ವ ವಿದ್ಯಾನಿಲಯಗಳ ದರ್ಜೆಗೇರಿಸಿ ಅವುಗಳಿಗೆ ಸ್ವಾಯತ್ತತೆಯನ್ನು ಕೊಡುತ್ತಿದ್ದೀರಿ.

ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸುಮಾರು 14 ಖಾಸಗಿ ವಿಶ್ವವಿದ್ಯಾನಿಲಯಗಳು ಬಂದಿರಬಹುದು. ನಂತರ ಸ್ವಾಯತ್ತತೆ ಪಡೆದುಕೊಂಡಿರುವಂಥ ವಿಶ್ವವಿದ್ಯಾನಿಲಯಗಳು ಸುಮಾರು 15 ರಿಂದ 20 ಇರಬಹುದು. ನಂತರ ಆರ್‌ಸಿ ಕಾಲೇಜು, ಮಹಾರಾಣಿ ಕಾಲೇಜು, ಸೈನ್ಸ್ ಕಾಲೇಜುಗಳು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿವೆ. ಇದಲ್ಲದೆ, ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮೂರು ಭಾಗ ಮಾಡುವುದಕ್ಕೆ ಹೊರಟಿದ್ದೀರಿ. ಮೂರು ಭಾಗ ಮಾಡುವುದಕ್ಕೆ ಬೇಕಾಗುವಷ್ಟು ದುಡ್ಡು ಎಲ್ಲಿದೆ? ಯಾವ ರೀತಿ ಮಾಡುತ್ತೀರಿ? ಯಾವ ಪುರುಷಾರ್ಥಕ್ಕೆ ವಿಭಜನೆ ಮಾಡಬೇಕು? ಸರ್ಕಾರ ಉನ್ನತ ಶಿಕ್ಷಣದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೇನು ಹೇಳಿಲ್ಲ. ಯಾವ ಸೂಚನೆಯನ್ನು ಸಹ ಕೊಡಲಿಲ್ಲ. ಇವತ್ತಿನ ದಿವಸ ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಶೇಕಡ 85 ರಿಂದ ಶೇಕಡ 100 ರಷ್ಟು ಅಂಕಗಳನ್ನು ಕೊಡುತ್ತಾರೆ. ಆದರೆ ನಮ್ಮ ಸರ್ಕಾರಿ ವಿಶ್ವವಿದ್ಯಾನಿಲಯಗಳಲ್ಲಿ ಶೇಕಡ 65 ರಿಂದ ಶೇಕಡ 70-75ಕ್ಕೆ ತಂದು ನಿಲ್ಲಿಸುತ್ತಾರೆ. ಈ ರೀತಿ ಆದರೆ ಆ ಮಕ್ಕಳು ಮುಂದಿನ ವಿದ್ಯಾಭ್ಯಾಸಕ್ಕೋ ಅಥವಾ ಕೆಲಸಕ್ಕೆ ಸೇರುವಂತಹ ಸಂದರ್ಭದಲ್ಲಿ ಅವರು ಯಾವ ರೀತಿ ಫೈಟ್ ಮಾಡಬೇಕು? ನಾವು ಈ ವಿಷಯದ ಬಗ್ಗೆ ಆವತ್ತಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಆದರೆ ಸರ್ಕಾರ ಇದೂವರೆವಿಗೂ ಆ ವಿಷಯಗಳ ಬಗ್ಗೆ ಗಮನವನ್ನೇ ಕೊಟ್ಟಿಲ್ಲ. ಇವತ್ತಿನ ದಿವಸ ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ನೂರಕ್ಕೆ ನೂರು ಭಾಗದಷ್ಟು ಬೋಧಕ ಸಿಬ್ಬಂದಿಗಳಿದ್ದಾರೆ. ಆದರೆ ಇವತ್ತಿನ ದಿವಸ ಸರ್ಕಾರಿ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕ ಸಿಬ್ಬಂದಿಗಳಿಲ್ಲ.

ಕೇವಲ Guest Faculty ಅವರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದೀರಿ. ಶೇಕಡ 10 ರಿಂದ 25ರಷ್ಟು ಉಪನ್ಯಾಸಕರಿದ್ದಾರೆ. ಇನ್ನುಳಿದ ಶೇಕಡ 75 ರಿಂದ 80ರಷ್ಟು Guest Faculty ಅವರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದೀರಿ. ಇದಕ್ಕೆ ಏನು ಹೇಳಬೇಕು ಹೇಳಿ. ಈ ಕೆಲಸವನ್ನು ನೀವು ಮಾಡಿದ್ದೀರೋ ನಾವು ಮಾಡಿದ್ದೇವೋ ಅದಲ್ಲ ಪ್ರಶ್ನೆ. ಯಾರಾದರು ಮಾಡಿರಲಿ. ಇದಕ್ಕೆ ಏನಾದರು ಪರಿಹಾರ ಕಂಡುಹಿಡಿಯಬೇಕಲ್ಲವೆ? ಇದಕ್ಕೆ ಪರಿಹಾರವೆಂದರೆ ಬೋಧಕರನ್ನು ತುಂಬಬೇಕು. ಫ್ಯಾಕಲ್ಟಿಯಲ್ಲಿ ಸಂಶೋಧನೆಗಳು ಚೆನ್ನಾಗಿ ನಡೆಯಬೇಕೆಂದರೆ ಕ್ವಾಲಿಫೈಡ್, ಮೆರಿಟ್ ಇರುವಂಥವರನ್ನು ನೇಮಕ ಮಾಡಿಕೊಳ್ಳಿ. ಆದರೆ ಇವತ್ತಿನ ದಿವಸ ಅಲ್ಲಿ ಏನಾಗಿದೆ ಎಂದರೆ ಈ ಹಿಂದೆ ದುಡ್ಡು ತೆಗೆದುಕೊಂಡು ವೈಸ್ ಛಾನ್ಸಲರುಗಳನ್ನು ನೇಮಕ ಮಾಡಿದರು. ನಾನು ಅವರು, ಇವರು ಎಂದು ಹೇಳುತ್ತಿಲ್ಲ ಅದು ಯಾರೇ ಆಗಿರಲಿ ಇಲ್ಲಿ ರಾಜಕಾರಣ ಬೆರಸುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ರಾಜಕಾರಣವನ್ನು ಬೆರೆಸುವಂತಹ ಅಗತ್ಯವಿಲ್ಲ. ನಾನು ಹೇಳುವುದೇನೆಂದರೆ, ಇದು ಮಕ್ಕಳ ಭವಿಷ್ಯದ ಪ್ರಶ್ನೆ. ಸರ್ಕಾರ ಇದಕ್ಕೆ ಏನಾದರು ಪರಿಹಾರ ಕಂಡುಹಿಡಿಯಬೇಕಲ್ಲವೆ? ಓಪನ್ ಯೂನಿರ್ವಸಿಟಿಗೆ 2013ರಿಂದ ಮಾನ್ಯತೆ ಇಲ್ಲ. ಈ ವಿಶ್ವವಿದ್ಯಾನಿಲಯಗಳಲ್ಲಿ ಸುಮಾರು 10 ಲಕ್ಷ ಮಕ್ಕಳಿದ್ದಾರೆ. ಈ ಮಕ್ಕಳ ಭವಿಷ್ಯ ಏನಾಗಬೇಕು ಹೇಳಿ. ಇದಕ್ಕೆ ನೀವು ಏನಾದರು ಹೇಳಿದ್ದೀರಾ? ಇದರ ಬಗ್ಗೆ ನಿಮಗೆ ಏನು ಅನ್ನಿಸುವುದೇ ಇಲ್ಲವೆ? ಯು.ಜಿ.ಸಿ. ಟೀಂ ಬಂದು ತಪಾಸಣೆ ಮಾಡಿ ಅದನ್ನು ರಿಜೆಕ್ಟ್ ಮಾಡಿದರು. ಇದಕ್ಕೆ ನೀವೇನು ಮಾಡುತ್ತೀರಿ ಹೇಳಿ. ಅದನ್ನು ಹಾಗೆಯೇ ಬಿಟ್ಟು ಬಿಡುತ್ತೀರಾ? ನಿಮ್ಮ ಮಕ್ಕಳು ಅಂತಹ ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿದ್ದರೆ ಹಾಗೆಯೇ ಸುಮ್ಮನೆ ಇರುತ್ತಿದ್ರಾ? ನಮ್ಮ ಮಕ್ಕಳಾಗಿದ್ದರೆ ನಾವು ಹಾಗೆಯೇ ಸುಮ್ಮನೆ ಬಿಟ್ಟು ಬಿಡುತ್ತಿದ್ದೆವಾ? ಇದಕ್ಕೆ ಏನಾದರು ಒಂದು ಪರಿಹಾರವನ್ನು ಕಂಡು ಹಿಡಿಯಬೇಕಲ್ಲವೆ. ಮಾನ್ಯ ಸಚಿವರೇ ಯುಜಿಸಿ ಬಳಿ ಹೋಗಿ, ಕೇಂದ್ರ ಸರ್ಕಾರದ ಸಚಿವರೊಂದಿಗೆ ಮಾತನಾಡಿ. ವಿಶ್ವವಿದ್ಯಾನಿಲಯದ ಛೇರ್ಮನ ಹತ್ತಿರ ಮಾತನಾಡಿ. ಆ ವಿಶ್ವವಿದ್ಯಾನಿಲಯಗಳಿಗೆ ಮಾನ್ಯತೆಯನ್ನು ಕೊಡಿಸಿ. ಇದರಲ್ಲಿ ವಿದ್ಯಾರ್ಥಿಗಳ ತಪ್ಪೇನಿದೆ? ಇದರಲ್ಲಿ ಅವರದೇನಾದರು ತಪ್ಪಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಏನೂ ತಪ್ಪು ಮಾಡದೆ ಇರುವಂತಹ ಹತ್ತು ಲಕ್ಷ ವಿದ್ಯಾರ್ಥಿಗಳ ಗತಿ ಏನಾಗಬೇಕು? ಇದೇನು ಸಾಮಾನ್ಯವಾದಂತಹ ವಿಚಾರವೆ? ಇದರ ಬಗ್ಗೆ ಯಾವ ಚಕಾರವೂ ಇಲ್ಲ. ದಯಮಾಡಿ ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಸರ್ಕಾರಕ್ಕೇನಾದರು ಮನುಷ್ಯತ್ವ ಇದ್ದರೆ, ಈ ಕೂಡಲೆ ನೀವೇ ಹೋಗಿ ಸಮಸ್ಯೆಯನ್ನು ಬಗೆಹರಿಸಿ. ಇದು ಹತ್ತು ಲಕ್ಷ ಮಕ್ಕಳ ಭವಿಷ್ಯದ ಪ್ರಶ್ನೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಟೀಚರ್ಸ್ ರೆಕ್ರ್ಯೂಟ್‌ಮೆಂಟ್ ನಡೆಯುತ್ತಿದೆ, ಬೇರೆ ಬೇರೆ ಕಡೆ ರೆಕ್ರ್ಯೂಟ್‌ಮೆಂಟ್ ನಡೆಯುತ್ತಿದೆ. ಆದರೆ ಈ ವಿಶ್ವವಿದ್ಯಾನಿಲಯಗಳಲ್ಲಿ

ಓದಿದಂಥವರಿಗೆ ಮಾನ್ಯತೆ ಇಲ್ಲವೆಂದು ಪ್ರಮೋಶನ್ ಕೊಡುತ್ತಿಲ್ಲ, ಹಾಗೂ ಈ ವಿಶ್ವವಿದ್ಯಾನಿಲಯದಲ್ಲಿ ಓದಿದಂಥವರಿಗೆ ಕೆಲಸ ಕೊಡುತ್ತಿಲ್ಲ. ಇವರು ಏನು ಮಾಡಬೇಕು? ಸಿಇಟಿ ಬರೆದು ಸೆಲೆಕ್ಷನ್ ಆಗಿದ್ದಾರೆ. ಅವರಿಗೆ ಆರ್ಡರ್ ಕೊಡಬೇಕು. ಆದರೆ ಅವರಿಗೆ ಆರ್ಡರ್ ಕೊಡುತ್ತಿಲ್ಲ. ಏಕೆಂದರೆ, ನಿಮ್ಮ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಇಲ್ಲ, ನಿಮ್ಮ ಡಿಗ್ರಿ ಸರ್ಟಿಫಿಕೇಟಿಗೆ ಮಾನ್ಯತೆ ಇಲ್ಲ. ನಿಮ್ಮ ಪಿ.ಜಿ. ಸರ್ಟಿಫಿಕೇಟ್‌ಗೆ ಮಾನ್ಯತೆ ಇಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಏನಾದರು ಒಂದು ಪರಿಹಾರ ಕಂಡು ಹಿಡಿಯಬೇಕಲ್ಲವೆ? ಆದಕಾರಣ ಈ ಕೂಡಲೆ ಈ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕು. ಆ ಮಕ್ಕಳ ಭವಿಷ್ಯವನ್ನು ಹಾಳು ಮಾಡಬೇಡಿ. ಆ ಮಕ್ಕಳಿಗೆ ಭವಿಷ್ಯ ಕೊಡಿ.

ಮಾನ್ಯ ಸಭಾಪತಿಯವರೇ, ಇದಲ್ಲದೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ತ್ರಿಭಜನೆ ಮಾಡುವುದಕ್ಕೆ ಹೊರಟಿದ್ದಾರೆ. ಈಗಾಗಲೇ ಇದಕ್ಕೆ ಸ್ಪೆಷಲ್ ಆಫೀಸರನ್ನಾಗಿ ಇವರನ್ನು ನೇಮಕ ಮಾಡುತ್ತಾರಂತೆ, ಅವರನ್ನು ನೇಮಕ ಮಾಡುತ್ತಾರಂತೆ ಎಂದು ಹೇಳುತ್ತಿದ್ದಾರೆ. ದಯಮಾಡಿ ಯಾರನ್ನೂ ನೇಮಕ ಮಾಡಬೇಡಿ. ಈಗಿರುವಂತಹ ಬೆಂಗಳೂರು ವಿಶ್ವವಿದ್ಯಾನಿಲಯವೇ ನಮಗೆ ಸಾಕು ಸ್ವಾಮಿ. ದೊಡ್ಡ ದೊಡ್ಡ ಕಾಲೇಜುಗಳೆಲ್ಲವೂ ಈ ವಿಶ್ವವಿದ್ಯಾನಿಲಯದಿಂದ ಬಿಟ್ಟು ಹೋಗಿದೆ. ಏಕೆಂದರೆ ಕಾಲೇಜುಗಳನ್ನು ನಡೆಸುವುದಕ್ಕೆ ವಿಶ್ವವಿದ್ಯಾನಿಲಯದಲ್ಲಿ ದುಡ್ಡೇ ಇಲ್ಲ. ವಿಶ್ವವಿದ್ಯಾನಿಲಯದಲ್ಲಿ ಸಂಬಳ ಕೊಡುವುದಕ್ಕೆ ದುಡ್ಡೇ ಇಲ್ಲ. ಈ ರೀತಿ ಇರುವಾಗ ತ್ರಿಭಜನೆ ಮಾಡುವುದಕ್ಕೆ ಏಕೆ ಹೊರಟಿದ್ದೀರಿ? ಸರ್ಕಾರಿ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಕೊಡುತ್ತಿದ್ದೀರಿ, ಸರ್ಕಾರಿ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಯನ್ನು ಕೊಡುತ್ತಿದ್ದೀರಿ. ಅಪ್‌ಗ್ರೇಡ್ ಮಾಡುತ್ತಿದ್ದೀರಿ. ದಯಮಾಡಿ, ತ್ರಿಭಜನೆ ಎನ್ನುವುದನ್ನು ಕೈಬಿಡಿ. ಈ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಏನೇನು ಸೌಲಭ್ಯಗಳನ್ನು ಕೊಡಬೇಕು ಕೊಡಿ. ಸಂಶೋಧನೆಗೆ, ಅಧ್ಯಾಪಕರ ನೇಮಕಾತಿಗೆ ಕ್ರಮ ಕೈಗೊಳ್ಳಿ.

(ಮುಂದು)

ಶ್ರೀ ಪುಟ್ಟಣ್ಣ(ಮುಂದು):-

ಮಾನ್ಯ ಸಭಾಪತಿಗಳೇ, in-charge Registrar ಅನ್ನು ನೇಮಕ ಮಾಡಿ ಎರಡೂವರೆ ವರ್ಷಗಳಾಗಿದೆ. ಮುಕ್ತ ವಿಶ್ವವಿದ್ಯಾನಿಲಯಸ ಉಪ ಕುಲಪತಿಗಳು ನಿವೃತ್ತಿ ಹೊಂದಿ 1 ತಿಂಗಳಾಗಿದೆ. ಇನ್ನು ಅವರ ಜಾಗಕ್ಕೆ ಯಾರನ್ನು ನೇಮಕ ಮಾಡಿರುವುದಿಲ್ಲ. ಅವರ ಸ್ಥಾನದಲ್ಲಿ in-charge ಇದ್ದವರೂ 2 ಕೋಟಿ 7 ಲಕ್ಷ ರೂಪಾಯಿಗಳಿಗೆ ಚೆಕ್ ನೀಡಿದ್ದಾರೆ. ಅದರ ಬಗ್ಗೆ ಕೂಡ ಈಗ ವಿಚಾರಣೆ ನಡೆಯುತ್ತಿದೆ. ಅದರ ಬದಲಿಗೆ ಯಾರಾದರೂ ಉತ್ತಮರು, ಪ್ರಾಮಾಣಿಕರು ಹಾಗೂ ದಕ್ಷತೆ ಇರುವವರನ್ನು ಉಪ ಕುಲಪತಿಗಳನ್ನಾಗಿ ನೇಮಕ ಮಾಡಬಹುದಿತ್ತಲ್ಲವೇ? ಅದನ್ನು ಕೂಡ ಸರ್ಕಾರ ಕೈಚೆಲ್ಲಿ ಕುಳಿತಿದೆ. ದಯಮಾಡಿ ಈ ನೇಮಕಾತಿಯನ್ನು ಮಾಡುವ ಮೂಲಕ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಉಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು.

ಇನ್ನು ಉನ್ನತ ಶಿಕ್ಷಣದ ಬಗ್ಗೆ ಹೇಳುವುದಾದರೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಮತ್ತು ಹಿಂದೆ ಇದ್ದಂತಹ ಪ್ರಧಾನ ಕಾರ್ಯದರ್ಶಿಗಳ ಮೇಲೆ ನಾವೆಲ್ಲರೂ ಒಂದು ಆರೋಪವನ್ನು ಮಾಡಿ ಮಾನ್ಯ ರಾಜ್ಯಪಾಲರಿಗೆ ಮತ್ತು ಸಚಿವರಿಗೆ ದೂರು ನೀಡಿದ್ದೆವು. ಇದಕ್ಕೆ ಒಬ್ಬರು ಹೆಚ್ಚುವರಿ ಮುಖ್ಯಕಾರ್ಯದರ್ಶಿಯವರನ್ನು ನೇಮಿಸಿ ಇದರ ಬಗ್ಗೆ ತನಿಖೆಯನ್ನು ನಡೆಸಿದರು. ಅವರು ಇದನ್ನು ಲೋಕಾಯುಕ್ತ ತನಿಖೆಗೆ ಆದೇಶಿಸಿದರು. ನಂತರ ಇದು ಲೋಕಾಯುಕ್ತ ತನಿಖೆಗೆ ಬಂದು ಅವರು ಡಿಟಿಇ ಸೇರಿದಂತೆ ಇವರೆಲ್ಲವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಬೇಕೆಂದು ಲೋಕಾಯುಕ್ತದವರು ಒಂದು ವರದಿಯನ್ನು ನೀಡಿದ್ದಾರೆ. ಆದರೂ ಸಹ ಸರ್ಕಾರದವರು ಇನ್ನೂ ಸಹ ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆ. ಅವರ ರಕ್ಷಣೆಯನ್ನು ಏಕೆ ಇವರು ಮಾಡುತ್ತಿದ್ದಾರೆ? ಇವರಿಗೇನಾದರೂ ಹಣ ಕೊಟ್ಟಿದ್ದಾರೆಯೇ? ಯಾವ ಉದ್ದೇಶದಿಂದ ಇವರನ್ನೆಲ್ಲ ರಕ್ಷಣೆ ಮಾಡಲಾಗುತ್ತಿದೆ? ಯಾವ ಕಾರಣಕ್ಕೆ ರಕ್ಷಣೆ ಮಾಡಲಾಗುತ್ತಿದೆ ಎನ್ನುವುದನ್ನು ಇವರು ತಿಳಿಸಬೇಕು. ಒಂದು ಸಲ ತಪ್ಪು ಪ್ರೂವ್ ಆದ ಮೇಲೆ ಅವರ ಮೇಲೆ ಕ್ರಮ ಕೈಗೊಳ್ಳಬೇಕಲ್ಲವೇ? ಇನ್ನು ತಿನ್ನುವುದಕ್ಕೆ ಅವರನ್ನು ಬಿಡಲಾಗಿದೆಯೇ?

ಇನ್ನು ಹಣ ಹೊಡೆಯುವುದಕ್ಕೆ ಬಿಡುವಿರಾ? 2 ಸಾವಿರ ರೂಪಾಯಿಗಳ ಬಲ್ಬ್‌ಗೆ 10000 ರೂಪಾಯಿಗಳ ಬಿಲ್ ಮಾಡಿದ್ದಾರೆ.

**ಸಭಾಪತಿಯವರು:-** ಅದು ಒಂದು ಬಲ್ಬ್‌ಗಲ್ಲ ಒಂದು ಡಜನ್ ಬಲ್ಬಿಗೆ ಇರಬಹುದು. ಒಂದು ಬಲ್ಬಿಗೆ 1000 ಆದರೆ 10,000ಕ್ಕೆ 12 ಬಲ್ಬ್‌ಗಳನ್ನು ಕೊಟ್ಟುಬಿಡುತ್ತಾರೆ.

**ಶ್ರೀ ಪುಟ್ಟಣ್ಣ:-** ಡಜನ್ ಅಲ್ಲ, ಒಂದು ಬಲ್ಬಿಗೆ ಅಷ್ಟು ಬಿಲ್ ಹಾಕಿದ್ದಾರೆ. ಒಂದೊಂದು ಕಾಲೇಜಿನಲ್ಲಿ ಕೋರ್ಸಿಗೆ ಬೇಕಾಗದೇ ಇರುವ ಉಪಕರಣಗಳನ್ನು ಸಹ ತಂದು ಇಟ್ಟುಕೊಂಡಿರುತ್ತಾರೆ. ಅಗತ್ಯ ಇಲ್ಲದಿದ್ದರೂ ತೆಗೆದು ಇಟ್ಟುಕೊಂಡಿದ್ದು ಇದರಲ್ಲಿ ಕೋಟಿ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದು ಪ್ರೂವ್ ಆಗಿದೆ. ಇಂತಹವರನ್ನು ಸರ್ಕಾರ ಏಕೆ ಇಟ್ಟುಕೊಳ್ಳುತ್ತದೆ. ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಉನ್ನತ ಶಿಕ್ಷಣ ಇಲಾಖೆಯನ್ನು ಕೊಲ್ಲುವಂತಹ ಕೆಲಸ ನಡೆಯುತ್ತಿದೆ. ದಯಮಾಡಿ ಸರ್ಕಾರ ಏನಾದರೂ ಮಾಡಿ ಇದಕ್ಕೆ ಒಂದು ಕಾಯಕಲ್ಪವನ್ನು ನೀಡಬೇಕು.

ಇನ್ನು ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ಹೇಳುವುದಾದರೆ ತಮಗೆ ಗೊತ್ತಿರುವ ಹಾಗೆ ನಮಗೆಲ್ಲರಿಗೂ ಬಹಳಷ್ಟು ಬೇಡಿಕೆಗಳಿವೆ. ಕುಮಾರ್ ನಾಯಕ್ ವರದಿ ಮತ್ತು ಕಾಲ್ಪನಿಕ ವೇತನ ಇವೆಲ್ಲವೂ ಸಹ ಇವೆ. ಈ ಭಾಷಣದಲ್ಲಿ ಇದೆಲ್ಲದರ ಬಗ್ಗೆ ಯಾವುದೇ ಒಂದು ಸುದ್ದಿ ಸಹ ಇಲ್ಲ. ಅದರ ಬಗ್ಗೆ ಒಂದು ಸಹ ಸೂಚನೆಯೇ ಇಲ್ಲ. ನಾವು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಆರೋಗ್ಯ ವಿಮೆ ಮಾಡಿಸಬೇಕೆಂದು ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೂ ಸಹ ಕೇಳಿದ್ದೇವೆ. ತಮ್ಮ ಅಧ್ಯಕ್ಷತೆಯಲ್ಲಿಯೂ ಸಹ ಸಭೆಗಳನ್ನು ನಡೆಸಲಾಗಿದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಒಂದು ಚೂರು ಸಹ ಚಕಾರ ಇಲ್ಲ. ಆರೋಗ್ಯ ಸಚಿವರಾಗಲಿ ಅಥವಾ ನಮ್ಮ ಸಚಿವರೇ ಮಾಡಲಿ. ನಮ್ಮ ಶಿಕ್ಷಣ ಸಚಿವರಿಗೆ ಇದನ್ನೆಲ್ಲ ಮಾಡಬೇಕೆನ್ನುವ ಮನಸ್ಸು ಇದೆ. ಆದರೆ ಅವರು ಇದನ್ನೆಲ್ಲ ಏಕೆ ಮಾಡುತ್ತಿಲ್ಲ ಎಂದು ನನಗೆ ಗೊತ್ತಾಗುತ್ತಿಲ್ಲ. ಮೂರು ವರ್ಷಗಳು ಕಳೆದಿವೆ ಇದಕ್ಕೆ ಏನಾದರೂ ಮಾಡಬೇಕಲ್ಲವೇ? ಇನ್ನು ಸರ್ಕಾರಕ್ಕೆ ಯಾವಾಗ ಏನು ಎನ್ನುವ ಸ್ಥಿತಿ ಬರುತ್ತದೆ. ನಾವು ಸರ್ಕಾರಕ್ಕೆ ಕೆಟ್ಟದ್ದನ್ನು ಬಯಸುವುದಿಲ್ಲ.

ನಾವು ಸರ್ಕಾರಕ್ಕೆ ಒಳ್ಳೆಯದನ್ನೇ ನಾವು ಬಯಸುತ್ತೇವೆ. ಇದೆಲ್ಲ ನಿನ್ನೆ ಮೊನ್ನೆ ಹುಟ್ಟಿಕೊಂಡಿರುವ ಸಮಸ್ಯೆ ಅಲ್ಲ. ಹತ್ತಾರು ವರ್ಷಗಳಿಂದ ಎಲ್ಲಾ ಪಕ್ಷಗಳ ಸರ್ಕಾರಗಳು ಆಡಳಿತ ನಡೆಸುವಂತಹ ಸಂದರ್ಭಗಳಲ್ಲಿಯೂ ಸಹ ಇದು ಇದೆ. ನಾನು ಇದರ ಬಗ್ಗೆ ಹೇಳುತ್ತಿಲ್ಲ. ಆದರೆ ಈಗ ಅಧಿಕಾರದಲ್ಲಿರುವವರು ನೀವು ಇದನ್ನು ಮಾಡಿ. ಇದರ ಕ್ರೆಡಿಟ್ ನೀವೇ ಪಡೆದುಕೊಳ್ಳಿ. ಈ ಜೂನ್‌ನಲ್ಲಿ 5 ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ಬರುತ್ತಿದೆ. ನಮ್ಮ 4–5 ಬೇಡಿಕೆಗಳನ್ನು ಈಡೇರಿಸಿದಲ್ಲಿ ನಾವೆಲ್ಲರೂ ಸೇರಿ ನಿಮಗೆ ಮತವನ್ನು ಹಾಕಿಬಿಡುತ್ತೇವೆ. ನಾನು ಈ ಮಾತನ್ನು ಹೊರಟ್ಟಿಯವರಿಗೂ ಸಹ ಹೇಳಿದೆನು. ನೋಡಿ ಸರ್, ಕುಮಾರ್ ನಾಯಕರ್ ವರದಿ, ಕಾಲ್ಪನೀಕ ವೇತನ ಮತ್ತು ವಿಮಾ ಯೋಜನೆ ಇದನ್ನೆಲ್ಲ ಮಾಡಿಸಿದರೆ ನಾವು ಅವರಿಗೆ ಬೆಂಬಲ ನೀಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಮುಖ್ಯಮಂತ್ರಿಗಳಿಂದ ಈ 3–4 ಬೇಡಿಕೆಗಳನ್ನು ಈಡೇರಿಸಿದರೆ ಹೊರಟ್ಟಿಯವರೇ ಚುನಾವಣೆ ನಿಲ್ಲಲಿ, ಬೆಂಬಲ ನೀಡುತ್ತೇವೆ. ಬೇರೆ ಇಲಾಖೆಗಳಲ್ಲಿ reimbursement ಅನ್ನು ತಕ್ಷಣವೇ ನೀಡುತ್ತಾರೆ. ಆದರೆ ನಮ್ಮ ಸರ್ಕಾರಿ ಶಿಕ್ಷಕರು reimbursement ಗಾಗಿ ನಮ್ಮ ಇಲಾಖೆಯಲ್ಲಿ ಅರ್ಜಿ ಕೊಟ್ಟು ಎಷ್ಟು ವರ್ಷಗಳಾಗಿದೆ ಎನ್ನುವುದನ್ನು ವಿಚಾರಿಸಿ ನೋಡಿ. Dialysis ಗೆ ಒಳಗಾದ ರೋಗಿಗಳಿಗೂ ಸಹ reimbursement ತಕ್ಷಣಕ್ಕೆ ನೀಡುತ್ತಿಲ್ಲ, ಅವರು ಬಂದರೆ ನಾವು ಯಾರಾದರೂ ಕೊಡಬೇಕು ಅಥವಾ ಯಾರಿಂದಲಾದರೂ ಕೊಡಿಸಬೇಕು. ಕನಿಷ್ಟ ಕ್ಯಾನ್ಸರ್ ಮತ್ತು kidney patients ಗಳಿಗಾದರೂ ಸಹ ಕೊಡಬೇಕು. ಸರ್ಕಾರಕ್ಕೆ ಮನುಷ್ಯತ್ವವೇ ಇಲ್ಲವೇ? ಕಾರ್ಯದರ್ಶಿಗಳು ನಮಗೆ ಜಿಲ್ಲಾವಾರು, ತಾಲ್ಲೂಕುವಾರು ಅರ್ಜಿಗಳು ಬರಬೇಕೆಂದು ಹೇಳುತ್ತಾರೆ. ಕಳೆದ 3 ವರ್ಷಗಳಿಂದ ಈ ಸರ್ಕಾರ ರಚನೆ ಆದಾಗಿನಿಂದಲೂ 1 ರೂಪಾಯಿಯ ಹಣವನ್ನು ಕೊಟ್ಟಿಲ್ಲ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಮೊದಲು ಏನು ಕಾಯಿಲೆ ಇದೆ ಎನ್ನುವುದನ್ನು ಪರಿಶೀಲಿಸಬೇಕು, ಅದಕ್ಕೆ ಏನು ಉಪಚಾರ ಪಡೆಯಲಾಗಿದೆ ಎನ್ನುವುದನ್ನು ಪರಿಶೀಲಿಸಿ, ತಕ್ಷಣ ಮರುಪಾವತಿಗೆ ವ್ಯವಸ್ಥೆ ಮಾಡಬೇಕು.

**ಶ್ರೀ ಪುಟ್ಟಣ್ಣ:–** ಇಂತಹ ಕಾಯಿಲೆಗಳು ಅಧಿಕಾರಿಗಳಿಗೂ ಬರಬೇಕು, ಆಗಲೇ ಅದರ ನೋವು ಏನೆಂದು ಅವರಿಗೆ ಗೊತ್ತಾಗುವುದು. ಈ ವಿಚಾರದ ಬಗ್ಗೆ ನಾನು ಹತ್ತಾರು ಬಾರಿ ಆರ್ಥಿಕ ಇಲಾಖೆಗೆ ಹೋಗಿದ್ದೇನೆ, ಪ್ರಧಾನ ಕಾರ್ಯದರ್ಶಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಆದರೂ ಸಹ ಅವರು ಏನನ್ನು ಮಾಡುತ್ತಿಲ್ಲ. ಇದನ್ನೆಲ್ಲ ನಾವು ಯಾರ ಬಳಿ ಹೇಳಬೇಕು. ದಯಮಾಡಿ ಸರ್ಕಾರಿ ಶಿಕ್ಷಕರಿಗೆ ನೀಡಬೇಕಾಗಿರುವ reimbursement ಅನ್ನು ಈ ಕೂಡಲೇ ಬಿಡುಗಡೆಗೊಳಿಸಿ. ಎಲ್ಲರಿಗೂ ನೀಡದಿದ್ದರೂ ಸಹ ಮಾರಣಾಂತಿಕ ಕಾಯಿಲೆಗಳನ್ನು ಅನುಭವಿಸುತ್ತಿರುವ ರೋಗಿಗಳಿಗಾದರೂ reimbursement ಅನ್ನು ಬಿಡುಗಡೆಗೊಳಿಸಬೇಕು.

ಇನ್ನು ಅನುದಾನಿತ ಮತ್ತು ಅನುದಾನರಹಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ಹೆರಿಗೆಯ ರಜೆಯನ್ನು ನೀಡಬೇಕು. ಈಗಿರುವ ಸಚಿವರು ನಮಗೆ ಹತ್ತಿರ ಇರುವ ಕಾರಣ ಇದನ್ನೆಲ್ಲ ಮಾಡಬೇಕು. ಬೇರೆಯವರು ಆಗಿದ್ದರೆ ನಮ್ಮ ಕೈಯಿಗೆ ಸಿಗುತ್ತಿರಲಿಲ್ಲ. ಅವರ ಮೇಲೆ ನಮಗೆ ಬಹಳ ನಂಬಿಕೆ ಇದೆ ಎನ್ನುವ ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ದಯಮಾಡಿ ಸಚಿವರು ಏನಾದರೂ ಮಾಡಬೇಕು.

ಮಾನ್ಯ ಸಚಿವರ ಒಳ್ಳೆಯತನವನ್ನು ಯಾವ ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳುತ್ತಾರೆಂದರೆ ಮೊನ್ನೆ ಒಂದೆರಡು ತಿಂಗಳ ಹಿಂದೆ ಶಾಲೆಗಳ R.R., ಅನ್ನು ನವೀಕರಣ ಮಾಡಿದರು. ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಕಟ್ಟಿಸಿಕೊಂಡಿದ್ದು ವಿದ್ಯಾರ್ಥಿಗಳ ರೋಲ್ ನಂಬರ್ ಕೂಡ ಬಂದಿತ್ತು. ಲಾಸ್ಟ್‌ನಲ್ಲಿ ಒಂದು ಕೋಡ್ ನಂಬರ್ ಅನ್ನು ಕೊಡಬೇಕಾಗಿತ್ತು ಆಗ ಇವರು ಒಂದು ಪ್ಲಾನ್ ಮಾಡಿ ಇಂತಹ ತಾರೀಖಿನೊಳಗೆ ಕೋಡ್ ನಂಬರ್ ಪಡೆಯದಿದ್ದರೆ ನಿಮ್ಮ ಮಕ್ಕಳನ್ನು ಪರೀಕ್ಷೆಗೆ ಕೂರಿಸುವುದಿಲ್ಲ ಎಂದು ಹೇಳಿದರು. ಇಲ್ಲಿ ಮಂತ್ರಿಗಳು ಪ್ರಾಮಾಣಿಕರು, ಕಾರ್ಯದರ್ಶಿಗಳು ಪ್ರಾಮಾಣಿಕರು, ಆಯುಕ್ತರು ಸಹ ಪ್ರಾಮಾಣಿಕರು ಆದರೆ ನನ್ನದೊಂದೇ ಕ್ಷೇತ್ರದಲ್ಲಿ ಡಿಡಿಪಿಐ, ಬಿಇಓ ಮಟ್ಟದಲ್ಲಿ ಸುಮಾರು 50 ರಿಂದ 75 ಕೋಟಿ ರೂಪಾಯಿಗಳ ಹಣ transaction ಆಯಿತು. ಮೂರು ವರ್ಷಗಳಿಂದ recognise ಆಗದೇ

ಇದ್ದ ಶಾಲೆಗಳಿಗೆ 3 ದಿವಸಗಳಲ್ಲಿ recognition ಕೊಟ್ಟುಬಿಟ್ಟರು. ಇದು ಹೇಗೆ ಆಯಿತು, 5 ವರ್ಷದಿಂದ R.R., ಮಾನ್ಯತೆ ಸಿಕ್ಕಿರಲಿಲ್ಲ. ಆಗ 50,000 ಕೊಟ್ಟರೆ ಒಂದು ವರ್ಷಕ್ಕೆ, 75,000 ಕೊಟ್ಟರೆ 2 ವರ್ಷ, 2 ಲಕ್ಷ ಕೊಟ್ಟರೆ 5 ವರ್ಷಗಳಿಗೆ R.R., ಮಾನ್ಯತೆ ಸಿಕ್ಕಿದೆ. ಈ ವಿಚಾರವನ್ನು ಕಾರ್ಯದರ್ಶಿಗಳ ಗಮನಕ್ಕೆ ತಂದರೂ ಸಹ ಏನೂ ಆಗಲಿಲ್ಲ. ಆ ಮನುಷ್ಯ ಕಿವಿಡನೋ ಮೂಗನೋ ನನಗೆ ಅರ್ಥವಾಗುತ್ತಿಲ್ಲ. ಇದೇ ಕಾರ್ಯದರ್ಶಿಯವರನ್ನು ಇಟ್ಟುಕೊಂಡರೆ ಶಿಕ್ಷಣ ಇಲಾಖೆಯನ್ನು ಮುಳುಗಿಸಿಬಿಡುತ್ತಾರೆ. ಕಣ್ಣು ಮೂಗು ನೆಟ್ಟಗೆ ಇರುವವರನ್ನು ಮಕ್ಕಳ ಬಗ್ಗೆ ಕಾಳಜಿ ಇರುವವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಬೇಕು. ಮಕ್ಕಳಿಗೆ ಇವತ್ತು ಸೀಮೆಸುಣ್ಣ ಬೇಕೆಂದರೆ ಇವತ್ತೇ ಕೊಡಿಸಬೇಕು. ಇಲ್ಲಿ ಕಾನೂನನ್ನು ಅನ್ವಯ ಮಾಡುವುದಕ್ಕೆ ಹೋದರೆ ಮಕ್ಕಳು 3ರಿಂದ 6 ತಿಂಗಳ ಕಾಲ ಸಫರ್ ಮಾಡಬೇಕಾಗುತ್ತದೆ. ಇದನ್ನೆಲ್ಲ ಆರ್ಥಿಕ ಇಲಾಖೆಯಲ್ಲಿ ಬರೆಯುವ ಹಾಗೆ ಕುಳಿತುಕೊಂಡು ಬರೆಯುವುದಕ್ಕೆ ಆಗುವುದಿಲ್ಲ. ಈ ಇಲಾಖೆಯಲ್ಲಿ flexibility ಇರಬೇಕು. ಶಿಕ್ಷಣ ಕ್ಷೇತ್ರದಲ್ಲಿ ಮಾನವೀಯತೆ ಇರಬೇಕು. ಏಕೆಂದರೆ ಇಲ್ಲಿ ಎಲ್ಲಾ ಬಡವರ ಮಕ್ಕಳು ಓದುತ್ತಿದ್ದಾರೆ.

**ಸಭಾಪತಿಯವರು:–** ಇಲ್ಲಿ ಮಾನವೀಯತೆ ಅಲ್ಲ, ಬದ್ಧತೆ ಇರಬೇಕು. ಮಾನವೀಯತೆಯ ದೃಷ್ಟಿಯಿಂದ ಯಾವ ಅಧಿಕಾರಿಯೂ ಕೆಲಸ ಮಾಡುವುದಿಲ್ಲ. ಅಧಿಕಾರಿಗಳು ಬದ್ಧತೆಯಿಂದ ಕೆಲಸವನ್ನು ಮಾಡಬೇಕಾಗುತ್ತದೆ.

(ಮುಂದು)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, Regional Institute of Management ನಲ್ಲಿ ಡಿಪ್ಲೋಮಾ ಮಾಡಿದವರಿಗೆ ಒಂದು ಸಮಸ್ಯೆಯಾಯಿತು. ಸಮಸ್ಯಯಾಯಿತು ನಿಜ, ಒಪ್ಪಿಕೊಳ್ಳುತ್ತೇವೆ, ಆದರೆ ಎಲ್ಲಾ ಹುದ್ದೆಗಳನ್ನು ತುಂಬಬೇಡಿ ಎಂದು ಈ ಕಾರ್ಯದರ್ಶಿ ಆದೇಶ ಮಾಡಿಬಿಡುವುದೆ? ಈ ರಾಜ್ಯದಲ್ಲಿ ಯಾವುದೆ ಹುದ್ದೆಯನ್ನೆ ತುಂಬದ ಹಾಗೆ ಆದೇಶ ಮಾಡಿಬಿಟ್ಟರು. ಮುಖ್ಯಮಂತ್ರಿಗಳಿಂದ ಆದೇಶವಿಲ್ಲ, ತಮ್ಮ ಆದೇಶವಿಲ್ಲ. ಆ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ತಡೆಹಿಡಿದರೆ ಒಪ್ಪಿಕೊಳ್ಳಬಹುದು. ಆದರೆ ಎಲ್ಲವನ್ನು ತಡೆಹಿಡಿಯುವುದು ಸರಿಯೇ? ಇಂಗ್ಲೀಷ ಒಂದು ವಿಷಯದ ಬಗ್ಗೆ ಸಮಸ್ಯೆಯಾಗಿದೆ. ಆದರೆ ಎಲ್ಲ ವಿಷಯಗಳಿಗೂ ತುಂಬಬೇಡಿ ಎಂದು ಆದೇಶ ಮಾಡಿದ್ದಾರೆ.

**ಶ್ರೀ ಕಿಮ್ಮನೆ ರತ್ನಾಕರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಗಳೆ, ಇದು ಬಹಳ ಮುಖ್ಯವಾದ ವಿಚಾರ. 2002-03ರಲ್ಲಿ ಇಂಗ್ಲೀಷ್ ಶಿಕ್ಷಕರು ಇರಲಿಲ್ಲ. There was a shortfall. ಆ ಸಂದರ್ಭದಲ್ಲಿ ಆಗಿನ ಸರ್ಕಾರ ನಿಯಮಗಳನ್ನು ಬದಲಾವಣೆ ಮಾಡಿ, ಇಂಗ್ಲೀಷ್ ಮಾಧ್ಯಮವನ್ನು ತೆಗೆದುಕೊಂಡಿರುವ ಪದವೀಧರರ ಸಂಖ್ಯೆ ಕಡಿಮೆ ಇತ್ತು. ಅದಕ್ಕೆ ಪರ್ಯಾಯವಾಗಿ ತಕ್ಷಣ ಭರ್ತಿ ಮಾಡಿಕೊಳ್ಳಲು there was a demand throughout the State. ಅದಕ್ಕಾಗಿ ನಿಯಮಗಳಲ್ಲಿ ಬದಲಾವಣೆ ಮಾಡಿ Regional Institute of Management ನಿಂದ 9 ತಿಂಗಳಲ್ಲಿ ಒಂದು ಸರ್ಟಿಫಿಕೇಟ್ ಕೋರ್ಸ್ ಮಾಡಿಕೊಳ್ಳಲು ಒಂದು ಅವಕಾಶವನ್ನು ನಿರ್ಮಾಣ ಮಾಡಿದರು. ಅವರಿಗೆ ಇಂಗ್ಲೀಷ್ ಕೋಚಿಂಗ್ ಕೊಟ್ಟು ಅವರನ್ನೆ ಅಪಾಯಿಂಟ್ ಮಾಡಿಕೊಳ್ಳಲು ಹೀಗೆ 4000 ಜನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಯಿತು. They are working as Teachers. ಮೊನ್ನೆ 9 ಜನ ಶಿಕ್ಷಕರು, ಇಂಗ್ಲೀಷ್ ಮಾಧ್ಯಮದಲ್ಲಿ ಓದಿರುವ ಶಿಕ್ಷಕರಿಗೂ ಮತ್ತು ಡಿಪ್ಲೋಮಾ ಓದಿರುವ ಶಿಕ್ಷಕರಿಗೂ ವ್ಯತ್ಯಾಸವಿದೆ, they should not be compared. ಮೇಜರ್ ಇಂಗ್ಲೀಷ್‌ನ್ನು ತೆಗೆದುಕೊಂಡು ಓದಿದವರೊಂದಿಗೆ ಇವರನ್ನು ಹೋಲಿಸಬಾರದು they should be turned down, ಆದರೆ ಹೈಕೋರ್ಟ್‌ನವರು ಅದಕ್ಕೆ ಸೀಮಿತವಾಗಿ ರದ್ದು ಮಾಡಲಿಲ್ಲ. ನನ್ನ ಅನ್ನಿಸಿಕೆ ಪ್ರಕಾರ ಉಚ್ಚ ನ್ಯಾಯಾಲಯದವರು ಏನು ಮಾಡಬೇಕಾಗಿತ್ತು ಎಂದರೆ, ಇಂಗ್ಲೀಷ್‌ಗೆ ಸಿಮೀತಗೊಳಿಸಿ ಆದೇಶ ಮಾಡಿ ಇದನ್ನು ರದ್ದು ಮಾಡಿದ್ದೇವೆ ಎಂದು ಹೇಳಿದರೆ ಸಮಸ್ಯೆಯಾಗುತ್ತಿರಲಿಲ್ಲ. But, the High Court

has quashed the entire rule. Recruitment ಗೆ ನಾನು ಆದೇಶ ಮಾಡಿದ್ದೇವೆ. selections ಮಾಡುತ್ತಿದ್ದೆವೆ. By that time, the entire proceedings were hauled up. ಇಡೀ ನಿಯಮವನ್ನೆ ಬದಲಾವಣೆ ಮಾಡಿರುವುದರಿಂದ ನಾವು 1991ಕ್ಕೆ ಹೋಗಬೇಕಾಗುತ್ತದೆ. ಹಿಂದಿನ ನಿಯಮಕ್ಕೆ ಹೋಗಬೇಕು ಅಥವಾ ನಾವು ಬೇರೆ ನಿಯಮವನ್ನು ಮಾಡಿ ಮಾಡಬೇಕು. ಈಗಾಗಲೆ ನಾವು half way ಇದ್ದೇವೆ. ಇದು ಆಗಿರುವಂತಹ ಸಮಸ್ಯೆ. ಆದ್ದರಿಂದ ಈಗ ನಾವು ಬೇರೆ ರೀತಿಯ ನಿಲುವನ್ನು ತೆಗೆದುಕೊಂಡಿದ್ದೆವೆ ಅದು ತಮಗೆ ಗೊತ್ತಿರುವ ವಿಚಾರ. This is the problem. ಅಕಸ್ಮಾತ್ ನಿಯಮವನ್ನು ರದ್ದು ಮಾಡಿದ ಮೇಲೆಯು ನಾವು proceedings ಅನ್ನು ಮುಂದುವರಿಸಿದರೆ, Principal Secretary will be held responsible as Contemnor of Court. We cannot go ahead. ಅದಕ್ಕಾಗಿ ನಾವು ಪರ್ಯಾಯ ಮಾರ್ಗವನ್ನು ಪ್ರಯತ್ನ ಮಾಡುತ್ತಿದ್ದೆವೆ. ಸದಸ್ಯರ ಮಾಹಿತಿಗಾಗಿ ಇದನ್ನು ಹೇಳಿದೆ.

**ಶ್ರೀ ಪುಟ್ಟಣ್ಣ:-** ನಾನು ಸತ್ಯವನ್ನೆ ಹೇಳಿದ್ದೆನೆ, ಅದನ್ನು ಅವರ ಗಮನಕ್ಕೆ ತಂದಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ನನಗೆ ಒಂದು ನಿಮಿಷ ಅವಕಾಶವನ್ನು ಕೊಡಿ.

**ಸಭಾಪತಿಯವರು:-** ಸಚಿವರು ಪ್ರಾಸಾಗಿಂಕವಾಗಿ ಮಧ್ಯೆ ಮಾತನಾಡಿದರು. ಸಾಕು ಇನ್ನು ಮಾತನಾಡುತ್ತಾ ಹೋದರೆ ಮುಗಿಯುವುದಿಲ್ಲ ಅದು. ಅವರು ಮಾತನ್ನು ಮುಗಿಸಿದ ಮೇಲೆ ನಿಮ್ಮ ಸರದಿ ಬಂದಾಗ ಆ ವಿಚಾರವನ್ನು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಇದು ಬಹಳ ಗಂಭೀರವಾದ ವಿಚಾರ. I will not take much time. ಭವಿಷ್ಯದ ಪ್ರಜೆಗಳನ್ನು ರೂಪಿಸುವಂತಹ ಇಲಾಖೆ ಎಂದರೆ ಶಿಕ್ಷಣ ಇಲಾಖೆ. ನಮ್ಮ ಸದಸ್ಯರು ಯಾವುದೆ ಮಿಕ್ಸ್ ಮಾಡದೆ ಸ್ಪಷ್ಟವಾಗಿ ತಮ್ಮ ಕ್ಷೇತ್ರದಲ್ಲಿ ನಡೆದ ವಿಚಾರವನ್ನು ಹೇಳಿದ್ದಾರೆ. ಸದಸ್ಯರು ಮಾತನಾಡುವಾಗ ಮಂತ್ರಿಗಳು ಪ್ರಾಮಾಣಿಕರಾಗಿದ್ದಾರೆ, ಕಾರ್ಯದರ್ಶಿಯವರು ಪ್ರಾಮಾಣಿಕರು, ಕಮೀಶನರ್‌ರವರು ಪ್ರಾಮಾಣಿಕರಾಗಿದ್ದಾರೆ ಎಂದು ಹೇಳಿದರು. ಹಾಗಾಂದರೆ ಯಾರು ಅವರು 60-70 ಕೋಟಿ ರೂ.ಗಳನ್ನು ತೆಗೆದುಕೊಂಡಿರುವಂತವರು?

**ಸಭಾಪತಿಯವರು:-** ಯಾರು ಎಂದು ಅವರು ಹೇಳಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, ಸದನದಲ್ಲಿ ಅದರ ಬಗ್ಗೆ ಇಷ್ಟು ಚರ್ಚೆಯಾದ ಮೇಲೆ ತೆಗೆದುಕೊಂಡವರು ಅದೇ ಜಾಗದಲ್ಲಿ ಮುಂದುವರೆದರೆ ಭವಿಷ್ಯ ನನ್ನಗನ್ನಿಸುತ್ತದೆ, certainly that will send a wrong message to the public as well as students. ಅದು ಆಗಿದೆಯೇ ಇಲ್ಲವೆ ಎನ್ನುವುದನ್ನು ಈ ಸಂದರ್ಭದಲ್ಲಿ ಕೂಡಲೇ ಮಂತ್ರಿಗಳು ಕ್ಲಾರಿಫೈ ಮಾಡಬೇಕು. ಇಲ್ಲದಿದ್ದರೆ ಕೆಟ್ಟ ಸಂದೇಶ ಹೋಗುತ್ತದೆ. ನಿಜವಾಗಿಯು ತೆಗೆದುಕೊಂಡಿದ್ದರೆ ಅಂತವರ ಮೇಲೆ ಕ್ರಮ ಜರುಗಿಸಲೇ ಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ್:-** ಮಾನ್ಯ ಸಭಾಪತಿಗಳೆ, ನಾನು ಏಕೆ ಮಧ್ಯೆ ಮಾತನಾಡಲಿಲ್ಲ ಎಂದರೆ, ಸುಮ್ಮನೆ ಸಮಯ ಹಾಳು ಮಾಡುವುದು ಬೇಡ, ಉತ್ತರ ಕೊಡುವ ಸಮಯದಲ್ಲಿಯೇ ಹೇಳೋಣ ಎಂದು ಅಂದುಕೊಂಡೆ. ಅವರು ಹೇಳುವ ರೀತಿಯಲ್ಲಿ ನಡೆದಿರುವುದಿಲ್ಲ. Procedures ಕೂಡಾ ಆ ರೀತಿ ಇಲ್ಲ. Interfere ಮಾಡತ್ತಾ ಹೋದರೆ ಅವರು ಮಾತನಾಡಲು ಆಗುವುದಿಲ್ಲ. ಅವರು ಹೇಳುವ ರೀತಿ ನಡೆದಿರುವುದಿಲ್ಲ. ಅಕಸ್ಮಾತ ಆಗಿ ಇಂತಲ್ಲಿ ನಡೆದಿದೆ ಎಂದು ಅವರು ಲಿಖಿತವಾಗಿ ಕೊಟ್ಟರೆ, hundred percent, we will take action against the concerned. ಆ ರೀತಿ ನಡೆಯಲು ಸಾಧ್ಯವೆ ಇಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ನನ್ನ ಕ್ಷೇತ್ರದಲ್ಲಿ 10-12 ವರ್ಷಗಳಿಂದ ಇರುವಂತಹ ಡಿಡಿಪಿಐ ಗಳೆ ಇವತ್ತು ಇದ್ದಾರೆ. ಯಾವುದೆ ಸರ್ಕಾರ ಬರಲಿ ಅವರು ಅಲ್ಲೇ ಇರುತ್ತಾರೆ. ಲಂಚ ತೆಗೆದುಕೊಳ್ಳುವವರು ಫೋಟೋ ತೆಗೆಸಿಕೊಳ್ಳುತ್ತಾರೆಯೇ ಅಥವಾ ವಿಡಿಯೋ ಮಾಡಿಸಿಕೊಳ್ಳುತ್ತಾರೆಯೇ? ಇಲ್ಲಾ ನಾನು ಸಿಐಡಿಯೇ ಅಥವಾ ಲೋಕಾಯುಕ್ತದವರೆ. ಇರುವ ವಿಚಾರವನ್ನು, ಸತ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕ್ರಮ ತೆಗೆದುಕೊಳ್ಳಿ, ಇಲ್ಲದಿದ್ದರೆ ಎಕ್ಕೂಟ ಹೋಗಲಿ ಬಿಡಿ. ಎಲ್ಲಿ ಹೇಳಬೇಕು ಹೇಳಿ ಅಲ್ಲಿಯೇ ಸತ್ಯವನ್ನು ಹೇಳುತ್ತೇನೆ. ನಿಮ್ಮ ಬಿಡಿಓ ಗಳನ್ನು ಕರೆಯಿಸಿ ನನ್ನ ಮುಂದೆ. ನಾನು ಹೇಳಿರುವುದು ನೂರಕ್ಕೆ ನೂರು ಸತ್ಯ ಸುಳ್ಳಲ. ಮೆರಿಟ್ ಶಿಕ್ಷಕರು ಸರ್ಕಾರಿ ಕೆಲಸಕ್ಕೆ ಬರುತ್ತಾರೆ. ಉಳಿದವರು ಖಾಸಗಿ ಶಾಲೆಗೆ ಹೋಗುತ್ತಾರೆ. ಖಾಸಗಿ ಶಾಲೆಯಲ್ಲಿ 100% ರಿಸಲ್ಟ್ ಆಗುತ್ತದೆ. ಸರ್ಕಾರಿ ಶಾಲೆಯಲ್ಲಿ ರಿಸಲ್ಟ್ ಕಡಿಮೆಯಾಗುತ್ತದೆ, ಇದಕ್ಕೆ ಏನು ಕಾರಣ? ನಾವು-ನೀವು ಎನ್ನುವುದು ಬೇಡ, ನಾವು ಎಲ್ಲರೂ ಆತ್ಮಾವಲೋಖನ ಮಾಡಿಕೊಳ್ಳೊಣ. ಕಾರಣ ಎಂದರೆ ಅಲ್ಲಿ ಪಾಠ ಮಾಡಲು ಬಿಡುವುದೆ ಇಲ್ಲ, ಅಧಿಕಾರಿಗಳು inspection ಮಾಡಲು ಅಲ್ಲಿಗೆ

ಹೋಗುವುದೆ ಇಲ್ಲ. ಇವರು ಹೋಗುವುದು ಯಾವಾಗಲು unaided ಶಾಲೆಗಳಿಗೆ, ಏಕೆಂದರೆ ಅಲ್ಲಿ ಕವರ್ ಕೊಡುತ್ತಾರೆ ಎಂದು. ಇದನ್ನು ಹೇಳುವುದು ತಪ್ಪೆ? Aided schools ಗಳಿಗೆ ಸರ್ಕಾರ ಸಂಬಳ ಕೊಡುವುದಿಲ್ಲ. ಸರ್ಕಾರ ಸಂಬಳ ಕೊಡುವಂತಹ ಶಾಲೆಗಳಿಗೆ ತಪಾಸಣೆ ಹೋಗಿ result improve ಮಾಡಲಿ. ಆದರೆ ಅಲ್ಲಿಗೆ ಹೋಗುವುದೆ ಇಲ್ಲ ಇವರು. ಇವರು ಹೋಗುವುದು ಯಾವಾಗಲೂ ಖಾಸಗಿ ಶಾಲೆಗೆ ಹಣ ವಸೂಲಿ ಮಾಡಲು. ದಯಮಾಡಿ ನಾವು ಹೇಳುವುದನ್ನು positive ಆಗಿ ತೆಗೆದುಕೊಳ್ಳಿ. ನಾವು ಮಂತ್ರಿಗಳ ಮೇಲೆ ಹೇಳುತ್ತಿಲ್ಲ, ನೂರಕ್ಕೆ ನೂರು ಮಾನ್ಯ ಗೋವಿಂದೆಗೌಡರ ನಂತರ ಒಳ್ಳೆಯ ಶಿಕ್ಷಣ ಸಚಿವರಾಗಿ ನೀವು ಬಂದಿದ್ದೀರಿ, ಕ್ರಮ ತೆಗೆದುಕೊಳ್ಳಿ. ಅವರೆಲ್ಲರನ್ನು ಎತ್ತಿ ಬಿಸಾಕಿ.

ಸದಸ್ಯರು:- ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದರು.

**ಶ್ರೀ ಪುಟ್ಟಣ್ಣ:-** ಮಾನ್ಯ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ ನಾನೇ ಎಷ್ಟೊ ಸಾರಿ ಅವರ ಜೊತೆಯಲ್ಲಿ ಜಗಳ ಮಾಡಿದ್ದೆನೆ. ಅದು ಬೇರೆ ವಿಚಾರ, ಈಗ ಇರುವ ಸಚಿವರಿಗೆ hearing patience ಇದೆ ತಾಳ್ಮೆ ಇದೆ. ಇವರ ಹಾಗೆ ಹೊರಟ್ಟಿಯವರು ಐದು ವರ್ಷ ಇರಲಿಲ್ಲ, ಇದ್ದಿದೆ 20 ತಿಂಗಳು. ಆದರೂ ಅಳಾಡಿಸಿದ್ದೇವೆ ನಾವು ಅವರನ್ನು. ಮಾನ್ಯ ಸಚಿವರಲ್ಲಿ ದಯಮಾಡಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ಕೆಲಸವನ್ನು ಮಾಡಿ.

**ಸಭಾಪತಿಯವರು:-** ಸಾಕು ಇನ್ನು ಒಂದು ನಿಮಿಷದಲ್ಲಿ ಮುಗಿಸಿ. Conclude ಮಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಕೊನೆಯದಾಗಿ ಮಾನ್ಯ ಮಂತ್ರಿಗಳು ಅನುದಾನ ಮತ್ತು ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ Health Insurance Scheme ಮಾಡಬೇಕು. ಬಜೆಟ್‌ನಲ್ಲಾದರೂ ತರಬೇಕು. ಉಮರ ನಾಯಕ್ ವರದಿ ಮತ್ತು ಕಾಲ್ಪನಿಕ ವೇತನ ಈ ಮೂರು ಬೇಡಿಕೆಗಳನ್ನು ಬಗೆಹರಿಸಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 95ರ ನಂತರದ ಮತ್ತು 2000ನೇ ಸಾಲಿನವರೆಗೆ ಇರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನವನ್ನು ಕೊಡುತ್ತೇವೆ ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿ. ನೀವು ಆದೇಶ ಮಾಡಿ ಇನ್ನು ಎರಡು ವರ್ಷಗಳಲ್ಲಿ ಕೊಡಲು ನಿಮಗೆ ಆಗುವುದಿಲ್ಲ. ಇನ್ನು ಎರಡು ವರ್ಷಗಳ ನಂತರ ನೀವು ಇರುವುದಿಲ್ಲ. ಮುಂದೆ ಯಾರು ಇರುತ್ತಾರೆ ಅವರಾದರೂ ಕೊಡುತ್ತಾರೆ ಎಂದು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು(ವಿಧಾನಸಭಾ ಕ್ಷೇತ್ರ ):-** ಮಾನ್ಯ ಸಭಾಪತಿಗಳೆ, ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಬೆಂಬಲವನ್ನು ನೀಡಿ ಮಾತನಾಡಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ರಾಜ್ಯದಲ್ಲಿ ಬಹಳ ಗಂಭೀರವಾದ ಬರಗಾಲ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಅದರಲ್ಲಿಯು ಮುಖ್ಯವಾಗಿ ಉತ್ತರ ಕರ್ನಾಟಕ, ಹೈದಾರಬಾದ್ ಕರ್ನಾಟಕದಲ್ಲಿ ಸಾಕಷ್ಟು ಬಿಸಿಲಿನಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆ ಭಾಗದಲ್ಲಿರುವ ಕೃಷ್ಣಾ ಮತ್ತು ತುಂಗಭದ್ರಾ ನದಿಗಳು ಬತ್ತಿ ಹೋಗಿ ಕುಡಿಯುವ ನೀರಿಗೆ ಸಾಕಷ್ಟು ತೊಂದರೆಯಾಗಿದೆ. ಅದನ್ನು ಸರಿಪಡಿಸಲು ಯಾವ ಮಟ್ಟದಲ್ಲಿ ತೊಂದರೆಯಾಯಿತು ಎಂದರೆ, ರಾಜ್ಯಕ್ಕೆ ವಿದ್ಯುತ್‌ನ್ನು ಕೊಡುವಂತಹ RTPS (Raichur Thermal Power Station) ಕೇವಲ 40 Cusecs ನೀರು ನದಿಯಲ್ಲಿ ಇದ್ದರೆ 1600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಇದು ಕೂಡಾ ಇನ್ನು ಸ್ವಲ್ಪ ದಿನಗಳಲ್ಲಿ ಬಂದ್ ಆಗುವಂತಹ ಪರಿಸ್ಥಿತಿ ಇದೆ. ಇದನ್ನು ಗಮನಿಸಿ ಕೃಷ್ಣಾ ನದಿಗೆ ಆಲಮಟ್ಟಿ ಮುಖಾಂತರ ನೀರು ಬಿಡಿಸಬೇಕು ಎಂದರೆ ಆಲಮಟ್ಟಿ ಡ್ಯಾಂನಲ್ಲಿಯು ಇವತ್ತು ನೀರು ಇಲ್ಲದಂತಹ ಪರಿಸ್ಥಿತಿ ಇದೆ.

(ಮುಂದು)

ಶ್ರೀ ಬೋಸರಾಜ್ (ಮುಂದು)

ಹಾಗಾಗಿ ರಾಜ್ಯಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ವಿನಂತಿ ಮಾಡಿ, ಕೊಯ್ನಾ ಡ್ಯಾಂನಿಂದ ಕೃಷ್ಣಾ ನೀರಿನ ಮುಖಾಂತರ ನೀರು ಕೊಡಿಸಲು ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ ಎಲ್ಲಾ ಪ್ರದೇಶಗಳು agriculture based ಪ್ರದೇಶಗಳಾಗಿವೆ. ನೀರು reservoir ನಲ್ಲಿ ಇಲ್ಲದೇ ಇರುವುದರಿಂದ agricultural operations ಬಂದ್ ಆಗಿವೆ. ಆ ಕಾರಣದಿಂದ ರೈತರು ಮತ್ತು agricultural labourers ಗಳು ಕೂಲಿ ಮತ್ತು ಕೆಲಸ ಇಲ್ಲದೇ ತೊಂದರೆ ಪ್ರಾರಂಭವಾಗಿದೆ. ಈಗಾಗಲೇ ಸಾವಿರಾರು ಸಂಖ್ಯೆಯಲ್ಲಿ ಬಾಂಬೆ, ಪೂನಾ, ಗೋವಾ ಮತ್ತು ಬೆಂಗಳೂರು ಪ್ರದೇಶಗಳಿಗೆ ಗುಳೆ ಹೋಗಿರುವುದನ್ನು ಗಮನಿಸಿದ್ದೇವೆ. ಕುಡಿಯುವ ನೀರಿಲ್ಲದೇ ಅಲ್ಲಿನ ಕೆರೆಗಳು ಬತ್ತಿ ಹೋಗಿದ್ದು, groundwater level ಸಹ ಕಡಿಮೆಯಾಗಿ ಕೊಳವೆಬಾವಿಗಳಲ್ಲಿ ನೀರಿಲ್ಲದಿರುವ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದಿಂದ ವರದಿ ಬಂದಿದೆ. ಆ ಭಾಗಗಳಲ್ಲಿ ರಾಜ್ಯದಲ್ಲಿ ಹೆಚ್ಚಿನ ಉಷ್ಣತೆಯಿರುವ ಪ್ರದೇಶವಾಗಿದ್ದು, ಕುಡಿಯುವ ನೀರಿಗೆ ನಮ್ಮ ಸರ್ಕಾರದ ವತಿಯಿಂದ special package ಮುಖಾಂತರ ಕ್ರಮ ತೆಗೆದುಕೊಂಡು ಆ ಭಾಗಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಗಮನಕ್ಕೆ ತರುತ್ತೇನೆ. ಅಲ್ಲಿರುವ ಸಾವಿರಾರು ಕೂಲಿಕಾರ್ಮಿಕರಿಗೆ ಕೆಲಸ ಕೊಡುವ ಪ್ರಯತ್ನ ಮಾಡಬೇಕು. ಆ ಭಾಗದಲ್ಲಿ ಬಡವರು, ಎಸ್‌ಸಿ./ಎಸ್‌ಟಿ ಜನಾಂಗದವರು ಹೆಚ್ಚಿದ್ದು, ಅವರಿಗೆ ಕೆಲಸ ಕೊಡುವ ಪ್ರಯತ್ನ ಆಗಬೇಕು. ಅದನ್ನು N.R.E.G. ಮುಖಾಂತರ ಇರಬಹುದು, ಕೆರೆಗಳಲ್ಲಿ ಹೂಳೆತ್ತುವ ಕೆಲಸ ಇರಬಹುದು, ರಾಜ್ಯ ಸರ್ಕಾರ ಹೆಚ್ಚಿನ ರೀತಿ ಒತ್ತುಕೊಡುವ ಪ್ರಯತ್ನ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರವು ಆ ಭಾಗಗಳಲ್ಲಿ ಕೊಳವೆ ಬಾವಿ ಮಂಜೂರು ಮಾಡಿದ್ದು, ನಮಗೆ ಬಂದಿರುವ ಮಾಹಿತಿ ಪ್ರಕಾರ ಅಂತರಜಲ ಸಿಗುತ್ತಿಲ್ಲ. ಹಾಗಾಗಿ ನದಿಯಲ್ಲಿ ನೀರು ಬಿಡಿಸುವ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ. ರಾಯಚೂರಿನ ಮೇಲಿನ ಭಾಗದಲ್ಲಿ ಕೃಷ್ಣಾ ಮತ್ತು ಕೆಳ ಭಾಗದಲ್ಲಿ ತುಂಗಾಭದ್ರಾ ನದಿ ಇದೆ. ತುಂಗಾಭದ್ರಾಕ್ಕೆ ನೀರು ಬಿಡಿಸಬೇಕಾದರೆ ಭದ್ರಾದಲ್ಲಿ ನೀರು ಇದ್ದರೆ ಬಿಡಬಹುದು. ಆಲಮಟ್ಟಿ ಮತ್ತು ಬಸವಸಾಗರಕ್ಕೆ ಕೊಯ್ನಾ ಡ್ಯಾಂನಿಂದ ನೀರು ಬಿಡಿಸುವ ಪ್ರಯತ್ನ ಮಾಡಿದರೆ ಅತಿ ಹೆಚ್ಚು ಗ್ರಾಮ ಮತ್ತು ಪಟ್ಟಣಗಳಿಗೆ ಕುಡಿಯುವ ನೀರಿನ ಪರಿಸ್ಥಿತಿ

ಸುಧಾರಿಸಲು ಅವಕಾಶ ಇದೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರವು ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರತಿ ವರ್ಷ ಹತ್ತು ಸಾವರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಮೂಲಕ ನಮ್ಮ ಭಾಗದಲ್ಲಿ ತುಂಗಾಭದ್ರಾ ಎಡದಂಡೆ ಕಾಲುವೆಯ 226 ಕಿ.ಮೀ ಇದ್ದು, ಇದರಿಂದ ಸುಮಾರು 6 ಲಕ್ಷ ಎಕರೆ ನೀರಾವರಿ ಒದಗಿಸಲು ರಿಪೇರಿ ಮಾಡಲಾಗಿದೆ. ಇನ್ನೂ ಹೆಚ್ಚಿನ ಭಾಗದಲ್ಲಿ ಇಂತಹ ಸಂದರ್ಭದಲ್ಲಿ balancing reservoir ಗಳ ಮುಖಾಂತರ ನೀರು ನಿಲ್ಲಿಸಬೇಕೆಂದು ಅನೇಕ ವರ್ಷಗಳಿಂದ ಆ ಭಾಗದ ಜನರು, ರೈತರು ಮತ್ತು ಜನ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಇವತ್ತು ಎರಡು ನದಿಗಳಿದ್ದು, ಸಣ್ಣ ಪುಟ್ಟ ಬ್ಯಾರೇಜ್ ನಿರ್ಮಾಣ ಮಾಡಿ ಅರ್ಧರ್ಧ ಟಿಎಂಸಿ ನೀರನ್ನು ಎರಡು ನದಿಗಳಲ್ಲಿ ನೀರು ನಿಲ್ಲಿಸಿದರೆ ತೊಂದರೆಯಾಗಿರುವಾಗ ಆ ಭಾಗದ ಜನರಿಗೆ ಅನುಕೂಲವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನಹರಿಸಿ, ಸರ್ವೆ ಮಾಡಿ ತುಂಗಾಭದ್ರಾದಲ್ಲಿ 4 ಕಡೆ balancing reservoir ಮಾಡಲು ಅವಕಾಶ ಇದೆ ಎಂದು ನೀಡಿರುವ ವರದಿ ಸರ್ಕಾರದ ಮುಂದೆ ಇದೆ. ಅದರ ಬಗ್ಗೆ ಹೆಚ್ಚಿನ ಗಮನಹರಿಸಿ, ಅದಕ್ಕೆ ಮಂಜೂರಾತಿ ನೀಡಿ ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಇನ್ನು ಹೈದರಾಬಾದ್-ಕರ್ನಾಟಕದ ಭಾಗಗಳಿಗೆ 371(ಜೆ) ಮುಖಾಂತರ ನಮಗೆ ಅವಕಾಶ ಕಲ್ಪಿಸಿದ್ದು, ಮಾನ್ಯ ಸಿದ್ದರಾಮಯ್ಯನವರ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಸಾಕಷ್ಟು ಹಣವನ್ನು ಮಂಜೂರಾತಿ ಮಾಡಿದೆ. ಮಾನ್ಯ ಶರಣಪ್ರಕಾಶ್ ಪಾಟೀಲ್‌ರವರು ಅದರ ಅಧ್ಯಕ್ಷರಾಗಿದ್ದು, ಅವರೂ ಸಹ ಸದನದಲ್ಲಿ ಇದ್ದು, ಅದಕ್ಕೆ ಹೆಚ್ಚಿನ ರೀತಿಯಲ್ಲಿ ಹಣ ಖರ್ಚು ಮಾಡಬೇಕು. ಅದಕ್ಕೆ ಬೇಕಾದ KRDCL, PWD, ZP-PRED ಇಲಾಖೆಗಳ ಮುಖಾಂತರ ತಾಲ್ಲೂಕು ಮತ್ತು ಜಿಲ್ಲಾವಾರು ಮಂಜೂರಾಗಿರುವ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸುವ ಕೆಲಸ ಮಾಡಬೇಕು. ತಮಗೆಲ್ಲರಿಗೂ ಗೊತ್ತಿರುವಂತೆ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿಯಲ್ಲಿ 100 ವರ್ಷಗಳ ಹಿಂದಿದ್ದು, ಅನೇಕ ವರ್ಷಗಳ ಹೋರಾಟದಿಂದ ಮಾನ್ಯ ಮನ್‌ಮೋಹನ್ ಸಿಂಗ್‌ರವರ ಯುಪಿಎ ಸರ್ಕಾರ ದಯಪಾಲಿಸಿರುವ ವಿಶೇಷ ಸ್ಥಾನಮಾನವನ್ನು ಕಾರ್ಯಗತಗೊಳಿಸಬೇಕಾದರೆ ಶೀಘ್ರಗತಿಯಲ್ಲಿ ಸರ್ಕಾರವು ಚುರುಕುಗೊಳಿಸಿ ಆ ಭಾಗದ ಜನರ ಅಭಿವೃದ್ಧಿಯನ್ನು ಮಾಡಬೇಕಾಗಿದೆ. ಆ ದಿಸೆಯಲ್ಲಿ ಸರ್ಕಾರವು ಆ ಭಾಗದಲ್ಲಿ 30

ಸಾವಿರ ಹುದ್ದೆಗಳಿವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದನ್ನು ಗಮನಿಸಿದ್ದು, ಆ ಭಾಗದ ಸುಮಾರು 9,400 ಹುದ್ದೆಗಳನ್ನು ಭರ್ತಿ ಮಾಡಿ, ಸುಮಾರು 12,000 ಹುದ್ದೆಗಳನ್ನು ಭರ್ತಿ ಮಾಡಲು ನೋಟಿಫಿಕೇಷನ್ ಮಾಡಿದ್ದು, ಉಳಿದ ಹುದ್ದೆಗಳಿಗೂ ನೋಟೀಫಿಕೇಷನ್ ಮಾಡಬೇಕು. 2015–16 ಮತ್ತು 2016–17ರ ಒಳಗಾಗಿ ಭರ್ತಿ ಮಾಡುವ ಪ್ರಯತ್ನವನ್ನು ಸರ್ಕಾರವು ಮಾಡಬೇಕಾಗಿದೆ. ಮಾನ್ಯ ಶಿಕ್ಷಣ ಸಚಿವರು ಸದನದಲ್ಲಿ ಇದ್ದು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇವೆ. ಉಡುಪಿ–ಮಂಗಳೂರಿನಲ್ಲಿ 19 ಮಕ್ಕಳಿಗೆ ಒಂದು ಶಾಲೆಯಿದ್ದರೆ ನಮ್ಮಲ್ಲಿ 29 ಮಕ್ಕಳು ಇದ್ದರೂ ಒಂದು ಶಾಲೆಯಿಲ್ಲ. ಇದನ್ನು ಸರಿಪಡಿಸಬೇಕೆಂದು ಎರಡು–ಮೂರು ಸಭೆಗಳಲ್ಲಿ ಮಾನ್ಯ ಶಿಕ್ಷಣ ಸಚಿವರಿಗೆ ಮನವಿ ಮಾಡಿದ್ದು, ಮಾನ್ಯ ಸಚಿವರು ಇದನ್ನು ಸರಿಪಡಿಸಲು ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಅನೇಕ ಬಾರಿ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದು, ಇದರ ಬಗ್ಗೆ ಸರ್ಕಾರವು ಅಲ್ಲಿಗೆ ಬೇಕಾದ ಪ್ರೌಢ ಶಾಲೆಗಳು, ಪಿಯು ಕಾಲೇಜುಗಳು ಮತ್ತು ಡಿಗ್ರಿ ಕಾಲೇಜುಗಳನ್ನು ತಕ್ಷಣ ಮಂಜೂರಾತಿ ಕೊಡಬೇಕು. ಆ ಭಾಗಗಳು 100 ವರ್ಷಗಳು ಹಿಂದುಳಿದಿವೆ ಎಂದು ಗುರುತಿಸಿ 371(ಜೆ) ನಲ್ಲಿ ಅವಕಾಶ ಕಲ್ಪಿಸಿದ್ದರೂ, ರಾಜ್ಯದ ಇತರ ಭಾಗಗಳಿಗೆ ಶಿಕ್ಷಣ ಸಂಸ್ಥೆಗಳನ್ನು ಕೊಡುವ ರೀತಿಯಲ್ಲಿ ನಮ್ಮ ಭಾಗಗಳಿಗೂ ಕೊಟ್ಟರೂ ಅಭಿವೃದ್ಧಿ ಆಗಲು ಸಾಧ್ಯವಿಲ್ಲ. ಹಾಗಾಗಿ ಆದ್ಯತೆ ಮೇಲೆ ಮತ್ತು ವಿಶೇಷ ಸ್ಥಾನಮಾನ ಸಿಕ್ಕಿರುವುದರಿಂದ ಆ ಭಾಗದ ಕೊರತೆಯನ್ನು ಶಿಕ್ಷಣ ವಿಷಯದಲ್ಲಿ ನೀಗಿಸಿ, ಹೆಚ್ಚಿನ ಶಾಲೆಗಳನ್ನು ಮಂಜೂರು ಮಾಡುವುದರ ಮುಖಾಂತರ ಕೊಡಬೇಕು. ಬೇಕಾಗಿರುವ ಅನುದಾನವನ್ನು HKRDB ನಿಂದ ಪ್ಯಾಕೇಜ್ ಮಾಡುವುದರ ಮುಖಾಂತರ ಶಿಕ್ಷಣ ಮತ್ತು ಆರೋಗ್ಯ ವಿಷಯದಲ್ಲಿ ಕೊಡಬೇಕು. ಅಲ್ಲಿ Primary Health Centre ಗಳನ್ನು ಕೊಟ್ಟಿಲ್ಲ. 60–70 ಸಾವಿರ ಜನಸಂಖ್ಯೆ ಇರುವ ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ Primary Health Centre ಗಳು ಇಲ್ಲ. ಆದರೆ ಈ ಭಾಗಗಳಲ್ಲಿ ಹತ್ತು–ಹನ್ನೆರಡು ಸಾವಿರ ಜನಸಂಖ್ಯೆ ಇರುವ ಭಾಗಗಳಲ್ಲಿ ಪ್ರಾಥಮಿಕ ಹೆಲ್ತ್ ಸೆಂಟರ್‌ಗಳನ್ನು ನೋಡುತ್ತಿದ್ದೇವೆ. ಇದನ್ನು ಸರಿಪಡಿಸಲು ಶಿಕ್ಷಣ ಮತ್ತು ಆರೋಗ್ಯ ವಿಷಯದಲ್ಲಿ ಸರಿಮಾಡಬೇಕು.

ಇನ್ನು ರಸ್ತೆ ಅಭಿವೃದ್ಧಿ ವಿಷಯದಲ್ಲಿ ಸಂಪರ್ಕ ಸಾಧಿಸಲು ಹೆಚ್ಚಿನ ಒತ್ತು ಕೊಟ್ಟು ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಶಿಕ್ಷಣ ಮತ್ತು ಆರೋಗ್ಯದಲ್ಲಿ ಯಾವುದಾದರೊಂದು

ಪ್ಯಾಕೇಜ್ ಮಾಡಿಕೊಂಡು HKRDB ಜೊತೆಯಲ್ಲಿ ಸಂಯೋಜಿಸಿ, infrastructure ಗೆ ಬೇಕಾಗುವ ಹಣವನ್ನು HKRDB ಯಿಂದ ತೆಗೆದುಕೊಂಡು ಅನುಮತಿ ನೀಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಅದೇ ರೀತಿ ರಸ್ತೆಗಳನ್ನು ಅಭಿವೃದ್ಧಿಗೆ ಹೆಚ್ಚಿನ ಹಣ ಮಂಜೂರು ಮಾಡುವುದರ ಮುಖಾಂತರ ಅಭಿವೃದ್ಧಿ ಕಾಣಲು ಸಾಧ್ಯ ಮತ್ತು 371(ಜೆ) ಕಲಂ ನಂತೆ ಅನುಕೂಲ ಮಾಡಿದಂತಾಗುತ್ತದೆ ಎಂದು ಹೇಳಲು ಬಯಸುತ್ತೇನೆ.

ಇನ್ನು ನೀರಾವರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು NRBC Canal ಅನ್ನು 162 ಕಿ.ಮೀ ವರೆಗೂ ಮುಂದುವರೆಸಬೇಕಾಗಿದೆ. ಈಗಾಗಲೇ ಸರ್ಕಾರವು ಈ ವರ್ಷದಲ್ಲಿ 50 ಕಿ.ಮೀ ವರೆಗೆ ಮಂಜೂರಾತಿ ಮಾಡಿ ಟೆಂಡರ್ ಆಗಿದ್ದು, ಮುಂದಿನ 162 ಕಿ.ಮೀ ವರೆಗೂ ಪೂರೈಸಬೇಕು. ರಾಯಚೂರು tail end ಪ್ರದೇಶದಲ್ಲಿದ್ದು, ಆ ಭಾಗಗಳಿಗೆ ಅನುಕೂಲ ಮಾಡುವ ಕೆಲಸವನ್ನು ಮಾಡಬೇಕು. ಏಕೆಂದರೆ ನಮ್ಮ ಭಾಗದಲ್ಲಿ ಯಾವುದೇ ಕೈಗಾರಿಕೆಗಳು ಇಲ್ಲ, ನಾವು ವಿದ್ಯುತ್, ಬಂಗಾರ ಕೊಡುತ್ತೇವೆ. ಇದು agriculture based industries ಆಗಿದೆ. ಕೇವಲ rice mill, ginning factory, oil factory ಎಲ್ಲವೂ ಕೃಷಿ ಮೇಲೆ ಆಧಾರಿತವಾಗಿದೆ. ಕೃಷಿಗೆ ನೀರಿಲ್ಲದಿದ್ದರೆ ಕೃಷಿ ಚಟುವಟಿಕೆಗಳು ಬಂದ್ ಆಗುವ ಕಾರಣದಿಂದ ನೀರು ಕೊಡಬೇಕು. ಆ ಭಾಗದಲ್ಲಿ ತುಂಗಾಭದ್ರಾ ಅಚ್ಚುಕಟ್ಟು ಪ್ರದೇಶದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಗಳಲ್ಲಿ ರೈತರು ಮತ್ತು ಜನರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸ್‌ರಾಜು(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾದರೆ, ಸರ್ಕಾರ ದೀರ್ಘಾವಧಿ ಯೋಜನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ಕೃಷ್ಣಾ ಮತ್ತು ತುಂಗಭದ್ರಾ ಎರಡು ನದಿಗಳು ನಮಗೆ ಹತ್ತಿರದಲ್ಲಿರುವುದರಿಂದ ಅವುಗಳಿಗೆ ಅಣೆಕಟ್ಟೆ ಕಟ್ಟಿ ನೀರನ್ನು ಸಂಗ್ರಹ ಮಾಡಿದರೆ ಬೇಸಿಗೆಯಲ್ಲಿ ನಮ್ಮನ್ನು ಕಾಡುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಹಲವಾರು ಯೋಜನೆಗಳು ಎಸ್ಟಿಮೆಂಟ್ ಆಗಿ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿವೆ. ಇದರ ಕಡೆಯೂ ಸರ್ಕಾರ ಗಮನಹರಿಸಬೇಕಾಗುತ್ತದೆ. ಹೊರ ರಾಜ್ಯಗಳಿಗೆ ಹೋಗುವ ನದಿ ನೀರಿಗೆ ಸಣ್ಣ ಪ್ರಮಾಣದ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಬೇಕೆನ್ನುವ ವಿನಂತಿಯನ್ನು ಸಹ ಮಾಡಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ. ಇತ್ತೀಚೆಗೆ ತಾನೇ ಪಂಚಾಯಿತಿ ಚುನಾವಣೆಗಳು ನಡೆದು ಹೊಸ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ಇವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ, ಅಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ. ನಮ್ಮ ಭಾಗದ ಪಂಚಾಯಿತಿಗಳಲ್ಲಿರುವ ಪಿ.ಡಿ.ಓ.ಗಳು ಯಾವ ಸದಸ್ಯರ ಮಾತನ್ನು ಕೇಳದೇ, ಗ್ರಾಮಾಂತರ ಪ್ರದೇಶದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಗೊಳ್ಳದೇ ಇರುವುದರಿಂದ ಅನೇಕ ಭಾಗಗಳಿಂದ ಈ ಬಗ್ಗೆ ನಮಗೆ ದೂರುಗಳು ಬರುತ್ತಿವೆ. ಆ ಹಿನ್ನೆಲೆಯಲ್ಲಿ ಪಿ.ಡಿ.ಓ.ಗಳು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಸರಿಯಾಗಿ ಬಳಸಿಕೊಳ್ಳುವಂತೆ ಪಂಚಾಯಿತಿ ವ್ಯವಸ್ಥೆಯನ್ನು ಸರಿಪಡಿಸಬೇಕಾಗುತ್ತದೆ. ಹೊಸದಾಗಿ ಚುನಾಯಿತವಾಗಿರುವ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿಗಳು ಇನ್ನೊಂದು ತಿಂಗಳಿನಲ್ಲಿ ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ.

ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಸುಮಾರು 21 ಸಾವಿರ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ ಮತ್ತು 7 ಸಾವಿರ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆಯೆಂದು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಗೆ ಅನ್ವಯಿಸುವಂತೆ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳಿದ್ದೇನೆ. ಸರ್ಕಾರ ಅದಕ್ಕೆ ಸಂಜೆ ಉತ್ತರ ಕೊಡುತ್ತದೆ. 'ರಾಯಚೂರು ಭಾಗದಲ್ಲಿ ಸುಮಾರು 200–230 ಘಟಕಗಳು ಈಗಾಗಲೇ ಪ್ರಾರಂಭವಾಗಿವೆ' ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿ ಕೇವಲ 50–60 ಘಟಕಗಳು ಮಾತ್ರ ಕೆಲಸ ಮಾಡುತ್ತಿವೆ. ಬಿರು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವ ಸಂದರ್ಭದಲ್ಲಿ ಈ ಘಟಕಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ಸ್ವಲ್ಪ ಮಟ್ಟಿಗೆ ಆ ಭಾಗದ ಜನರಿಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶುದ್ದ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡುವ ಯೋಜನೆಯನ್ನು ಸರ್ಕಾರ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಪ್ರಯತ್ನಿಸಬೇಕು. ಸರ್ಕಾರ ಜಿಲ್ಲಾ ಘಟಕಗಳಲ್ಲಿ ಟೆಂಡರ್ ಕರೆದು ಗುತ್ತಿಗೆದಾರರಿಗೆ ಈ ಕೆಲಸವನ್ನು ವಹಿಸುತ್ತಿದೆ. ಯಾರೋ ಗುತ್ತಿಗೆದಾರರು ಬಂದು ಈ ಕೆಲಸವನ್ನು ಮಾಡುತ್ತಾರೆ. ನಂತರ ವಿದ್ಯುತ್ ಕೊಡದೇ, ನೀರು ಸರಿಯಾದ ರೀತಿಯಲ್ಲಿ ಸರಬರಾಜು ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡುವವರು ಇಲ್ಲದಂತಾಗುತ್ತದೆ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಕಳಕಳಿಯಿಂದ ಪ್ರಾರಂಭ ಮಾಡಿರುವ ಈ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸುವ ಪ್ರಯತ್ನ ಸರ್ಕಾರದ ವತಿಯಿಂದ ಆಗಬೇಕಾಗಿದೆ. ಇಷ್ಟು ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:–** ಈಗ ಸದನವನ್ನು ಭೋಜನಕ್ಕಾಗಿ 3 ಗಂಟೆ 15 ನಿಮಿಷಗಳವರೆಗೆ ಮುಂದೂಡಲಾಗುತ್ತಿದೆ.

**(ಸದನವನ್ನು ಮಧ್ಯಾಹ್ನ 1 ಗಂಟೆ 53 ನಿಮಿಷಗಳಿಗೆ ಮುಂದೂಡಿ, ಪುನಃ 3 ಗಂಟೆ 15 ನಿಮಿಷಗಳಿಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)**

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 3 ಗಂಟೆ 24 ನಿಮಿಷಗಳಿಗೆ ಪ್ರಾರಂಭವಾಯಿತು)**

**(ಪೀಠದಲ್ಲಿ ಸಭಾಪತಿಯವರು ಉಪಸ್ಥಿತರಾದರು)**

**ಸಭಾಪತಿಯವರು:-** ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ಚರ್ಚೆ ಮುಂದುವರೆಯುತ್ತದೆ. ಈಗ ಮೊದಲು ಮಾನ್ಯ ಪುಟ್ಟಸ್ವಾಮಿಯವರು ಪ್ರಾರಂಭ ಮಾಡುತ್ತಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸತಕ್ಕಂಥ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಮಾನ್ಯ ರಾಜ್ಯಪಾಲರು ಭಾಷಣವನ್ನು ಓದುತ್ತಾರಷ್ಟೆ. ಆದರೆ ಅದಕ್ಕೆ ವಿಚಾರವನ್ನು ಕೊಡತಕ್ಕಂಥವರು ಸರ್ಕಾರ. ಸರ್ಕಾರ ವಿಚಾರವನ್ನು ಕೊಟ್ಟಂಥ ಸಂದರ್ಭದಲ್ಲಿ ವಸ್ತುನಿಷ್ಠೆಯ ವಿಚಾರವನ್ನು ಕೊಡಬೇಕೇ ಅಥವಾ ವಸ್ತುನಿಷ್ಠೆ ಇಲ್ಲದೇ ಇರುವ ವಿಚಾರವನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸಿರುವಂಥ ವಿಚಾರವನ್ನು ನಾವು ವಿಮರ್ಶೆ ಮಾಡಿದರೆ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ವಸ್ತುನಿಷ್ಠೆ ಇಲ್ಲದೇ ಇರುವ ವಿಚಾರವನ್ನು ಹೇಳಿಸಿಲ್ಲ ಎನ್ನುವುದು ನನ್ನ ಮೊದಲನೆಯ ಅಭಿಪ್ರಾಯ. ಇದರಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದಾರೆ. ಸರ್ಕಾರದ ಬಗ್ಗೆ ಅನೇಕ ಟೀಕೆ-ಟಿಪ್ಪಣಿಗಳು ಬಂದಿವೆ. ಸ್ವತಃ ಅವರ ಪಕ್ಷದ ಹಿರಿಯ ನಾಯಕರೇ ಹೇಳುತ್ತಾರೆ. ಆದರೂ ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ.

> *"ನನ್ನ ಸರ್ಕಾರ ಸಮಾಜದ ಎಲ್ಲಾ ವರ್ಗಗಳ ಏಳಿಗೆಯನ್ನು ಸುನಿಶ್ಚಿತಗೊಳಿಸಲು ಬದ್ಧವಾಗಿದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಮಸ್ತ ನಾಗರಿಕರಿಗೆ ಪಾರದರ್ಶಕ, ಸ್ಪಂದನಾತ್ಮಕ ಮತ್ತು ಉತ್ತರದಾಯಿತ್ವದ ಆಡಳಿತವನ್ನು ನೀಡುವುದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ."*

ಇದರಲ್ಲಿ ಸ್ಪಂದನಾತ್ಮಕ ಎಂದರೆ ಜನರಿಗೆ Responsive Government ಅಂದರೆ they should be accountable to the people. ಜನರಿಗೆ ಸ್ಪಂದನೆಯನ್ನು ಕೊಡತಕ್ಕಂಥ ಸರ್ಕಾರವಾಗಿರಬೇಕು ಎನ್ನುವುದಾಗಿ ನಾನು ಅರ್ಥೈಸಿಕೊಂಡಿದ್ದೇನೆ. ಆದರೆ ಆ ರೀತಿ ಆಗಿದೆಯೇ ಎಂಬುದನ್ನು ವಿಮರ್ಶೆ ಮಾಡಿದಾಗ ನಾನು ಬೇರೆ ಹಲವಾರು ವಿಚಾರಗಳಿಗೆ ಹೋಗುವುದಕ್ಕೆ ಬದಲಾಗಿ ಈ

ನಮ್ಮ ದೇಶವನ್ನು ಕಾಪಾಡತಕ್ಕಂಥ ಯೋಧರನ್ನು ನಾವು ಟಿವಿಯಲ್ಲಿ ನೋಡಿದಾಗ ಅವರು ಮಂಜುಗಡ್ಡೆಯಲ್ಲಿ ಒದ್ದಾಡತಕ್ಕಂಥಾದ್ದು, ಅವರು ದೇಶವನ್ನು ರಕ್ಷಣೆ ಮಾಡುವುದಕ್ಕಾಗಿ ಹೋರಾಟ ಮಾಡುತ್ತಿರುವ ಕಷ್ಟವನ್ನು ನೋಡಿ ಅವರು ಇಲ್ಲಿಗೆ ಬಂದಾಗ ನಮ್ಮ ದೇಶಕ್ಕೆ ಅಥವಾ ನಮ್ಮ ಸರ್ಕಾರಿ ಕಛೇರಿಗಳಿಗೆ ಬಂದರೆ ಬಹುಶಃ ಅವರನ್ನು ನಾವು ದೇವರ ರೀತಿಯಲ್ಲಿ ಪೂಜೆಯನ್ನು ಮಾಡಿದರೂ ಕಡಿಮೆಯೇ. ಅವರು ಯುದ್ಧ ಮಾಡುವಾಗ ತೀರಿಕೊಂಡರೆ ಅವರಿಗೆ ಎಲ್ಲಾ ರೀತಿಯಿಂದ ಸಕಲ ಗೌರವಗಳನ್ನು ಕೊಡುತ್ತೇವೆ. ಆದರೆ ಆತ ಬದುಕಿದ್ದ ಅವನ ಜೀವನಾಧಾರಕ್ಕೆ ಏನಾದರೂ ಕೇಳುವುದಕ್ಕೆ ಬಂದಾಗ ಸರ್ಕಾರ ಯಾವ ರೀತಿಯಾಗಿ ನಡೆದುಕೊಳ್ಳುತ್ತದೆ ಎನ್ನುವುದಕ್ಕೆ ಹಲವಾರು ನಿದರ್ಶನಗಳನ್ನು ನಾವು ಟಿವಿಯಲ್ಲಿ ನೋಡಿದ್ದೇವೆ. ಒಬ್ಬ ಯೋಧ ತನ್ನ ಒಂದು ಖಾತೆ ಟ್ರಾನ್ಸ್‌ಫರ್‌ಗಾಗಿ ತಿಂಗಳಾನುಗಟ್ಟಲೆ ಸತ್ಯಾಗ್ರಹ ಮಾಡಿದ್ದನ್ನು ಪತ್ರಿಕೆಗಳಲ್ಲಿ ಮತ್ತು ಟಿವಿಯಲ್ಲಿ ನೋಡಿದ್ದೇವೆ. ನಿನ್ನೆಯ ದಿವಸ ತಾನೆ ಒಂದು ವಿಚಾರಕ್ಕೆ ಉತ್ತರವನ್ನು ಹೇಳಿದ್ದಾರೆ. ಮಡಿದ ಯೋಧರ ಬಗ್ಗೆ ಹೇಳುವುದಾದರೆ, ಐ.ಸಿ. ಕರ್ನಲ್ ಸಿ.ನಂಜಂಪ್ಪ ಇವರು ದಿ: 21–04–2011ರಲ್ಲಿ ತೀರಿಕೊಂಡಿರುತ್ತಾರೆ. ಇವರು ಮೈಸೂರಿನಲ್ಲಿ ಮೂಡಾ ನಿವೇಶನಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ಈ ಅರ್ಜಿ ಇನ್ನು ಸಹ ಪರಿಶೀಲನೆಯಲ್ಲಿದೆ. 2011 ರಿಂದ ಇಲ್ಲಿಯವರೆವಿಗೂ ಸುಮಾರು 5 ವರ್ಷಗಳಾದರೂ ಸಹ ಅರ್ಜಿ ಪರಿಶೀಲನೆಯಲ್ಲಿದೆ ಎನ್ನುತ್ತಾರೆ. ಇದು ಈ ಸರ್ಕಾರದ ಸ್ಪಂದನೆ. ಶ್ರೀ ಅವಿಲ್‌ಧಾರ್ ಗಿರೀಶ್ – 6 ಮದ್ರಾಸ್ ರೆಜಿಮೆಂಟ್, ಇವರಿಗೆ 2 ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ, ಒಂದು ಲಕ್ಷ ರೂಪಾಯಿಯನ್ನು ಜಮೀನಿಗೆ ಕೊಡಬೇಕು. 3 ಲಕ್ಷ ರೂಪಾಯಿಯನ್ನು ಎರಡು ಕಂತಿನಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಸುಮಾರು 5 ವರ್ಷಗಳಿಂದ ಒಂದೂವರೆ ಲಕ್ಷ ರೂಪಾಯಿ ಬಾಕಿ ಇದೆ. ದೇಶ ಕಾಯುವುದಕ್ಕಾಗಿ ಪ್ರಾಣವನ್ನು ಮುಡಿಪಾಗಿಡುವಂಥ ಯೋಧನಿಗೆ ಸುಮಾರು 5 ವರ್ಷಗಳಿಂದ ಅಲೆಸಿ ಅವನಿಗೆ ಇನ್ನು ಸಹ ಒಂದೂವರೆ ಲಕ್ಷ ರೂಪಾಯಿ ಕೊಡುವುದು ಬಾಕಿ ಇದೆ. ಶ್ರೀ ಅಶೋಕ್ ಮಾಯಣ್ಣನವರ್, ಇವರ ತಾಯಿಗೆ ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. ಸರ್ಕಾರ ಭರವಸೆಯನ್ನು ನೀಡಿದ್ದರಲ್ಲಿ ಇನ್ನು ನಾಲ್ಕುವರೆ ಲಕ್ಷ ರೂಪಾಯಿ ಕೊಡುವುದು ಬಾಕಿ ಇದೆ. ದಿನನಿತ್ಯ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಇದು ಸರ್ಕಾರವೇ ಘೋಷಣೆ ಮಾಡಿರತಕ್ಕಂಥ ಒಂದು ಪರಿಹಾರ ಹಣ.

(85 ) 04-03-2016 3.15 MD-RN

**ಕ್ಯಾ.ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸೈನಿಕರು ಮತ್ತು ಸೈನಿಕರ ತ್ಯಾಗ ಮತ್ತು ಬಲಿದಾನವನ್ನು ಗೌರವಿಸುವಂಥ ಸಂಗತಿಗಳನ್ನು, ಅವರನ್ನು ನಾವು ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದ್ದೇವೆಂದು ಮಾನ್ಯ ಪುಟ್ಟಸ್ವಾಮಿಯವರು ಉಲ್ಲೇಖ ಮಾಡುತ್ತಿದ್ದಾರೆ. ಇತ್ತೀಚೆಗೆ ಆದ ಹಿಮಪಾತದಲ್ಲಿ ನಮ್ಮ ರಾಜ್ಯ 3 ಜನ ಸೈನಿಕರು ಮತ್ತು ದೇಶದ 10 ಜನರ ಸೈನಿಕರು ಬಲಿದಾನವಾಗಿರುವುದನ್ನು ನಾವು ಕೇಳಿದ್ದೇವೆ. ಹನುಮಂತಪ್ಪ ಎನ್ನುವ ಸೈನಿಕನ ಮನೆಯವರು ಕೊನೆಯ ಗಳಿಗೆಯಲ್ಲಿ ತನ್ನ ಗಂಡ ಬದುಕಿದ್ದ ಎನ್ನುವ ಖುಷಿಯಲ್ಲಿ ಅವರು ದೆಹಲಿಗೆ ಹೋದರೆ, ಅವರು ಆ ಸೈನಿಕನ ಮೃತ ದೇಹವನ್ನು ತೆಗೆದುಕೊಂಡು ವಾಪಸ್ ಬರಬೇಕಾಯಿತು. ಅಂತ್ಯಸಂಸ್ಕಾರ ಆದ ನಂತರ ಆ ತಾಯಿ "ನಾನು ನನ್ನ ಮಗನನ್ನು ಸೈನಿಕ ಮಾಡುತ್ತೇನೆ." ಎಂದು ಹೇಳುತ್ತಾರೆ. ಅಂದರೆ ಒಬ್ಬ ಸೈನಿಕ ಹೇಗೆ ತನ್ನನ್ನು ತಾನು ಈ ದೇಶಕ್ಕಾಗಿ ತೊಡಗಿಸಿಕೊಳ್ಳುತ್ತಾನೆ ಎಂದು ಹೇಳುತ್ತಿದ್ದೇನೆ. ಆದರೆ ವಿಚಿತ್ರ ಏನೆಂದರೆ, ರಾಜ್ಯ ಸರ್ಕಾರದಲ್ಲಿ ಜವಾಬ್ದಾರಿ ಇರುವಂಥ ಒಬ್ಬ ವ್ಯಕ್ತಿ ಉಡುಪಿಯಲ್ಲಿ ಒಂದು ಸಾರ್ವಜನಿಕ ಹೇಳಿಕೆಯನ್ನು ಕೊಡುತ್ತಾರೆ.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

ಕ್ಯಾ.ಗಣೇಶ್ ಕಾರ್ಣಿಕ್(ಮುಂದುವರೆದಿದೆ)

ಅವರು, ಸೈನಿಕ ಬಡವನಾಗಿರುತ್ತಾನೆ, ಆತ ಹೊಟ್ಟೆ ಪಾಡಿಗಾಗಿ ಸೈನ್ಯಕ್ಕೆ ಸೇರಿರುತ್ತಾನೆ ಎನ್ನುವ ಹೇಳಿಕೆಯನ್ನು ಕೊಡುತ್ತಾರೆ. ನನಗೆ ಆಶ್ಚರ್ಯವಾಯಿತು. ನಮ್ಮ ಮನೆಯಿಂದ ನಾವು ಇಬ್ಬರು ಸೈನ್ಯಕ್ಕೆ ಸೇರಿದ್ದೇವೆ. ಜನರಲ್ ಕಾರ್ಯಪ್ಪ ಈ ದೇಶದ ಮಹಾ ದಂಡನಾಯಕರಾಗಿದ್ದವರು. ಅವರ ಕುಟುಂಬದಿಂದ 12 ಜನ ಸೈನ್ಯಕ್ಕೆ ಸೇರಿದ್ದಾರೆ. ನಾನು ಹೊಟ್ಟೆ ಪಾಡಿಗಾಗಿ ಸೈನ್ಯಕ್ಕೆ ಸೇರಿರಲಿಲ್ಲ. ಆದರೆ ಮಾಧ್ಯಮದ ಸಲಹೆಗಾರ, ಬಡತನವನ್ನು ಈ ರೀತಿ ಹೀಯಾಳಿಸುತ್ತಿದ್ದಾರೆ. ಸೈನಿಕರು ಯಾರು ರ್‍ಯಾಲಿಗೆ ಬರುತ್ತಾರೋ ದಯವಿಟ್ಟು ಅವರನ್ನು, ನೀವು ಹೊಟ್ಟೆ ಪಾಡಿಗಾಗಿ ಬಂದಿದ್ದೀರೋ, ಬಡತನಕ್ಕಾಗಿ ಬಂದಿದ್ದೀರೋ ಎಂದು ಕೇಳಿ ನೋಡಿ. ಪಂಜಾಬ್‌ನಲ್ಲಿ 50–100 ಎಕರೆ ಜಮೀನಿರುವಂತಹ ಮನೆಗಳಿಂದ ಸೈನ್ಯಕ್ಕೆ ಸೇರುವುದೇ ಹೆಮ್ಮೆ ಎಂದು ಸೈನ್ಯಕ್ಕೆ ಸೇರುತ್ತಾರೆ. ಇವತ್ತು ಮಾನ್ಯ ಪುಟ್ಟಸ್ವಾಮಿಯವರು ಏನು ಒಂದು ವಿಷಯ ಎತ್ತಿದ್ದಾರೋ ಆ ಸೈನಿಕರಿಗೆ ಗೌರವ ಕೊಡುವಂಥದ್ದು, ಅವರ ಬಲಿದಾನವನ್ನು ನೆನಪು ಮಾಡಿಕೊಳ್ಳುವಂಥದ್ದು ನಮ್ಮ ದೇಶದ ಎಲ್ಲಾ ನಾಗರಿಕರ ಕರ್ತವ್ಯ. ಆದರೆ, ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿ ಕೀಳು ಪ್ರಚಾರಕ್ಕೋಸ್ಕರ ಈ ರೀತಿ ಕ್ಷುಲ್ಲಕ ಹೇಳಿಕೆಯನ್ನು ಕೊಡುತ್ತಾರೆ ಎಂದರೆ ಅದು ಈ ದೇಶದ ಸೈನಿಕರಿಗೆ ಮಾಡಿರುವಂತಹ, ಬಡತನಕ್ಕೆ ಮಾಡಿರುವಂತಹ ಅವಮಾನ ಎಂದು ಹೇಳಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ನಾನು ಹೇಳುತ್ತಿರುವುದು ಬಡತನದ ಪ್ರಶ್ನೆಗಿಂತ ಹೆಚ್ಚಾಗಿ, ಒಂದು ಸ್ಪಂದನಾತ್ಮಕ ಸರ್ಕಾರ ಎಂದರೆ, ದೇಶವನ್ನು ಕಾಯುತಕ್ಕಂಥ ಯೋಧರ ಬಗ್ಗೆ ಎಷ್ಟು ಸ್ಪಂದನೆ ಮಾಡುತ್ತಿದೆ ಎನ್ನುವುದು ಇಲ್ಲಿರುವ ಪ್ರಶ್ನೆ. ಅವರಿಗೆ ಸ್ಪಂದನೆ ಮಾಡದೇ ಇರುವಂತಹ ಸರ್ಕಾರ ಸಾಧಾರಣ ನಾಗರಿಕರಿಗೆ ಸ್ಪಂದನೆ ಮಾಡುವಂಥದ್ದು ಸತ್ಯಕ್ಕೆ ದೂರವಾದ ಮಾತಲ್ಲವೇ? ಸ್ಪಂದನಾತ್ಮಕ ಸರ್ಕಾರ ಎಂದು ಏತಕ್ಕೋಸ್ಕರ ಗವರ್ನರ್ ಬಾಯಿಯಲ್ಲಿ ಹೇಳಿಸಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. Operation Meghdoot ನಲ್ಲಿ ಕಾರ್ಯನಿರ್ವಹಿಸಿದ medium regiment ನ Yogananda C, ಅವರಿಗೆ ಡಿಕ್ಲೇರ್ ಮಾಡಿರುವುದು ರೂ. 3 ಲಕ್ಷ. ಇದರಲ್ಲಿ ಒಂದೂವರೆ ಲಕ್ಷ ಕೊಟ್ಟು ಇನ್ನೂ ಒಂದೂವರೆ ಲಕ್ಷವನ್ನು ಮೂರು

ವರ್ಷದಿಂದ ಬಾಕಿ ಇಟ್ಟುಕೊಂಡಿದ್ದಾರೆ. ಇದು ಸರ್ಕಾರ ಕೊಟ್ಟಿರುವ ದಾಖಲೆ. ಜಮೀನು ಕೊಡುತ್ತೇವೆ ಎಂದು ಹೇಳಿ, ಅದರ ಮಂಜೂರಾತಿ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಪ್ರಗತಿಯಾಗುವುದಕ್ಕೆ ಇನ್ನೆಷ್ಟು ವರ್ಷ ಬೇಕು? ಯೋಧ ಸತ್ತಮೇಲೆ ತಕ್ಷಣ ಅವನ ಹೆಂಡತಿ–ಮಕ್ಕಳು ನೆಮ್ಮದಿ ಜೀವನ ಮಾಡುವುದಕ್ಕೆ ನಾವು ಸ್ಪಂದಿಸಲಿಲ್ಲ ಎಂದರೆ, ಅಧಿಕಾರಿಗಳು ಮತ್ತು ಸರ್ಕಾರವನ್ನು ಏನು ಮಾಡಬೇಕು? ಯಾವ ಪಾಪದ ಕೊಡ ತುಂಬಿದೆ ಎಂದು ಯೋಚನೆ ಮಾಡಬೇಕಾಗುತ್ತದೆ. ನಾವೆಲ್ಲ ಆರಾಮವಾಗಿ ಊಟ ಮಾಡುತ್ತೇವೆ, ಮಕ್ಕಳು–ಮರಿಗಳೊಂದಿಗೆ ಎಂಜಾಯ್ ಮಾಡುತ್ತೇವೆ. ಆದರೆ ಟಿವಿಯಲ್ಲಿ ನೋಡಿದಾಗ ಆ ಯೋಧ ದೇಶಕ್ಕೋಸ್ಕರ ಮುಳ್ಳು–ಗಿಡ, ಹಳ್ಳ–ದಿಣ್ಣೆಗಳಲ್ಲಿ ತೆವಳುತ್ತಾ ಇರುತ್ತಾನೆ. ಅಂತಹ ಮನುಷ್ಯ ಸತ್ತು ಇಲ್ಲಿಗೆ ಬಂದಾಗ ಅವನನ್ನು 5–6 ವರ್ಷ ಏನು ತಿರುಗಿಸುತ್ತಾರೋ ಅಂತಹ ಅಧಿಕಾರಿಗಳನ್ನು ಶೂಟ್ ಮಾಡಬೇಕು ಅಲ್ಲವೇ? ಇಲ್ಲದೇ ಇದ್ದರೆ ಅಂಥವರನ್ನು ಆ ಕಣಿವೆಗೆ ಹಾಕಿ ಸರ್ವಿಸ್ ಮಾಡಲು ಹಾಕಬೇಕು. ಸರ್ಕಾರ ಏನಾದರೂ ಸಹ ಜೀವಂತ ಇದ್ದರೆ ಇಂತಹ ಅಧಿಕಾರಿಗಳನ್ನು ಕಣಿವೆಗೆ ಹಾಕಬೇಕು.

**ಶ್ರೀ ರಾಮಚಂದ್ರಗೌಡ**:–ಮಾನ್ಯ ಸಭಾಪತಿಗಳೆ, ಬಹಳ ಜನ ಸೈನಿಕರು, ಇಂತಹ ಕಡೆ ಜಾಗ ಇದೆ ಎಂದು ಗುರುತಿಸಿ ಅಲಾಟ್ ಮಾಡಿ ಎಂದು ಹೇಳಿದರೂ ಅಲ್ಲಿಯ ಲೋಕಲ್ ನಾಯಕರು, ಕೊಡಬೇಡಿ ಎಂದು ಹೇಳುತ್ತಾರೆ. ಇಂತಹ ಸುಮಾರು 10 ಜನ ಬಂದು ನನ್ನ ಹತ್ತಿರ ಹೇಳಿದ್ದಾರೆ. ಇವರು ಎಂಥ ಸೀಮೆಯ ನಾಯಕರು? ಅವರು ಯಾರೆಂದು ನಾನು ಹೇಳುವುದಿಲ್ಲ. ಈ ರೀತಿ ಎಲ್ಲಾ ಕಡೆ ನಡೆಯುತ್ತಿದೆ. ಅಷ್ಟು ಕಷ್ಟಪಟ್ಟು ಬಂದಿರುತ್ತಾರೆ, ಜಾಗ ಕೊಡುವುದಕ್ಕೆ ಸರ್ಕಾರದಲ್ಲಿ ಅನುಮತಿ ಇದೆ, ಆದರೂ ಕೊಡುವುದಿಲ್ಲ. ಇದಕ್ಕೆ ಏನು ಮಾಡಬೇಕು? ಸರ್ಕಾರದಲ್ಲಿ ಏನಾದರೂ ನ್ಯಾಯ–ನೀತಿ ಇದೆಯೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮತ್ತೊಬ್ಬರು, regiment ನಲ್ಲಿದ್ದ ನಿರಂಜನ್ ಎನ್ನುವವರಿಗೆ ರೂ. 5 ಲಕ್ಷ ಮಂಜೂರಾಗಿದ್ದರೂ ಇನ್ನು ಒಂದು ಪೈಸೆಯನ್ನು ಬಿಡುಗಡೆ ಮಾಡಿಲ್ಲ, ಅದು ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಈ ರೀತಿ 9 ಜನ ನಮ್ಮ ರಾಜ್ಯದಿಂದ ವೀರಸ್ವರ್ಗವನ್ನು ಸೇರಿದ ಯೋಧರಿಗೆ, ಪರಿಶೀಲನೆಯಲ್ಲಿದೆ ಎಂದು ಹೇಳಿದರೆ, . . .ಅವರು ಖಾತಾ ಮಾಡಿಕೊಳ್ಳಬೇಕಾದರೆ ತಿಂಗಳುಗಟ್ಟಲೆ . . . ಒಬ್ಬ ಯೋಧ ನಾನು ಸೂಸೈಡ್ ಮಡಿಕೊಳ್ಳುತ್ತೇನೆ, ನನಗೆ ಖಾತೆ ಮಾಡಿಕೊಡುವುದಕ್ಕೆ ತೊಂದರೆ ಕೊಡುತ್ತಿದ್ದಾರೆ, ನನ್ನ ಜಮೀನನ್ನು ವಿಲೇಜ್ ಅಕೌಂಟೆಂಟ್ ಬೇರೆಯವರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ ಎನ್ನುವುದನ್ನು ನಾನು ಟಿವಿಯಲ್ಲಿ ನೋಡಿದೆ. ಸರ್ಕಾರ ಇದೆ, ಅಧಿಕಾರಿಗಳಿದ್ದಾರೆ, ಅವರು ಟಿವಿಯನ್ನು

ನೋಡುತ್ತಾರೆ. ಅಲ್ಲಿ ನೋಡಿದ ಮೇಲಾದರೂ ಆ ಯೋಧನಿಗೆ ಆಗಿರುವ ಕಷ್ಟಕ್ಕೆ 24 ಗಂಟೆಯೊಳಗೆ ಸ್ಪಂದಿಸದೇ ಹೋದರೆ ನಾವು ನಿಜವಾಗಲೂ ಮನುಷ್ಯರೇ? ಮಾನವೀಯತೆ ಇದೆಯೇ? ಆದ್ದರಿಂದ, ಸ್ಪಂದನಾತ್ಮಕ ಎಂದು ಹೇಳಿಸಿರುವುದಕ್ಕೆ . . .ನಾನು ದೊಡ್ಡವರದು ಹೇಳುವುದಿಲ್ಲ ಅಥವಾ ಕೆಳಗಿನವರದು ಹೇಳಿದರೆ ಸುಖವಾಗಿರತಕ್ಕಂಥವರದ್ದು ಹೇಳುತ್ತಿಲ್ಲ. ಸ್ಪಂದನೆ ಎಷ್ಟರಮಟ್ಟಿಗೆ ಇದೆ ಎನ್ನುವುದಕ್ಕೆ ಈ ದೇಶವನ್ನು ಕಾಯುತ್ತಿರುವ ಯೋಧರಿಗೆ ಆಗುತ್ತಿರುವ ಅನ್ಯಾಯದ ಒಂದು ವಿಚಾರವನ್ನು ನಾನು ಉದಾಹರಣೆ ಕೊಟ್ಟಿದ್ದೇನೆ. ಇಂತಹ ಹಲವಾರು ಉದಾಹರಣೆಗಳಿವೆ. ರಾಜ್ಯಪಾಲರ ಭಾಷಣದಲ್ಲಿ, ಸ್ಪಂದನೆ ಎಂದು ಬಳಸಿರುವುದು ಸತ್ಯಕ್ಕೆ ದೂರವಾದ ವಿಚಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಇವತ್ತು ನಾವು ಪ್ರತಿಯೊಂದಕ್ಕೂ ಪೊಲೀಸ್ ಇಲಾಖೆಯನ್ನು ಜವಾಬ್ದಾರರನ್ನಾಗಿ ಮಾಡುತ್ತಿದ್ದೇವೆ. ನಾವು ಕಾನೂನನ್ನು ನಾಗರಿಕರಿಗೆ ಅಥವಾ ಸಾರ್ವಜನಿಕರಿಗೆ ಕೊಟ್ಟಾಗ ಮುಂದೆ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆಯೇ ಎಂದು ರಾಜಕೀಯವಾಗಿ ಎಲ್ಲಾ ರಾಜಕೀಯ ಪಕ್ಷಗಳು ಯೋಚನೆ ಮಾಡಬೇಕಾಗುತ್ತದೆ. ಯಾರೂ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅಮಾಯಕತ್ವ ಮತ್ತು ಕಾನೂನಿನ ಉಲ್ಲಂಘನೆ ಆಗುವುದು ಅಲ್ಲಿಂದ ಪ್ರಾರಂಭವಾಗುತ್ತದೆ. ನಿನ್ನೆ ನಡೆದ ಒಂದು ಘಟನೆ. ಅವರು ಬೇಡಿಕೆಗಳನ್ನು ಇಟ್ಟ ಕಾಲದಲ್ಲಿ ಎರಡೂ ಕಡೆಯವರನ್ನು ಸೇರಿಸಿ, ಮಾತನಾಡುವ ಜವಾಬ್ದಾರಿ ಸರ್ಕಾರಕ್ಕೆ ಇಲ್ಲದೇ ಇದ್ದಾಗ ಇಂತಹ ಪರಿಸ್ಥಿತಿ ಬರುತ್ತದೆ. ಮುಂದೇನಾಗುತ್ತದೆ, ಏನು ಸಮಸ್ಯೆ ಉದ್ಭವವಾಗುತ್ತದೆ ಎಂದು ಗೊತ್ತಿದ್ದೂ, ಮಂತ್ರಿಗಳಾಗಿದ್ದವರು ಎರಡೂ ಕಡೆಯವರನ್ನು ಕರೆದು ಮಾತನಾಡುವಂತಹ ಸೌಜನ್ಯವನ್ನು ತೋರಿದ್ದರೆ ನಿನ್ನೆ ಅನಾಹುತ ಆಗುತ್ತಿತ್ತೇ? ಹೊಡೆದಾಟ ಆಗುತ್ತಿತ್ತೇ? ಲಾಠಿ ಚಾರ್ಜ್ ಆಗುತ್ತಿತ್ತೇ? ಇದನ್ನೇ ಸ್ಪಂದನೆ ಎಂದು ಕರೆಯುತ್ತೇವೆ. ಜವಾಬ್ದಾರಿಯುತ ಸರ್ಕಾರ ಇದ್ದಾಗ ಸಮಾಜದಲ್ಲಿ ಏನು ನಡೆಯುತ್ತಿದೆ, ಧರಣಿ ನಡೆಯುತ್ತಿದ್ದೆಯೇ, ಅದರಲ್ಲಿ ಅನ್ಯಾಯ ಇದೆಯೇ, ನ್ಯಾಯ ಇದೆಯೇ ಎಂದು ಪರಿಶೀಲನೆ ಮಾಡಿ, ಸಂಬಂಧಪಟ್ಟ ಇಲಾಖೆಯ ಇನ್‌ಚಾರ್ಜ್ ಮಂತ್ರಿಗಳು ಅದರ ಬಗ್ಗೆ ಸ್ಪಂದನೆ ಮಾಡಿ, ತನ್ನ ಕೈಯಲ್ಲಿ ಆಗದೇ ಇದ್ದರೂ ಮುಖ್ಯಮಂತ್ರಿಗಳ ಹತ್ತಿರ ತೆಗೆದುದಕೊಂಡು ಹೋಗಿ ಚಾಕಚಕ್ಯತೆಯಿಂದ ಮಾಡಿಸಬೇಕು. ಹಾಗೆ ಮಾಡದೇ ಇದ್ದರೆ ಅವರನ್ನು ಮಂತ್ರಿ ಎಂದು ಕರೆಯಬಹುದೇ? ಅವರಿಗೆ ಈ ರಾಜ್ಯದ ಜವಾಬ್ದಾರಿ ಇದೆ ಎಂದು ಹೇಳಬಹುದೇ? ಕಾನೂನಿನಲ್ಲಿ ಇವತ್ತು ವೈಫಲ್ಯಗಳಿವೆ. ಟಿವಿಯಲ್ಲಿ ನಾವು ಹಗಲಲ್ಲೇ ಮನೆಯಿಂದ ಎಳೆದುಕೊಂಡು ಬಂದು ಚಾಕುವಿನಿಂದ

ತಿವಿಯುವುದನ್ನು ನೋಡುತ್ತಿದ್ದೇವೆ. ಅಂಥದ್ದನ್ನು ಒಂದು ಸಲ ನೋಡಿ ಇಡೀ ದಿನ ನನಗೆ ನಿದ್ದೆ ಮಾಡುವುದಕ್ಕೆ ಆಗಲಿಲ್ಲ. ಓಡಾಡಿಕೊಂಡು ಬಡಿದಾಡುತ್ತಾರೆ. ಇಲ್ಲಿ ವೈಫಲ್ಯ ಎಲ್ಲಿದೆ? ಅಧಿಕಾರಿಗಳಲ್ಲಿ ಏನಾದರೂ ವೈಫಲ್ಯ ಇದೆಯೇ? ರಾಜಕಾರಣಿಗಳಲ್ಲಿ ವೈಫಲ್ಯ ಇದೆಯೇ? ಅಥವಾ ಮಂತ್ರಿಗಳೇನಾದರೂ ಅವರಿಗೆ ರಾಜಕೀಯವಾಗಿ ಸಪೋರ್ಟ್ ಮಾಡುತ್ತಿದ್ದಾರೆಯೇ ಅಥವಾ ಇದರಲ್ಲಿ ಅಧಿಕಾರಿಗಳದ್ದೇನಾದರೂ ವೈಫಲ್ಯಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ನೋಡಬೇಕು ಅಲ್ಲವೇ? ನಾನು ಒಂದನ್ನು ನೋಡಿದ್ದೇನೆ. ಒಂದಾನೊಂದು ಕಾಲದಲ್ಲಿ ರಾಜ್ಯದಲ್ಲಿ ಕೊತ್ವಾಲ್ ಅಂಥವರು, ಜಯರಾಜ್ ಅಂಥವರು, ರಾಮ್‌ಕುಮಾರ್ ಅಂತಹ ಘಟಾನುಘಟಿ ರೌಡಿಗಳಿದ್ದರು. 1982 ರಿಂದ 1988 ರಲ್ಲಿ ನಾನು ಇಲ್ಲೇ ಕುಳಿತುಕೊಳ್ಳುತ್ತಿದ್ದೆ. ಆಗ ಜನತಾ ಸರ್ಕಾರ ಇತ್ತು. ಬಿ.ರಾಚಯ್ಯನವರು ಗೃಹ ಮಂತ್ರಿಯಾಗಿದ್ದರು. ಅವರ ಕಾಲದಲ್ಲಿ ಎಲ್ಲಾ ರೌಡಿಗಳನ್ನು ರೌಡಿಗಳಿಂದಲೇ ಎನ್‌ಕೌಂಟರ್ ಮಾಡಿಸಿ ಮುಗಿಸಿದರು. ನಾನು ಹೆಸರು ಹೇಳುವುದಿಲ್ಲ, ಒಬ್ಬ ಪ್ರಬಲವಾದ ಮಂತ್ರಿ ನಡೆಸುತ್ತಿದ್ದ ಮಟ್ಕಾವನ್ನು ರೇಡ್ ಮಾಡಿಸಿದರು. ಅವರು ಮುಖ್ಯಮಂತ್ರಿ ಹತ್ತಿರ ಹೋಗಿ, ರಾಚಯ್ಯನವರು ನಮ್ಮ ಮನೆಯನ್ನೇ, ಮಟ್ಕಾ ಆಡಿಸುತ್ತಿದ್ದ ಕ್ಲಬ್‌ಗಳನ್ನು ರೇಡ್ ಮಾಡಿಸಿದ್ದಾರೆ ಎಂಬ ಮಾತನ್ನು ಹೇಳಿದರು. ಆಗ ರಾಮಕೃಷ್ಣ ಹೆಗ್ಗಡೆಯವರು, ಅವರು ನನಗಿಂತ ಸೀನಿಯರ್ ಆಗಿದ್ದಾರೆ, ಅವರ ಕೈ ಕೆಳಗೆ ರಾಜ್ಯ ಸಚಿವ ಆಗಿದ್ದೆ, ಅಂಥದ್ದರಲ್ಲಿ ಅವರು ತೆಗೆದುಕೊಳ್ಳುವ ಕ್ರಮಕ್ಕೆ ಅಡ್ಡಿ ಬರುವುದಿಲ್ಲ, ಕ್ರಮ ತೆಗೆದುಕೊಳ್ಳಲಿ ಎಂದು ಹೇಳಿದರು. ಇಚ್ಛಾಶಕ್ತಿ ಎಂದರೆ ಇದೆ. ಇಚ್ಛಾ ಶಕ್ತಿ ಬೇಕು. ಕಾನೂನು, ಸುವ್ಯವಸ್ಥೆ ಕಾಪಾಡಬೇಕಿದ್ದರೆ ಬಿ.ರಾಚಯ್ಯನವರಿಗಿದ್ದಂಥ ಗಟ್ಟಿತನ ಬೇಕು ಮತ್ತು ಅದಕ್ಕೆ ಬ್ಯಾಕ್‌ಅಪ್ ಕೂಡ ಹಾಗೆಯೇ ಇರಬೇಕು. ನನಗೆ ಹೆಚ್ಚು ಸಮಯ ಇಲ್ಲದೇ ಇರುವುದರಿಂದ ಚುಟುಕಾಗಿ ಮಾತನಾಡುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಹಿಂದುಳಿದವರ ಸರ್ಕಾರ, ಅಹಿಂದ ಸರ್ಕಾರ ಎನ್ನುವ ಒಂದು ಮಾತು ಇವತ್ತು ಬರುತ್ತಿದೆ. ಅಹಿಂದ ಸರ್ಕಾರದಲ್ಲಿ, ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಒತ್ತನ್ನು ಕೊಡುವ ಮುಖ್ಯಮಂತ್ರಿಗಳ ಕಳಕಳಿಯನ್ನು ನಾನು ಒಪ್ಪುತ್ತೇನೆ. ಈ ಕುರಿತು ಆತ್ಮವಂಚನೆ ಮಾಡಿಕೊಂಡು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

(ಮುಂದು . . .)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ**(ಮುಂದು):-

ಆದರೆ implementation ಎಷ್ಟು ಆಗುತ್ತಿದೆ ಎಂಬುದರ ಬಗ್ಗೆ again ಸ್ಪಂದನ ಮತ್ತು responsive Government ಎನ್ನುವುದಕ್ಕೆ ಉತ್ತರದಲ್ಲಿರುವ ಕೆಲವು ಉದಾಹರಣೆಗಳನ್ನು ಹೇಳುತ್ತೇನೆ, ಸರ್ಕಾರ ಉತ್ತರ ಹೇಳಿರತಕ್ಕಂಥದ್ದು. ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯಗಳಿಗೆ ಹಣವನ್ನು ಹಂಚಿಕೆ ಮಾಡಿದ್ದಾರೆ. ಹಿಂದುಳಿದ ವರ್ಗಕ್ಕೆ 170 ಅರ್ಜಿಗಳು ಬಂದಿವೆ. ವಿಲೇ ಮಾಡಿರತಕ್ಕಂಥದ್ದು 19. ಇನ್ನು 151 ಅರ್ಜಿಗಳು ಬಾಕಿ ಇವೆ. ಎಸ್‌ಸಿ-ಎಸ್‌ಟಿಗೆ 187 ಅರ್ಜಿಗಳು ಬಂದಿವೆ. 12 ಅರ್ಜಿಗಳು ವಿಲೇವಾರಿ ಆಗಿದೆ. ಇನ್ನು ಬಾಕಿ 175 ಇದೆ. ಇದನ್ನು ನಾವು ಸ್ಪಂದನ ಸರ್ಕಾರ ಮತ್ತು responsible Government ಎಂದು ಹೇಳಬಹುದೆ? ಅಹಿಂದಕ್ಕೆ ಇದೊಂದು ಉದಾಹರಣೆ. ಎಸ್‌ಸಿ-ಎಸ್‌ಟಿ, ಹಿಂದುಳಿದ ವರ್ಗ. ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪ್ರತಿ ತಿಂಗಳು ಕೂಡ ಸಭೆಯಲ್ಲಿ ಏನು ಪ್ರಗತಿಯಾಗಿದೆ, ಏನು ಕೆಲಸ ಆಗಿದೆ, ಎಷ್ಟು ಬಾಕಿ ಇವೆ ಎಂದು review ಮಾಡುತ್ತಿದ್ದೆವು. ನಾನು ಇದ್ದಷ್ಟು ದಿವಸದಲ್ಲಿ ಒಂದೇ ಒಂದು ಕಡತವನ್ನು ನಾನು ಮನೆಗೆ ತೆಗೆದುಕೊಂಡು ಹೋಗುತ್ತಿರಲಿಲ್ಲ, ಅವತ್ತಿನದು ಅವತ್ತೆ ಕಡತವನ್ನು ಕ್ಲಿಯರ್ ಮಾಡಿ ರಾತ್ರಿ 10 ಗಂಟೆ, 11 ಗಂಟೆ ಆಗಲಿ ಹೋಗುತ್ತಿದ್ದೆ. ಹಲವಾರು ಮಾಧ್ಯಮದವರು ನನ್ನ ಕಛೇರಿಗೆ ನುಗ್ಗುತ್ತಿದ್ದರು. ನಾನು ಕಛೇರಿಯಲ್ಲಿದ್ದರೆ 11 ಗಂಟೆ ಆಗಲಿ ಕಡತವನ್ನು ಕ್ಲಿಯರ್ ಮಾಡದೆ ಹೋಗುತ್ತಿರಲಿಲ್ಲ. ನಾನು ಹಲವಾರು ಸಲ ಇದನ್ನು ಪ್ರಶ್ನೆ ಮಾಡಿದ್ದೇನೆ. ಆದರೆ ಇದರ ಬಗ್ಗೆ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಜವಾಬ್ದಾರಿ ಇಲ್ಲವೆ? ಇದು ಈ ವರ್ಷದ್ದು. ಕಳೆದ ವರ್ಷ ಒಂದು ಪ್ರಶ್ನೆಯನ್ನು ಕೇಳಿದ್ದೆ. 232 ಅರ್ಜಿಗಳಲ್ಲಿ 21 ವಿಲೇವಾರಿ ಆಗಿವೆ, ಮಾನ್ಯ ಉಗ್ರಪ್ಪನವರೆ ಅಹಿಂದಕ್ಕೆ ಇಂತಹ ಪರಿಸ್ಥಿತಿ ಬರಬಾರದು ಎನ್ನುವುದು ನನ್ನ ಆಶಯ. ನೀವು ಅಹಿಂದ ಎಂದು ಹೇಳಿದರೆ ಎಲ್ಲರನ್ನು ಸಮಾನವಾಗಿ ಕಾಣಬೇಕು. ರಾಜ್ಯದ ಸುಮಾರು 14 ಲಕ್ಷ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ನೇರ ನಗದು ವರ್ಗಾವಣೆ ಮೂಲಕ ವಿದ್ಯಾರ್ಥಿವೇತನಗಳು ಮತ್ತು ಶುಲ್ಕ ಮರುಪಾವತಿಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆಂದು ಮಾನ್ಯ ಬಸವರಾಜ

ಹೊರಟ್ಟಿಯವರು ಹೇಳಿದರು. ಎಸ್‌ಸಿ-ಎಸ್‌ಟಿ, ಹಿಂದುಳಿದ ವರ್ಗಕ್ಕೆ ಎಷ್ಟು ವಿದ್ಯಾರ್ಥಿವೇತನ ಕೊಟ್ಟಿದ್ದಾರೆ, ಎಷ್ಟು ಅವರ ಅಕೌಂಟ್‌ಗೆ ನೇರವಾಗಿ ಹೋಗಿದೆ ಎನ್ನುವುದು ಎಲ್ಲೂ ಅಂಕಿಅಂಶಗಳಿಲ್ಲ. ಇದೊಂದೆ ಅಲ್ಲ, ಎಲ್ಲಾ ಇಲಾಖೆಗಳನ್ನು ನಾವು ಪರಿಶೀಲನೆ ಮಾಡಿದಾಗ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಬೇಕಾಗಿದ್ದರೆ ಮೂರು ವರ್ಷಗಳಲ್ಲಿ ಏನು ಸಾಧನೆ ಮಾಡಿದ್ದೇವೆ, ಮುಂದೆ ಏನು ಮಾಡುತ್ತೇವೆ ಎನ್ನುವುದನ್ನು ಹಿಂದಿನ ಅಂಕಿಅಂಶಗಳನ್ನಾದರೂ ಕೊಡಬೇಕು. ಇದರಲ್ಲಿ ಎಲ್ಲಾದರೂ ಒಂದು ಅಂಕಿಅಂಶಗಳಿವೆಯೇ? ಅಹಿಂದಕ್ಕೆ ಏನೇನು ಮಾಡಿದ್ದೇವೆ, ಹಿಂದುಳಿದ ವರ್ಗಕ್ಕೆ ಏನು ಮಾಡಿದ್ದೇವೆ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಏನು ಮಾಡಿದ್ದೇವೆ ಐಟಂ ನಂಬರ್ 31, ಪೇಜ್ ನಂಬರ್ 17 ರಲ್ಲಿ ಎಲ್ಲಾದರೂ ಒಂದು ಅಂಕಿಅಂಶ ಇದ್ದರೆ ದಯವಿಟ್ಟು ತೋರಿಸಿ? ಇದು ಹೇಗೆ ಅಹಿಂದ ಆಯಿತು? ಸಮಯದ ಅಭಾವ ಇರುವುದರಿಂದ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನಾನೇ ಹೇಳಬೇಕು, ನಮ್ಮ ಕಡೆಯಿಂದ ಹೇಳಬೇಕಾದ ಅವಶ್ಯಕತೆ ಇದೆ. ಅದೇನೆಂದರೆ, ಇವತ್ತು ಸಾಮಾಜಿಕ, ಆರ್ಥಿಕ ಸರ್ವೆಯನ್ನು ಮಾಡಿಸುತ್ತಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಇದು ಏತಕೋಸ್ಕರ? ಸಮಾಜದಲ್ಲಿನ ಸಮಾನತೆಗೆ ಸಮಾಜದಲ್ಲಿರತಕ್ಕಂಥ ಏರುಪೇರುಗಳನ್ನು ಕಡಿಮೆ ಮಾಡುವಂಥದ್ದಕ್ಕೆ ಅಂಕಿಅಂಶಗಳನ್ನು ಕ್ರೋಢಿಕರಿಸತಕ್ಕಂಥದ್ದು. ಕೆಲವರು ಹೇಳುತ್ತಿದ್ದಾರೆ, ಮಾನ್ಯ ಸಿದ್ದರಾಮಯ್ಯನವರು ಜಾತಿಗಳನ್ನು ವಿಂಗಡಿಸುವುದಕ್ಕೆ ಹೊರಟಿದ್ದಾರೆ, ಒಂದು ಜಾತಿಯನ್ನು ಕಡಿಮೆ ಮಾಡುವುದಕ್ಕೆ ಅಥವಾ ಯಾರಿಗೋ favor ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ವಿಚಾರಗಳನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಇದು ಮಾನ್ಯ ಸಿದ್ದರಾಮಯ್ಯನವರು ಮಾಡಿದ್ದಲ್ಲ. 1993ರಲ್ಲಿ ಹಲವಾರು Writ Petition ಗಳು ಸುಪ್ರೀಮ್‌ಕೋರ್ಟ್‌ಗೆ ಹೋದಾಗ ಪ್ರತಿ ರಾಜ್ಯಗಳಲ್ಲಿ ಪರ್ಮನೆಂಟ್ ಆಗಿ ಹಿಂದುಳಿದ ವರ್ಗದ ಆಯೋಗವನ್ನು ರಚನೆ ಮಾಡಬೇಕು. ಆ ಹಿಂದುಳಿದ ವರ್ಗದ ಆಯೋಗ ಪ್ರತಿ ಹತ್ತು ವರ್ಷಕ್ಕೆ ಒಂದು ಸಲ ಏನು ಹಿಂದುಳಿದ ವರ್ಗದ ಲಿಸ್ಟ್ ಇದೆ ಆ ಲಿಸ್ಟ್‌ನ್ನು revise ಮಾಡಬೇಕೆಂದು ಸುಪ್ರೀಮ್‌ಕೋರ್ಟ್‌ನಲ್ಲಿ ಆದೇಶ ಮಾಡಿದ್ದಾರೆ. Revise ಮಾಡತಕ್ಕಂಥ ಉದ್ದೇಶವೇನೆಂದರೆ, ಯಾರು ಮುಂದುವರೆದಿದ್ದಾರೆ, ಹತ್ತು ವರ್ಷದಲ್ಲಿ ಅವರು suffer ಆಗಿದ್ದರೆ ಅವರು ಹಿಂದುಳಿದ ವರ್ಗಕ್ಕೆ ಬರುತ್ತಾರೆ. ಯಾರು ಹಿಂದುಳಿದ ವರ್ಗದ ಟ್ಯಾಗ್‌ನಲ್ಲಿ

over representation ಆಗಿದ್ದಾರೆ ಅವರನ್ನು ಹಿಂದುಳಿದ ವರ್ಗಕ್ಕೆ ಸೇರಿಸತಕ್ಕಂಥದ್ದು ಎಂದು ಸುಪ್ರೀಮ್‌ಕೋರ್ಟ್‌ನಲ್ಲಿ ಆದೇಶ ಇದೆ. Terms of reference ನಲ್ಲಿ. 1993 ರಲ್ಲಿ ಒಂದು ಆಯೋಗ ಆಯಿತು. ವೆಂಕಟಸ್ವಾಮಿ ಆಯೋಗವನ್ನು ಮಾಡಿದರು. 2004 ರಲ್ಲಿ ಆ list ಅನ್ನು review ಮಾಡಿದರು. ಮತ್ತೆ 2014ಕ್ಕೆ ಮಾಡಬೇಕಾಗಿತ್ತು. ಹಿಂದಿನ ಹತ್ತು ವರ್ಷಗಳಲ್ಲಿ ಸರ್ವೆಯನ್ನು ಮಾಡಿರಲಿಲ್ಲ. ಈಗ 2014ರಲ್ಲಿ ಮಾಡಿರತಕ್ಕಂಥ ಉದ್ದೇಶವೇನೆಂದರೆ ಆಯಾಯ ಕಮ್ಯುನಿಟಿಯಲ್ಲಿ ಆರ್ಥಿಕವಾಗಿ ಎಷ್ಟು ಬಲಿಷ್ಟವಾಗಿದ್ದಾರೆ, ಸುಮಾರು 30-40 yardstick, ಅವರಿಗೆ ಮನೆಗಳು ಯಾವ ರೀತಿ ಇದೆ, ಯಾವುದೋ ಒಂದು ಲೆವಲ್‌ನಲ್ಲಿ, ವಿದ್ಯೆಯ ಲೆವಲ್‌ನ್ನು ತೆಗೆದುಕೊಂಡರೆ ಎಸ್‌ಎಸ್‌ಎಲ್‌ಸಿ, ಪಿ.ಯು.ಸಿ, ಪದವಿ, ಯಾವುದೋ ಒಂದು ಲೆವಲ್‌ನ್ನು ತೆಗೆದುಕೊಂಡಾಗ ಕರ್ನಾಟಕ ರಾಜ್ಯದಲ್ಲಿ ಇವರು average ಎಷ್ಟು ಪರ್ಸೆಂಟ್ ಬರುತ್ತಿದ್ದಾರೆ, ಮತ್ತು ಆಯಾಯ community ನವರು ಎಷ್ಟು average ಬಂದಿದ್ದಾರೆ, ಇದು ಸ್ಟೇಟ್ ಲೆವಲ್‌ಗಿಂತ ಕಡಿಮೆ ಇದ್ದಾರೆಯೇ, ಆವರೇಜ್‌ಗಿಂತ ಹೆಚ್ಚು ಇದ್ದಾರೆಯೇ ಅದರ ಮೇಲೆ ಸಾಮಾಜಿಕವಾಗಿ ವಿದ್ಯೆಯಲ್ಲಿ ಹಿಂದುಳಿದವರು ಎಂದು ಸೇರಿಸತಕ್ಕಂಥದ್ದು ಇದೆ. ಸರ್ಕಾರಿ ನೌಕರಿಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಯಾರು ಪಡೆದುಕೊಂಡಿದ್ದಾರೆ, ಪಡೆದುಕೊಳ್ಳದೆ ಇರತಕ್ಕಂಥವರಿಗೆ ಮೀಸಲಾತಿಯನ್ನು ಕೊಟ್ಟು ಅವರನ್ನು ಮೇಲಕ್ಕೆ ತರಬೇಕು, ಸಮ ಮಾಡಬೇಕು, ಇದೇ ಸಾಮಾಜಿಕ ಸಮಾನತೆ. ಈ ಸಮಾನತೆ ಮಾಡಬೇಕು ಎನ್ನವುದಕೋಸ್ಕರವಾಗಿ ಆ ಸರ್ವೆ ಮಾಡುತ್ತಿದ್ದಾರೆಯೇ ಹೊರತು ಇದರಲ್ಲಿ ಯಾರಿಗಾದರೂ ಅನ್ಯಾಯ ಮಾಡಬೇಕೆನ್ನುವುದಾಗಲಿ, ಯಾರಿಗಾದರೂ ಕೆಳಗೆ ತುಳಿಯಬೇಕು ಎನ್ನತಕ್ಕಂಥದ್ದಲ್ಲ. ಯಾವ ಮುಂದುವರೆದ community ಇವತ್ತಿನ ದಿವಸ ಏನಿದೆ category 1 and 2A ಪ್ರಸ್ತುತ ಲಿಸ್ಟ್‌ನಲ್ಲಿ ಅವರಿಗೆ ಈ ಸರ್ವೆಯಲ್ಲಿ ಏನಾದರೂ ಅನ್ಯಾಯವಾಗಿದ್ದರೆ, 1994 ರಿಂದ ಜಾರಿಯಲ್ಲಿರತಕ್ಕಂಥ ಸರ್ಕಾರಿ ಆಜ್ಞೆ ಏನಿದೆ reservation policy, ಇದುವರೆಗೆ 20 ವರ್ಷಗಳಿಂದ ಏನಿದೆ ಆ 20 ವರ್ಷದಲ್ಲಿ ಯಾವ ಹಿಂದುಳಿದ ವರ್ಗದವರೇನಾದರೂ ಹೆಚ್ಚಿನ ಸೌಲಭ್ಯಗಳನ್ನು ಸರ್ಕಾರಿ ನೌಕರಿಯಲ್ಲಿ ಪಡೆದಿದ್ದರೆ ಅವರ ಕಮ್ಯುನಿಟಿಗಿಂತ, state average ಗಿಂತ ಅವರು ಮೇಲೆ ಹೋಗಿದ್ದರೆ ಅವರನ್ನು ತೆಗೆದು ಹಾಕುವಂಥದ್ದೇ ಪಾಲಿಸಿ. ಯಾರು ಕಡಿಮೆ ಇದ್ದಾರೆ ಅವರನ್ನು

ಸೇರಿಸತಕ್ಕಂಥದ್ದೇ ಈ ಸರ್ವೆಯ ಮಹತ್ವದ ವಿಚಾರ. ಇದು ಸುಪ್ರೀಮ್ ಕೋರ್ಟ್ ಆದೇಶ. ಆದ್ದರಿಂದ ಈ ಸರ್ವೆ ಮಾಡತಕ್ಕಂಥದ್ದನ್ನು ನಾವೆಲ್ಲಾ ಸ್ವಾಗತ ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಸಿದ್ದರಾಮಯ್ಯನವರು ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಒಪ್ಪುತ್ತಿಲ್ಲ. ಅದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಸಾಮಾಜಿಕ ನ್ಯಾಯಕೋಸ್ಕರವಾಗಿ ಇದನ್ನು ಮಾಡುತ್ತಿರತಕ್ಕಂಥದ್ದು. ಇವತ್ತು ಉತ್ತರ ಪ್ರದೇಶದಲ್ಲಿ ಎಲ್ಲರೂ ಮೀಸಲಾತಿಯನ್ನು ಕೇಳುವುದಕ್ಕೆ ಹೊರಟಿದ್ದಾರೆ. ಹೊಟ್ಟೆ ತುಂಬ ಊಟ ಮಾಡಿರತಕ್ಕಂಥವನು ಸ್ವಲ್ಪ ಖಾಲಿ ಇದೆ, ನಾನೇ ಊಟ ಮಾಡಬೇಕು ಎನ್ನತಕ್ಕಂಥವರು ಒಂದು ಕಡೆ. ನಮಗೆ ಹೊಟ್ಟೆಗೆ ಊಟವೇ ಇಲ್ಲ ಎನ್ನತಕ್ಕಂಥವರು ಒಂದು ಕಡೆ. ಊಟ ಇಲ್ಲದಿರುವವನಿಗೆ ಅರ್ಧ ಹೊಟ್ಟೆ ಊಟ ಹಾಕಿ. ಅವನನ್ನು ಸ್ವಲ್ಪ ಹಸಿವಿನಿಂದ ಪಾರು ಮಾಡತಕ್ಕಂಥದ್ದು ಸಾಮಾಜಿಕ ನ್ಯಾಯ ಮತ್ತು ಸಮಾನತೆ. ಆ ಸಮಾನತೆಗೋಸ್ಕರವಾಗಿ ಅನ್ನಭಾಗ್ಯ ಯೋಜನೆಯನ್ನು ತಂದಿರುವುದು. ಅದು ಬೇರೆ ವಿಚಾರ. ಇವತ್ತು reservation policyಯ ಉದ್ದೇಶವೇನೆಂದರೆ, ಸಮಾಜದಲ್ಲಿ ಸರ್ಕಾರದಿಂದ ಸಿಗತಕ್ಕಂಥ ಸೌಲಭ್ಯದಿಂದ ವಂಚಿತರು ಯಾರಿದ್ದಾರೆ, ಅಂತಹವರನ್ನು ಸ್ವಲ್ಪ ಮೇಲಕ್ಕೆ ತರತಕ್ಕಂಥಾದ್ದು ಈ ಸಮಾನತೆಯ ಗುಟ್ಟು. ಆ ಸಮಾನತೆಗೋಸ್ಕರವಾಗಿ Socio Economic Survey ಮಾಡತಕ್ಕಂಥಾದ್ದು. Socio Economic Survey ವರದಿಯ ಆಧಾರದ ಮೇಲೆ ರಿಸರ್ವೇಶನ್ ಕೊಡತಕ್ಕಂಥಾದ್ದು, ಇವತ್ತು ಕೆಳಗಡೆ ಇರತಕ್ಕಂಥವರು, ಸಮಾಜದಲ್ಲಿ ತುಳಿತಕ್ಕೆ, ಶೋಷಣೆಗೆ ಒಳಪಟ್ಟ ಜನಗಳಿಗೆ ರಿಸರ್ವೇಶನ್ ಇಟ್ಟಿರುವುದು. ಏನೋ ಅವರಿಗೆ ವಿಶೇಷವಾಗಿ ಮಾಡಿ ಊಟ ಮಾಡಿದವರಿಗೆ ಮಾಡಿ ಎಂದು ಹೇಳಿದರೆ ಸರ್ಕಾರಿ ನೌಕರಿಯಲ್ಲಿ ಶೇಕಡ 80ರಷ್ಟು ಇರುವ ಒಂದು ವರ್ಗಕ್ಕೆ ಪುನಃ ಅವರನ್ನು ರಿಸರ್ವೇಶನ್‌ನಲ್ಲಿ ಸೇರಿಸಿದರೆ ಅವರು ಎಲ್ಲಿಗೆ ಹೋಗಬೇಕು? ಶೇಕಡ 70ಕ್ಕಿಂತ ಕೆಳಗಡೆ ಇರುವವರು ಎಲ್ಲಿಗೆ ಹೋಗಬೇಕು. ಅದಕ್ಕೋಸ್ಕರ ಅವರಿಗೆ ರಿಸರ್ವೇಶನ್ ಕೊಟ್ಟು ಮೇಲಕ್ಕೆ ತರತಕ್ಕಂಥ ಉದ್ದೇಶವಿದೆ. ಆದ್ದರಿಂದ ಉತ್ತರ ಭಾರತದಲ್ಲಿ ಆಗುತ್ತಿರುವ ವಿಚಾರದ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ reservation policy ಏನು ಎನ್ನುವುದು ದಿವಂಗತ ದೇವರಾಜ ಅರಸುರವರ ಕಾಲದಿಂದಲೂ ಎಲ್ಲರಿಗೂ ಅರ್ಥವಾಗಿದೆ. ಆ ತರಹ ಒಂದು ಕೆಟ್ಟ ಭಾವನೆ ಬರುವುದಿಲ್ಲವೆಂದು ಭಾವಿಸಿದ್ದೇನೆ. ಆದರೂ ಸಹ ಸಮಾನತೆಗೋಸ್ಕರ ನಮ್ಮ ಸರ್ಕಾರ

ಕೆಲಸವನ್ನು ಮಾಡುತ್ತಿದೆ ಎನ್ನುವ ಒಂದು ಪದ ಇಲ್ಲಿರುವುದರಿಂದ ನಾನು ಈ ವಿಚಾರವನ್ನು ಹೇಳಿದ್ದೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ತಮಗೆ ವಂದಿಸಿ, ನಾನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಂಡಿಸಿರುವಂಥ ಈ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಸಹಕಾರವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

## ವರದಿಯನ್ನೊಪ್ಪಿಸುವುದು

**ಶ್ರೀ ಮರಿತಿಬ್ಬೇಗೌಡ(ಮಾನ್ಯ ಉಪಸಭಾಪತಿಗಳು ಹಾಗೂ ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ):-** ಮಾನ್ಯ ಸಭಾಪತಿಯವರೇ, ಖಾಸಗಿ ಸದಸ್ಯರುಗಳ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಒಪ್ಪಿಸಲಾಯಿತು.

(ಮುಂದು)

088/04-03-2016/3-50/bkp-vk

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಡಾ॥ ಮತ್ತಿಕಟ್ಟಿ ವೀರಣ್ಣನವರು ತಂದಿರತಕ್ಕಂತಹ ವಂದನಾ ನಿರ್ಣಯದ ಬಗ್ಗೆ ಮಾತನಾಡಲಿಕ್ಕೆ ಬಯಸುತ್ತೇನೆ. ಈ ಒಂದು ಸರ್ಕಾರದ ಹಲವಾರು ಕಾರ್ಯಕ್ರಮಗಳ ಬಗ್ಗೆ, ಹಲವಾರು ನಾಯಕರುಗಳು ಪ್ರಸ್ತಾಪ ಮಾಡಿದರು. ನಮ್ಮ ಡಾ॥ ಮತ್ತಿಕಟ್ಟಿ ವೀರಣ್ಣನವರು ಒಂದು ಮಾತನ್ನು ಹೇಳಿದರು. 'ಹಸಿವು ಮುಕ್ತ ಕರ್ನಾಟಕ ರಾಜ್ಯ' ಬಡತನ ಮುಕ್ತ ಕರ್ನಾಟಕ ರಾಜ್ಯ ಎಂದು ಹೇಳಲಿಕ್ಕೆ ಬಹಳ ಸುಂದರವಾಗಿತ್ತು. ಬಹಳ ಖುಷಿಯೂ ಆಯಿತು, ಎಲ್ಲೋ ಒಂದು ಕಡೆ ರೋಟಿ, ಕಪಡ, ಮೊಕ, ಈ ಮೂರು ಕೂಡ ಸಿಕ್ಕಿದೆ, ಈ ರಾಜ್ಯದಲ್ಲಿರುವಂತಹ ಬಡತನ ಸಂಪೂರ್ಣವಾಗಿ ನಿರ್ಮೂಲನವಾಗಿಬಿಟ್ಟಿದೆ ಎಂದು ನಾವು ಹೇಳಲಿಕ್ಕೆ ಬರುವುದಿಲ್ಲ.

(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀ ಮರಿತಿಬ್ಬೇಗೌಡರವರು ಸಭಾಪೀಠವನ್ನು ಅಲಂಕರಿಸಿದರು)

ಈ ರಾಜ್ಯದಲ್ಲಿರುವ ಈ ಜನಸಂಖ್ಯೆಯಲ್ಲಿ 36% ಬಿಪಿಎಲ್ ಕಾರ್ಡ್ ಹೊಂದಿರುವವರು ಇದ್ದಾರೆ. ಅವರಿಗೆ ಇವತ್ತು ಏನು 'ಅನ್ನಭಾಗ್ಯ'ವನ್ನು ಕೊಡುತ್ತಿದ್ದೀರಿ, ಆ ಅನ್ನ ಭಾಗ್ಯ ಸರಿಯಾದ ರೀತಿಯಲ್ಲಿ ಹೋಗಿ ಎಲ್ಲರಿಗೂ ಸೇರುತ್ತಿದೆಯೇ? 36% Below Poverty Line ನಲ್ಲಿ ಇರತಕ್ಕಂತಹ ಜನರು ಇರುವಂತಹದ್ದಾಗಿದ್ದು, ಅವರಿಗೆ ಬಟ್ಟೆಯಿಲ್ಲದೆ, ಊಟ ಇಲ್ಲದೆ, ಇವತ್ತು ಬೀದಿ ಪಾಲಾಗಿರುವಂತಹ ಆ ಬಡವರ ಬಗ್ಗೆ, ದೀನದಲಿತರ ಬಗ್ಗೆ ಸಮಾಜಿಕ ಕಳಕಳಿಯನ್ನಿಟ್ಟುಕೊಂಡು ಸಮಾಜ ಮುಖಿ ಕೆಲಸ ಮಾಡುವಂತಹ ಈ ಸರ್ಕಾರ ಎಲ್ಲೋ ಒಂದು ಕಡೆ ನಾವು ಎಲ್ಲವನ್ನು ಕೊಡುತ್ತೇವೆ, 'ಸರ್ವರಿಗೂ ಸಮಬಾಳು' ಸರ್ವರಿಗೂ ಸಮಪಾಲು, ಎನ್ನುವಂತಹ ಘೋಷವಾಕ್ಯವನ್ನಿಟ್ಟುಕೊಂಡು ಇವತ್ತು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದೆ. 2014–15ನೇ ಸಾಲಿನಲ್ಲಿ ಕೊಟ್ಟಿರುವಂತಹ ಯೋಜನೆಗಳಲ್ಲಿ ಬಹುಶ: 40% ಕೂಡ fulfill ಆಗಿಲ್ಲ. ಇಲ್ಲಿ ಪ್ರತಿವರ್ಷ ಅನುದಾನಗಳನ್ನು ಬಿಡುಗಡೆ ಮಾಡುತ್ತೀರಿ, ಆ ಅನುದಾನಗಳು ಎಲ್ಲಿ ಹೋಗುತ್ತಿವೆ, ಅದನ್ನು ನಾವು ಎಷ್ಟು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ, ಅದಕ್ಕೆ action plan ಏನಾದರೂ ಮಾಡಿದ್ದೀರಾ? ಪ್ರತಿ ಮೂರು ತಿಂಗಳಿಗೊಮ್ಮೆ ಯಾವ ಇಲಾಖೆಯಿಂದ ಎಷ್ಟು ಅನುದಾನ ಬಿಡುಗಡೆಯಾಗುತ್ತಿದೆ, ಅ ಅನುದಾನ ಎಲ್ಲಿಗೆ ಹೋಗಿ ಮುಟ್ಟುತ್ತಿದೆ. ಅದು ಯಾವ ರೀತಿಯಲ್ಲಿ ಹೋಗಿ ಜನರನ್ನು ಮುಟ್ಟುತ್ತಿದೆ ಎನ್ನುವುದರ ಬಗ್ಗೆ ಒಂದು ಕಮಿಟಿಯನ್ನು ಮಾಡಿ, 3

ತಿಂಗಳಿಗೊಮ್ಮೆ ಅಲ್ಲಿ ಈ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ, ಸಾಕಷ್ಟು ಇಲಾಖೆಗಳಲ್ಲಿ ಸಾಕಷ್ಟು ಹಣ ಬಿಡುಗಡೆಯಾಗಿ, ಅದು ಎಲ್ಲೋ ಒಂದು ಕಡೆ ಹೋಗಿ ಬಿದ್ದಿರುತ್ತದೆ. ಅದರ ಬಗ್ಗೆ ಯಾರೂ ಸಹ ಚರ್ಚೆ ಮಾಡುತ್ತಿಲ್ಲ. ಮತ್ತೆ ಎರಡನೆ ಬಜೆಟ್ ಆಗಿ 2015–16, ಮತ್ತು 2016–17ನೇ ಸಾಲಿನ ಬಜೆಟ್ ಬಂದಾಗ ಈ ವರ್ಷ ಇಷ್ಟು ಅನುದಾನ ಬಿಡುಗಡೆಯಾಗುತ್ತಿದೆ, ಕಳೆದ ವರ್ಷ ಉಳಿದಿರುವಂತಹ ಅನುದಾನ ಎಲ್ಲಿಗೆ ಹೋಗುತ್ತಿದೆ, ಅದರ ಬಗ್ಗೆ ನೀವು ಒಂದು ಕಮಿಟಿಯನ್ನು ಮಾಡಿ ಅದರ ಒಂದು ಆಕ್ಷನ್ ಪ್ಲಾನ್ ಅನ್ನು ಮಾಡಿ ಅದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವತ್ತು ಜನರು ಕುಡಿಯುವ ನೀರಿಗೆ ಪರದಾಡುತ್ತಿದ್ದಾರೆ. ಒಬ್ಬ ಸಾಮಾನ್ಯ ಮನುಷ್ಯನಿಗೆ ಬೇಕಾಗಿರುವಂತಹ ಗಾಳಿ, ನೀರು, ಶಿಕ್ಷಣ, ವಸತಿ ಇದೆಲ್ಲವೂ ಸಿಕ್ಕುತ್ತಿದೆಯೇ? ನಿಮ್ಮದೇ ಪಕ್ಷದವರಾದ **ವೈಎಸ್ಆರ್**.ರವರು ಆಂದ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಅವರು "ಜಲಾಯಜ್ಞಮ್" ಎನ್ನುವಂತಹ ಒಂದು ಯೋಜನೆಯನ್ನು ತರುತ್ತಾರೆ. ಕಳೆದ ಎಂಟು ವರ್ಷಗಳ ಹಿಂದೆ ಆಂದ್ರಪ್ರದೇಶದಲ್ಲಿರುವಂತಹ ಎಲ್ಲಾ ಜಿಲ್ಲೆಗಳಲ್ಲೂ ಕೂಡ ನೀರು ಕೊಡುವಂತಹ ಒಂದು ವ್ಯವಸ್ಥೆಯನ್ನು ಅವರು ಮಾಡಿದ್ದರು. ಅದು ತಮಗೆಲ್ಲಾ ಗೊತ್ತಿರುವಂತಹ ವಿಚಾರ. ಅದೇ ರೀತಿಯಲ್ಲಿ 3,18,000 ಹೆಕ್ಟೇರ್‌ಗೆ ನೀರನ್ನು ಕೊಟ್ಟಿದ್ದರು. 1,80,000 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿ, ಆಂದ್ರ ಪ್ರದೇಶಗಳಲ್ಲಿರುವಂತಹ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಕುಡಿಯುವ ನೀರನ್ನು ಕೊಟ್ಟಿರುವಂತಹ ಅವರು ಒಬ್ಬ 'ದೈವ ಮಾನವ' ಆಗಿದ್ದಾರೆ. ಅದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ, ಇವತ್ತಿನ ದಿವಸ ನಾವು ಎಲ್ಲಿದ್ದೇವೆ? ಕುಡಿಯುವ ನೀರಿಗೋಸ್ಕರ ರೈತರು ಬಂದು ಹೋರಾಟ ಮಾಡುತ್ತಾರೆ. ಬೀದಿಯಲ್ಲಿ ಹೋರಾಟ ಮಾಡಿದಾಗ ಅವರಿಗೆ ಲಾಠಿಚಾರ್ಜ್ ಮಾಡಿ ಉತ್ತರವನ್ನು ಕೊಡುತ್ತೀರಾ? ಇದು ಎಷ್ಟರಮಟ್ಟಿಗೆ ಸರಿ ಸ್ವಾಮಿ? ಮಾನ್ಯ ಗೃಹ ಸಚಿವರು ಇಲ್ಲಿಯೇ ಕುಳಿತಿದ್ದಾರೆ. ಅವರ ಮೇಲೆ ನನಗೆ ಅಪಾರವಾದ ಗೌರವ ಇದೆ. ಬೆಂಗಳೂರು ನಗರಕ್ಕೆ ರೈತರು ಬರುವುದು ನಿಮಗೆ ಮೊದಲೇ ಗೊತ್ತಿತ್ತು. ಅವರಿಗೆ ಒಂದು ಸ್ಥಳವನ್ನು ಕೊಡಬಹುದಿತ್ತು. ಅದು ಅರಮನೆ ಮೈದಾನ ಇರಬಹುದು, ಫ್ರೀಡಂ ಪಾರ್ಕ್ ಇರಬಹುದು, ಎಲ್ಲೋ ಒಂದು ಜಾಗವನ್ನು ಅವರಿಗೆ ಮೀಸಲಿಟ್ಟು, ಅವರ ಕಷ್ಟ–ಸುಖಗಳ ಬಗ್ಗೆ ಅಲ್ಲಿಗೆ ಹೋಗಿ ಒಂದು ಸ್ವಾಂತ್ವಾನ ಹೇಳಿದ್ದರೆ ಖಂಡಿತವಾಗಿಯೂ ಸಹ ಅದು ಭಗವಂತ ಮೆಚ್ಚುವಂತಹ ಕೆಲಸ ಆಗುತ್ತಿತ್ತು. ಆ ಕೆಲಸವನ್ನು ನೀವು ಮಾಡಿಲ್ಲ. ಇವತ್ತು ತಾವು ಬಹಳ ಚೆನ್ನಾಗಿ ಹೇಳಿದಿರಿ. ಆದರೆ, ಎಲ್ಲೋ ಒಂದು ಕಡೆ ಇಲ್ಲಿ ಬಿರುಸಿನ ಆಡಳಿತ ಕಂಡು ಬರುತ್ತಿಲ್ಲ. ನಾವು ಅದರಲ್ಲಿ ವೈಫಲ್ಯವನ್ನು ಕಾಣುತ್ತಿದ್ದೇವೆ. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಇರಬಹುದು, ಉತ್ತರ ಕನ್ನಡ ಜಿಲ್ಲೆ ಇರಬಹುದು, ನೇತ್ರಾವತಿ ಇರಬಹುದು, ಕಾಳಿ ನದಿ ಇರಬಹುದು, ಈ ರೀತಿಯಲ್ಲಿ 3000 ಟಿಎಂಸಿ ನೀರು ಇವತ್ತು ಕೂಡ ವ್ಯರ್ಥವಾಗುತ್ತಿದೆ. ಮಳೆ ಬರುವಂತಹ ಸಂದರ್ಭದಲ್ಲಿ ಅದಕ್ಕೆ

ವ್ಯವಸ್ಥಿತವಾದಂತಹ ಘಟಕಗಳನ್ನು ನಿರ್ಮಾಣ ಮಾಡಿ, ಆ ಸಂಬಂಧ ಒಂದು ನೀರಾವರಿ ಯೋಜನೆಯನ್ನು ತಂದು ಇಡೀ ರಾಜ್ಯದಲ್ಲಿ ಅದು ಮಂಗಳೂರು ಆಗಿರಬಹುದು, ಕೋಲಾರ ಇರಬಹುದು. ಎಲ್ಲಾ ಕಡೆಗೆ ನೀರು ಸಿಗುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ಸಾಮ್ರಾಜ್ಯ ಸ್ಥಾಪನೆ ಮಾಡಲಿಕ್ಕೆ ಮೊದಲನೆ ಯುದ್ಧ ಆಗುತ್ತಿತ್ತು. ಎರಡನೆಯದಾಗಿ, ವ್ಯಾಪಾರ ಲಾಭದಾಯಕವಾಗುವ ದೃಷ್ಟಿಯಿಂದ ಎರಡನೇ ಯುದ್ಧ ಆಯಿತು. ಈಗ ಇರುವಂತಹ ಪರಿಸ್ಥಿತಿ, ನೀರಿಗೋಸ್ಕರ ಮೂರನೇ ಯುದ್ಧ ಆಗುವಂತಹ ಒಂದು ಆತಂಕ ನನಗೆ ಇದೆ. ಆದ್ದರಿಂದ, ಈ ರಾಜ್ಯ ಸರ್ಕಾರ 3 ವರ್ಷಗಳಿಂದ ಆಡಳಿತವನ್ನು ಏನು ನಡೆಸುತ್ತಿದ್ದು, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲಿಕ್ಕೆ ನಿಮ್ಮಿಂದ ಆಗಲಿಲ್ಲ. ದಿವಾನನಿಂದ ಜವಾನ್‌ವರೆಗೂ ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ. ಎಲ್ಲಿ ಸ್ವಾಮಿ ಕಡಿಮೆ ಇದೆ? ಅದನ್ನು ನಿಯಂತ್ರಣ ಮಾಡಲಿಕ್ಕೆ ಸರ್ಕಾರ ಏನು ಕ್ರಮ ತೆಗೆದಕೊಂಡಿದೆ ಎನ್ನುವುದರ ಬಗ್ಗೆ ಬಹಳ ಗಂಭೀರವಾಗಿ ಅಲೋಚನೆ ಮಾಡಬೇಕಾಗಿದೆ. ಏಕೆಂದರೆ, ಶಿಕ್ಷಣ ಇಲಾಖೆ ಇರಬಹುದು, ಸಮಾಜ ಕಲ್ಯಾಣ ಇರಬಹುದು, ಪ್ರತಿಯೊಂದು ವಿಷಯದ ಮೇಲೂ ಎಲ್ಲಾ ಶಾಸಕರು ಮಾತನಾಡುತ್ತಿದ್ದರು. ಆದರೆ, ಎಲ್ಲಿಯೂ ಸಹ ಅದಕ್ಕೆ ಸುಧಾರಣೆ ಕಂಡು ಬರುತ್ತಿಲ್ಲ. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಏಕೆಂದರೆ, ಮುಂದಿನ ಪೀಳಿಗೆಗೆ ನಾವು ಮಾದರಿಯಾಗಿರಬೇಕು. ಅದನ್ನು ನಿಯಂತ್ರಣಗೊಳಿಸಬೇಕು. ರಾಜೀವ್‌ಗಾಂಧಿ ಕಂಡಂತಹ ಕನಸು, ಏನು ಗ್ರಾಮ ಅಭಿವೃದ್ಧಿಯಾಗಬೇಕು, ಸುವರ್ಣ ಗ್ರಾಮವಾಗಬೇಕೆಂದು, ಇದು ಒಂದು ಒಳ್ಳೆಯ ಅವಕಾಶ ಎಂದು ಹೇಳಿ, ಚರ್ಚೆಗಳನ್ನು ಮಾಡಿದರು. ಆದರೆ, ಇವತ್ತಿನ ದಿವಸ ಎಲ್ಲಿದ್ದೇವೆಂದು ನಮಗೆ ಗೊತ್ತಾಗುತ್ತಿಲ್ಲ. ಈ ರಾಜ್ಯದಲ್ಲಿ ರೈತರು ಇರಬಹುದು, ಕಬ್ಬು ಬೆಳೆಗಾರರು ಇರಬಹುದು, ಎಲ್ಲರಿಗೂ ಕೂಡ ಬರಿ ಹೋರಾಟ, ಹೋರಾಟ. ಎಲ್ಲೋ ಒಂದು ಕಡೆ ಕಾನೂನು ಹೋರಾಟ ಇರಬಹುದು, Law and Order ಇರಬಹುದು, ಗೃಹ ಇಲಾಖೆ ಇರಬಹುದು, ಅದರದ್ದೇ ಆದಂತಹ ಕೆಲಸವನ್ನು ಮಾಡುವುದರಲ್ಲಿ ಸರ್ಕಾರದವರು ವಿಫಲರಾಗಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ಸಾಕಷ್ಟು issues ಇವೆ. ಯಾವುದೇ ಒಂದು ರಾಜ್ಯ ಸುಭಿಕ್ಷವಾಗಿ ನಡೆಯಬೇಕಾದರೆ ಮೊದಲಿಗೆ ರಾಜ್ಯದಲ್ಲಿ ಉತ್ತಮ ಶಿಕ್ಷಣ ಸೌಲಭ್ಯ ಸಿಗಬೇಕು. ಭಾರತದ ಸಂವಿಧಾನದಲ್ಲಿ ಹೇಳಿರುವಂತೆ ಪ್ರಾಥಮಿಕ ಶಿಕ್ಷಣ ಇರಬಹುದು, ಅದನ್ನು ಉಚಿತವಾಗಿ ನೀಡಬೇಕು, ಈ ದೇಶ ಹಾಗೂ ಈ ರಾಜ್ಯ ಈ ನಿಟ್ಟಿನಲ್ಲಿ ತನ್ನ ಕರ್ತವ್ಯವನ್ನು ಮಾಡಲೇ ಬೇಕಾಗುತ್ತದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ತಾವು

ಏನು ಸರ್ಕಾರವನ್ನು ನಡೆಸುತ್ತಿದ್ದೀರಿ. ಇನ್ನುಳಿದ 2 ವರ್ಷಗಳಲ್ಲಿಯಾದರೂ ಭ್ರಷ್ಟಮುಕ್ತ ಸರ್ಕಾರ, ಬಡತನ ಮುಕ್ತ ಸರ್ಕಾರವನ್ನಾಗಿ ಮಾಡಿ, ಎಲ್ಲಾ ಇಲಾಖೆಯಲ್ಲಿರುವಂತಹ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲಿಕ್ಕೆ ತಾವು ಪ್ರಯತ್ನವನ್ನು ಮಾಡಬೇಕಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಇವತ್ತು ಕಸದ ಸಮಸ್ಯೆ ಇರಬಹುದು, ಟ್ರಾಫಿಕ್ ಸಮಸ್ಯೆ ಇರಬಹುದು, ಇತರ ಹಲವಾರು ಸಮಸ್ಯೆಗಳನ್ನು ನಾವು ಇವತ್ತು ಎದುರಿಸುತ್ತಿದ್ದೇವೆ. ಒಂದು ರಸ್ತೆಯಿಂದ ಇನ್ನೊಂದು ರಸ್ತೆಗೆ ಹೋಗಬೇಕೆಂದರೆ, 3 ಗಂಟೆಗಳ ಕಾಲ, 4 ಗಂಟೆಗಳ ಕಾಲ ನಾವು ಸಂಚಾರ ಮಾಡಬೇಕಾಗುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಏನು ಚುನಾವಣೆಯಾಗಿ ಇಲ್ಲಿಗೆ ಸುಮಾರು 7–8 ತಿಂಗಳಾಗಿದೆ. ಆದರೆ, ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಜನರು ಶಾಪ ಹಾಕುತ್ತಿದ್ದಾರೆ. ಅದಕ್ಕೆ ಬಿಬಿಎಂಪಿ ಇರಬಹುದು, ನಮ್ಮ ರಾಜ್ಯ ಸರ್ಕಾರ ಇರಬಹುದು. ಇದರ ಕಡೆ ತಾವು ಗಮನಹರಿಸಬೇಕು. ಇವತ್ತು ನಾವು ಏನೇ ಹೇಳಿದರೂ ಕೂಡ ವಿರೋಧ ಪಕ್ಷದವರು ವಿರೋಧ ಮಾಡುತ್ತಾರೆಂದು ಹೇಳಬಾರದು. ವಿರೋಧ ಮಾಡುವುದಕ್ಕೋಸ್ಕರ ಹೇಳುತ್ತಿಲ್ಲ. ಬಡವ ಹೊಲದಲ್ಲಿ ಬೆವರು ಸುರಿಸುತ್ತಾನೆ. ಶ್ರೀಮಂತ ಜಿಮ್‌ನಲ್ಲಿ ಬೆವರು ಸುರಿಸುತ್ತಾನೆ. ಅವ ಹೊಟ್ಟೆಗಾಗಿ ಹೆಣಗಾಡುತ್ತಾನೆ. ಆದರೆ, ಇವ ಹೊಟ್ಟೆಯನ್ನು ಕರಗಿಸಿಕೊಳ್ಳುವುದಕ್ಕೋಸ್ಕರ ಹೆಣಗಾಡುತ್ತಾನೆ. ಬಡವ ಕೆಲಸಕ್ಕೋಸ್ಕರ ಕಾಯುತ್ತಾನೆ. ಶ್ರೀಮಂತ ಸ್ಥಾನಮಾನಕ್ಕೋಸ್ಕರ ಕುಸಿಯುತ್ತಾನೆ. ಅವ ನಿದ್ರೆಯಲ್ಲಿ ಅರಮನೆ ಕಾಣುತ್ತಾನೆ, ಇವ ನಿದ್ರೆ ಬಾರದೇ ಒದ್ದಾಡುತ್ತಾನೆ. ಬಡವನ ಬೆವರು ಬದುಕಿಗಾಗಿ, ಶ್ರೀಮಂತನ ಬೆವರು ಶೋಕಿಗಾಗಿ. ಅವ ಹೊಲದಲ್ಲಿ ಬೆಳವ ರಾಗಿ, ಇವ ಮುಂದೆ ಹೈಟೆಕ್ ರೋಗಿ. ಇದನ್ನು ಸರ್ಕಾರ ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ, ಇವತ್ತಿನ ದಿವಸ ಸಾಕಷ್ಟು ಈ ಒಂದು issues ಬಂದಾಗ ನಾವೆಲ್ಲರೂ ಕೂಡ ಚರ್ಚೆ ಮಾಡುತ್ತೇವೆ. ನಮ್ಮ ಸೈನಿಕರ ಪರಿಸ್ಥಿತಿ ಹೇಗಿದೆ ಎಂದು, ಅವರೊಂದು ಖಾತಾ ವರ್ಗಾವಣೆ ಮಾಡಿಕೊಳ್ಳಲು ಎಷ್ಟು ಪರದಾಡುತ್ತಿದ್ದಾರೆ ಎಂದು. ಆಡಳಿತ ವರ್ಗ ಯಾವ ರೀತಿಯಲ್ಲಿ ಕುಸಿದಿದೆ ಎನ್ನುವ ಬಗ್ಗೆ ಬಹಳ ಚೆನ್ನಾಗಿ ಈಗಾಗಲೇ ಹೇಳಿದ್ದಾರೆ.

ಆದರೆ, ಈ ರಾಜ್ಯ ಸರ್ಕಾರಕ್ಕೆ ಇನ್ನು ಎರಡುವರೆ ವರ್ಷಗಳ ಕಾಲ ಆಡಳಿತ ಮಾಡಲಿಕ್ಕೆ ಅವಕಾಶ ಇದೆ. ತಮಗೆ ಸುವರ್ಣ ಅವಕಾಶ ಸಹ ಸಿಕ್ಕಿದೆ. ಇದನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗಿ, ಎಲ್ಲಾ ಜನರಿಗೆ ಅನುಕೂಲವಾಗುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಮುಂದು. . .**

(91) 4:20 04-03-2016 ಸಿಎಸ್:ಹೆಚ್‌ವಿಆರ್

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-** ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯಸರ್ಕಾರ ಒಂದು ಪ್ರಮುಖವಾದ ಕೆಲಸವನ್ನು ನಮ್ಮ ರಾಜ್ಯದಲ್ಲಿ ಮಾಡಿದೆ. ಅದೇನೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯ ಪ್ರಕಾರ ಪ್ರಥಮ ಬಾರಿಗೆ ಇಡೀ ದೇಶದಲ್ಲಿಯೇ 16,000 ಕೋಟಿ ರೂಪಾಯಿಗಳನ್ನು ನಿಗಧಿ ಮಾಡಿದೆ. ಹಿಂದೆ 5000-6000 ಕೋಟಿ ರೂಪಾಯಿಗಳನ್ನು ನಿಗಧಿ ಮಾಡಲಾಗುತ್ತಿತ್ತು. ಆದರೆ ಇಂದಿನ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ವರ್ಷಕ್ಕೆ 16,000 ಕೋಟಿ ರೂಪಾಯಿಗಳನ್ನು ನಿಗಧಿ ಮಾಡಲಾಗಿದೆ. ಕಾರಣ ಏನೆಂದರೆ ಶೋಷಿತ ವರ್ಗದವರಿಗೆ ಹೆಚ್ಚಿನ ರೀತಿಯಿಂದ ಅನುಕೂಲ ಆಗಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಇವತ್ತು ಸರ್ಕಾರ ಸದುದ್ದೇಶದಿಂದ ಬಿಡುಗಡೆ ಮಾಡಿದೆ ಅದನ್ನು ಖರ್ಚು ಮಾಡುವ ಮತ್ತು ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡತಕ್ಕ ಅಧಿಕಾರಿಗಳ ಕೊರತೆ ಇದೆ. ಇವತ್ತು ಅದನ್ನು ಸರಳೀಕರಣ ಮಾಡುವ ಅವಶ್ಯಕತೆ ಇದೆ. ಈ ವರ್ಗಗಳಿಗೆ ಖರ್ಚು ಮಾಡುವ ಹಣದ ಬಗ್ಗೆ ಒಂದು ಪ್ರತ್ಯೇಕ ವಿಂಗ್ ಅನ್ನು ಮಾಡಿ. ಈಗ ಬಿಡುಗಡೆ ಮಾಡಿದ ಹಣ 3 ತಿಂಗಳು ಅಥವಾ 6 ತಿಂಗಳು ಖರ್ಚಾಗಿ ಆ ವರ್ಷದಲ್ಲಿಯೇ ಆ ಹಣ ಖರ್ಚಾಗುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ನಾನು ಸಾಕಷ್ಟು ಹಣ ಬಿಡುಗಡೆ ಆಗಿರುವುದನ್ನು ನೋಡಿದ್ದೇನೆ, ಆದರೆ ಯೋಜನೆಗಳು ಸರಿಯಾಗಿ ಇಂಪ್ಲಿಮೆಂಟ್ ಆಗಿಲ್ಲ. ಸರಿಯಾಗಿ ಕೆಲಸ ಆಗುತ್ತಿಲ್ಲ. ಯಾರಾದರೂ ಅಧಿಕಾರಿ ಕ್ವಯರಿ ಹಾಕಿದಲ್ಲಿ ಫೈಲ್‌ಗಳು ಆಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆಕಡೆಗೆ ಓಡಾಡುತ್ತವೆ.

ಹಿಂದೆ ಬರಗಾಲದಲ್ಲಿ ಮತ್ತು ಬೆಲೆಯಲ್ಲಿ ಹೆಚ್ಚುಕಡಿಮೆ ಆದಾಗ ರೈತರಿಗಾಗಿ ಎಸ್‌ಎಂ.ಕೃಷ್ಣರವರ ಅವಧಿಯಲ್ಲಿ 500 ಕೋಟಿ ರೂಪಾಯಿಗಳ ಕೃಷಿ ಆವರ್ತ ನಿಧಿಯನ್ನು ತೆರೆಯಲಾಗಿತ್ತು. ಇನ್ನು ಹೆಚ್ಚಿನ ರೀತಿಯಲ್ಲಿ ಆವರ್ತ ನಿಧಿಯನ್ನು ಅಲೋಕೇಟ್ ಮಾಡತಕ್ಕ ಕೆಲಸ ಆಗಬೇಕು. ಮತ್ತು ಆವರ್ತ ನಿಧಿಯನ್ನು ಸರಿಯಾಗಿ ಬಳಸತಕ್ಕ ಕೆಲಸ ಆಗಬೇಕು. ಇವತ್ತು ನಮ್ಮ ರಾಜ್ಯದಲ್ಲಿ ಬೆಳೆಯುವ ಬೆಂಡೆಕಾಯಿ, ಟಮ್ಯಾಟೋ ರಾಗಿ

ಅಥವಾ ಜೋಳ ಏನೇ ಆದರೂ ಸಹ ಮಾರ್ಕೆಟ್ ಎಲ್ಲಿ rates slump down ಆಗುತ್ತದೆ ಆಗ ತಕ್ಷಣವೇ ಎಪಿಎಂಸಿ ಮಾರುಕಟ್ಟೆಗೆ ಅದರ ಉಸ್ತುವಾರಿಯನ್ನು ಕೊಟ್ಟು ಅಲ್ಲಿ ಖರೀದಿಸುವ ಕೆಲಸ ಆಗಬೇಕು. ಈ ವ್ಯವಸ್ಥೆ ಕೇವಲ ಪುಸ್ತಕಗಳಲ್ಲಿ ಮಾತ್ರವಿದೆ. ಇವತ್ತು ಪ್ಯಾಡಿಯ ರೇಟ್ ಕಡಿಮೆ ಆದ ಕೂಡ ನಾವು ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿ ಗಲಾಟೆ ಮಾಡಿದರೆ ಒಂದು ಷಾಪ್ ತೆಗೆದು ಬೆಳೆ ಇಷ್ಟೇ ತರಬೇಕು ಇಷ್ಟೇ moisture ಇರಬೇಕು ಎನ್ನುವುದನ್ನು ನಿಶ್ಚಯ ಮಾಡುವುದರಲ್ಲಿ ಪುನಃ ಬೆಲೆಯಲ್ಲಿ ಏರುಪೇರು ಆಗಿರುತ್ತದೆ. ಅಷ್ಟರಲ್ಲಿ 1000 ಕ್ವಿಂಟಾಲ್ ಬೆಲೆಯನ್ನು ಸಹ ಅವರು ಖರೀದಿ ಮಾಡಿರುವುದಿಲ್ಲ. ಇದನ್ನು ವೈಜ್ಞಾನಿಕವಾಗಿ ಮಾಡಿ ಜನರಿಗೆ ಉಪಯೋಗ ಆಗುವ ರೀತಿಯಲ್ಲಿ ಮಾಡಬೇಕು.

ಇವತ್ತು ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ನಾವು ಚಿಕ್ಕವರಿದ್ದಾಗ ಕೇಳಿದ ಹಾಗೆ ಮೈಸೂರು ಪ್ರಾಂತ್ಯದಲ್ಲಿ ಮೈಸೂರು ರಾಜರ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಸಹ 3-4 ಟ್ಯಾಂಕರ್‌ಗಳಿದ್ದವು. 1 ಕುಡಿಯುವ ನೀರಿಗೆ, ಮತ್ತೊಂದು ದನಕರುಗಳಿಗೆ ಇನ್ನೊಂದು ಕೃಷಿಗೆ, ಹೀಗೆ ಸಾಕಷ್ಟು ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿದ್ದರು. ಅದೇ ರೀತಿಯಲ್ಲಿ ನಮ್ಮ ಹೈದರಬಾದ್-ಕರ್ನಾಟಕ ಮತ್ತು ಬಾಂಬೆ-ಕರ್ನಾಟಕ ಭಾಗದಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಈಗ ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಎಷ್ಟಿದೆ ಎಂದರೆ 2030-2035 ಇಸವಿಯೊಳಗೆ ಎಲ್ಲಾ ಕುಡಿಯುವ ನೀರಿನ ನೀರಾವರಿ ಯೋಜನೆಗಳು ಮುಗಿಯುವ ಅಂದಾಜು ಇದೆ. ಏಕೆಂದರೆ ಪ್ರತಿಯೊಬ್ಬರಿಗೂ 80 ಲೀಟರ್ ನೀರು ಬೇಕಾಗುತ್ತದೆ. ಜನಸಂಖ್ಯೆ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ನೀರು ಮಾತ್ರ ಸಿಗುತ್ತಿಲ್ಲ. ಆದ್ದರಿಂದ ಈ ಕುಡಿಯುವ ನೀರಿನ ಯೋಜನೆಗಳನ್ನು ಆದಷ್ಟು ಬೇಗ ಮುಗಿಸಬೇಕು. ಇವತ್ತು ಕುಡಿಯುವ ನೀರಿನ ಟ್ಯಾಂಕ್‌ಗಳಿಗೆ ಎಲ್ಲೆಲ್ಲಿ ನಮ್ಮ ಯೋಜನೆಗಳಿವೆ, ಉದಾಹರಣೆಗೆ ತುಂಗಭದ್ರಾ ಯೋಜನೆ, ಕೃಷ್ಣ ಯೋಜನೆಗಳಿಂದ ಈ ಯೋಜನೆಗಳನ್ನು ಸುಚಿತಗೊಳಿಸಿದಲ್ಲಿ ಸರಿಯಾದ ಪ್ರಮಾಣದಲ್ಲಿಟ್ಟು ನೀರಿನ ಕೆಪಾಸಿಟಿಯನ್ನು ಹೆಚ್ಚಿಸಬೇಕು. ಇದಕ್ಕಾಗಿ ಊಳು ತೆಗೆಸುವ

ಕೆಲಸ ಆಗಬೇಕು. The KBJNL is doing Nala trimming work. Similarly, the government should take up tank trimming work for additional storage of water. ಇವತ್ತು ಸುಮಾರು 136 ತಾಲ್ಲೂಕುಗಳಲ್ಲಿ ಬರಗಾಲವಿದೆ. ಅಲ್ಲೆಲ್ಲ ಕುಡಿಯುವ ನೀರಿನ ಸಮಸ್ಯೆ ಇದೆ,. ಇಂತಹ ಸಮಯದಲ್ಲಿ ಈ ಸಮಸ್ಯೆಗಳ ಬಗ್ಗೆ ಮಾತನಾಡಲು ನನಗೆ ಬಹಳಷ್ಟು ಸಮಯ ನೀಡಿದ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಬಡವ–ಬಲ್ಲಿದನ ಬಗ್ಗೆ ಮಾನ್ಯ ಶರವಣ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಿಜಕ್ಕೂ ಮೆಚ್ಚಬೇಕು. ಆದರೆ ಅವರು ಯಾವ ಕ್ಯಾಟಗರಿಯಲ್ಲಿ ಬರುತ್ತಾರೆ ಎಂಬುದನ್ನು ದಯಮಾಡಿ ತಿಳಿಸಿದರೆ ಉತ್ತಮವಾಗುತ್ತದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಉಗ್ರಪ್ಪನವರು ಯಾವ ಕ್ಯಾಟಗರಿಯಲ್ಲಿ ಬರುತ್ತಾರೆಯೋ, ಅದೇ ಕ್ಯಾಟಗರಿಯಲ್ಲಿ ನಾನು ಕೂಡ ಬರುತ್ತೇನೆ. ಏಕೆಂದರೆ ಉಗ್ರಪ್ಪನವರ ಕ್ಯಾಟಗರಿಯೇ ನಮ್ಮ ಕ್ಯಾಟಗರಿ ಕೂಡ. ಅದರ ಬಗ್ಗೆಯೇನೂ ಚರ್ಚೆ ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:–** ನಮ್ಮ ಕೈಯಲ್ಲೇನಿದೆ ನೋಡಿ, ನಿಮ್ಮ ಕೈಯಲ್ಲೇನಿದೆ ನೋಡಿಕೊಳ್ಳಿ.

**ಶ್ರೀ ಟಿ.ಎ.ಶರವಣ:–** ನಿಮ್ಮ ಮನೆ ಎಲ್ಲಿದೆ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ನಮ್ಮ ಮನೆ ಬೆಂಗಳೂರಿನಲ್ಲಿಯೇ ಇದೆ.

**ಶ್ರೀ ಟಿ.ಎ.ಶರವಣ:–** ಬೆಂಗಳೂರಿನಲ್ಲಿ ಎಲ್ಲಿದೆ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಹೆಚ್.ಎಸ್.ಆರ್. ಲೇಔಟ್‌ನಲ್ಲಿದೆ.

**ಶ್ರೀ ಟಿ.ಎ.ಶರವಣ:–** ಹೆಚ್.ಎಸ್.ಆರ್. ಲೇಔಟ್ ಯಾವ ಸಮಾಜ ಇರುವಂತಹ ಜಾಗ? ಶ್ರೀಮಂತರು ನೀವು.

**ಶ್ರೀ ವಿ.ಎಸ್.ಉಗ್ರಪ್ಪ:–** ಅದು ಬಿ.ಡಿ.ಎ. ದಿಂದ ಹಂಚಿಕೆಯಾಗಿರುವ ನಿವೇಶನ. ಇರಲಿ, ದಯಮಾಡಿ ನೀವು ಯಾವ ಕ್ಯಾಟಗರಿಯಲ್ಲಿ ಬರುತ್ತೀರಿ ಎಂಬುದನ್ನು ತಿಳಿಸಿ.

**ಶ್ರೀ ಟಿ.ಎ.ಶರವಣ:–** ಶ್ರೀಮಂತರಿರುವಂತಹ ಜಾಗದಲ್ಲಿ, ಹೆಚ್.ಎಸ್.ಆರ್. ಲೇಔಟ್‌ನಲ್ಲಿ ತಾವಿದ್ದೀರಿ. ನಾವು ಬಡವರಿರುವಂತಹ ಬನಶಂಕರಿಯಲ್ಲಿದ್ದೇವೆ. ಮಾನ್ಯ ವಸತಿ ಸಚಿವರು ಇಲ್ಲಿಯೇ ಇದ್ದಾರೆ, ಅವರಿಗೆ ಎಲ್ಲಾ ಗೊತ್ತಿರುತ್ತದೆ. ಅದಕ್ಕಾಗಿಯೇ ಅವರು 'ಮೌನಂ ಸಮ್ಮತಿ ಲಕ್ಷಣಂ' ಎಂದು ಸ್ಮೈಲ್ ಕೊಡುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಹೀಗೂ ಉಂಟೇ!

**ಡಾ: ಎಂ.ಹೆಚ್.ಅಂಬರೀಶ್(ವಸತಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಜನ ಕೊಟ್ಟಂತಹ ದುಡ್ಡಿನಲ್ಲಿದ್ದೇನೆ ಅಷ್ಟೇ, ನನ್ನದು ಯಾವುದು ಇಲ್ಲ.

**ಶ್ರೀ ಐವನ್ ಡಿ'ಸೋಜಾ:–** ಸ್ವಾಮಿ, ಹೀಗೂ ಉಂಟೇ!

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣ ಅವರು ಬನಶಂಕರಿಯಲ್ಲಿ ಬಡವರಿರುವ ಜಾಗದಲ್ಲಿದ್ದೇವೆ ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ನನ್ನ ಪ್ರಶ್ನೆ ಏನೆಂದರೆ, ಬಡವರಿರುವ ಜಾಗ ಬನಶಂಕರಿ ಆದರೆ, ನಮ್ಮ ಇಷ್ಟೂ ಜನರಿಗೆ ಕರ್ನಾಟಕದಲ್ಲಿ ಬೇರೆ ಏನೂ ಕೆಲಸವಿಲ್ಲ; ಬನಶಂಕರಿಯಲ್ಲಿರುವವರೆಲ್ಲರೂ ಬಡವರೇ ಆಗಿದ್ದರೆ ಈ ಸದನದಲ್ಲಿರುವ 75 ಜನರಿಗೆ ಏನೂ ಕೆಲಸವಿಲ್ಲ.

**ಶ್ರೀ ಟಿ.ಎ.ಶರವಣ:–** ಅವರಿಗೆ ಒಂದು ಸರ್ವೆ ಮಾಡುವುದಕ್ಕೆ ಹೇಳಿಬಿಡಿ. ಏಕೆಂದರೆ ಅವರು ಕೂಡ ಸದಾಶಿವ ನಗರದಲ್ಲಿರುವವರು. ಅದು ಶ್ರೀಮಂತರ ಖಾನೆ. ಇವತ್ತಿಗೂ ಕೂಡ ನಮ್ಮ ರಾಜ್ಯದಲ್ಲಿ ಸಾಮಾನ್ಯ ಜನರು ಪೊಲೀಸ್ ಠಾಣೆಗಳಿಗೆ ಹೋಗಿ ದೂರನ್ನು ಕೊಡುವುದಕ್ಕೆ ಹೆದರುತ್ತಿದ್ದಾರೆ. ಅಂತಹ ಒಂದು ವಾತಾವರಣ ಇವತ್ತು ನಿರ್ಮಾಣವಾಗಿದೆ. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಯಾರು ಕಾರಣ? ಹಿರಿಯ ಪೊಲೀಸ್ ಅಧಿಕಾರಿಗಳಿಂದ ಹಿಡಿದು ಕೆಳಹಂತದಲ್ಲಿ ಪೊಲೀಸ್ ಪೇದೆಯವರೆಗೂ ಆತ್ಮಸ್ಥೈರ್ಯವನ್ನು ತುಂಬುವಲ್ಲಿ ಎಲ್ಲಿಯೋ ಒಂದು ಕಡೆ ವೈಫಲ್ಯಗಳು ಎದ್ದು ಕಾಣುತ್ತಿವೆ. ಇವತ್ತು ಲೂಠಿ ಮಾಡುವುದರಲ್ಲಿ, ವ್ಯಾಪಾರೀಕರಣ ಮನೋಭಾವದಲ್ಲಿಯೇ ಎಲ್ಲರೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಾನ್ಯ ಸಚಿವರು ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

ಹೆಣ್ಣು ಮಕ್ಕಳ ಭ್ರೂಣಹತ್ಯೆ ಕೃತ್ಯಗಳು ಇನ್ನೂ ನಡೆಯುತ್ತಿವೆ. ಇತ್ತೀಚೆಗೆ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಇಂತಹ ಒಂದು ಕೃತ್ಯ ನಡೆದಿರುವ ಬಗ್ಗೆ ಪತ್ರಿಕೆಯಲ್ಲಿ ಬೆಳಕು ಚೆಲ್ಲಿರುವುದನ್ನು ನಾನು ನೋಡಿದ್ದೇನೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಎಚ್ಚರ ವಹಿಸಬೇಕಾಗುತ್ತದೆ. ಸಾಕಷ್ಟು ಬಡ ಕುಟುಂಬಗಳ ಹೆಣ್ಣು ಮಕ್ಕಳು ಕೆಲಸಕ್ಕೆ ಹೋಗಿ ಸಂಪಾದನೆ ಮಾಡಿಕೊಂಡು ಬರುವ ಹಣವನ್ನು ಲೂಠಿ ಮಾಡುವಂತಹ ಕೆಲಸ ಕೂಡ ಇವತ್ತು ನಡೆಯುತ್ತಿದೆ. ಅದರ ಬಗ್ಗೆ ಕೂಡ ಸರ್ಕಾರ ಕಳಕಳಿಯಿಂದ ಗಮನಿಸಬೇಕಾಗಿದೆ.

ಇತ್ತೀಚೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ Global Investors Meet ಎನ್ನುವಂತಹ ಒಂದು ದೊಡ್ಡ ಸಮಾವೇಶ ನಡೆಯಿತು. ಅದರಿಂದ ಏನಾಯಿತು, ಎಷ್ಟು ಜನರಿಗೆ ನೀವು

ಉದ್ಯೋಗ ಕೊಟ್ಟಿದ್ದೀರಿ, ಎಷ್ಟು ಉದ್ಯೋಗಾವಕಾಶಗಳನ್ನು ಕ್ರಿಯೇಟ್ ಮಾಡಿದ್ದೀರಿ, ಯುವಕರಿಗೆ ನೀವು ಯಾವ ಸಂದೇಶವನ್ನು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ತಿಳಿಸಬೇಕಲ್ಲವೆ. ಸರ್ಕಾರ ದೊಡ್ಡ ಮಟ್ಟದಲ್ಲಿ ಎಕ್ಸಿಬಿಷನ್‌ಗಳನ್ನು ಆಯೋಜಿಸುತ್ತದೆ, ಆದರೆ ಆ ಎಕ್ಸಿಬಿಷನ್ ನಂತರ ಏನು ಪ್ರಗತಿಯಾಗುತ್ತಿದೆ ಎನ್ನುವುದರ ಬಗ್ಗೆ ಕೂಡ ಬೆಳಕನ್ನು ಚೆಲ್ಲಬೇಕು. ಈ ರೀತಿಯ ಅನೇಕ ಇಷ್ಯೂಗಳು ಈ ರಾಜ್ಯದಲ್ಲಿ ತಾಂಡವವಾಡುತ್ತಿವೆ. ಬಹುಶಃ 1994 ರಿಂದ 1996ರವರೆಗೆ ಸನ್ಮಾನ್ಯ ದೇವೇಗೌಡರು ಮಾಡಿದಂತಹ ಕೃಷ್ಣ–ಕಾವೇರಿ ನೀರಾವರಿ ಯೋಜನೆಗಳೇನಿವೆ, ಅದರಿಂದ ನಮ್ಮ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯ ಕಡೆ ಹೋದರೆ ಕಾವೇರಿ, ಮಂಗಳೂರು ಜಿಲ್ಲೆಯ ಕಡೆಗೆ ಹೋದರೆ ನೇತ್ರಾವತಿ...

**ಉಪ ಸಭಾಪತಿಯವರು:–** ಮಾನ್ಯ ಶರವಣ ಅವರೇ, ತಮ್ಮ ಸಮಯ ಮುಗಿಯಿತು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಗೃಹ ಸಚಿವರಲ್ಲಿ ಕೈಜೋಡಿಸಿ ಮನವಿ ಮಾಡುವುದೇನೆಂದರೆ, ಇವತ್ತು ರಾಜ್ಯದಲ್ಲಿ ನಡೆಯುತ್ತಿರುವ ಅಪರಾಧಗಳನ್ನು ತಡೆಗಟ್ಟಲು ಗೃಹ ಇಲಾಖೆಯಿಂದ ಕಠಿಣವಾದ ಕ್ರಮಗಳನ್ನು ತೆಗೆದುಕೊಂಡು ಎಲ್ಲೆಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಅದನ್ನು ಮಟ್ಟ ಹಾಕಬೇಕಾಗುತ್ತದೆ. ಏತಕ್ಕೋಸ್ಕರ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ, ನನ್ನ ಹತ್ತಿರ ಕೂಡ ಎರಡು ದೂರುಗಳು ಬಂದಿದ್ದು, ಅವುಗಳ ಬಗ್ಗೆ ನಾನು ತಮಗೆ ಪತ್ರಗಳನ್ನು ಕೊಡುತ್ತೇನೆ. ಪೊಲೀಸ್ ಠಾಣೆಗಳಲ್ಲಿ ರಿಯಲ್ ಎಸ್ಟೇಟ್ ವಹಿವಾಟು ನಡೆಯುತ್ತಿದೆ. ಅವರು ಕಂಪ್ಲೇಂಟ್ ಕೊಡುವಂತಹ ಸ್ಥಳವನ್ನು ಅವರು ಹೋಗಿ ಭೇಟಿ ಮಾಡಬೇಕು. ಯಾರಿಗೆ ಏನು ತೊಂದರೆಯಾಗಿದೆ ಎನ್ನುವುದನ್ನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು. ಆದರೆ ಅಲ್ಲಿರುವಂತಹ ಅಧಿಕಾರಿಗಳು ಆ ಕೆಲಸವನ್ನು ಮಾಡುತ್ತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಶರವಣ ಅವರಿಗೂ ಪೊಲೀಸರು ತೊಂದರೆ ಕೊಟ್ಟಿದ್ದಾರೆ, ಅವರು ಅದನ್ನು ಕೂಡ ಹೇಳಬೇಕಾಗುತ್ತದೆ. ಅದನ್ನು ಕೂಡ ಸ್ವಲ್ಪ ಕೇಳಿ.

**ಡಾ:ಜಿ.ಪರಮೇಶ್ವರ್(ಗೃಹ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ರಿಯಲ್ ಎಸ್ಟೇಟ್ ವಹಿವಾಟು ನಡೆಯುತ್ತಿದೆ ಎನ್ನುವಂತಹ ವಿಚಾರವನ್ನೇನು ತಿಳಿಸಿದ್ದಾರೆ, ಆ ಬಗ್ಗೆ ನಿರ್ದಿಷ್ಟವಾಗಿ ಯಾವ ಪೊಲೀಸ್ ಠಾಣೆಯಲ್ಲಿ ಆ ರೀತಿ ನಡೆಯುತ್ತಿದೆ, ಯಾರು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ದಯಮಾಡಿ ಅವರಲ್ಲಿ ಮಾಹಿತಿ ನೀಡಿದಲ್ಲಿ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೆ ಅನುಕೂಲವಾಗುತ್ತದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ನಾನು ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತೇನೆ, ಅವರಿಗೆ ಮಾಹಿತಿ ಕೊಡುತ್ತೇನೆ. ಅವರ ಬಗ್ಗೆ ನಮಗೆ ಅಪಾರ ಗೌರವ ಮತ್ತು ನಂಬಿಕೆ ಇದೆ. ಅದಕ್ಕಾಗಿಯೇ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಮಾನ್ಯ ಗೃಹ ಸಚಿವರು ಅಂತಹ ಪ್ರಕರಣಗಳಲ್ಲಿ ಕಠಿಣವಾದ ಕ್ರಮಗಳನ್ನು ತೆಗೆದುಕೊಂಡು ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೈಜೋಡಿಸಿ ಮನವಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮೊನ್ನೆ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಉಪ್ಪಿಲ್ಲ, ಖಾರ ಇಲ್ಲ, ಹುಳಿ ಇಲ್ಲ ಎಂದು ಹೇಳಿ ನಾನು ಅದನ್ನು ವಿರೋಧ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸಮಯದ ಅಭಾವದಿಂದಾಗಿ ನಾನು ಕೆಲವೊಂದು ವಿಷಯಗಳ ಬಗ್ಗೆ ಮಾತ್ರ ಮಾತನಾಡಬಯಸುತ್ತೇನೆ. ಮೊದಲನೆಯದಾಗಿ ಕೃಷಿ ಬಗ್ಗೆ ವಿಚಾರ ಮಾಡುವುದಾದರೆ ನಮ್ಮ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಾವು ಪ್ರತಿನಿತ್ಯ ಆಗಿರುವಂತಹ ರೈತರ ಆತ್ಮಹತ್ಯೆ ಪ್ರಕರಣಗಳು, ರೈತರ ಬಗ್ಗೆ ರಾಜ್ಯ ಸರ್ಕಾರ ತೋರುವಂತಹ ಧೋರಣೆಗಳು ಮತ್ತು ರೈತರಿಗೆ ಆಗುವಂತಹ ಸಮಸ್ಯೆಗಳು ಇವುಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಇವತ್ತು ಎಲ್ಲರೂ ಸಹ ರೈತ ಈ ದೇಶದ ಬೆನ್ನೆಲುಬು ಎನ್ನುವಂತಹ ಮಾತನ್ನು ಹೇಳುತ್ತೇವೆ. ಆದರೆ ಆ ರೈತ ಬೆಳೆಯುವಂತಹ ಬೆಳೆಗೆ ಇವತ್ತಿನವರೆಗೂ ಬೆಲೆ ನಿಗದಿಪಡಿಸುವಂತಹ ಸ್ವಾತಂತ್ರ್ಯ ಆ ರೈತನಿಗಿಲ್ಲದಂತಹ ಪರಿಸ್ಥಿತಿ ಇದೆ. ಉದಾಹರಣೆಗೆ ಹೇಳುವುದಾದರೆ ಒಂದು ಎಕರೆ ಪ್ರದೇಶದಲ್ಲಿ ಜೋಳವನ್ನು ಬೆಳೆಯಬೇಕಾದರೆ ಆ ರೈತನಿಗೆ ಎಷ್ಟು ಇನ್‌ಪುಟ್ಸ್ ಹೋಗುತ್ತದೆ, ಆ ರೈತ ಎಷ್ಟು ಶ್ರಮ ಪಡುತ್ತಾನೆ, ಆ ಸಾಗುವಳಿಗಾಗಿ ಎಷ್ಟು ವೆಚ್ಚವಾಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡುವಂತಹ ಕೆಲಸ ಯಾವ ರಾಜ್ಯ ಸರ್ಕಾರ ಕೂಡ ಮಾಡಲಾರದಂತಹ ಒಂದು ಪರಿಸ್ಥಿತಿ ಇದೆ. ಏಕೆಂದರೆ ಇವತ್ತು ಒಂದು ಸೋಪ್ ತಯಾರಿಕಾ ಕಾರ್ಖಾನೆ ತಾನು ತಯಾರಿಸುವಂತಹ ಉತ್ಪನ್ನಗಳ ಬೆಲೆಯನ್ನು ತಾನೇ ನಿರ್ಧರಿಸುತ್ತದೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ರೈತ ತಾನು ಬೆಳೆಯುವಂತಹ ಯಾವುದೇ ಬೆಳೆಗಳಿಗೆ ತಗುಲಿದ ವೆಚ್ಚದ ಆಧಾರದ ಮೇಲೆ ಅದರ ಬೆಲೆ ನಿಗದಿಪಡಿಸುವಂತಹ ವಾತಾವರಣ ಅಥವಾ ಆ ಶಕ್ತಿ ಆತನಿಗಿಲ್ಲ. ಕಾರಣವೆಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಲ್ಲಿ ಬೆಲೆ ನಿಯಂತ್ರಣ ಆಯೋಗ ಅಥವಾ ಬೆಲೆ ನಿಗದಿಪಡಿಸುವಂತಹ ಒಂದು ಜವಾಬ್ದಾರಿಯುತವಾದ ಸಂಸ್ಥೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಕೂಡ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತವೆ. ಆ ರೀತಿ ಬೆಂಬಲ ಬೆಲೆಗಳನ್ನು ಘೋಷಣೆ ಮಾಡಬೇಕಾದರೆ, ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ ಸುಮಾರು 7,000 ರೂಪಾಯಿಗಳಷ್ಟು ಬೆಲೆ ಇರುವಾಗ ಬೆಂಬಲ ಬೆಲೆ ಕ್ವಿಂಟಾಲ್‌ಗೆ 4,500 ರೂಪಾಯಿ ಇದೆ. ಆ ರೀತಿ ಅವೈಜ್ಞಾನಿಕವಾಗಿ ಬೆಲೆ ನಿರ್ಧಾರವಾಗುವಂತಹ ಕೆಲಸವಾಗುತ್ತಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು ರೈತರು ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಅದರ ಒಂದು ಸಹಾಯ ತೆಗೆದುಕೊಳ್ಳದೆ ಉತ್ಪಾದನೆಯಲ್ಲಿ ಮುಂದೆ ಬರುವಂಥದ್ದಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು innovative

farmers ಕೂಡ ಇದ್ದಾರೆ. ಅವರು ಸಾಕಷ್ಟು ಬೆಳೆಗಳನ್ನು ಬಹಳ ಚೆನ್ನಾಗಿ ಬೆಳೆಯುತ್ತಾರೆ. ಆದರೆ ಬಹಳ ದುರ್ದೈವದ ಸಂಗತಿ ಎಂದರೆ, ಒಂದು ವೇಳೆ ಯಾರಾದರೂ ಟೊಮೆಟೋ ಬೆಳೆದರೆ ಕೋಲಾರದಲ್ಲಿ ಅದರ ಬೆಲೆ 2 ರೂಪಾಯಿ ಇದ್ದರೆ ಬೆಂಗಳೂರಿನಲ್ಲಿ 20 ರೂಪಾಯಿ ಇರುತ್ತದೆ, ಆದರೆ ಬಾಂಬೆಯಲ್ಲಿ 80 ರೂಪಾಯಿ ಇರುತ್ತದೆ. ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವ ಕಾರಣದಿಂದಾಗಿ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ ಸಹ ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ಇ–ಮಾರ್ಕೆಟಿಂಗ್ ಫೆಸಿಲಿಟಿಗಳನ್ನು ತಂದಿದೆ. ಹುಬ್ಬಳ್ಳಿಯಲ್ಲಿ ಪ್ರಥಮವಾಗಿ ಸುಮಾರು 130 ಎ.ಪಿ.ಎಂ.ಸಿ. ಮಾರುಕಟ್ಟೆಗಳಲ್ಲಿ ಇ–ಟೆಂಡರಿಂಗ್ ಸಿಸ್ಟಮ್ ತರುವಂತಹ ಕೆಲಸವನ್ನು ಇವತ್ತು ನಮ್ಮ ರಾಜ್ಯ ಸರ್ಕಾರ ಮಾಡಿದೆ. ಆ ರೀತಿಯ ಮಾರುಕಟ್ಟೆ ವ್ಯವಸ್ಥೆಯಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಬೆಳೆಗೆ ಇಡೀ ಜಗತ್ತಿನಲ್ಲಿ ಎಲ್ಲ ಕಡೆ ಆ ಬೆಲೆ ಸಿಗುವಂತಹ ವ್ಯವಸ್ಥೆಯಾಗುತ್ತದೆ. ಎಲ್ಲಿ ಅದರ ಲಭ್ಯತೆ ಇರುತ್ತದೆ ಅಲ್ಲಿಂದ ಎಲ್ಲ ಕಡೆಗೆ ಅದು ಸಾಗಾಟವಾಗಬೇಕು ಮತ್ತು ಅದಕ್ಕೆ ಯೋಗ್ಯವಾದ ಬೆಲೆ ಸಿಗುವಂತಹ ಬಹಳ ಪ್ರಮುಖವಾದ ಒಂದು ಕೆಲಸ ಆಗಬೇಕು. ನಮ್ಮ ರಾಜ್ಯ ಸರ್ಕಾರ ಇ–ಟೆಂಡರಿಂಗ್ ಸಿಸ್ಟಮ್ ತಂದು, ಇಡೀ ದೇಶಕ್ಕೇ ಮಾದರಿಯಾಗುವಂತಹ ಒಂದು ಕೆಲಸವನ್ನು ಮಾಡಿದೆ.

(ಮುಂದುವರೆದಿದೆ ...

ಶ್ರೀ ಲೆಹರ್ ಸಿಂಗ್ ಸಿರೋಯಾ(ನಾಮನಿರ್ದೇಶನ ಹೊಂದಿದವರು):– ಮಾನ್ಯ ಸಭಾಪತಿಗಳೇ, ತಮಗೆ ಧನ್ಯವಾದಗಳು, ಘನತೆವೆತ್ತ ರಾಜ್ಯಪಾಲರು ಉಭಯಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವುದು ನಮ್ಮ Constitutional obligation and duty. ನಾನು ಕೂಡ ಇದರ ಪರವಾಗಿಯೇ ಮಾತನಾಡುತ್ತೇನೆ. ಒಬ್ಬರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಆಯ್ಕೆ ಆದ ಮೇಲೆ ಅವರು ಯಾವುದೇ ಪಕ್ಷದ ಮುಖ್ಯಮಂತ್ರಿಗಳಲ್ಲ, ಅವರು ಈ ಸದನಕ್ಕೆ ಮತ್ತು ಈ ರಾಜ್ಯದ 6 ಕೋಟಿ ಜನತೆಗೆ ಮುಖ್ಯಮಂತ್ರಿಗಳಾಗಿರುತ್ತಾರೆ. ಹಾಗಾಗಿ ಮುಖ್ಯಮಂತ್ರಿಗಳ ಗೌರವವನ್ನು ಕೂಡ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ ಆಗಿರುತ್ತದೆ. ನಮ್ಮ ವೀರಣ್ಣ ಮತ್ತಿಕಟ್ಟಿಯವರು ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸುತ್ತಾ ನಾನು ಕೂಡ ಅದಕ್ಕೆ ನನ್ನ ಒಪ್ಪಿಗೆಯನ್ನು ಸೂಚಿಸುತ್ತೇನೆ. ಅವರು ರಾಜೀವ್ ಗಾಂಧಿಯವರ ಒಂದು ಕೋಟೇಶನ್ ಕೊಟ್ಟು ಭಾಷಣವನ್ನು ಪ್ರಾರಂಭ ಮಾಡಿದರು. He said that Rajiv Gandhi was an architect for 73rd and 74th amendment to the Constitution of India. ರಾಜೀವಗಾಂಧಿಯವರ ಬಗ್ಗೆ ನಮಗೆಲ್ಲರಿಗೂ ಗೌರವವಿದೆ. ಹಾಗೆಯೇ ಮಹಾತ್ಮಗಾಂಧಿಯವರ ಬಗ್ಗೆ ಕೂಡ ಉಲ್ಲೇಖ ಮಾಡಿದ್ದಾರೆ. ಏಕೆಂದರೆ ನಮ್ಮ ಪ್ರಧಾನಿಗಳಾದ ನರೇಂದ್ರ ಮೋದಿಯವರು ಸ್ವಚ್ಛತಾ ಆಂದೋಲವನ್ನು ಪ್ರಾರಂಭಿಸಿ 2100000 ಶೌಚಾಲಯಗಳನ್ನು ತೆರೆದಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ನಾಯಕರು ಸ್ವಚ್ಛತಾ ಆಂದೋಲನದ ಬಗ್ಗೆ ಉಪನ್ಯಾಸವನ್ನು ನೀಡುತ್ತಾರೆ. ನಮ್ಮ ನರೇಂದ್ರ ಮೋದಿಯವರಿಂದ ಪ್ರೇರಣೆಯನ್ನು ಪಡೆದು ನಮ್ಮ ಮುಖ್ಯಮಂತ್ರಿಗಳು ಸಹ ಇಲ್ಲಿ ಶೌಚಾಲಯಗಳನ್ನು ತೆರೆಯುತ್ತಿದ್ದಾರೆ. 55 ಲಕ್ಷ ಶೌಚಾಲಯಗಳನ್ನು ತೆರೆಯುವುದಾಗಿ ಹೇಳಿರುವುದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ||ಜಿ.ಪರಮೇಶ್ವರ್:– ನಮ್ಮ ಸರ್ಕಾರ ಬಂದು 3 ವರ್ಷಗಳಾಗಿವೆ. ನರೇಂದ್ರಮೋದಿಯವರು ಅಧಿಕಾರಕ್ಕೆ ಬಂದು ಎಷ್ಟು ದಿವಸಗಳಾಗಿವೆ?

ಶ್ರೀ ಲೆಹರ್ ಸಿಂಗ್ ಸಿರೋಯಾ:– ಇಲ್ಲ, ಇಲ್ಲಿ ಹಿಂದಿನ ವರ್ಷದಲ್ಲಿಯೇ ಪ್ರಾರಂಭಿಸಿದ್ದು, ಇನ್ನು 2–3 ಉಲ್ಲೇಖಗಳನ್ನು ಮಾಡಬೇಕಾಗಿತ್ತು. ಅದೇನೆಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 120 ನೇ ವರ್ಷ ನಡೆಯುತ್ತಿದೆ. ಅದರ ಬಗ್ಗೆ ಇಲ್ಲಿ ಉಲ್ಲೇಖಿಸಬೇಕಾಗಿತ್ತು, ಇರಬಹುದೇನೋ ಎಂದು ನಾನು ಹುಡುಕಿ, ನನ್ನ ಪಿಎ ಕೈಯಲ್ಲಿ ಕೂಡ ಹುಡುಕಿಸಿದೆ. ಎಲ್ಲಿಯೂ ಅದರ ಬಗ್ಗೆ ಉಲ್ಲೇಖ ಇರಲಿಲ್ಲ. ಇನ್ನು

ಸನ್ಮಾನ್ಯ ದೇವರಾಜ ಅರಸ್ ಅವರ 100ನೇ ವರ್ಷದ ಹುಟ್ಟುಹಬ್ಬ ನಡೆಯುತ್ತಿದೆ, ಅದರ ಬಗ್ಗೆ ಕೂಡ ಎಲ್ಲಿಯೂ ಉಲ್ಲೇಖವನ್ನು ಮಾಡಿರುವುದಿಲ್ಲ. ಇವತ್ತಿನ ವಾತಾವರಣದಲ್ಲಿ ಈ ಇಬ್ಬರ ವಿಚಾರಗಳನ್ನು ಉಲ್ಲೇಖಿಸುವ ಸಂದರ್ಭ ಇತ್ತು. ಏಕೆಂದರೆ ಗುಜರಾತ್ ಮತ್ತು ಹರಿಯಾಣದಲ್ಲಿ ನಡೆಯುತ್ತಿರುವ ವಿಚಾರವನ್ನು ಗಮನಿಸಬೇಕು. ಅಲ್ಲಿ ಮೀಸಲಾತಿಯನ್ನು ಯಾರು ಕೇಳುತ್ತಿದ್ದಾರೆಂದರೆ ಗುಜರಾತಿನಲ್ಲಿ ಪಟೇಲ್ ಸಮುದಾಯದವರು ಮೀಸಲಾತಿಯನ್ನು ಕೇಳುತ್ತಿದ್ದಾರೆ. Jat Community in Hariyana is an affluent section of the society in that State. Similarly, Patels are very affluent community in Gujarath State. ಈ ಜಾತಿ ರಾಜಕೀಯದಿಂದ ಏನಾಗುತ್ತದೆ ಎಂದರೆ ಮೀಸಲಾತಿಯನ್ನು ರಜ್‌ಪುತ್ ಮತ್ತು ಬ್ರಾಹ್ಮಣರು ಕೂಡ ಕೇಳುವುದಕ್ಕೆ ಪ್ರಾರಂಭಿಸಿದ್ದಾರೆ. ನಾಳೆ ನಮ್ಮಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರು ಸಹ ಮೀಸಲಾತಿಯನ್ನು ಕೇಳಿದಲ್ಲಿ ಅದರ ಬಗ್ಗೆ ಆಶ್ಚರ್ಯ ಪಡಬೇಕಾದ್ದು ಏನೂ ಇಲ್ಲ. ಇದಕ್ಕೆ ದೇವರಾಜ್ ಅರಸ್‌ರವರು ಪ್ರಪಂಚದಲ್ಲಿ ಎರಡೇ ಜಾತಿ ಇರುವುದು ಎನ್ನುವ ಮಾತನ್ನು ಹೇಳಿದ್ದರು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಬಡವರಿಗೆ ಪ್ರತ್ಯೇಕ ಮೀಸಲಾತಿ ಇದೆ.

SRI LEHAR SINGH SIROYA: Late Devraj Urs told that there are only two castes in the world i.e., Haves and Have nots. ಅದನ್ನು ನಾವು ಪಾಲಿಸಲೇಬೇಕು. ಒಂದು ಬಡವರ ಜಾತಿ ಇನ್ನೊಂದು ಶ್ರೀಮಂತರ ಜಾತಿ ಎರಡೆ ಜಾತಿ ಇರುವುದು ಎಂದು ಹೇಳಿದ್ದಾರೆ. ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ಇದರ ಬಗ್ಗೆ ನಾವು ಯೋಚನೆ ಮಾಡಲೇ ಬೇಕು. ಈಗ ಇಲ್ಲದಿದ್ದರೂ ಮುಂದಕ್ಕಾದರೂ ಯೋಚನೆ ಮಾಡಲೇಬೇಕು. I remember and would like to quote here what Dr. Babasaheb Ambedkar has said. It reads thus:

***"Men are mortal. So are ideas. An idea needs propagation as much as a plant needs watering. Otherwise, both will wither and die."***

ಮಾನ್ಯ ದೇವರಾಜ ಅರಸ್‌ರವರನ್ನು ಹೇಳಿರುವ Haves and Have nots ಬಗ್ಗೆ ಯೋಚನೆ ಮಾಡಲೇ ಬೇಕು. ಬ್ರಾಹ್ಮಣ ಜಾತಿಯಲ್ಲಿ ಬಡವರಾಗಿ ಹುಟ್ಟುವುದು ತಪ್ಪೆ? ಇದರ ಬಗ್ಗೆ ಯೋಚನೆ ಮಾಡಲು ನಾವಾಗಲಿ ಅವರಾಗಲಿ ಧೈರ್ಯ ಮಾಡುವುದೆ ಇಲ್ಲ. Some of our political parties existence itself is based on caste and community. Dr. Babasaheb Ambedkar had also said, "Life should be great rather than long". ಮಾನ್ಯ ಲಾಲ ಬಹಾದ್ದೂರ ಶಾಸ್ತ್ರಿಯವರು ಒಂದು ವರ್ಷ ದೇಶ ಆಳಿದವರು, ಅಂದು ಅವರು ತೆಗೆದುಕೊಂಡಿರುವ ನಿರ್ಣಗಳನ್ನು ಗಣನೆಗೆ ತೆಗೆದುಕೊಂಡು ಇಂದು ಈ ಮನೆಯಲ್ಲಿ ಅವರ ಫೋಟೋ ಹಾಕಲಾಗಿದೆ. ಅದೇ ರೀತಿ ಅಬ್ದುಲ್ ನಜೀರ ಸಾಹೇಬರು 3-4 ವರ್ಷ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೆಲಸ ಮಾಡಿದ್ದಾರೆ. He was popularly called as 'Nir Sab' (Waterman). He was responsible for drilling largest number of borewells throughout the State during his regime. He left an indelible impression on the soil of Karnataka through his developmental work as Minister for Rural Development and Panchayati Raj. ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಮಗೆ ತುಂಬಾ ಕಳಕಳಿ ಇತ್ತು. ಇವತ್ತು ಇದೆ, ಆದರೆ ಮುಂಚೆ ಅವರು ಹಣಕಾಸು ಸಚಿವರಾಗಿದ್ದಾಗ, ಉಪ ಮುಖ್ಯಮಂತ್ರಿಗಳಾಗಿದ್ದಾಗ ಬಹಳ ಕಳಕಳಿ ಇತ್ತು. ಅವರು ಆಗ ಪ್ರಾಮಾಣಿಕತೆಯಿಂದ ಆಡಳಿತ ನಡೆಸಿದ್ದಾರೆ. ಯಾವುದೇ ಪಾರ್ಟಿ ಇರಲಿ, ಈಗ ಎಲ್ಲಾ ಪಾರ್ಟಿಗಳು ಒಂದೇ ಆಗಿ ಬಿಟ್ಟಿವೆ ಈಗ. Our Hon.Chief Minister Mr. Siddaramaiah is staunch follower of the ideals of Lohia. He was known for his honesty and good governance. ಅವರು ವಾಚ್ ಪ್ರಕರಣದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ ಎನ್ನುವ ಕಲ್ಪನೆಯು ನಮಗೆ ಇರಲಿಲ್ಲ. ಈಗ ಆ ವಿಚಾರ ಬೇಡ. ದೇವರಾಜ ಅರಸರು ಮತ್ತು ಮಾನ್ಯ ಎಲ್.ಜಿ.ಹಾವನೂರ ಯಾವ ರೀತಿ ರೀತಿ ಕ್ರಾಂತಿ ಮಾಡಿದ್ದಾರೆ ಆ ರೀತಿ ಇವರು ಮಾಡುತ್ತಾರೆ ಎನ್ನುವ ಕಲ್ಪನೆ ಇತ್ತು. ಮಾನ್ಯ ಸಿದ್ದರಾಮಯ್ಯನವರು ಕ್ರಮ ತೆಗೆದುಕೊಳ್ಳುತ್ತಾರೆ, ಈ

ರಾಜ್ಯಕ್ಕೆ ಹೊಸ ದಿಕ್ಕನ್ನು ಕೊಡುತ್ತಾರೆ ಅಂದುಕೊಂಡಿದ್ದೆ. ಆದರೆ ಈಗಲೂ ಇನ್ನು ತಡವಾಗಿಲ್ಲ. ಮಾನ್ಯ ದೇವರಾಜ ಅರಸ್‌ರವರು ಮತ್ತು ಬಾಬಾ ಸಾಹೇಬ ಅಂಬೇಡ್ಕರ್‌ರವರು ಹೇಳಿರುವ ಕೆಲವು ಅಂಶಗಳನ್ನು ಒಪ್ಪಿಕೊಂಡು ಬಿಟ್ಟರೆ Karnataka gave direction to the entire nation. ಆದರೆ ನೋಡತ್ತಾ ಹೋದ ಹಾಗೆ ನಮಗೆ confusion ಜಾಸ್ತಿಯಾಗುತ್ತಿದೆ. ಏಕೆ ಎಂದರೆ, ಇದನ್ನು ತಯಾರು ಮಾಡಿರುವುದು ಮಾನ್ಯ ಸಿದ್ದರಾಮಯ್ಯನವರ ಸರ್ಕಾರ. ಅದನ್ನು ಮಾನ್ಯ ಸಿದ್ದರಾಮಯ್ಯನವರು ತಯಾರು ಮಾಡಿದರೊ, ಬೇರೆಯವರು ತಯಾರು ಮಾಡಿದರೊ ಗೊತ್ತಿಲ್ಲ. ಏಕೆಂದರೆ ಸರ್ಕಾರದ ಮೇಲೆ ಮತ್ತು ಸಿಎಂ ಮೇಲೆ ಹೈಕಮಾಂಡ್ ಗ್ರೀಪ್ ಇರುತ್ತದೆ. ಅದು ಎಲ್ಲರಿಗೂ ಗೊತ್ತಿರುವ ಸಂಗತಿ. ವಾಚ್ ಪ್ರಸಂಗ ಮತ್ತು ಹೆಬ್ಬಾಳದ ಭೈರತಿ ಸುರೇಶ್‌ರವರ ವಿಚಾರದಲ್ಲಿ ಹೇಳಬೇಕು ಎಂದರೆ, ಶ್ರೀಮತಿ ಸೋನಿಯಾ ಗಾಂಧಿಯವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ, ಏಕೆಂದರೆ ಭೈರತಿ ಸುರೇಶ್‌ರವರನ್ನು ನಮ್ಮ ಸದನದಲ್ಲಿ ಉಳಿಸಿಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ there is a statement from some Congress Party leader stating that Sri Siddaramaiah does not know the Congress Culture. What is that Congress culture? I remembered Rajiv Gandhi who said in l985 that out of a rupee in the budget only 15 paise reaches to the common man and 85 paise goes to somebodys pocket in the form of corruption. ಈ ಭ್ರಷ್ಟಾಚಾರ ನಡೆಯದಂತೆ ಆಡಳಿತ ನಡೆಯಬೇಕು ಎಂದು ದಿ: ರಾಜೀವ ಗಾಂಧಿಯವರು ಹೇಳಿದ್ದಾರೆ. There is a popular saying in Hindi, "Ram Naam ki loot hai, Loot sake to loot. Antakal Pashtayega Jab pran jayega choot" – (Meaning – Chant Sri Rama's name during your life time as much as possible. There is no point in repenting for having not remembered God at the time of your death). 85% ನ್ನು ಹೇಗೆ ಲೂಟಿ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಾರೆ. ಕಾರ್ತಿಕ ಚಂದ್‌ರವರ 30,000 ಕೋಟಿ 4ಜಿ 3ಜಿ ನಮಗೆ ವಾಟ್ಸ್‌ಪ್‌ನಲ್ಲಿ ಕಳುಹಿಸಿದ್ದಾರೆ. ದೇಶದಲ್ಲಿ ಅವರ ಕಂಪನಿಗಳು ಸಾಕಷ್ಟು ಇವೆ. ಇದು ಕಾಂಗ್ರೆಸ್ ಸಂಸ್ಕೃತಿಯಾ? ಇದನ್ನು ಮಾನ್ಯ ಸಿದ್ದರಾಮಯ್ಯನವರು

ಪಾಲಿಸಬೇಕಾ? ಯಾವ ಪಾರ್ಟಿಗಳಲ್ಲಿಯು ಈಗ ಸಂಸ್ಕೃತಿ ಉಳಿದುಕೊಂಡಿಲ್ಲ ಎಂದೆ ನಾನು ಹೇಳುತ್ತಿದ್ದೆನೆ. ನಾವು ಎಲ್ಲಾ ಪ್ರಾಮಾಣಿಕರಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೇವೆ, ಆದರೆ ವಿಜಯ ಮಲ್ಯರವರನ್ನು ಎಲ್ಲರೂ ಸೇರಿಯೇ ರಾಜ್ಯಸಭೆಗೆ ಕಳುಹಿಸಿದ್ದೇವು. ಅವರು ಏನು ಮಾಡಿದರು ಎಂದು ಎಲ್ಲರಿಗೂ ಗೊತ್ತು.

**ಉಪಸಭಾಪತಿಯವರು:-** ಸಿಂಗ್‌ರವರೆ ನಿಮ್ಮ ಸಮಯ ಮುಗಿಯುತ್ತಾ ಬಂತು. ಸಾಕು ಮುಗಿಸಿ ಈಗ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಗಳೆ, ನಾನು ಯಾವಾಗಲು ಮಾತನಾಡುವುದಿಲ್ಲ, I never speak unnecessarily. I do not interfere when others speak. ನನ್ನ ಯಾವುದೆ ಗಮನ ಸೆಳೆಯುವ ಸೂಚನೆ ಯಾವುದು ಬರುವುದಿಲ್ಲ. ಆದ್ದರಿಂದ ದಯಮಾಡಿ ನನಗೆ 10 ನಿಮಿಷಗಳ ಅವಕಾಶವನ್ನು ಕೊಡಿ. ವಿಜಯ ಮಲ್ಯರವರನ್ನು ಕಳುಹಿಸದಕ್ಕಾಗಿ ನಾವು ನಾಚಿಕೆಪಡಬೇಕು. ಮೊನ್ನೆ ಕೆಳಮನೆಯಲ್ಲಿ ಮಾಜಿ ಸಭಾಧ್ಯಕ್ಷರಾದ ರಮೇಶ್‌ಕುಮಾರ್‌ರವರು ಹೇಳಿದ್ದಾರೆ, ಅವರು ಎಷ್ಟು ತೆಗೆದುಕೊಂಡಿರುತ್ತಾರೆ ಗೊತ್ತಿಲ್ಲ, ಮಾನ್ಯ ಕುಮಾರ್ ಸ್ವಾಮಿ 30 ಅಥವಾ 50 ಕೋಟಿ ರೂ.ಗಳನ್ನು ತೆಗೆದುಕೊಂಡಿರುತ್ತಾರೆ. ಆದರೆ ಅವರು ಸಾವಿರಾರು ಕೋಟಿ ರೂ.ಗಳನ್ನು ಬ್ಯಾಂಕ್‌ನಿಂದ ಹೊಡೆದುಕೊಂಡು ಉಪಯೋಗಿಸಿಕೊಂಡಿದ್ದಾರೆ. ಇದು ನಮ್ಮ-ನಿಮ್ಮ ಜನರ, ರೈತರ ಹಣ. ನಾವು-ನೀವು ಎಲ್ಲರೂ ಸೇರಿಯೇ ಇವತ್ತು ಭ್ರಷ್ಟಾಚಾರ ಮಾಡಿದ ಹಾಗೆ ಆಗಲಿಲ್ಲವೆ? ಎಲ್ಲಿಂದೆ ಸಂಸ್ಕೃತಿ? Who sent MAM Ramswamy to Rajya Sabha from our State? ಇನ್ನು ಕೆಲವರ ಹೆಸರನ್ನು ಹೇಳುವುದಿಲ್ಲ. ಅವರೆಲ್ಲರನ್ನು ಯಾರು ಕಳುಹಿಸಿದ್ದು? ಇದಕ್ಕೆ ಕಡಿವಾಣ ಹಾಕದಿದ್ದರೆ ನಾಳೆ ಈ ಸದನದಲ್ಲಿ ಬರಿ ರಿಯಲ್ ಎಸ್ಟೇಟ್‌ನವರು ಕುಳಿತ್ತಿರುತ್ತಾರೆ. ನಾಣಯ್ಯರವರಂತವರು ಬರಲು ಸಾಧ್ಯವಿಲ್ಲ. ಈ ಭ್ರಷ್ಟಾಚಾರದ ಬಗ್ಗೆ ಯೋಚನೆ ಮಾಡಬೇಕಾಗಿದೆ. Behind every problem there is corruption. ದಾಖಲೆ ಕೊಡಬೇಕು ಎಂದು ಹೊರಟ್ಟಿ ಸಾಹೇಬರು ಹೇಳಿದರು. ಯಾವ ದಾಖಲೆಗಳನ್ನು ಕೊಡಬೇಕು? ನಾನು ಒಬ್ಬ ಮಂತ್ರಿಗಳ ಮನೆಯಲ್ಲಿ ನಡೆದಿರುವುದನ್ನು ಹೇಳುತ್ತೇನೆ, ಅವರ ಹೆಸರನ್ನು ಹೇಳುವುದಿಲ್ಲ. ಅವರ ಮನೆಯಲ್ಲಿ ನಡೆದ ಘಟನೆ, ಆ ಮಂತ್ರಿಗಳು ಹೆಂಡತಿಯವರು ನಿಂತಿದ್ದಾರೆ ಅವರ ಮುಂದೆ ಇರುವ ಟೇಬಲ್ ಮೇಲೆ ಹಣದ ಬಂಡಲ್ ಇದೆ. ಇದನ್ನು ಟಿವಿ ಚಾನೆಲ್‌ನಲ್ಲಿ ಪ್ರಸ್ತಾರ ಮಾಡಲಾಗಿದೆ. ಇದಕ್ಕೆ ದಾಖಲೆಗಳನ್ನು ಕೊಡಿ ಎಂದರೆ ಏನು ಕೊಡಬೇಕು?

Sri ABDUL JABBAR HONNALI : ಯಾರು ಎನ್ನುವುದನ್ನು ಹೇಳಬೇಕು. ಆ ಕಡೆಯವರೆ ಅಥವಾ ಈ ಕಡೆಯವರೆ ಎನ್ನುವುದನ್ನು ಹೇಳಬೇಕಾಗುತ್ತದೆ. Tell us, who gave money to whom. Where money came from? "Hamare paas bhi photos hai" Meaning- We have also got certain photographs.

**ಶ್ರೀ ಲಹರ್ ಸಿಂಗ್ ಸಿರೋಯಾ:–** ನಾವು ಸದನದಲ್ಲಿ ಎಷ್ಟು helpless ಆಗಿದ್ದೇವೆ ಎಂದರೆ, ಮಾನ್ಯ ಮಧುಸೂದನ್‌ರವರು ಮೂರು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರ ಹೆಸರನ್ನು ಹೇಳಿ ಸಾವಿರಾರು ಕೋಟಿ ವಕ್ಫ್ ಆಸ್ತಿಯನ್ನು ಲೂಟಿ ಮಾಡಿ ಆರಾಮಾಗಿ ಇದ್ದಾರೆ. ನಾವು ನಮ್ಮ ಸಭಾಪತಿಗಳವರು rules and regulations etc. ನೋಡಿಕೊಂಡು ಸುಮ್ಮನೆ ಇರುತ್ತೇವೆ. ಮಾನ್ಯ ಲೋಕಾಯುಕ್ತ ಭಾಸ್ಕರ್ ರಾವ್ ಬಗ್ಗೆ ತೀರ್ಮಾನ ಮಾಡಲು 6 ತಿಂಗಳ ಸಮಯವನ್ನು ಕಳೆಯಬೇಕಾಯಿತು. ಬೀದಿಯಲ್ಲಿ ಒಬ್ಬ ಕೂಲಿ ಚರ್ಚೆ ಮಾಡುತ್ತಾನೆ, ಆದರೆ ನಾವು ಇಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲ. ಸದನ ನಡೆದಾಗ ಪ್ರತಿ ದಿನಕ್ಕೆ 35ಲಕ್ಷ ರೂ.ಗಳು ಖರ್ಚಾಗುತ್ತವೆ ಎಂದು ಟಿವಿ ಯಲ್ಲಿ ಹೇಳುತ್ತಿದರು. 35 ಲಕ್ಷ ರೂ.ಗಳನ್ನು ಖರ್ಚು ಮಾಡಿ ಸದನ ನಡೆಸುವಾಗ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡಲು ಅಧಿಕಾರವಿಲ್ಲ ಎಂದರೆ ಇದು ಎಂತಹ ಪದ್ಧತಿ? ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. The Business Advisory Committee of the House is there to facilitate the discussion on such issues. It is not there for stopping discussion on such issues. ಅದು ಬೇರೆಯಾಗುತ್ತದೆ. ಆ ವಿಚಾರ ಚರ್ಚೆ ಮಾಡಬೇಕು ಎಂದರೆ ಅದು ಕೋರ್ಟ್‌ನಲ್ಲಿ ಇದೆ ಬೇಡ ಎನ್ನುವುದು. I remember here late Sri Devraj Urs and Dr.Babasaheb Ambedkar and request all of you to follow and practice their dictum and ideals. Both of them have said many things. However, I do not have time to tell all those things. Recently the Hon.Home Minister made a big statement about 200 overstaying foreigners in our State. We always criticise Police for their excessive highhandedness. These 200 foreigners are involved in many crimes such as, cheating, fraud, accident etc. If the Police takes action, the print media as

well as the electronic media blames the Police only. Many times we have seen that traffic policemen are beaten up by violators of traffic regulations. Policemen are always at the receiving end. ಇದರ ಬಗ್ಗೆ ಪೊಲೀಸ್‌ನವರು ಕ್ರಮ ತೆಗೆದುಕೊಂಡರೆ ಎಲ್ಲಾ ಟಿವಿ ಚಾನೆಲ್‌ರವರು ಪೊಲೀಸ್‌ರವರನ್ನು ಹರಾಜು ಹಾಕುತ್ತಾರೆ. ಪೊಲೀಸ್‌ನವರಿಗೆ ಹೊಡೆಯುವುದು ಈಗ ಎಷ್ಟು ಸರಳವಾಗಿದೆ ಎಂದರೆ, ಯಾರೊ ಒಬ್ಬರು ಮಫ್ಲರ್ ಹಾಕಿಕೊಂಡು ಹೊಡೆದು ಹೋಗುತ್ತಾರೆ. ಪೊಲೀಸ್‌ನವರು ನಮ್ಮ ಅಣ್ಣ–ತಮ್ಮಂದಿರು. Police is there for protection of the public and to maintain law and order.

(ಮುಂದು)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ್ ಪಾಟೀಲ್ ಇಟಗಿ(ಮುಂದು):-**

ಇವತ್ತಿನ ದಿವಸ ಸಣ್ಣ ಮತ್ತು ಅತೀ ಸಣ್ಣ ರೈತರು ಇದ್ದಾರೆ. ಕೆಲವರಿಗೆ 2 ಎಕರೆ, ಇನ್ನು ಕೆಲವರಿಗೆ 3 ಎಕರೆ, ಇನ್ನು ಕೆಲವರಿಗೆ 5 ಎಕರೆ, ಇನ್ನು ಕೆಲವರಿಗೆ 6 ಎಕರೆ ಭೂಮಿ ಇರುತ್ತದೆ. ಇವತ್ತಿನ ದಿವಸ ನಮ್ಮ ಟೆಕ್ನಾಲಜಿ ಬಹಳಷ್ಟು ಮುಂದುವರಿದಿದೆ. ನಾವು ಪ್ರತಿಯೊಂದರಲ್ಲಿಯೂ ಐಟಿ, ಬಿಟಿ ಎಂದು ಹೇಳುತ್ತೇವೆ. ಯಾವುದೇ ಒಂದು information ಇದ್ದರೂ ಅದು 5 ನಿಮಿಷದಲ್ಲಿ ಜಗತ್ತಿನ ಎಲ್ಲಾ ಮೂಲೆಗಳಿಗೂ transfer ಆಗುವಂತಹ ಕೆಲಸ ಆಗುತ್ತಿದೆ. ಅದೇ ರೀತಿ ಇವತ್ತಿನ ದಿವಸ ನಾವು ನಮ್ಮ ಹೊಲದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು, ನಮ್ಮ ಭೂಮಿಯ ಮಣ್ಣಿನ ಫಲವತ್ತತೆ ಯಾವ ಗುಣಮಟ್ಟ ಹೊಂದಿದೆ, ಅದರ phe ಏನಿದೆ, ಆ ಮಣ್ಣಿನ ಫಲವತ್ತತೆ ಯಾವ ಬೆಳೆಗೆ ಯೋಗ್ಯವಾಗಿದೆ, ಎನ್ನುವಂಥದ್ದು ಬಹಳ ಪ್ರಮುಖವಾದಂತಹ ಕೆಲಸ ಆಗಬೇಕು. ಇವತ್ತಿನ ದಿವಸ ಈ ರೀತಿಯಾದಂತಹ ಒಂದು ಸಿಸ್ಟಂ ಗುಜರಾತಿನಲ್ಲಿದೆ. ಅದೇನೆಂದರೆ soil health ಎಂದು ಇದೆ. ಗುಜರಾತಿನಲ್ಲಿ ಯಾವುದೇ ಒಬ್ಬ ರೈತ ಕಂಪ್ಯೂಟರ್‌ನಲ್ಲಿ ತನ್ನ ಪಹಣಿಯ ಹೆಸರನ್ನು ಹಾಗೂ ನಂಬರ್ ಫೀಡ್ ಮಾಡಿದರೆ ತಕ್ಷಣ ಅಲ್ಲಿ ಆತನ ಭೂಮಿಯ ಮಣ್ಣಿನ ಫಲವತ್ತೆ ಯಾವ ರೀತಿ ಇದೆ, ಯಾವ ಯಾವ ಸೀಸನ್‌ನಲ್ಲಿ ಎಂಥೆಂಥ ಬೆಳೆಯನ್ನು ಬೆಳೆಯುವುದಕ್ಕೆ ಯೋಗ್ಯವಾಗಿದೆ ಎಂಬ ಮಾಹಿತಿಯನ್ನು ತೋರಿಸುತ್ತದೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕು. ಏಕೆಂದರೆ, ಇಡೀ ದೇಶದಲ್ಲಿಯೇ ರೈತ ನಮ್ಮ ದೇಶದ ಬೆನ್ನೆಲುಬು ಎಂದು ನಾವು ಪ್ರತೀ ನಿತ್ಯ ಹೇಳುತ್ತೇವೆ. ಕೇವಲ ಹೇಳುವುದೇ ಆಗಿದೆ ವಿನಃ ರೈತರಿಗೆ ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡುತ್ತಿಲ್ಲ.

ಇವತ್ತಿನ ದಿವಸ ಕೃಷಿ ವಿಶ್ವವಿದ್ಯಾನಿಲಯಗಳಿವೆ. ಅವುಗಳಿಗೆ ಬಜೆಟ್ ಅಲೋಕೇಶನ್ ಸಹ ಆಗುತ್ತಿದೆ. ಆದರೆ ಬಹಳ ಕಡಿಮೆ ಆಗುತ್ತಿದೆ. ಇವತ್ತಿನ ದಿವಸ ಕೃಷಿ ವಿಶ್ವವಿದ್ಯಾನಿಲಯಗಳು ಡೆವಲಪ್ ಆದಾಗ ಮಾತ್ರ lab to land technology transfer ಆಗುತ್ತದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಆದರೆ ಅವುಗಳೆಲ್ಲವೂ ಪ್ರಯೋಗಾಲಯದಲ್ಲಿಯೇ ಉಳಿಯುತ್ತವೆ. ಅವು ಕೃಷಿಯ ಭೂಮಿಗೆ ಸರಿಯಾಗಿ ಮುಟ್ಟುವಂತಹ ಕೆಲಸ ಆಗುತ್ತಿಲ್ಲ. ಇವತ್ತಿನ ದಿವಸ ಸಾಕಷ್ಟು "ರೈತ ಸಂಪರ್ಕ" ಕೇಂದ್ರವಿದೆ. ಅವರ ಹತ್ತಿರ Package of Practices ಎಂಬ ಒಂದು ಪುಸ್ತಕ ಇರುತ್ತದೆ.

ಆ ಪುಸ್ತಕದಲ್ಲಿ 20 ವರ್ಷದ ಹಿಂದೆ ಪ್ರತೀ ಎಕರೆಗೆ ಎಷ್ಟು ಕ್ವಿಂಟಾಲ್ ಬೆಳೆ ಬೆಳೆಯಬಹುದು ಎಂದು ಇತ್ತೋ ಇವತ್ತಿಗೂ ಸಹ ಅಷ್ಟೇ ಇದೆ. Package of Practices ಓದಿ ನೋಡಿ. 20 ವರ್ಷದ ಹಿಂದೆ ಒಂದು ಎಕರೆಗೆ 6 ಕ್ವಿಂಟಾಲ್ ಬೆಳೆ ಬೆಳೆಯಬಹುದು ಎಂದು ಇದೆ. ಆದರೆ ಈಗ ರೈತ ಒಂದು ಎಕರೆಗೆ 20 ಕ್ವಿಂಟಾಲ್ ಬೆಳೆ ಬೆಳೆಯುತ್ತಿದ್ದಾನೆ. ಆದರೆ ಪುಸ್ತಕದಲ್ಲಿ ಮಾತ್ರ 6 ಕ್ವಿಂಟಾಲ್ ಬೆಳೆ ಬೆಳೆಯಬಹುದು ಎಂದೇ ಇದೆ.

ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಏನೆಂದರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಸುದೈವದಿಂದ ಕೃಷ್ಣ ಮತ್ತು ತುಂಗಭದ್ರ ನದಿಗಳಿವೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗಿದೆ. ನಾವು ಸಣ್ಣ ಹುಡುಗರಿದ್ದಾಗ ಆ ಪ್ರಾಜೆಕ್ಟ್‌ನಿಂದ ಬ್ಯಾಡಗಿಯಲ್ಲಿ ಮೆಣಸಿನಕಾಯಿ ಬೆಳೆಯುತ್ತಾರೆಂದು ಹೇಳುತ್ತಿದ್ದರು. ಆದರೆ ಇವತ್ತಿನ ದಿವಸ ಬ್ಯಾಡಗಿಯಲ್ಲಿ ಪ್ರತೀ ಎಕರೆಗೆ ಎಷ್ಟು ಕ್ವಿಂಟಾಲ್ ಮೆಣಸಿನಕಾಯಿ ಬೆಳೆಯುತ್ತಾರೆ ಕೇಳಿ. ಇವತ್ತಿನ ದಿವಸ ನಮ್ಮ ಭಾಗದಲ್ಲಿ ಪ್ರತೀ ಎಕರೆಗೆ 21 ಕ್ವಿಂಟಾಲ್ ಡ್ರೈ ಚಿಲ್ಲಿ ಬೆಳೆಯುತ್ತೇವೆ. ಆದರೆ ಇಲ್ಲಿ ರೈತರಿಗೆ ಸರಿಯಾಗಿ ಪ್ರೋತ್ಸಾಹ ಸಿಗುತ್ತಿಲ್ಲ. ಅಲ್ಲಿ ಹೆಚ್ಚಿನ ರೀತಿಯಲ್ಲಿ ಸರ್ಕಾರದ ವತಿಯಿಂದ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಆಗಬೇಕಾಗಿದೆ. ಎಪಿಎಂಪಿ ಮಾರ್ಕೆಟ್ ಫೆಸಿಲಿಟಿ ಸಿಗಬೇಕಾಗಿದೆ, ಇನ್ನೂ ಸಾಕಷ್ಟು ಇಂಪ್ರೂಮೆಂಟ್ ಆಗಬೇಕಾಗಿದೆ. ಏಕೆಂದರೆ, ಈ ಮೊದಲು ಜನರಿಗೆ ಟೆಕ್ನಾಲಜಿ ಗೊತ್ತಿರಲಿಲ್ಲ. ಈ ಮೊದಲು ಕೆಲವು ಜನರು ಬ್ಯಾಡಗಿ ಮೆಣಸಿನ ಕಾಯಿಯನ್ನು ಬ್ಯಾಡಗಿಯಲ್ಲಿ ಮಾತ್ರ ಬೆಳೆಯುತ್ತಾರೆ ಎಂಬ ಕಲ್ಪನೆಯಲ್ಲಿದ್ದರು. ಆದಕಾರಣ ವ್ಯವಸಾಯವನ್ನು ಅಭಿವೃದ್ಧಿ ಪಡಿಸಬೇಕೆಂದರೆ ಇವೆಲ್ಲವನ್ನೂ ಗಮನಕ್ಕೆ ತರುವಂತಹ ಕೆಲಸ ಆಗಬೇಕು. ಅವರ ಭೂಮಿಯಲ್ಲಿ ಎಂತಹ ಫಲವತ್ತಾದ ಮಣ್ಣಿದೆ, ಅವರು ಯಾವ ರೀತಿಯಾದಂತಹ ಬೆಳೆಯನ್ನು ಬೆಳೆಯಬಹುದು ಎಂಬ ವಿಷಯವನ್ನು ತಿಳಿಸುವಂತಹ ಕೆಲಸ ಆಗಬೇಕು. ಇವತ್ತಿನ ದಿವಸ ತೆಂಗಿನಕಾಯಿಯನ್ನು ಕೇವಲ ತುಮಕೂರಿನಲ್ಲಿ ಮಾತ್ರ ಬೆಳೆಯಬಹುದು, ರಾಯಚೂರಿನಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ ಎಂಬ ಕಲ್ಪನೆ ಜನರಲ್ಲಿದೆ. ಆಂತಹ ಭಾವನೆಯನ್ನು ಹೋಗಲಾಡಿಸುವಂತಹ ಕೆಲಸ ಆಗಬೇಕಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ಕೆಲವು crops suit ಆಗುತ್ತವೆ. ಉದಾಹರಣೆಗೆ ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಯಲ್ಲಿ for horticultural crops ಸಿಕ್ಕಾಪಟ್ಟೆ potential ಇದೆ. ನಮ್ಮ ಕರ್ನಾಟಕದಲ್ಲಿ ಅತ್ಯಂತ suitable soil ಇರುವುದು ಎಲ್ಲೆಂದರೆ ನಮ್ಮ ಬಾಗಲಕೋಟೆ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿದೆ ಅಂದರೆ ಅಲ್ಲಿ red soil ಇದೆ. ಆದರೆ ಅಲ್ಲಿ ಸರಿಯಾಗಿ ಟೆಕ್ನಾಲಜಿ ಇಲ್ಲ. ಆದಕಾರಣ

ರಾಜ್ಯ ಸರ್ಕಾರಗಳು ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಹೆಚ್ಚಿನ ಹಣವನ್ನು ಮೀಸಲಿಡುವಂತಹ ಕೆಲಸ ಮಾಡಬೇಕೆಂದು ಹೇಳ ಬಯಸುತ್ತೇನೆ.

ಇಷ್ಟೇ ಅಲ್ಲದೆ ನೀರಾವರಿ ಬಗ್ಗೆ ಹೇಳಬೇಕೆಂದರೆ, agriculture depends upon irrigation. ನಮ್ಮಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಇದೆ. ಕಾವೇರಿ ಜಲಾನಯನ ಪ್ರದೇಶವಿದೆ, ಅದೇ ರೀತಿ ಕೃಷ್ಣ ಜಲಾನಯನ ಪ್ರದೇಶವಿದೆ. ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಿಂದ ಸುಮಾರು 15 ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸಲಾಗುತ್ತಿದೆ. ಇವತ್ತಿನ ದಿವಸ irrigation potential created is 15 lakhs acres. ಸುಮಾರು 20 ರಿಂದ 25 ವರ್ಷಗಳ ಹಿಂದೆ ಮಾಡಿರುವಂತಹ ಕಾಲುವೆಗಳಿವೆ. ರಾಜ್ಯ ಸರ್ಕಾರಗಳು ಇವತ್ತಿನ ದಿವಸ TLBC ಮತ್ತು NLBC ನಲ್ಲಿ for re-modernization ಯುಪಿಎ ಸರ್ಕಾರ ಇದ್ದಾಗ ಸುಮಾರು 4 ಸಾವಿರ ಕೋಟಿ ರೂಪಾಯಿಗಳು ಬಿಡುಗಡೆ ಮಾಡಿತ್ತು. ಅದು revise ಕೂಡ ಆಗಿದೆ. ಅದೇ ರೀತಿ ಈ ವರ್ಷ ಸಹ revise ಆಗುವಂತಹ ಕೆಲಸ ಮಾಡಬೇಕು. ನಾವು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಹೆಚ್ಚಿಗೆ potential create ಮಾಡುವುದಕ್ಕಿಂತ ಈಗಾಗಲೇ ಪ್ರಾಜೆಕ್ಟ್‌ಗಳನ್ನು ಏನು ನಿರ್ಮಾಣ ಮಾಡಿದ್ದೀರಿ, ಆ ಪ್ರಾಜೆಕ್ಟ್‌ಗಳಿಂದ ಸಂಪೂರ್ಣವಾಗಿ tail end ಇರಲಾರದಂತೆ ನೀರು ಹರಿಸುವಂತಹ ಕೆಲಸಕ್ಕೆ ಮೊದಲು ಪ್ರಾಮುಖ್ಯತೆಯನ್ನು ಕೊಡುವಂತಹ ಕೆಲಸ ಮಾಡಬೇಕು. ಏಕೆಂದರೆ, ಈಗ ನಾವು ಹೊಸ ಕಾಲುವೆ ಮಾಡಬೇಕೆಂದರೆ ಸಿಕ್ಕಾಪಟ್ಟೆ ದುಡ್ಡು ಖರ್ಚು ಮಾಡಬೇಕಾಗುತ್ತದೆ. ಆ ದುಡ್ಡು ಕೊಡುವ ಬದಲು ಇರುವಂತಹ ಕಾಲುವೆಗಳಲ್ಲಿಯೇ ನೀರನ್ನು ಹರಿಸಿ ಸಂಪೂರ್ಣವಾಗಿ tail end ವರೆಗೆ ನೀರು ಮುಟ್ಟುವಂತಹ ಕೆಲಸ ಆಗಬೇಕು. ಇವತ್ತಿನ ದಿವಸ ಹೊಸದಾಗಿ ಒಂದು ಪ್ರಾಜೆಕ್ಟ್ ನಿರ್ಮಾಣ ಮಾಡುತ್ತಾರೆ, ಉದಾಹರಣೆಗೆ ರಾಂಪುರ ಏತ ನೀರಾವರಿ ಎಂದು ಮಾಡುತ್ತಾರೆ. ಅದಕ್ಕೆ design engineers 16 distributaries ನ ಮೊದಲೇ ನೋಟಿಫೈ ಮಾಡುತ್ತಾರೆ. ಅಂದರೆ ಇದು ಇಂತಹ ಪ್ರಾಜೆಕ್ಟ್, ಇಲ್ಲಿ ಇಷ್ಟು ಕ್ಯೂಸೆಕ್ಸ್ ನೀರು ಹರಿಯುತ್ತದೆ, ಒಟ್ಟು 16 distributaries ಇರುತ್ತದೆ, ಇದರಿಂದ ಇಷ್ಟು ಲಕ್ಷ ಎಕರೆ ಭೂಮಿಗೆ ನೀರಾವರಿಗೆ ದೊರೆಯುತ್ತಿದೆ ಎಂದು ಮೊದಲು ಡಿಸೈನ್ ಮಾಡಿ ಕೊಡುತ್ತಾರೆ. ಅದು construct ಆಗಬೇಕು. Main canal ಆದಮೇಲೆ distributaries ಆಗುತ್ತದೆ. ಅದಾದಮೇಲೆ ಆಫೀಸರ್ಸ್ ಕೆಲವೊಂದನ್ನು ಬಿಟ್ಟಿರುತ್ತಾರೆ. ಅಂದರೆ 500 ಎಕರೆ, 600 ಎಕರೆ

ಭೂಮಿ left out ಆಗಿರುತ್ತದೆ. Left out ಆದಮೇಲೆ 5a canal ಮಾಡಿ ಎಂದು ರೈತರು ಬಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತಾರೆ, ಆಗ ಇವರು 5a canal ಮಾಡುತ್ತಾರೆ. ಇನ್ನೊಬ್ಬರು ಬಂದು 9a canal ಮಾಡಿ ಎಂದು ಹೇಳುತ್ತಾರೆ. 9a canal ಮಾಡುತ್ತಾರೆ. ಇನ್ನೊಬ್ಬ ಬಂದು 12a canal ಮಾಡಿ ಎಂದು ಹೇಳುತ್ತಾರೆ, ನಂತರ 12a canal ಮಾಡುತ್ತಾರೆ. ಆದರೆ 16, 17, 18 ಮಾಡಿರುವಂಥವರ ಗತಿ ಏನಾಗಬೇಕು? ಅದರ ಬಗ್ಗೆಯೂ ಸಹ ಆಲೋಚನೆ ಮಾಡಬೇಕಲ್ಲವೆ. ಇವತ್ತಿನ ದಿವಸ ಯಾವುದೇ ಒಂದು ಪ್ರಾಜೆಕ್ಟ್ ಮಾಡಿದಮೇಲೆ, ಮೊದಲು ನಾವು ಎಷ್ಟು ಎಕರೆಗೆ potential create ಮಾಡಿರುತ್ತೇವೆ ಅವರೆಲ್ಲರಿಗೂ ನೀರನ್ನು ಕೊಟ್ಟು ನಂತರ ಎಷ್ಟು ಬೇಕೋ ಅಷ್ಟನ್ನು ಇನ್‌ಕ್ರೀಸ್ ಮಾಡುವಂತಹ ಕೆಲಸ ಮಾಡಬೇಕು. ಅದೂ ಕೂಡ ವೈಜ್ಞಾನಿಕವಾಗಿ ಇಲಾಖೆಯವರು ಮಾಡಬೇಕು.

ನಮ್ಮ ಸರ್ಕಾರ ಘೋಷಣೆ ಮಾಡಿದಂತೆ ಪ್ರತೀ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಬಜೆಟ್‌ನಲ್ಲಿ ಇಡುತ್ತೇವೆ ಎಂಬ ಮಾತನ್ನು ಹೇಳಿದ್ದರು. ಅದರ ಪ್ರಕಾರ ಇವತ್ತಿನ ದಿವಸ 10 ಸಾವಿರದಿಂದ ಸುಮಾರು 15 ಸಾವಿರ ಕೋಟಿ ರೂಪಾಯಿಗಳಷ್ಟು ನೀರಾವರಿಗಾಗಿ ಬಜೆಟ್‌ನಲ್ಲಿ ಇಡುವಂತಹ ಕೆಲಸವಾಗಿದೆ. ಆದರೂ ಕೂಡ ಇನ್ನೂ ನಾವು ಸಾಕಷ್ಟು ನೀರಾವರಿ ಪ್ರಾಜೆಕ್ಟ್ ಮಾಡುವಂತಹ ಕೆಲಸ ನಮ್ಮೆಲ್ಲರ ಮುಂದೆ ಇದೆ. ನನ್ನ ಒಂದು ಕಳಕಳಿಯ ವಿನಂತಿ ಏನೆಂದರೆ, ನೀರಾವರಿ ಪ್ರಾಜೆಕ್ಟ್‌ಗಳನ್ನು ವೈಜ್ಞಾನಿಕವಾಗಿ ನಿರ್ಮಾಣ ಮಾಡಬೇಕು. ಇವತ್ತಿನ ದಿವಸ ಪ್ರಾಜೆಕ್ಟ್‌ಗಳು ವಿಳಂಬವಾಗುವುದಕ್ಕೆ ಕಾರಣವೇನೆಂದರೆ, ಉದಾಹರಣೆಗೆ ಹೇಳಬೇಕೆಂದರೆ, ಒಂದು ಪ್ರಾಜೆಕ್ಟ್‌ಗೆ ಒಂದು ಸಾವಿರ ಕೋಟಿಗೆ ಡಿಸೈನ್ ಮಾಡಿದರೆ ಅದು ಕಂಪ್ಲೀಟ್ ಆಗಬೇಕೆಂದರೆ ಆರು ಸಾವಿರ ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಅದಕ್ಕೆ ಪ್ರಮುಖವಾದಂತಹ ಕಾರಣವೇನೆಂದರೆ, land acquisition process. ನಾವು ಯಾವುದೇ ಒಂದು ಪ್ರಾಜೆಕ್ಟ್ ಮಾಡಬೇಕೆಂದರೆ, land acquisition process initiate ಮಾಡುತ್ತಾರೆ. ಮೊದಲನೆಯದಾಗಿ ಯಾವುದೇ ಒಂದು ಕಾಲುವೆ ನಿರ್ಮಾಣ ಮಾಡಬೇಕಾದರೆ, ಯಾವುದೇ ಕಾಲುವೆ ಇರಲಿ ಮೊದಲು joint inspection ಆಗುವ ರೀತಿ ಆ ಕಾಲುವೆ construction ಗೆ ಕೊಡುವಂಥದ್ದೇ ಅಲ್ಲ. ಇವತ್ತು ಕಾಲುವೆ ಕೆಲಸ ಮುಗಿದು ಹತ್ತು ವರ್ಷಗಳ ಕಾಲ ನೀರು ಹರಿದರೂ ಸಹ ಅಲ್ಲಿ joint inspection ಆಗಿಲ್ಲ, ಯಾರ ಹೊಲ ಹೋಗಿದೆ ಎನ್ನುವುದು ತಿಳಿಯುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲಿ ರೈತರು ಗಟ್ಟಿ ಇರುತ್ತಾರೆ ಅವರು ಅಲ್ಲಿ ಕಾಲುವೆಯನ್ನು

ತೋಡುವುದಕ್ಕೇ ಬಿಡುವುದಿಲ್ಲ. land acquisition process, 4(1), 6(1), 9, 9(a), 12, 12(a) notification ಇವೆಲ್ಲಾ ಆಗಿ ಬರುವುದಕ್ಕೆ ಮೂರರಿಂದ ಐದು ವರ್ಷ land acquisition process ಆಗುತ್ತದೆ. ಇದರಿಂದಾಗಿ ಪ್ರಾಜೆಕ್ಟ್ ಡಿಲೇ ಆಗುತ್ತದೆ. ಇವತ್ತಿನ ದಿವಸ ಒಂದು ಪ್ರಾಜೆಕ್ಟ್‌ನ ಕಾಸ್ಟ್ ಒಂದು ಸಾವಿರ ಕೋಟಿ ರೂಪಾಯಿ ಇದ್ದಿದ್ದು, ಅದು ಮುಗಿಯುವುದರೊಳಗೆ ಐದರಿಂದ ಆರು ಸಾವಿರ ಕೋಟಿ ರೂಪಾಯಿಗಳಷ್ಟು ಆಗುತ್ತದೆ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳಬಯಸುತ್ತೇನೆ. ಏನೆಂದರೆ, ನಮ್ಮ ರಾಜ್ಯ ಸರ್ಕಾರ ಇಲಾಖೆಗಳಿಗೆ ಪ್ರತೀ ದಿವಸ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತದೆ. ನಾವು ಯಾವುದಾದರು ಸಚಿವರ ಬಳಿ ಹೋದರೆ ಉದಾಹರಣೆಗೆ ಲೋಕೋಪಯೋಗಿ ಇಲಾಖೆಯ ಸಚಿವರ ಕಛೇರಿಗಾಗಲಿ ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರ ಕಛೇರಿಗಾಗಲಿ ಹೋದರೆ ನೋಡಪ್ಪ, ನಿಮ್ಮ ಜಿಲ್ಲೆಗೆ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಮಾನ್ಯ ಸಚಿವರೇನೋ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ಎಸ್ಟಿಮೇಟ್ ಮಾಡಿ ಅಪ್ರೂವಲ್ ಆಗಿ ಬರುವುದಕ್ಕೆ ಒಂದೆರಡು ವರ್ಷಗಳು ಬೇಕಾಗುತ್ತದೆ. ಉದಾಹರಣೆಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ಅಂಬೇಡ್ಕರ್ ಭವನ ಇದೆ. ಅದನ್ನು ಪ್ರಾರಂಭ ಮಾಡಿ 5 ವರ್ಷಗಳಾಗಿದೆ, ಆದರೂ ಸಹ ಇನ್ನೂ ಪೂರ್ಣಗೊಂಡಿಲ್ಲ. ಆದಕಾರಣ ಈ ಸಂದರ್ಭದಲ್ಲಿ ನನ್ನ ಸಲಹೆ ಏನೆಂದರೆ, ಇವತ್ತಿನ ದಿವಸ ಯಾವುದೇ ಇಲಾಖೆಯಲ್ಲಿಯೂ ಹಣ ಬಿಡುಗಡೆ ಮಾಡಿದರೂ, ನೀವು ಬಿಡುಗಡೆ ಮಾಡಿದ ದಿವಸದಿಂದಲೂ ಮೂರು ತಿಂಗಳ ಸಮಯ ಕೊಡಿ. ಮೂರು ತಿಂಗಳ ಒಳಗೆ ಎಸ್ಟಿಮೇಟ್ ಆಗಿ ಅಪ್ರೂವಲ್ ಆಗಬೇಕು. ಇಲ್ಲದಿದ್ದರೆ ಸಂಬಂಧಪಟ್ಟಂತಹ ಅಧಿಕಾರಿಗಳು ಯಾರು ಇರುತ್ತಾರೆ ಅವರನ್ನು ತೆಗೆಯುವಂತಹ ಕೆಲಸ ಮಾಡಬೇಕು. ಇಲ್ಲವೆಂದರೆ ಆರಾರು ತಿಂಗಳು, ವರ್ಷಾನುಗಟ್ಟಳೆ ಆದರೂ ಆ ಆಫೀಸಿಗೆ ಹೋಗಿದೆ, ಈ ಆಫೀಸಿಗೆ ಹೋಗಿದೆ ಎಂದು ಕಾಲ ಕಳೆದರೆ ಕೆಲಸ ಯಾವಾಗ ಆಗಬೇಕು? ಇವತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದಂತಹ ಹಣ ಜನರಿಗೆ ಕಾಣಬೇಕೆಂದರೆ ಎಷ್ಟು ದಿವಸ ಬೇಕಾಗುತ್ತದೆ? ಇದೂ ಕೂಡ ಬಹಳ ಮುಖ್ಯವಾಗಿದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಮುಂದು)

**ಶ್ರೀ ಲೆಹರ್ ಸಿಂಗ್ ಸಿರೋಯಾ (ಮುಂದು)**

ಏನು ಮಾಡಿದರೂ ಏನೂ ಆಗುವುದಿಲ್ಲ, ಏಕೆಂದರೆ ಅವನು ಯಾರೋ ಶ್ರೀಮಂತ ಇರುತ್ತಾನೆ ಅಥವಾ ರಾಜಕಾರಣಿಗಳಿಂದ ರಕ್ಷಣೆ ಪಡೆದಿರುವವನಿರುತ್ತಾನೆ, ಅವನಿಗೆ ಫೋನ್ ಮಾಡಿದರೆ ಮುಗಿಯುತ್ತದೆ. ಪೊಲೀಸರನ್ನು ಡಿಮಾರಲೈಸ್ ಮಾಡುವುದು ಕೊನೆಯಾಗಬೇಕು. ಪಾಶ್ಚಾತ್ಯದವರಿದ್ದರೂ, ಅವರು ಯಾವ ಜಾತಿ ಇರಲಿ ಯಾರೇ ಇರಲಿ ಕ್ರಿಮಿನಲ್‌ಗಳೆಂದರೆ ಕ್ರಿಮಿನಲ್‌ಗಳು. ಇನ್ನೊಂದು ಉದಾಹರಣೆ ಎಂದರೆ Sri M.N.Dinesh, who was the I.P.S., officer from Karnataka, was posted to the State of Rajastan. He was arrested in the Ishrath Sohrabuddin encounter case. He languished in jail for eight years. ಇದು ಕಾಂಗ್ರೆಸ್ ಸಂಸ್ಕೃತಿಯೇ? ಅವರಿಗೆ ತಪ್ಪು ಅಫಿಡವಿಟ್ ಕೊಟ್ಟು ಜೈಲಿನಲ್ಲಿ ಇರುವಂತೆ ಆಯಿತು. ಕ್ರಿಮಿನಲ್‌ಗಳಿಗೆ ಜಾತಿ ಇಲ್ಲ, ಆಧಾರ ಇರುವುದಿಲ್ಲ, ಅವರು ಕ್ರಿಮಿನಲ್‌ಗಳಾಗಿಯೇ ಇರುತ್ತಾರೆ. ನಾವು ದಿನವೂ ನೋಡಿ ಅವರ ಜಾತಿ ಅವರ ಜಾತಿಯವರನ್ನೇ ಸಾಯಿಸುತ್ತಾರೆ. Police morale should not be down and the police should be protected and permitted to take actions. ಈ ಮೊದಲು ನಾನು ಶ್ರೀ ಬಿ. ರಾಚಯ್ಯನವರನ್ನು ನೆನಪಿಸಿಕೊಳ್ಳುವ ಸಂದರ್ಭ ಹೇಳಿದ್ದೇನೆ. ಅವರು ಕ್ರಿಮಿನಲ್‌ಗಳನ್ನು ಮುಲಾಜಿಲ್ಲದೇ ಎಲಿಮಿನೇಟ್ ಮಾಡಿದರು ಎಂದು ಗೊತ್ತಿರುವ ಸಂಗತಿಯಾಗಿದೆ. ಈ ಜಾತಿ, ಆ ಜಾತಿ ಎಂದು ಫೋನ್ ಬಂದಾಗ ಮಾನ್ಯ ಗೃಹ ಸಚಿವರು ಏನೂ ಮಾಡುವಂತಿಲ್ಲ, Of late the moral policing interference is increasing. Moral policing is reaching such a situation that the police have become helpless. ಪೊಲೀಸರಿಗೆ ಮನೋಬಲ ಜಾಸ್ತಿ ಇರಬೇಕು. We have to encourage the police to take stern action against criminals and the Home Minister should ensure that. ಅದು ನಿಜ. ರಿಯಲ್ ಎಸ್ಟೇಟ್‌ನಲ್ಲಿ ಕೆಲವು ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳ ವಿಚಾರಗಳು ಇರುವುದು ನಿಜ. ಇದರ ಬಗ್ಗೆ ಕಮಿಷನರ್ ಹತ್ತಿರ ಕೇಳಿದಾಗ ADGP (Intelligence) ಅವರನ್ನು ಕರೆದು

who is doing all these things ಎಂದು ಹೇಳುತ್ತಾರೆ. ಇದರಲ್ಲಿ ಬಹಳ ಸೀಕ್ರೆಟ್ ಏನೂ ಇಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸದಸ್ಯರು Home Minister should become bold ಅಥವ he should make the Police Officers bold ಎಂದು ಹೇಳುತ್ತಿದ್ದಾರೆಯೇ?

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಮಾನ್ಯ ಪರಮೇಶ್ವರ್‌ರವರ ಅಧ್ಯಕ್ಷತೆಯಲ್ಲಿ ಸರ್ಕಾರ ಬಂದಿದ್ದು, ಅವರನ್ನು ಎರಡನೆ ಸಾಲಿನಲ್ಲಿ ಕೂರಿಸುತ್ತಿದ್ದಾರೆ. ಅವರು ನಮ್ಮ ಸದಸ್ಯರು ಮತ್ತು ಗೌರವ ಕಾಪಾಡಬೇಕು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಸ್ನೇಹದಲ್ಲಿ ಅವರಿಗೆ ಒಂದು ಸೀಟು ಕೊಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮನಸ್ಸಿನ ಭಾವನೆಯನ್ನು ಅರ್ಥಮಾಡಿಕೊಂಡಿರಬಹುದು. ಅವರು ಮೊದಲನೆ ಸಾಲಿನಲ್ಲಿ ಮಾನ್ಯ ಪರಮೇಶ್ವರ್‌ರವರಿಗೆ ಸೀಟು ಕೊಡಬೇಕೆಂದು ಇಷ್ಟ ಪಡುತ್ತಿದ್ದಾರೆ. ಅದಕ್ಕೆ ಅವರ ಸದಸ್ಯರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮ ಕೈಯಲ್ಲಿ ಇದ್ದರೆ ಅವರಿಗೆ ಬಿಡುತ್ತಿರಲಿಲ್ಲ. ಅವರನ್ನು ವಿಧಾನ ಸಭೆಯಲ್ಲಿ ಮೂರನೆಯ ಸೀಟಿನಲ್ಲಿ ಕೂರಿಸುತ್ತಿದ್ದು, ಅವರಿಗೆ ನಾಚಿಕೆಯಾಗುವುದಿಲ್ಲವೇ? ಒಬ್ಬ ಕೆಪಿಸಿಸಿ ಅಧ್ಯಕ್ಷರು ಹಾಗೂ ಹಿರಿಯರನ್ನು ಮೂರನೆಯ ಸ್ಥಾನದಲ್ಲಿ ಕೂರಿಸುವಾಗ ತಣ್ಣಗೆ ಇದ್ದಾರೆ. ಅವರು ಬಡಿದಾಡಲಿ, ನಾನು ಬೇಡ ಎನ್ನುವುದಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:-** ಇವತ್ತಿನ ರಾಷ್ಟ್ರ ರಾಜಕಾರಣದಲ್ಲಿ ಮಾನ್ಯ ಅಡ್ವಾನಿಯವರನ್ನು ಎಲ್ಲಿ ಕೂರಿಸಿದ್ದಾರೆ ಎಂದು ಹೇಳಬೇಕಾಗುತ್ತದೆ. ನಾವು ಆ ರೀತಿ ಮಾಡುವುದಿಲ್ಲ.

(ಗೊಂದಲ)

**ಉಪ ಸಭಾಪತಿಯವರು:-** ದಯವಿಟ್ಟು ಎಲ್ಲರೂ ಸುಮ್ಮನಿರಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಒಬ್ಬರಾದರೂ ಅವರ ಪರವಾಗಿ ಮಾತನಾಡುವುದಲ್ಲವೇ? ಅದು ಬೇಜಾರು.

**ಶ್ರೀ ಆರ್.ವಿ. ವೆಂಕಟೇಶ್:-** ಈ ರೀತಿ ಮಾಡಿದರೆ ಹೆದರುವುದಿಲ್ಲ.

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಇನ್ನು ವಿಕ್ಟೋರಿಯಾ ಆಸ್ಪತ್ರೆಗೆ ಒಂದು ನಿಯೋಗ ಹೋಗಿ ನೋಡಬೇಕು, ಅಲ್ಲಿ ನೋಡಿದಾಗ ಕಣ್ಣಲ್ಲಿ ನೀರು ಬರುತ್ತದೆ. ಯಾವುದೋ ಸಂದರ್ಭದಲ್ಲಿ ನಾನು ಹೋಗಿದ್ದೇನೆ. ನಾವು ಫೈವ್ ಸ್ಟಾರ್ ಹೋಟೇಲ್ ಕಟ್ಟುತ್ತೇವೆ, ನಮ್ಮ ಮನೆಗಳಲ್ಲಿ ಈಜುಕೊಳವನ್ನು ಕಟ್ಟುತ್ತೇವೆ. ಒಂದು ಬಾತ್‌ರೂಂಗೆ ಒಂದೊಂದು ಕೋಟಿ ಖರ್ಚು ಮಾಡುತ್ತೇವೆ. ಈ ರೀತಿ ಇರುವಾಗ ಆಸ್ಪತ್ರೆಗಳು ಆ ಗತಿಯಲ್ಲಿ ಇರಬೇಕೆ? ನಾನು ಫಂಡ್‌ನಲ್ಲಿ ರೂ.2.5 ಕೋಟಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಅನುಮತಿ ಇಲ್ಲದಿದ್ದರೂ ವಿಶೇಷ ಅನುಮತಿಯನ್ನು ತೆಗೆದುಕೊಂಡು ಕೊಟ್ಟಿದ್ದೇನೆ. ನನ್ನ ಮನವಿ ಏನೆಂದರೆ ಆಸ್ಪತ್ರೆ ಗುಣಮಟ್ಟ ಕಾಪಾಡಬೇಕು, ವೈದ್ಯರು ಹೋಗುವುದಿಲ್ಲ. ಹೀಗಾದರೆ ಬಡವರು ಏನು ಮಾಡಬೇಕು? ನಮಗೆ ಒಳ್ಳೊಳ್ಳೆಯ ಆಸ್ಪತ್ರೆಗಳು ಮತ್ತು ಸರ್ಕಾರ ಹಣ ಕೊಡುವುದರಿಂದ ಹೊರದೇಶಗಳಿಗೂ ಹೋಗುತ್ತೇವೆ. ಆದರೆ ಬಡವರು ಎಲ್ಲಿಗೆ ಹೋಗಬೇಕು? ನಾವು ಹುಟ್ಟಿನಿಂದ ಶ್ರೀಮಂತರಲ್ಲ. ಬಡವರಿಗೆ ಸಮಸ್ಯೆ ಬಂದಾಗ ಎಲ್ಲಿ ಹೋಗುತ್ತಾರೆ? What about the poor people? Where they will go? Are they in a position to give lakhs of rupees to Hospitals? ಆಸ್ಪತ್ರೆ ಗುಣಮಟ್ಟ ಉತ್ತಮಪಡಿಸಲು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಸ್ವಚ್ಛತೆಗೂ ಗಮನ ಕೊಡಬೇಕು. I want to caution the Government about one thing. ಪ್ರತಿ ದೇಶದಲ್ಲಿ ಚುನಾಯಿತ ಸರ್ಕಾರವನ್ನು ಹೇಗೆ ಡೆಮಾಲೀಷ್ ಮಾಡಬೇಕೆಂದು ಪಿತೂರಿ ನಡೆಯುತ್ತಿದೆ. ಮೊನ್ನೆ ನಡೆದ ರೈತರ ರ್‍ಯಾಲಿಯ ಬಗ್ಗೆಯೂ ನನಗೆ ಡೌಟ್ ಬರುತ್ತಿದೆ. ರೈತರ ಚಳುವಳಿ ಹೇಗೆ ನಡೆಯುತ್ತವೆ, whether any laymen have joined in that agitation and creating the law and order problem ಎಂದು ತನಿಖೆ ಮಾಡಬೇಕು. ಗೋಲಿಬಾರ್ ಆಗಿ ಸರ್ಕಾರ ಹೋಗುತ್ತದೆ. ವೀರೇಂದ್ರ ಪಾಟೀಲರ ಅಧಿಕಾರದಲ್ಲಿ ರಾಮನಗರದಲ್ಲಿ ಗೋಲಿಬಾರ್ ಆಗಿ ಸರ್ಕಾರ ಹೋಯಿತು. ಆದ್ದರಿಂದ ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ, ಅದೇನೆಂದರೆ agitation ವಿಷಯದಲ್ಲಿ ಮತ್ತು ಜನಾಂದೋಳನದಲ್ಲಿ ಕ್ರಿಮಿನಲ್ಸ್ ಒಳಗೊಳ್ಳಬಾರದು, ಕಾನೂನು-ಸುವ್ಯವಸ್ಥೆ ಸಮಸ್ಯೆ ಬರಬಾರದು, ಶಿಕ್ಷಕರ ಮತ್ತು ರೈತರ ಸಮಸ್ಯೆ ಪರಿಹರಿಸಬೇಕು

ಎಂಬ ಕಳಕಳಿ ಇದೆ. ನಾವು ಅದಕ್ಕಾಗಿ ಇಲ್ಲಿದ್ದೇವೆ. Jat agitation ಏನಾಗಿದೆ, ಕಾಂಗ್ರೆಸ್ ಸಂಸ್ಕೃತಿ ಬಗ್ಗೆ ಹೇಳುವುದಿಲ್ಲ, ಏಕೆಂದರೆ ಕಾಂಗ್ರೆಸ್‌ನವರು ಸಿಕ್ಕಹಾಕಿಕೊಂಡರೆ ನೋವು ಆಗುತ್ತದೆ. In the Jat agitation, they have destroyed properties valued crores and crores of rupees. Are you waiting for such things to happen in Karnataka also? ಎಲ್ಲಾ ಪಕ್ಷ ಮತ್ತು ರಾಜಕಾರಣಿಗಳು ಸೇರಿ we should apply our mind and see that in such agitations, ಕ್ರಿಮಿನಲ್ ಎಲಿಮೆಂಟ್ಸ್ ಬರಬಾರದು, ಇದು ಎಲ್ಲರ ಕರ್ತವ್ಯವಾಗಿದೆ. These agitations should be in a peaceful manner, because police also get agitated in such agitations. ಬಡವರು ಇರುತ್ತಾರೆ. ಇದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನನಗೆ ಬಜೆಟ್‌ನಲ್ಲಿ ಅವಕಾಶ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಮುಂದಿನ ಅಧಿವೇಶನದಲ್ಲಿ ಪೂರ್ತಿ ಚರ್ಚೆಯಾಗಬೇಕು. ನಿನ್ನೆ ಮಾನ್ಯ ನರೇಂದ್ರ ಮೋದಿಯವರು ಶ್ರೀ ರಾಜೀವ್‌ಗಾಂಧಿಯವರನ್ನು quote ಮಾಡಿ ಹೇಳಿದ್ದಾರೆ. ಅಧಿವೇಶನ ನಡೆದು ಚರ್ಚೆಯಾಗಬೇಕು. ಆ ಸಂದರ್ಭದಲ್ಲಿ ಪೀಠವು ಅವಕಾಶ ಕೊಡಬೇಕು. ವಾಚ್ ಚರ್ಚೆಗೆ ಸಮಯ ತೆಗೆದುಕೊಂಡು ಇದರಲ್ಲಿ ಒಂದು ಗಂಟೆ ಕೊಡಬಹುದಾಗಿತ್ತು. ಆದ್ದರಿಂದ ತಮಗೆ ಹಾಗೂ ವಿರೋಧ ಪಕ್ಷಕ್ಕೂ ಮನವಿ ಮಾಡುವುದೇನೆಂದರೆ, ಬರುವ 13 ದಿನಗಳ ಅಧಿವೇಶನದಲ್ಲಿ ಸೂಕ್ತವಾಗಿ ಚರ್ಚೆಯಾಗಬೇಕು. ಧನ್ಯವಾದಗಳು.

**ಉಪ ಸಭಾಪತಿಯವರು:-** ಶ್ರೀ ಎಂ.ಡಿ. ಲಕ್ಷ್ಮೀನಾರಾಯಣರವರು ಇಲ್ಲ, ನಂತರ ಶ್ರೀ ಬಸನಗೌಡ ಆರ್. ಯತ್ನಾಳ್‌ರವರು ಮಾತನಾಡಿ.

**ಶ್ರೀ ಬಸನಗೌಡ ಆರ್. ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿಗೆ ವಿಜಯಪುರ ಮತ್ತು ಬಾಗಲಕೋಟೆ ಸ್ಥಳೀಯ ಸಂಸ್ಥೆಗಳಿಂದ ಅಲ್ಲಿನ ಜನರ ಆಶೀರ್ವಾದಿಂದ ಆಯ್ಕೆಯಾದ ಮೇಲೆ ಮೊದಲನೆಯ

ಬಾರಿ ವಿಧಾನ ಪರಿಷತ್ತಿನಲ್ಲಿ ವಿಶೇಷವಾಗಿ ಘನತೆವೆತ್ತ ರಾಜ್ಯಪಾಲರು ರಾಜ್ಯದ ವಿಧಾನ ಮಂಡಲದಲ್ಲಿ ಮಾಡಿದ ಭಾಷಣದ ಅಭಿನಂದನೆಯ ವಿಷಯದ ಮೇಲೆ ಹಿರಿಯರಾದ ಡಾ: ವೀರಣ್ಣ ಮತ್ತಿಕಟ್ಟಿಯವರು ಬೆಂಬಲ ಸೂಚಿಸಿ ಮಾನ್ಯ ಐವಾನ್ ಡಿಸೋಜಾರವರು ಅನುಮೋದಿಸಿದ್ದಾರೆ. ಈ ಚರ್ಚೆಯಲ್ಲಿ ನಾನು ಭಾಗವಹಿಸಿದ್ದೇನೆ.

(ಮುಂದು)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್) (ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಿಂದ ರಾಜ್ಯ ಸರ್ಕಾರ ಕಳೆದ 3 ವರ್ಷಗಳಲ್ಲಿ ಮಾಡಿದ ಸಾಧನೆ ಮತ್ತು ಮುಂದಿನ ಎರಡು ವರ್ಷಗಳಲ್ಲಿ ಏನು ಮಾಡಬೇಕು ಎನ್ನುವುದನ್ನು ಹೇಳಿಸಬೇಕಾಗಿತ್ತು. ಆದರೆ, ರಾಜ್ಯಪಾಲರ ಭಾಷಣದ ಎರಡನೆಯ ಪುಟದಲ್ಲಿ ಕೇಂದ್ರ ಸರ್ಕಾರದೊಡನೆ ಸಂಘರ್ಷಕ್ಕಿಳಿಯುವ ಕೆಲಸವನ್ನು ಈ ಸರ್ಕಾರ ಘನತೆವೆತ್ತ ರಾಜ್ಯಪಾಲರಿಂದ ಮಾಡಿಸಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿ ಬೇರೆ ಬೇರೆ ಪಕ್ಷಗಳು ಆಡಳಿತದಲ್ಲಿರಬಹುದು ಆದರೆ, ನಮ್ಮ ರಾಜ್ಯ ಅಭಿವೃದ್ಧಿಯಾಗಬೇಕಾದರೆ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ಸಂಘರ್ಷಕ್ಕಿಳಿಯಬಾರದು. ವಿಶೇಷವಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದ ಘನತೆವೆತ್ತ ರಾಜ್ಯಪಾಲರ ಕಡೆಯಿಂದ ಈ ರೀತಿ ಟೀಕೆಗಳನ್ನು ಹೇಳಿಸಬಾರದಾಗಿತ್ತು.

ಘನತೆವೆತ್ತ ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿರುವ ಪುಟ ಸಂಖ್ಯೆ:02ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ;

> **“. . . . .ಕೇಂದ್ರದಿಂದ ಪ್ರಾಪ್ತವಾಗುವ ತೆರಿಗೆ ನಿಧಿಯಲ್ಲಿ ರಾಜ್ಯಗಳ ಪಾಲು ಶೇಕಡಾ 32 ರಿಂದ ಶೇಕಡಾ 42ಕ್ಕೆ ಏರಿಕೆಯಾಗಿದ್ದರೂ ರಾಜ್ಯ ಯೋಜನೆಗೆ ಕೇಂದ್ರದ ನೆರವು ಮತ್ತು ಇತರ ಅನುದಾನಗಳಲ್ಲಿ ಕಡಿತವುಂಟಾಗಿದೆ.. . .”**

ಇದು ಕೇವಲ ಇಷ್ಟಕ್ಕೆ ಸೀಮಿತವಾಗದೇ ಕೇಂದ್ರ ಸರ್ಕಾರ ಶೇಕಡಾ 32 ರಿಂದ ಶೇಕಡಾ 42ಕ್ಕೆ ಏರಿಸಿರುವುದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಾನು ಭಾರತೀಯ ಜನತಾ ಪಕ್ಷಕ್ಕೂ ಸೇರಿಲ್ಲ, ಕಾಂಗ್ರೆಸ್ ಪಕ್ಷಕ್ಕೂ ಸೇರಿಲ್ಲ. ನಾನು ಪಕ್ಷೇತರ ಸದಸ್ಯ. ಆದರೆ, ಒಳ್ಳೆಯ ಕೆಲಸವನ್ನು ಮಾಡಿದಾಗ ಯಾವ ಪಕ್ಷದ ಸರ್ಕಾರವಾದರೂ ಅದನ್ನು ಅಭಿನಂದಿಸಬೇಕಾಗುತ್ತದೆ. ತೆರಿಗೆ ನಿಧಿಯಲ್ಲಿ ರಾಜ್ಯಗಳ ಪಾಲನ್ನು ಶೇಕಡಾ 10ರಷ್ಟು ಏರಿಸಿರುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವ ಕನಿಷ್ಠ ಸೌಜನ್ಯವನ್ನಾದರೂ ಈ ಸರ್ಕಾರ ತೋರಿಸಬೇಕಾಗಿತ್ತು. ಅದನ್ನು ಬಿಟ್ಟು ನಮಗೆ ಕೊರತೆಯಾಗಿದೆ ಎಂದು ಹೇಳುತ್ತಿದೆ. ಕೊರತೆಯಾಗಿದ್ದರೆ, ಎಲ್ಲೆಲ್ಲಿ

ಕೊರತೆಯಾಗಿದೆ ಎನ್ನುವುದರ ಬಗ್ಗೆ ರಾಜ್ಯ ಸರ್ಕಾರ ಅಂಕಿಸಂಖ್ಯೆ ನೀಡಬೇಕಾಗಿತ್ತು. ಯಾವಯಾವ ಯೋಜನೆಯಲ್ಲಿ ಯಾವ ಅಂಶವನ್ನು, ಎಷ್ಟು ಕಡಿಮೆ ಮಾಡಿದ್ದಾರೆ ಎನ್ನುವುದನ್ನು ತಿಳಿಸಬೇಕಾಗಿತ್ತು. ಆದರೆ, ಇದೊಂದು ರೀತಿ ಕೇಂದ್ರ ಸರ್ಕಾರದ ಜೊತೆಗೆ ಸಂಘರ್ಷವನ್ನು ಮುಂದುವರಿಸುವುದಕ್ಕೆ ಅಥವಾ ಅವರ ಪಕ್ಷದ ಹೈಕಮಾಂಡ್‌ನ್ನು ಖುಷಿಪಡಿಸುವುದಕ್ಕೆ ಘನತೆವೆತ್ತ ರಾಜ್ಯಪಾಲರಿಂದ ಹೇಳಿಸಿರುವ ಭಾಷಣವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದಲ್ಲಿರುವ ಒಂದು ದುರಂತದ ಅಂಶವೇನೆಂದರೆ, ನಮ್ಮ ಜಿಲ್ಲೆಯವರೇ, ನೀರಾವರಿ ಮಂತ್ರಿಗಳಾಗಿದ್ದಾರೆ. ಕೃಷ್ಣಾ ನದಿ ಇಡೀ ಕರ್ನಾಟಕ ರಾಜ್ಯದಲ್ಲಿ ಶೇಕಡಾ 60ರಷ್ಟು ವ್ಯವಸಾಯ ಪ್ರದೇಶಕ್ಕೆ ನೀರಾವರಿ ಒದಗಿಸುವ ನದಿಯಾಗಿದೆ. ಕಾವೇರಿ ಮತ್ತು ಕೃಷ್ಣಾ ನದಿಗಳು ಕರ್ನಾಟಕ ರಾಜ್ಯದ ಎರಡು ಕಣ್ಣಿನಂತಿವೆ. ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ನದಿಯ ಬಗ್ಗೆ ಒಂದೇ ಒಂದು ಶಬ್ದವಿಲ್ಲ. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಆಡಳಿತ ಹಿಡಿಯುವುದಕ್ಕೂ ಮುಂಚೆ ಹೊಸಪೇಟೆಯಿಂದ ಕೂಡಲ ಸಂಗಮದವರೆಗೆ ಪಾದಯಾತ್ರೆಯನ್ನು ಮಾಡಿತ್ತು. ಇವತ್ತಿನ ಮಾನ್ಯ ಮುಖ್ಯಮಂತ್ರಿಗಳು, ಕೆ.ಪಿ.ಸಿ.ಸಿ. ಅಧ್ಯಕ್ಷರು 'ಕೃಷ್ಣೆಯ ಮೇಲೆ ಆಣೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಪ್ರತಿವರ್ಷ 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ' ಎನ್ನುವ ಮಾತನ್ನು ಹೇಳಿದ್ದರು. ಆದರೆ, ಈ ಭಾಷಣದಲ್ಲಿ 10,000 ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಬಗ್ಗೆ ಈ ಮೂರು ವರ್ಷಗಳ ಸಾಧನೆಯಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಕೃಷ್ಣಾ ನದಿಯ ಅಣೆಕಟ್ಟಿನ ಎತ್ತರವನ್ನು 524.56 ಮೀಟರ್‌ಗೆ ಹೆಚ್ಚು ಮಾಡಬೇಕಾಗಿದೆ. ನ್ಯಾಯಮೂರ್ತಿ ಬ್ರಿಜೇಶ್‌ಕುಮಾರ್‌ರವರು ನೀರಾವರಿಯಲ್ಲಿ ನಮ್ಮ ರಾಜ್ಯಕ್ಕೆ ನೀರಿನ ಸದ್ಬಳಕೆಯನ್ನು ಮಾಡಿಕೊಳ್ಳುವುದಕ್ಕೆ ಏನು ಪಾಲು ಕೊಟ್ಟಿದ್ದಾರೆ, ಅದರ ಬಗ್ಗೆ ಈ ಸರ್ಕಾರದ ಮುಂದಿನ ಕಾರ್ಯತಂತ್ರವೇನು, ಅದಕ್ಕೆ ಎಷ್ಟು ಹಣವನ್ನು ಮೀಸಲಿಡಲಾಗಿದೆ ಎನ್ನುವುದರ ಬಗ್ಗೆ ಒಂದೇ ಒಂದು ಶಬ್ದವನ್ನು ಸಹ ರಾಜ್ಯಪಾಲರ ಭಾಷಣದಲ್ಲಿ ಸೇರಿಸಿಲ್ಲ. ನಮ್ಮ ಜಿಲ್ಲೆಯವರೇ ಜಲಸಂಪನ್ಮೂಲ ಸಚಿವರಾಗಿದ್ದರೂ ಸಹ ಆ ಇಲಾಖೆಯ ಬೇಡಿಕೆ ಎಷ್ಟಿದೆ ಅಷ್ಟು ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಅವರಿಬ್ಬರ ನಡುವೆ ಜಗಳ ಹಚ್ಚುವ ಕೆಲಸವನ್ನು ನಾನು ಮಾಡುತ್ತಿಲ್ಲ. ನಮ್ಮ ಜಿಲ್ಲೆಗೆ ನೀರಾವರಿ ಮಂತ್ರಿಗಳನ್ನು ಕೊಟ್ಟು ಅದಕ್ಕೆ

ಅವಶ್ಯಕತೆ ಇರುವ ಹಣವನ್ನು ಕೊಡದೇ ಹೋದರೆ ಏನು ಪ್ರಯೋಜನವಿದೆ? ಹಣವನ್ನು ಕೊಟ್ಟು ನಮ್ಮ ಜಿಲ್ಲೆಯವರನ್ನು ನೀರಾವರಿ ಮಂತ್ರಿಗಳನ್ನಾಗಿ ಮಾಡಿದ್ದರೆ ಸ್ವಲ್ಪಮಟ್ಟಿಗೆ ಲಾಭವಾಗುತ್ತಿತ್ತು. ಹಿಂದುಳಿದ ನಾಯಕರು ಮತ್ತು ಅಹಿಂದಾ ನಾಯಕರು ಹಣವನ್ನು ಇಟ್ಟುಕೊಂಡು ಕುಳಿತುಕೊಂಡಿರುವುದರಿಂದ ಜಲಸಂಪನ್ಮೂಲ ಸಚಿವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ.

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯತ್ನಾಳ್‌ರವರು ನಮ್ಮ ನಮ್ಮಲ್ಲಿ ಜಗಳ ತಂದಿಡುವ ಪ್ರಯತ್ನ ಮಾಡಬಾರದು. ಅವರು ಯಾವ ಯಾವ ಅಂಶಗಳ ಬಗ್ಗೆ ಮಾತನಾಡುತ್ತಿದ್ದಾರೆ ಅದನ್ನೆಲ್ಲ ನಾವು ನೋಟ್ ಮಾಡಿಕೊಳ್ಳುತ್ತಿದ್ದೇವೆ. ನಂತರ ಅದಕ್ಕೆ ಸಮಗ್ರವಾಗಿ ಉತ್ತರವನ್ನು ಕೊಡುತ್ತೇವೆ.

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ನದಿಯ ಅಣೆಕಟ್ಟಿನ ಎತ್ತರವನ್ನು 524.256 ಮೀಟರ್ ಹೆಚ್ಚಿಸಲು ಹೋದರೆ, ಸುಮಾರು ಒಂದೂವರೆ ಲಕ್ಷದಿಂದ ಎರಡು ಲಕ್ಷ ಎಕರೆಯಷ್ಟು ಜಮೀನು ಪುನಃ ಮುಳುಗಡೆಯಾಗುತ್ತದೆ. ಇಲ್ಲಿಯವರೆಗೆ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಾರಂಭವಾಗಿಲ್ಲ. ಹಳೆಯ ಯು.ಪಿ.ಎ. ಸರ್ಕಾರ ಮಾಡಿರುವ ಭೂಸ್ವಾಧೀನ ಪ್ರಕ್ರಿಯೆ ಬಗ್ಗೆ ಕಾಂಗ್ರೆಸ್‌ನವರು ಮಾತನಾಡುತ್ತಾರೆ. ನಾವು ಐತಿಹಾಸಿಕವಾದ ಭೂಸ್ವಾಧೀನ ಕಾಯಿದೆಯನ್ನು ತಂದಿದ್ದೇವೆ ಎಂದು ಜಂಭ ಕೊಚ್ಚಿಕೊಳ್ಳುತ್ತಾರೆ. ಯು.ಪಿ.ಎ. ಸರ್ಕಾರ ತಂದಿರುವ ಭೂಸ್ವಾಧೀನ ಕಾಯಿದೆ ಅನ್ವಯ ಸಬ್‌ರಿಜಿಸ್ಟ್ರಾರ್‌ನಲ್ಲಿ ಆಯಾಯ ಪ್ರದೇಶದಲ್ಲಿ ಏನು ಬೆಲೆ ನಿಗದಿಯಾಗಿರುತ್ತದೆ ಅದರ ನಾಲ್ಕು ಪಟ್ಟು ಕೊಡಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ವಿಜಯಪುರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಂದೂವರೆ ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳನ್ನು ಒಂದು ಎಕರೆ ಜಮೀನಿಗೆ ಫಿಕ್ಸ್ ಮಾಡಿದ್ದರೆ ಎಂಟು ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡುತ್ತದೆ. ಆದರೆ, ನಮ್ಮ ಭಾಗದಲ್ಲಿ 25-30 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಹ ಒಂದು ಎಕರೆ ಭೂಮಿ ಸಿಗುತ್ತಿಲ್ಲ. ಒಣ ಬೇಸಾಯದ ಜಮೀನು ಕನಿಷ್ಠ 10-15 ಲಕ್ಷ ರೂಪಾಯಿಗಳಿಗೆ ದೊರೆಯುತ್ತಿದೆ. ಮಾನ್ಯ ರಾಹುಲ್‌ಗಾಂಧಿಯವರು ಹೇಳಿದಂತಹ 'ಭೂಸ್ವಾಧೀನ, ಮಹಾನ್ ಸಾಧನೆ' ಎನ್ನುವ ಮಾತುಗಳನ್ನು ಹೇಳಿಕೊಂಡು ಇವರು ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ. ಇಂದಿನ ಮಾನ್ಯ ಪ್ರಧಾನಮಂತ್ರಿಗಳು ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೆ ತರಬೇಕೆಂದು ಮಸೂದೆ

ತಂದರೇ ಅದಕ್ಕೆ ಕಾಂಗ್ರೆಸ್‌ನವರು ವಿರೋಧ ವ್ಯಕ್ತಪಡಿಸಿ, ಆ ಮಸೂದೆಯನ್ನು ಪೂರ್ತಿಯಾಗಿ ಮುಗಿಸಿಬಿಟ್ಟಿದ್ದಾರೆ. ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಜನರು ಸುಮಾರು ಈಗಾಗಲೇ ಸುಮಾರು ಒಂದು ಲಕ್ಷ ಎಪ್ಪತ್ತು ಸಾವಿರ ಎಕರೆ ಜಮೀನನ್ನು ಆಲಮಟ್ಟಿ ಅಣೆಕಟ್ಟಿನ ಎತ್ತರ 519.6 ಮೀಟರ್‌ಗಳಿಗೆ ಹೆಚ್ಚಿಸುವ ಸಂದರ್ಭದಲ್ಲಿ ಕಳೆದುಕೊಂಡಿದ್ದಾರೆ. ಇನ್ನೂ ಒಂದೂವರೆ ಲಕ್ಷ ಜಮೀನು ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೋಗುತ್ತಿದೆ. ಕೂಡುಗಿ ವಿದ್ಯುತ್ ಸ್ಥಾವರದ ಸಲುವಾಗಿ ಸುಮಾರು 6056 ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಬಸವನ ಬಾಗೇವಾಡಿಯ ತಾಲ್ಲೂಕಿನಲ್ಲಿರುವ ಶೇಕಡಾ 65-70ರಷ್ಟು ಭೂಮಿ ಜಮೀನು ಸೌರಶಕ್ತಿ, ಕೂಡುಗಿ ವಿದ್ಯುತ್‌ಸ್ಥಾವರ ಮತ್ತು ಆಲಮಟ್ಟಿ ಯೋಜನೆಗಳಿಗಾಗಿ ಹೋಗಿದೆ. ಇಡೀ ತಾಲ್ಲೂಕಿನ ಭೂಮಿ ಈ ಯೋಜನೆಗಳಿಗಾಗಿ ಹೋಗಿರುವಾಗ ಅಲ್ಲಿನ ರೈತರಿಗೆ ಸರ್ಕಾರ ಯಾವ ಪರಿಹಾರವನ್ನು ನೀಡುತ್ತಿದೆ ಎನ್ನುವುದನ್ನು ಪ್ರಕಟಪಡಿಸಿಲ್ಲ. ಈ ಜನರ ಪುರ್ನವಸತಿಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಹೇಳಿಲ್ಲ, ಇದೊಂದು ದುರಂತದ ಸಂಗತಿಯಾಗಿದೆ. ಶೇಕಡಾ 60ರಷ್ಟು ಭಾಗಕ್ಕೆ ನೀರುಕೊಡುವಂತಹ ಜಿಲ್ಲೆ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಾಗಿವೆ. ಹೀಗಿರುವ ಈ ಜಿಲ್ಲೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡದೇ ಇರುವುದರಿಂದ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರು, ನೀರವಾರಿ ಜಮೀನಿಗೆ ಮತ್ತು ಒಣ ಜಮೀನಿಗೆ ಯಾವ ದರವನ್ನು ನಿಗದಿಪಡಿಸಲಾಗಿದೆಯೇ ಮತ್ತು ಜಮೀನು ಕಳೆದುಕೊಂಡಿರುವ ರೈತರಿಗೆ ಸರ್ಕಾರಿ ಹುದ್ದೆಯಲ್ಲಿ ಮೀಸಲಾತಿ ನೀಡಲಾಗುತ್ತದೆಯೇ ಎನ್ನುವುದರ ಬಗ್ಗೆ ತಿಳಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಸಂವಿಧಾನದ ಅನುಚ್ಛೇಧ 371(ಜೆ)ಯಡಿಯಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಆದೇ ರೀತಿಯಲ್ಲಿ ಇಡೀ ಕರ್ನಾಟಕ ರಾಜ್ಯದ ಶೇಕಡಾ 60ರಷ್ಟು ಭಾಗಕ್ಕೆ ನೀರಾವರಿಯನ್ನು ಒದಗಿಸುವುದಕ್ಕೆ ಸುಮಾರು ಮೂರೂವರೆ ನಾಲ್ಕು ಲಕ್ಷ ಎಕರೆ ಜಮೀನನ್ನು ಕಳೆದುಕೊಂಡವರು ಹೊಸ ಊರಿಗೆ ಹೋಗಿ ತಮ್ಮ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡುವ ಜನರಿಗೆ ಸರ್ಕಾರ ವಿಶೇಷವಾಗಿರುವ ಪ್ಯಾಕೇಜ್ ಕೊಡಬೇಕೆಂದು ನಾನು ಅಗ್ರಹಪಡಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಕಳಸ–ಬಂಡೂರಿ ಮತ್ತು ಮಹದಾಯಿ ಯೋಜನೆಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿದೆ. 'ಭಾರತೀಯ ಜನತಾ ಪಕ್ಷದ ಪ್ರಧಾನ ಮಂತ್ರಿಗಳು ಎಲ್ಲ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಅವರುಗಳೊಂದಿಗೆ ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು' ಎನ್ನುವ ಮಾತನ್ನು ಕಾಂಗ್ರೆಸ್‌ನವರು ಹೇಳಿದ್ದಾರೆ. ಅವರು ಹೇಳುವುದರಲ್ಲಿ ಸತ್ಯವಿದೆ. ಇದರ ಬಗ್ಗೆ ಪ್ರಧಾನ ಮಂತ್ರಿಗಳು ವಿಶೇಷವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಮುಂದುವರಿದಿದೆ)

(95) 04-03-2016 5.00 MD-AK

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್ (ಮುಂದು):–**

ನಾನು ಉತ್ತರ ಕರ್ನಾಟಕದ ಒಬ್ಬ ಪ್ರತಿನಿಧಿಯಾಗಿ ಹೇಳುತ್ತೇನೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ ಯಾವುದೇ ರಾಜ್ಯಕ್ಕೂ ಸಹ ಅನ್ಯಾಯ ಆಗದ ರೀತಿಯಲ್ಲಿ ನಡೆದುಕೊಂಡಂಥ, ನಾವು ಹೆಮ್ಮೆ ಪಡುವಂಥ ಒಬ್ಬ ಪ್ರಧಾನ ಮಂತ್ರಿಯಾಗಿದ್ದರು. ಅವರ ಸಚಿವ ಸಂಪುಟದಲ್ಲಿ ನಾನು ಸಚಿವನಾಗಿದ್ದಾಗ ಕಾವೇರಿ ವಿಚಾರ ಚರ್ಚೆಗೆ ಬಂತು. ನದಿಗಳ ಜೋಡಣೆ ಬಗ್ಗೆ ಚಿಂತನೆ ಮಾಡಿದಂಥ ಮೊದಲ ಪ್ರಧಾನ ಮಂತ್ರಿಗಳು ಅವರು. ಆದರೆ ದುರ್ದೈವ ನಮ್ಮ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಒಳ್ಳೆಯವರಿದ್ದಾರೆ. ಅವರು ಈ ದೇಶದ ಬಗ್ಗೆ ಏನಾದರೂ ಮಾಡಬೇಕೆಂದಿದ್ದಾರೆ. ಆದರೆ ಕರ್ನಾಟಕದಲ್ಲಿ, ಧಾರವಾಡದಲ್ಲಿರುವಂಥ ನಮ್ಮ ಬಿಜೆಪಿ ಪಕ್ಷದ ನಾಯಕರು ಕಳಸಾ–ಬಂಡೂರಿ ನಾಲಾ ಯೋಜನೆ ಬಗ್ಗೆ ಮಾತನಾಡಲಿಲ್ಲ. ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಿಗೆ ಸಿದ್ದರಾಮಯ್ಯನವರ ವಾಚ್‌ನ ಬಗ್ಗೆ ಬಹಳಷ್ಟು ಆಸಕ್ತಿ ಇದೆ. ನಮ್ಮ ರಾಜ್ಯದ ಅಧ್ಯಕ್ಷರು ಲೋಕಸಭೆಯಲ್ಲಿ ವಾಚ್ ಬಗ್ಗೆ ಮಾತನಾಡುತ್ತಾರೆ. ಪುಣ್ಯಾತ್ಮರು ಲೋಕಸಭೆಯಲ್ಲಿ ಕಳಸಾ–ಬಂಡೂರಿ ನಾಲಾ ಯೋಜನೆಯ ಬಗ್ಗೆ ಮಾತನಾಡುವುದು ಬಿಟ್ಟು ಈ ವಿಚಾರ ಮಾತನಾಡಿದರು. ಅಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ. ಸಿದ್ದರಾಮಯ್ಯನವರು ವಾಚ್ ಹಾಕಿಕೊಂಡಿದ್ದೆ ಒಂದು ದೊಡ್ಡ ಇಶ್ಯು ಆಯಿತು. ಎರಡು ದಿವಸಗಳ ಕಾಲ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಬೇರೆ ಚರ್ಚೆ ನಡೆಯಲಿಲ್ಲ ಹೊರತು ಇದೇ ವಿಚಾರದ ಬಗ್ಗೆ ಚರ್ಚೆ ನಡೆಯಿತು. ಅಂತಹ ಎಷ್ಟು ವಾಚ್‌ಗಳು ಬರುತ್ತಿದ್ದವು. ಆ ವಾಚ್‌ನ ಸಲುವಾಗಿ ತಮ್ಮದೇನನ್ನೋ ಮುಚ್ಚಿಟ್ಟುಕೊಳ್ಳುವುದಕ್ಕೆ ಒಟ್ಟು ಸದನ ನಡೆಯಲಾರದಂಥ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು. ನಾನಿವತ್ತು ಮಾನ್ಯ ಈಶ್ವರಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಜಲಸಂಪನ್ಮೂಲ ಸಚಿವರಿದ್ದಾಗ ಒಂದು ನಿರ್ಣಯವನ್ನು ತೆಗೆದುಕೊಂಡರು. ಕಳಸಾ–ಬಂಡೂರಿ ಜಾಗಕ್ಕೆ ಹೋಗಿ ಶಿಲಾನ್ಯಾಸವನ್ನು ಮಾಡಿ ಬಂದರು. ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ನಮ್ಮ ಸನ್ಮಾನ್ಯ ಎಂ.ಬಿ.ಪಾಟೀಲರು ಹೋರಾಟ ಮಾಡುವಾಗ, ನದಿಗಳಿಗೆ ನೀರು ತುಂಬುವಂಥ ಕೆಲಸವನ್ನು ಮಾಡಿದರು. ಆದರೆ ದುರ್ದೈವ ಏನೆಂದರೆ, ಧಾರವಾಡ ಜಿಲ್ಲೆಯ ಇಬ್ಬರೂ ನಾಯಕರು ಇವತ್ತು ಕಳಸಾ–ಬಂಡೂರಿ ರೈತರ ಬಗ್ಗೆ, ಮಹದಾಯಿ ನದಿ ಬಗ್ಗೆ ಮಾತನಾಡುತ್ತಿಲ್ಲ. ಯಾವುದೋ ಒಂದು ಡೀನೋಟಿಫಿಕೇಶನ್ ಬಗ್ಗೆ ಮಾತನಾಡುತ್ತಾರೆ ಮತ್ತು ಎರಡು ದಿವಸಗಳಲ್ಲಿ ಬಾಯಿ ಮುಚ್ಚಿಕೊಳ್ಳುತ್ತಾರೆ. ಇದರಲ್ಲಿ ಏನು ಒಳ ಒಪ್ಪಂದ ಇದೆಯೋ ನನಗೆ ಗೊತ್ತಿಲ್ಲ.

**ಶ್ರೀ ಅಶ್ವಥನಾರಾಯಣ:-** ಮಾನ್ಯ ಸಭಾಪತಿಯವರೆ, ಕೆಳಮನೆಯ ಸದನದ ಸದಸ್ಯರ ಬಗ್ಗೆ ಇಲ್ಲಿ ಚರ್ಚೆ ಆಗಬಾರದು.

**ಡಾ॥ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಅವರು ಮಾತನಾಡಲು ಬಿಡಲಿ. ಸತ್ಯ ಮಾತನಾಡಿದರೆ ಏನಂತೆ. ಇದ್ದುದನ್ನು ಹೇಳಿದರೆ ಏನಂತೆ. ಇವರಾದರೆ ಎಲ್ಲವನ್ನು ಮಾತನಾಡುತ್ತಾರೆ, ಅವರು ಮಾತನಾಡಬಾರದೇ? ಆ ಭಾಗದ ಜನತೆಯ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ. ಸತ್ಯವನ್ನು ಹೇಳಿದರೆ ಇವರಿಗೆ ಏನಾಗುತ್ತದೆ? ಅವರು ಮಾತನಾಡುವುದಕ್ಕೆ ಇವರು ಏಕೆ ಆಕ್ಷೇಪಣೆಯನ್ನು ಮಾಡುತ್ತಾರೆ. ಅವರು ಸತ್ಯವನ್ನು ಹೇಳಬಾರದೇ. ಸತ್ಯವನ್ನು ಹತ್ತಿಕ್ಕುತ್ತಾರೆಯೇ?

**ಶ್ರೀ ಐವಾನ್ ಡಿ'ಸೋಜಾ:-** ಅವರು ಆ ಭಾಗದ ಜನರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಅದರಲ್ಲಿ ಏನು ತೊಂದರೆ ಇದೆ?

**(ಈ ಹಂತದಲ್ಲಿ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಬಸನಗೌಡ ಪಾಟೀಲ್ ಯತ್ನಾಳ್‌ರವರು ಹೇಳುತ್ತಿರುವ ಬಗ್ಗೆ ಇವರಿಗೆ ಬಹಳ ಸಿಹಿ ಕಾಣುತ್ತಿದೆ.

**ಡಾ॥ ವೀರಣ್ಣ ಮತ್ತಿಕಟ್ಟಿ:-** ನಮ್ಮ ಭಾಗದ ಸಮಸ್ಯೆಯನ್ನು ಅವರು ಹೇಳುತ್ತಿದ್ದಾರೆ. ನಾವು ನಿಮ್ಮ ಬಗ್ಗೆ ಏನಾದರೂ ಹೇಳಿದೆವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಅದು ಕೇವಲ ನಿಮ್ಮ ಒಬ್ಬರ ಸಮಸ್ಯೆ ಅಲ್ಲ. ನಿಮ್ಮ ಸಮಸ್ಯೆಗೆ ಪರಿಹಾರವನ್ನು ಹುಡುಕಿದವರು ನಾವು. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸ್ವಲ್ಪ ತಾಳ್ಮೆಯಿಂದಿರಿ. ಮಾನ್ಯ ಜಲಸಂಪನ್ಮೂಲ ಸಚಿವರಾದ ಎಂ.ಬಿ.ಪಾಟೀಲ್‌ರವರು ಮತ್ತು ಸದಸ್ಯರಾದ ಬಸನಗೌಡ ಪಾಟೀಲ್ ಯತ್ನಾಳ್‌ರವರು ಸಹ ಸದನದಲ್ಲಿದ್ದಾರೆ. ಕಳಸಾ-ಬಂಡೂರಿ ನಾಲಾ ಯೋಜನೆ ಬಗ್ಗೆ ಮತ್ತು ಬಿಜಾಪುರಕ್ಕೆ ನೀರನ್ನು ಒದಗಿಸುವುದರ ಬಗ್ಗೆ ನಾವು ತೆಗೆದುಕೊಂಡ ನಿಲುವಿಗೆ, ಇದು ಭಾರತೀಯ ಜನತಾ ಪಾರ್ಟಿ ತೆಗೆದುಕೊಂಡ ನಿಲುವು ಹೊರತು ಈಶ್ವರಪ್ಪನವರು ತೆಗೆದುಕೊಂಡ ನಿಲುವು ಅಲ್ಲ. ನನಗೆ ಮಂತ್ರಿ ಮಾಡಿದ್ದು ಯಾರು? ಮಾನ್ಯ ಆರ್.ವಿ.ವೆಂಕಟೇಶ್ ಮತ್ತು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಇಬ್ಬರು ಹಕ್ಕಬುಕ್ಕರು ಇದ್ದ

ಹಾಗೆ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರೇನು ಹೇಳಿದರು ಎಂಬುದನ್ನು ನಾನು ನೆನಪು ಮಾಡುತ್ತೇನೆ. ಇವರು ಈ ಯೋಜನೆಯನ್ನು ಮುಗಿಸಿ, ಅದಕ್ಕೆ ಒಂದು ರೂಪವನ್ನು ತನ್ನಿ. ನಿಮ್ಮನ್ನು ಬೆಳ್ಳಿಯಲ್ಲಿ ತೂಗುತ್ತೇವೆಂದು ಹೇಳಿದರು. ಅದಕ್ಕೆ ನಾನು ಬೆಳ್ಳಿಯಲ್ಲಿ ತೂಗುವುದು ಬೇಡ. ಮೊದಲು ಈ ಯೋಜನೆ ಮುಗಿಯಲಿ ಎಂದು ಹೇಳಿದೆ. ಬಸನಗೌಡ ಪಾಟೀಲ್ ಯತ್ನಾಳ್‌ರವರಿಗೆ ಯಾವುದೋ ಕಾರಣಕ್ಕೆ ಬಿಜೆಪಿಗೆ ತೆಗೆದುಕೊಂಡು ಅವರಿಗೆ ಟಿಕೆಟ್ ಕೊಡಲಿಲ್ಲವೆನ್ನುವ ಕಾರಣಕ್ಕಾಗಿ ಇದ್ದಕ್ಕಿದ್ದ ಹಾಗೆ ಅವರಿಗೆ ಇಬ್ಬರ ಬಗ್ಗೆ ಸಿಟ್ಟು ಬಂದಿದೆ.

**ಡಾ॥ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಅಂತಹ ಸಣ್ಣ ಮನುಷ್ಯ ಅಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅವರು ಉತ್ತರವನ್ನು ಕೊಡುತ್ತಾರೆ, ನೀವೇಕೆ ಮಾತನಾಡುತ್ತೀರಿ? ಅವರು ಹೇಳಬೇಕಾದರೆ ಹೇಳುತ್ತಾರೆ. ನಾನು ಅದಕ್ಕೆ ಕಳಸಾ–ಬಂಡೂರಿ ನಾಲಾ ಯೋಜನೆ ಬಗ್ಗೆ ತುಂಬಾ ಸ್ಪಷ್ಟವಾಗಿ ನನ್ನ ಬೆನ್ನಿಗೆ ನಿಂತವರು ಇದೇ ಪ್ರಹ್ಲಾದ್ ಜೋಷಿ ಮತ್ತು ಇದೇ ಜಗದೀಶ್ ಶೆಟ್ಟರು. ಇಲ್ಲಿ ನಮ್ಮ ಪಕ್ಕದಲ್ಲಿ ಬಸವರಾಜ ಹೊರಟ್ಟಿಯವರು ಕುಳಿತಿದ್ದಾರೆ. ಅವರು ಸಹ ನಮ್ಮ ಜೊತೆಗೆ ಬಂದರು. ನಮ್ಮ ಎಂ.ಬಿ.ಪಾಟೀಲ್‌ರು ಬಂದಿದ್ದರು, ನಾನು ಇಲ್ಲವೆಂದು ಹೇಳುತ್ತಿಲ್ಲ. ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರಿಗೆ ಟಿಕೆಟ್ ಕೊಟ್ಟಿಲ್ಲವೆನ್ನುವ ಒಂದೇ ಕಾರಣಕ್ಕಾಗಿ ಅವರು ಈ ರೀತಿಯಾಗಿ ಮಾತನಾಡಿದರೆ ಅದನ್ನು ದೇವರು ಮೆಚ್ಚುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸತ್ಯ ಹೇಳುತ್ತಿದ್ದಾರೆ. ಅವರನ್ನು ರಕ್ಷಣೆ ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ, ಅದು ಸರಿ ಇದೆ. ಆದರೆ ಮಾನ್ಯ ಸದಸ್ಯರು ಹೇಳುವುದು ಸತ್ಯ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅವರು ಬಿಜೆಪಿಯವರನ್ನು ಟೀಕೆ ಮಾಡಿದರೆ ನಿಮಗೆ ಆನಂದ. ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಬಸನಗೌಡ ಪಾಟೀಲ್ ಯತ್ನಾಳ್‌ರವರು ಹೇಳುತ್ತಿರುವ ಅಂಶಗಳ ಬಗ್ಗೆ ಕಳಸಾ–ಬಂಡೂರಿ ನಾಲಾ ಯೋಜನೆಗೆ ಶಂಕು ಸ್ಥಾಪನೆ ಮಾಡುವುದಕ್ಕೆ ಕಾರಣ ಭಾರತೀಯ ಜನತಾ ಪಾರ್ಟಿ. ಇದರ ಬಗ್ಗೆ ಸ್ಪಷ್ಟ ಮಾಡಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರು ಯಡಿಯೂರಪ್ಪನವರಿಗೆ ಆದ ಅನ್ಯಾಯದ ಬಗ್ಗೆ topic ಇನ್ನು final ಬಾಕಿ ಮಾತನಾಡುವುದಿದೆ. ಅವರು ಇನ್ನು ಆ ವಿಚಾರಕ್ಕೆ ಬಂದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಕಾಯುತ್ತಿದ್ದೀರಾ?

**ಶ್ರೀ ಎಂ.ಬಿ.ಪಾಟೀಲ್:-** ಕಾಯುತ್ತಿದ್ದೇವೆ. Finals ಬಹಳ important ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಾಗಾದರೆ ಕಾಯುತ್ತಾ ಇರಿ. ಯಡಿಯೂರಪ್ಪನವರು ಬಂದು ನಿಮ್ಮನ್ನು ನಿರ್ನಾಮ ಮಾಡಿಬಿಡುತ್ತಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಿಕ್ಕೆ ಬರುತ್ತದೆ. ಅದು ನಿಮಗೆ ನೆನಪು ಇರಲಿ. ಅದರ ಮುಖಾಂತರ ನೀವು ಆನಂದ ಪಡಬಹುದು. ನಿಮ್ಮ ಸರ್ಕಾರವನ್ನು ಹಾಳು ಮಾಡುವುದಕ್ಕೆ, ನೀವು ರಾಜ್ಯದ ಜನರಿಗೆ ಮಾಡುತ್ತಿರುವ ದ್ರೋಹಕ್ಕೆ ಯಡಿಯೂರಪ್ಪನವರೇ ಬರುತ್ತಾರೆ, ಅವರೇ ನಿಮ್ಮ ಸರ್ಕಾರವನ್ನು ನಿರ್ನಾಮ ಮಾಡುತ್ತಾರೆ. ಅವರು ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತಾರೆ, ಕಾಯುತ್ತೀರಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರೆ, ತಮಗೆ ಕೊಟ್ಟಂಥ ಸಮಯ ಮುಗಿದಿದೆ. ನಾನು 15 ನಿಮಿಷಗಳ ಕಾಲ ಎಂದು ಇಲ್ಲಿ ಬರೆದು ಹೋಗಿದ್ದೆ. ಈಗ 15 ನಿಮಿಷಗಳಿಗಿಂತ ಹೆಚ್ಚಾಗಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಅವರು ಚರ್ಚೆ ಮಾಡಿದರು.

**ಸಭಾಪತಿಯವರು:-** ಏನೂ ಮಾಡುವುದಕ್ಕಾಗುವುದಿಲ್ಲ, ಚರ್ಚೆಯಲ್ಲಿ ಇರುವುದೇ ಹಾಗೆ. ಇರುವ ಪದ್ಧತಿಯೇ ಹಾಗೆ. ತಮ್ಮ ಸಮಯ ಮುಗಿದಿದೆ. ಇನ್ನೊಂದು ನಿಮಿಷದಲ್ಲಿ ತಾವು ತಮ್ಮ ಮಾತುಗಳನ್ನು ಮುಗಿಸಬೇಕು. ಇಲ್ಲವೆಂದರೆ ನಾನು ಮುಂದಿನವರನ್ನು ಮಾತನಾಡಲು ಕರೆಯುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಈಗ ವಿವೇಕರಾವ್ ಪಾಟೀಲ್‌ರು....

**ಸಭಾಪತಿಯವರು:–** ನೀವು ನಿಮ್ಮ ಮಾತುಗಳನ್ನು ಮುಂದುವರೆಸುವುದಲ್ಲ, ಮುಕ್ತಾಯ ಮಾಡಿ. ತಮಗೆ ಕೊಟ್ಟ 15 ನಿಮಿಷಗಳಿಗಿಂತ ನೀವು ಹೆಚ್ಚಾಗಿ ಮಾತನಾಡಿದ್ದೀರಿ. ನಾನು ನಿಮ್ಮ ಮಾತುಗಳನ್ನು ಮುಗಿಸಿಬಿಡಿ ಎಂದು ಕೇಳುವುದಕ್ಕಿಂತ ಒಂದು ನಿಮಿಷದಲ್ಲಿ ಮುಕ್ತಾಯ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನಾನು ಬಿಜೆಪಿ ಪಕ್ಷಕ್ಕೆ ಬೈಯ್ದಿದ್ದರಿಂದ ನೀವು ನನಗೆ ನನ್ನ ಮಾತುಗಳನ್ನು ಮುಗಿಸಿ ಎಂದು ಹೇಳುತ್ತಿದ್ದೀರೋ ಏನೋ ಗೊತ್ತಾಗುತ್ತಿಲ್ಲ. ಏನ್ ಸರ್ ಇದು.

**ಸಭಾಪತಿಯವರು:–** ಹಾಗೆಲ್ಲಾ ಮಾತನಾಡಬಾರದು.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು.

**ಸಭಾಪತಿಯವರು:–** ಆಯಿತು, ಮುಂದಿನ ಸಾರಿ ನೋಡೋಣ. ಈಗ ನೀವು ಕನ್‌ಕ್ಲೂಡ್ ಮಾಡುವ ಹಾಗಿದ್ದರೆ ಮಾಡಿ ಇಲ್ಲವೆಂದರೆ ನಾನು ಮುಂದಿನವರನ್ನು ಮಾತನಾಡಲು ಕರೆಯುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ಇಡೀ ಕರ್ನಾಟಕದ ಜೀವಂತ ನದಿ ಕೃಷ್ಣ ನದಿ ಬಗ್ಗೆ ನಾನು ಮಾತನಾಡಿದರೆ, ವಿಧಾನ ಪರಿಷತ್ತಿನಲ್ಲಿ ಉತ್ತರ ಕರ್ನಾಟಕದ ಬಗ್ಗೆ ಸಮಯವಿಲ್ಲವೆಂದು ಹೇಳುತ್ತೀರಿ. ವಾಚ್‌ನ ಬಗ್ಗೆ ಎರಡೆರಡು ದಿವಸಗಳ ಕಾಲ ಏನು ಬೇಕಾದರೂ ಮಾತನಾಡಿದರೂ ಸಹ ಸುಮ್ಮನೆ ಅವಕಾಶವನ್ನು ಕೊಡುತ್ತೀರಿ. ವಾಚ್ ವಿಷಯ ಹೆಚ್ಚಿನದೋ ಅಥವಾ ಕೃಷ್ಣ ನದಿ ನೀರಿನ ಬಗ್ಗೆ ಮಾತನಾಡುವುದು ಹೆಚ್ಚಿನದೋ ಎನ್ನುವುದನ್ನು ನೀವು ನಿರ್ಣಯ ಮಾಡಬೇಕಾಗುತ್ತದೆ. ಇವತ್ತು ಇದೊಂದು ಗಂಭೀರವಾದ ಪ್ರಶ್ನೆಯಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವುದರ ಮೂಲಕ ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್‌ರವರ ಮಾತುಗಳನ್ನು ಸ್ವಾಗತಿಸಿದರು)**

**ಸಭಾಪತಿಯವರು:–** ಈಗ ಚರ್ಚೆ ನಡೆಯುತ್ತಿರುವುದು ರಾಜ್ಯಪಾಲರ ಬಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ. ನಾವೆಲ್ಲರೂ agreed ಆಗಿರತಕ್ಕಂಥಾದ್ದು. ಇದರಲ್ಲಿ ಯಾರೂ ಮೇಜು ಕುಟ್ಟುವುದು ಇವೆಲ್ಲಾ ಮಾಡುವ ಅವಶ್ಯಕತೆ ಇಲ್ಲ. ನಾವು ನಿಯಂತ್ರಣದಿಂದ ಈ ಸಭೆಯ ಘನತೆ–ಗಾಂಭೀರ್ಯವನ್ನು

ಕಾಪಾಡಿಕೊಂಡು ನಾವೇ ಒಪ್ಪಿಕೊಂಡ ಹಾಗೆ ಈ ಸದನವನ್ನು ನಡೆಸಿಕೊಂಡು ಹೋಗಬೇಕು. ನಾವು ಒಪ್ಪಿಕೊಂಡ ಹಾಗೆ ನಡೆಸಿಕೊಂಡು ಹೋಗುತ್ತಿರುವ ಪರಿಸ್ಥಿತಿ ಏನೆಂದರೆ, ನಾನು ಬೆಳಿಗ್ಗೆ ನನ್ನ ಹತ್ತಿರವಿರುವ ಸಮಯವನ್ನು ನಾನು ಹಂಚುತ್ತೇನೆಂದು ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಆ ಪ್ರಕಾರವಾಗಿ ನಾನು ಸಮಯವನ್ನು ಹಂಚಿಕೆ ಮಾಡಿದ್ದೇನೆ. ಹಂಚಿಕೆ ಮಾಡಿರುವ ಸಮಯದಲ್ಲಿ ಪಕ್ಷೇತರ ಅಭ್ಯರ್ಥಿಗಳು ಯಾರಿದ್ದಾರೆ ಅವರಿಗೆ ಒಟ್ಟು 15 ನಿಮಿಷಗಳ ಸಮಯ ಸಿಗುತ್ತದೆ. 15 ನಿಮಿಷ ಎಂದು ಹೇಳುವುದರ ಬದಲು ಇಬ್ಬರು ಮಾತನಾಡುವುದಾದರೆ ತಲಾ 10 ನಿಮಿಷಗಳ ಕಾಲ ಮಾತನಾಡಿ ಎಂದು ಹೇಳಿದ್ದೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ವಿವೇಕರಾವ್ ಪಾಟೀಲ್‌ರವರು ಮಾತನಾಡಬೇಕಾದ ಸಮಯವನ್ನು ನನಗೆ ಕೊಟ್ಟಿದ್ದಾರೆ.

**ಸಭಾಪತಿಯವರು:-** ಅವರ ಮೂರು ನಿಮಿಷಗಳ ಸಮಯವನ್ನು ನಿಮಗೆ ಕೊಡುತ್ತೇನೆ, ಕುಳಿತುಕೊಳ್ಳಿ. ನಿಮಗೆ 3 ನಿಮಿಷಗಳ ಸಮಯವನ್ನು ಕೊಡಬೇಕಾಗಿತ್ತು. ಆದರೆ ಅವರದ್ದು ಸೇರಿಸಿ ನಿಮಗೆ 15 ನಿಮಿಷಗಳ ಸಮಯವನ್ನು ಕೊಟ್ಟಿದ್ದೇನೆ. ಆದ್ದರಿಂದ ಈಗ ನಿಮ್ಮ ಸಮಯ ಮುಗಿದಿದೆ. ನಾನು ಆ ತರಹ ಮಧ್ಯದಲ್ಲಿ ಮಾತನ್ನು ನಿಲ್ಲಿಸುವುದು ಸರಿಯಲ್ಲ, ತಾವು ಕನ್‌ಕ್ಲೂಡ್ ಮಾಡುವ ಹಾಗಿದ್ದರೆ ನಿಮಗೆ ಒಂದು ನಿಮಿಷ ಕಾಲಾವಕಾಶವನ್ನು ಕೊಡುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರಿಗೆ, ರಾಮಚಂದ್ರಗೌಡರಿಗೆ, ಮಾನ್ಯ ಬಸವರಾಜ ಹೊರಟ್ಟಿಯವರಿಗೂ ಸಹ ಕನ್‌ಕ್ಲೂಡ್ ಮಾಡಿ ಎಂದು ಹೇಳಿದೆ. ನಿನ್ನೆಯ ದಿವಸ ನಾನು ಹಿರಿಯ ಸದಸ್ಯರಾದ ವೀರಣ್ಣ ಮತ್ತಿಕಟ್ಟಿಯವರಿಗೂ ಸಹ ಮಾತನಾಡಲು ನಾನು ಬಿಡಲಿಲ್ಲ. ಏಕೆ ಬಿಡಲಿಲ್ಲವೆಂದರೆ ಅವರಿಗೆ ನಾನು ಮಾತನಾಡುವುದಕ್ಕೆ ಬಿಡಲಿಲ್ಲವೆಂದು ಅಲ್ಲ. ಇಲ್ಲಿ ಸಮಯವನ್ನು ನಿಯಂತ್ರಣ ಮಾಡಬೇಕಾದ ಜವಾಬ್ದಾರಿ ನನ್ನದಿದೆ. ಸಮಯವನ್ನು ನಾನು ನಿಯಂತ್ರಣ ಮಾಡಿದಾಗ ಅದನ್ನು ತಾವುಗಳು ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ಅದನ್ನು ಅರ್ಥ ಮಾಡಿಕೊಂಡು ತಾವು ಕನ್‌ಕ್ಲೂಡ್ ಮಾಡುವ ಹಾಗಿದ್ದರೆ ಮಾಡಿ. ಇಲ್ಲವೆಂದರೆ ನಾನು ಮುಂದೆ ಮಾತನಾಡುವವರ ಹೆಸರನ್ನು ಕರೆಯುತ್ತೇನೆ. ದಯಮಾಡಿ ಒಂದು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಬೇಕು.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ಕಳಸಾ-ಬಂಡೂರಿ ನಾಲಾ ಯೋಜನೆ ವಿಚಾರದಲ್ಲಿ ಯಾವ ರೀತಿಯಾಗಿ ನಡೆದುಕೊಂಡರು ಎಂಬುದನ್ನು ನಾನು ಈಗಾಗಲೇ ಪ್ರಸ್ತಾಪ

ಮಾಡಿದ್ದೇನೆ. ಹಿಂದೆ ಕೃಷ್ಣ ನದಿ ವಿಚಾರದಲ್ಲಿಯೂ ಸಹ ಇದೇ ರೀತಿಯಾಗಿ ಅನ್ಯಾಯವಾದಾಗ ನಾನು ಲೋಕಸಭಾ ಸದಸ್ಯನಾಗಿದ್ದೆ. ಅಂದು ಚಂದ್ರಬಾಬು ನಾಯ್ಡುರವರು ಜಲಾಶಯದ ಎತ್ತರವನ್ನು 519.06 ಅಡಿಗಳಿಗೆ ಏರಿಸಲು ವಿರೋಧ ಮಾಡಿದಾಗ ನಾನು ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆಂದು.....

**ಸಭಾಪತಿಯವರು:–** ಕನ್‌ಕ್ಲೂಡ್ ಮಾಡಿ ಎಂದರೆ ಹೊಸ ವಿಷಯವನ್ನು ಹೇಳುತ್ತಿದ್ದೀರಿ. ದಯಮಾಡಿ ಕುಳಿತುಕೊಳ್ಳಿ.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

**ಸಭಾಪತಿಗಳು:–** ನೀವು conclude ಮಾಡಿ ಎಂದರೆ ಮತ್ತೆ ಬೇರೆ ವಿಷಯವನ್ನು ಎತ್ತುತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ನಾರಾಯಣಸಾ ಭಾಂಡಗೆಯವರು ಒಂದು ಮನವಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ನನಗೆ ನಾಳೆ ವೈಯಕ್ತಿ ಕಾರಣಕ್ಕೋಸ್ಕರ ಬರುವುದಕ್ಕಾಗುತ್ತಿಲ್ಲ, ನಾನು ಇವತ್ತು 5 ನಿಮಿಷ ಮಾತನಾಡುತ್ತೇನೆ ಎಂದು ಕೇಳಿದ್ದಾರೆ. ನಾನು ನಿಮಗೆ 5 ನಿಮಿಷ ಮಾತ್ರ ಅವಕಾಶ ಕೊಡುತ್ತೇನೆ. ಏಕೆಂದರೆ ಪ್ರಶ್ನೋತ್ತರ ತೆಗೆದುಕೊಳ್ಳುವುದಿದೆ, ಅದಕ್ಕೋಸ್ಕರ ಸಂಬಂಧಪಟ್ಟ ಮಂತ್ರಿಗಳನ್ನೂ ಕರೆಸಿದ್ದೇನೆ.

**ಶ್ರೀ ನಾರಾಯಣಸಾ ಭಾಂಡಗೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**-ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಸದನದಲ್ಲಿ, ರಾಜ್ಯದ ಬರಗಾಲ, ಕುಡಿಯುವ ನೀರಿನ ಸಮಸ್ಯೆ, ರೈತರ ಸಮಸ್ಯೆ ಇವೆಲ್ಲದರ ಬಗ್ಗೆ ಚರ್ಚೆಯಾಯಿತು. ಎಲ್ಲಾ ವಿಷಯಗಳ ಚರ್ಚೆ ಈ ಪರಿಷತ್ತಿನಲ್ಲಾಯಿತು. ಈ ವಿಷಯಗಳ ಚರ್ಚೆ ಆಗಬೇಕಾದರೆ ಅದಕ್ಕೆ ಒಂದು ಸ್ಥಾನ ಬೇಕಾಗುತ್ತದೆ. ನಮ್ಮ ರಾಜ್ಯದ ಸಮಸ್ಯೆಗಳನ್ನು ಚರ್ಚೆ ಮಾಡಲು ವಿಧಾನಸಭೆ ಮತ್ತು ವಿಧಾನ ಪರಿಷತ್ತು ಇದೆ. ರಾಷ್ಟ್ರದ ಸಮಸ್ಯೆಗಳ ಚರ್ಚೆ ಮಾಡಲು ಲೋಕಸಭೆ, ರಾಜ್ಯಸಭೆ ಇದೆ. ವಿಧಾನಪರಿಷತ್ತು, ವಿಧಾನಸಭೆ ಇಲ್ಲದೇ ಇದ್ದರೆ ಎಲ್ಲಿ ಚರ್ಚೆ ಮಾಡಬೇಕಾಗುತ್ತದೆ? ಯಾರೋ ಒಬ್ಬ ದುಷ್ಕರ್ಮಿ ವಿಧಾನಸೌಧದ ಮೇಲೆ ಬಾಂಬ್ ಹಾಕಿದರೆ ರೈತರ ಸಮಸ್ಯೆಗಳನ್ನೂ ಮಾತನಾಡುವುದಕ್ಕಾಗುವುದಿಲ್ಲ, ನಮ್ಮ ಸಮಸ್ಯೆಗಳನ್ನೂ ಹೇಳುವುದಕ್ಕಾಗುವುದಿಲ್ಲ, ಯಾವುದೇ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಲೋಕಸಭೆಯಲ್ಲಿ ಆ ಘಟನೆ ನಡೆಯಿತು. ಲೋಕಸಭೆ ಮೇಲೆ ಉಗ್ರಗಾಮಿಗಳು ಬಾಂಬ್ ಹಾಕಿದಾಗ ನಮ್ಮ ಸೈನಿಕರು ಅವರನ್ನು ಹೊಡೆದು ಓಡಿಸಿದರು. ಇದಕ್ಕೆ ಕಾರಣರಾದ ಅಫ್ಜಲ್‌ಗುರುವನ್ನು ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ ಗಲ್ಲಿಗೇರಿಸಿದಾಗ ದಿಲ್ಲಿಯ ವಿಶ್ವವಿದ್ಯಾನಿಲಯದಲ್ಲಿ . . .

**ಡಾ:ಮತ್ತಿಕಟ್ಟಿ ವೀರಣ್ಣ:**- ವಿಷಯಾಂತರವಾಗುತ್ತಿದೆ . . .

**ಸಭಾಪತಿಗಳು:**- ಅವರು ಮಾತನಾಡಲಿ ಬಿಡಿ . . .

**ಶ್ರೀ ಕೆ.ಎಸ್.ಈಶ್ವರಪ್ಪ:**-ಮಾನ್ಯ ಸದಸ್ಯರು ಉಗ್ರಗಾಮಿಗಳ ಬಗ್ಗೆ ಮಾತನಾಡಿದರೆ ಇವರೇಕೆ ಹೀಗೆ ಮಧ್ಯದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾರೆ? . . .(ಗೊಂದಲ)ಅವರ ಪರವಾಗಿ ಏಕೆ ಎದ್ದು ನಿಲ್ಲುತ್ತಾರೆ? . . .

**ಡಾ: ಮತ್ತಿಕಟ್ಟಿ ವೀರಣ್ಣ:**- ನಾವೂ ಕೂಡ ಉಗ್ರಗಾಮಿಗಳ ವಿರೋಧಿಗಳು . . .(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:**- ಒಬ್ಬರು ಮಾತನಾಡುವಾಗ ನೀವೇಕೆ ಮಧ್ಯೆ ಬರುತ್ತೀರಿ? ಅವರು ತಮ್ಮ ಮಾತುಗಳನ್ನು ಹೇಳಲಿ. ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ

ಮಾತನಾಡುತ್ತಿದ್ದಾರೆ. ನಾವೆಲ್ಲರೂ ಗೆರೆ ಕೋರೆದ ಹಾಗೆ ಮಾತನಾಡುತ್ತೇವೆಯೇ? ಅವರು ಹೇಗೆ ಮಾತನಾಡುತ್ತಾರೋ ಮಾತನಾಡಲಿ. ಪ್ರತಿಯೊಂದಕ್ಕೂ ನೀವು ಏಕೆ ಎದ್ದು ನಿಲ್ಲುತ್ತೀರಿ? . .

**ಡಾ;ಮತ್ತಿಕಟ್ಟಿ ವೀರಣ್ಣ:–** ಸಂಬಂಧ ಇಲ್ಲದಿರುವ ವಿಷಯ ಮಾತನಾಡುವುದು ಸರಿಯೇ? . .

**ಶ್ರೀ ಬಸವರಾಜ ಹೊರಟ್ಟಿ:–** ಅದು ನಿಮಗೇಕೆ ಬೇಕು? ನೀವು ಏಕೆ ಅವರಿಗೆ ಹೇಳುತ್ತೀರಿ?

**ಡಾ:ಮತ್ತಿಕಟ್ಟಿ ವೀರಣ್ಣ:–** ನಾನೂ ಈ ಸದನದ ಸದಸ್ಯನಾಗಿದ್ದೇನೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ನೀವು ಉಗ್ರಗಾಮಿಗಳ ಬೀಗರೇ? ಅವರು ಏನು ಬೇಕಾದರೂ ಮಾತನಾಡಲಿ ಬಿಡಿ. ನಿಮಗೇನು ತೊಂದರೆ? ಪ್ರತಿಯೊಂದಕ್ಕೂ ಏಕೆ ಏಳುತ್ತೀರಿ? ಸಭಾಪತಿಗಳು ಹೇಳಿದರೂ ಕೇಳುವುದಿಲ್ಲ, ನಾವು ಹೇಳಿದರೂ ಕೇಳುವುದಿಲ್ಲ. ಪ್ರತಿಯೊಂದಕ್ಕೂ ಎದ್ದು ನಿಂತರೆ ಹೇಗೇ?

(ಗೊಂದಲ)

**ಸಭಾಪತಿಗಳು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸದನದ ಗಮನಕ್ಕೆ ಒಂದು ವಿಷಯ ತರಬಯಸುತ್ತೇನೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ . . .ನಾನು ಹೊಸದಾಗಿ ಸದನಕ್ಕೆ ಬಂದಾಗ ಅಂದರೆ 25 ವರ್ಷದ ಕೆಳಗೆ ನಡೆದ ಒಂದು ಘಟನೆ ಉಲ್ಲೇಖ ಮಾಡುತ್ತೇನೆ. ಅವತ್ತು ಈ ಸ್ಥಾನದಲ್ಲಿ ಕುಳಿತಿದ್ದ ಹಿರಿಯರು ಒಂದು ಮಾತನ್ನು ಹೇಳಿದರು. ಅದೇನೆಂದರೆ, "You can speak anything under the sun except unparliamentary matters". ಕನ್ನಡದಲ್ಲಿ ಹೇಳುವುದಾದರೆ, ನೀವು ಏನು ವಿಷಯ ಬೇಕಾದರೂ ಮಾತನಾಡಬಹುದು ಆದರೆ, ಇನ್ನೊಬ್ಬರಿಗೆ ಅವಮಾನ ಮಾಡುವ ನಿಟ್ಟಿನಲ್ಲಿ, ಸದನದ ಘನತೆಗೆ ಧಕ್ಕೆ ತರುವ ರೀತಿಯಲ್ಲಿ ಪದ ಪ್ರಯೋಗ ಮಾಡಬಾರದು. ಆದರೆ ಕೊಟ್ಟಿರುವ ಸಮಯದ ಒಳಗೆ ಮಾತನಾಡಬೇಕು. ಒಬ್ಬ ಸದಸ್ಯರು ಮಾತನಾಡುವಾಗ ದಯವಿಟ್ಟು ಬೇರೆ ಯಾರೂ ಮಾತನಾಡಬೇಡಿ. ಅಕಸ್ಮಾತ್ ಆಗಿ ಅಸಂಸದೀಯ ಪದ ಪ್ರಯೋಗ ಮಾಡಿದರೆ ಅಡ್ಡ ಬರಬಹುದು.

**ಶ್ರೀ ನಾರಾಯಣಸಾ ಭಾಂಡಗೆ:–** ನಾನು ಮಾತನಾಡುತ್ತಿರುವುದು ಕೆಲವರಿಗೆ ವಿಷಯಾಂತರವಾಗುತ್ತಿದೆ ಎನಿಸಬಹುದು . .

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಗಳೆ, ಆರ್ಟಿಕಲ್ 176 . . .

**ಸಭಾಪತಿಗಳು:–** ದಯವಿಟ್ಟು ಕುಳಿತುಕೊಳ್ಳಿ. ಎಲ್ಲದಕ್ಕೂ ಹೀಗೆ ಎದ್ದು ನಿಂತರೆ ಏನರ್ಥ? ಸದನ ನಡೆಸಬಾರದೇ? . . .(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:– ನಾವು** ರೂಲಿಂಗ್ ಕೇಳುತ್ತಿದ್ದೇವೆ, ಇದರ ಮೇಲೆ interpretation…

(ಗೊಂದಲ)

**ಸಭಾಪತಿಗಳು:–** ಆಯಿತು ಕುಳಿತುಕೊಳ್ಳಿ, ನಾನು ನೋಡುತ್ತೇನೆ. ನೀವು ಹೇಳಿದರ ಬಗ್ಗೆ ಆಮೇಲೆ ನೋಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ನಾರಾಯಣಸಾ ಭಾಂಡಗೆ:–**ಕೆಲವರಿಗೆ ಇದು ವಿಷಯಾಂತರ ಎಂದೆನಿಸಬಹುದು. ಆದರೆ ಚರ್ಚೆ ಮಾಡುವುದಕ್ಕೆ ಒಂದು ಸ್ಥಾನ ಇರಬೇಕಾಗುತ್ತದೆ. ಲೋಕಸಭೆಯಲ್ಲಿ ಬಾಂಬ್ ಹಾಕಿದಾಗ ನಮ್ಮ ಸೈನಿಕರು ಉಗ್ರರನ್ನು ಸೆದೆಬಡಿದರು. ಸುಪ್ರೀಂ ಕೋರ್ಟ್ ಅಫ್ಜಲ್‌ಗುರುವನ್ನು ನೇಣಿನ ಶಿಕ್ಷೆ ಕೊಟ್ಟರೆ ಅದರ ಪರವಾಗಿ ನಿಂತು ಮಾತನಾಡುತ್ತಾರೆ. ಈ ದೇಶದಲ್ಲಿ ಭಾರತ ಮಾತೆಗೆ ಧಿಕ್ಕಾರ ಹಾಕುತ್ತಾರೆ. ದೇಶ್ ಕೇ ಟುಕಡೆ ಟುಕಡೆ ಕರ್‌ದೇಂಗೆ ಎನ್ನುವವರ . . .ಬಿಜೆಪಿ ಮೇಲೆ ಸಿಟ್ಟಿದ್ದರೆ ಬಿಜೆಪಿಗೆ ಧಿಕ್ಕಾರ ಎಂದು ಹೇಳಿ, ನರೇಂದ್ರ ಮೋದಿಯವರ ಮೇಲೆ ಸಿಟ್ಟಿದ್ದರೆ ನರೇಂದ್ರ ಮೋದಿಯವರಿಗೆ ಧಿಕ್ಕಾರ ಎಂದು ಹೇಳಿ. ಆದರೆ ಭಾರತ ಮಾತೆಗೆ ಧಿಕ್ಕಾರ ಹಾಕಿ, ದೇಶ್ ಕೆ ಟುಕಡೆ ಟುಕಡೆ ಕರೇಂಗೆ ಎಂದು ಹೇಳಿದವರಿಗೆ . . .

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:–**ಮಾನ್ಯ ಸಭಾಪತಿಗಳೆ, ಅದೆಲ್ಲದರ ಬಗ್ಗೆ ಚರ್ಚೆ ಆಗಿದೆ . . .

(ಗೊಂದಲ)

**ಸಭಾಪತಿಗಳು:–** ಅವರು ಮಾತನಾಡಲಿ ಬಿಡಿ . . .

**ಡಾ:ಮತ್ತಿಕಟ್ಟಿ ವೀರಣ್ಣ:–** ಇಂಥದ್ದನ್ನು ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ.

(ಗೊಂದಲ)

**ಸಭಾಪತಿಗಳು:–** 5 ಜನ ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದೀರಿ . . .

**ಶ್ರೀ ಆರ್.ವಿ.ವೆಂಕಟೇಶ್:–** ಬಿಜಾಪುರದಲ್ಲಿ ಪಾಕಿಸ್ತಾನದ ಬಾವುಟ ಹಾಕಿದವರು ಯಾರು? ಇವರೇ ಹಾಕಿದವರು. ಇವರು ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ . . .(ಗೊಂದಲ)

**ಶ್ರೀ ನಾರಾಯಣಸಾ ಭಾಂಡಗೆ:–** ಜವಹಾರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ಯಾರೋ ದೇಶದ್ರೋಹಿಗಳು ಭಾರತ ಮಾತೆಗೆ ಅವಮಾನ ಮಾಡಿದರು, ಅಂಥವರಿ ಬೆಂಬಲ ಕೊಡುತ್ತಾರೆ, ಅಂತಹ ಜನರ ಬಗ್ಗೆ . . . (ಗೊಂದಲ) ಸ್ವಯಂ ಘೋಷಿತ ಬುದ್ಧಿ ಜೀವಿಗಳು (ಗೊಂದಲ)

**ಸಭಾಪತಿಗಳು:–** ಸಾಕು ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ಇವತ್ತಿನ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮುಗಿದಿದೆ. ನಾಳೆ ಅದು ಮುಂದುವರೆಯುತ್ತದೆ. ಯಾರ್‍ಯಾರು ಹೆಸರುಗಳನ್ನು ಕೊಟ್ಟಿದ್ದಾರೋ ಅವರೆಲ್ಲರಿಗೂ accommodate ಮಾಡುವ ಪ್ರಯತ್ನ ಮಾಡುತ್ತೇನೆ. ನಾನು ನಾಳೆಯ ಸಮಯವನ್ನು ಹೇಳುತ್ತೇನೆ, ಆ ಸಮಯಕ್ಕೆ ಸರಿಯಾಗಿ ಶುರು ಮಾಡೋಣ. ಮಧ್ಯಾಹ್ನದ ಒಳಗೆ ಅದನ್ನು ಮುಗಿಸಬೇಕಾಗುತ್ತದೆ. ಇವತ್ತು ಯಾರ್‍ಯಾರು ಮಾತನಾಡಿದ್ದಾರೋ ಅವರೆಲ್ಲರೂ ನಾಳೆ ಬರಬೇಕು. ನಾನು ಮಾತನಾಡಿದ್ದು ಮುಗಿದಿದೆ ಎಂದು ತಪ್ಪಿಸಿಕೊಳ್ಳಬೇಡಿ. ನಾಳೆಯೂ ಬನ್ನಿ. ಇವತ್ತಿನ ಮಟ್ಟಿಗೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮುಗಿದಿದೆ. ಬಾಕಿಯವರಿಗೆ ನಾಳೆ ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ ಅವಧಿ ಪ್ರಾರಂಭವಾಗುತ್ತದೆ. ಈಗ 5.15 ಗಂಟೆ. 6.15 ಗಂಟೆಯ ಒಳಗೆ ಪ್ರಶ್ನೋತ್ತರ ಅವಧಿಯನ್ನು ಮುಗಿಸಬೇಕಿದೆ.

**ಶ್ರೀ ಪುಟ್ಟಣ್ಣ:–ಮಾ**ನ್ಯ ಸಭಾಪತಿಗಳೆ, ನಾವೂ ಕೂಡ ವಿದ್ಯಾರ್ಥಿ ಚಳುವಳಿಯಿಂದ ಮೇಲೆ ಬಂದಿರುವಂಥವರು. ವಿಶ್ವವಿದ್ಯಾನಿಲಯದಲ್ಲಿ ನಾನೂ ಕೂಡ ಅಧ್ಯಕ್ಷನಾಗಿದ್ದೆ. ನಾನು ಯಾರ

ಪರವಾಗಿಯೂ ಹೇಳುತ್ತಿಲ್ಲ. ಜೆಎನ್‌ಎಯಲ್ಲಿ ಯಾರಾದರೂ ನಮ್ಮ ದೇಶದ ವಿರುದ್ಧ ಘೋಷಣೆ ಕೂಗಿದ್ದರೆ ಅದು ಖಂಡಿತಾ ತಪ್ಪು. ಅದನ್ನು ಸಮರ್ಥನೆ ಮಾಡುವ ಪ್ರಶ್ನೆ ಇಲ್ಲ. ಆದರೆ ನಿರಪರಾಧಿಗಳಿಗೆ ಯಾವುದೇ ಕಾರಣಕ್ಕೂ ಶಿಕ್ಷೆ ಆಗಬಾರದು. ಯಾವುದೇ ವಿದ್ಯಾರ್ಥಿ ಸಂಘಟನೆಯಾಗಲಿ ದೇಶದ ವಿರುದ್ಧ, ಭಾರತದ ವಿರುದ್ಧ ಘೋಷಣೆ ಮಾಡಿದರೆ ಅದು ದೊಡ್ಡ ತಪ್ಪಾಗುತ್ತದೆ ಮತ್ತು ಅದು ಅಗೌರವಾದುದಾಗಿದ್ದು ಅದನ್ನು ಎಲ್ಲರೂ ಖಂಡಿಸಬೇಕಾಗುತ್ತದೆ.

(ಮುಂದು . . .)

# ಪ್ರಶ್ನೋತ್ತರಗಳು

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಚುಕ್ಕೆ ಪ್ರಶ್ನೆ ಸಂಖ್ಯೆ:402
ಉತ್ತರ ಲಗತ್ತಿಸಲಾಗಿದೆ

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಲ್ಲಿ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿರುವಂಥವರಿಗೆ ಏನು ಪ್ರಭಾರ ಭತ್ಯೆ ಕೊಡುತ್ತಿದ್ದಾರೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸಚಿವರ ಉತ್ತರದಲ್ಲಿ ಸ್ಪಷ್ಟತೆ ಇಲ್ಲ. ಅದು ತೃಪ್ತಿಕರವಾಗಿಲ್ಲ. ಹೀಗಾಗಿ ನಾನು ಮೂರು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಮೊದಲನೆ ಪ್ರಶ್ನೆ, ರಾಜ್ಯದಲ್ಲಿ ಎಷ್ಟು ಖಾಸಗಿ ಅನುದಾನಿತ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ ಎಂದು ಕೇಳಿದ್ದೆ. ರಾಜ್ಯದಲ್ಲಿ ಒಟ್ಟು 543 ಖಾಸಗಿ ಅನುದಾನಿತ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ ಎಂದು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನಿತ್ತು ಎಂದರೆ, ಒಟ್ಟು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಎಷ್ಟು ಉಪ ಪ್ರಾಂಶುಪಾಲರ ಹುದ್ದೆಯನ್ನು ಮಂಜೂರು ಮಾಡಿದ್ದಾರೆ ಎಂದು ಕೇಳಿದರೆ ಆ ಪ್ರಶ್ನೆಗೆ ಇಲ್ಲಿ ಉತ್ತರ ಇಲ್ಲ. ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಯಾವ ಅಧಿಕಾರಿಗಳು ಉತ್ತರವನ್ನು ತಯಾರು ಮಾಡಿದ್ದಾರೆಯೋ ಗೊತ್ತಿಲ್ಲ. ನನ್ನ ಪ್ರಶ್ನೆಗೆ ಉತ್ತರ ಕೊಡುವುದುಬಿಟ್ಟು ಉಪ ಪ್ರಾಂಶುಪಾಲರನ್ನು, ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕಾದರೆ ನಿಯಮಾವಳಿ ಏನು ಎಂಬುದರ ಬಗ್ಗೆ ವಿಶ್ಲೇಷಣೆ ಕೊಡುತ್ತಾರೆ. ನನ್ನ ಪ್ರಶ್ನೆ ಏನೆಂದರೆ, ರಾಜ್ಯದ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಮುಖ್ಯೋಪಾಧ್ಯಾಯರ ಹುದ್ದೆ ಮಂಜೂರಾಗಿರುವ ಸಂಖ್ಯೆ ಕೊಟ್ಟಿಲ್ಲ. ಇವತ್ತು ರಾಜ್ಯದಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರ ಹುದ್ದೆ ಎಲ್ಲಿ ನೇಮಕಾತಿಯಾಗಿಲ್ಲ ಅಲ್ಲಿ ಪ್ರಭಾರ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಪ್ರಭಾರ ಮುಖ್ಯೋಪಾಧ್ಯಾಯರಿಗೆ ಪ್ರಭಾರ ಭತ್ಯೆಯನ್ನು ಕೊಡುತ್ತಿದ್ದಾರೆ. ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಖಾಸಗಿ ಪ್ರೌಢಶಾಲೆಯಲ್ಲಿ ತಾಂತ್ರಿಕ ಕಾರಣಕ್ಕಾಗಿ ಎಲ್ಲಿ ಮುಖ್ಯೋಪಾಧ್ಯಾಯರನ್ನು

ನೇಮಿಸಿಲ್ಲ, ಅಂತಹ ಕಡೆ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಸೇವೆ ಮಾಡಿದರೂ ಕೂಡ ಪ್ರಭಾರ ಭತ್ಯೆಯನ್ನು ಕೊಡುತ್ತಿಲ್ಲ. ಇದರ ಜೊತೆಯಲ್ಲಿ ರಾಜ್ಯದಲ್ಲಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ. ಹಿರಿಯ ಸಹ ಶಿಕ್ಷಕರಿಗೆ ಪ್ರಭಾರ ಮುಖ್ಯೋಪಾಧ್ಯಾಯರು ಎಂದು ನೇಮಕ ಮಾಡುತ್ತಾರೆ. ಇವತ್ತು ಅಲ್ಲಿಯೂ ಕೂಡ ಅವರಿಗೆ ಪ್ರಭಾರ ಭತ್ಯೆಯನ್ನು ಕೊಡುತ್ತಿಲ್ಲ. ನಾನು ಹೇಳಬೇಕಾಗಿರುವುದು ಇಷ್ಟೇ, ಸರ್ಕಾರಿ ಪ್ರೌಢಶಾಲೆಗಳೇನಿವೆ ಅಲ್ಲಿ ಪ್ರಭಾರ ಮುಖ್ಯೋಪಾಧ್ಯಾಯರಿಗೆ ಪ್ರಭಾರ ಭತ್ಯೆಯನ್ನು ನೀಡುತ್ತಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿರುವಂಥ ಮುಖ್ಯೋಪಾಧ್ಯಾಯರು ಇರಬಹುದು, ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಹಿರಿಯ ಶಿಕ್ಷಕರು ಪ್ರಭಾರ ಮುಖ್ಯೋಪಾಧ್ಯಾಯರು ಎಂದು ಕೆಲಸ ಮಾಡುತ್ತಿದ್ದಾರೆ ಅವರಿಗೆ ಯಾವುದೇ ಪ್ರಭಾರ ಭತ್ಯೆಯನ್ನು ಕೊಡುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಈ ತಾರತಮ್ಯ ಏಕೆ? ಸರ್ಕಾರಿ ಶಾಲೆಯವರು ಕೊಡುತ್ತಾರೆ, ಖಾಸಗಿಯವರು ಕೊಡುತ್ತಿಲ್ಲ. ಏಕೆ ಕೊಡುತ್ತಿಲ್ಲ ಎನ್ನುವುದು ನನ್ನ ಮೂಲ ಪ್ರಶ್ನೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಎಲ್ಲಿ ಮಂಜೂರಾತಿಯಾಗಿರುವ ಹುದ್ದೆ ಇದೆ ಆ ಹುದ್ದೆ ಇದ್ದಲ್ಲಿ ಅಲ್ಲಿ ಮುಖ್ಯ ಶಿಕ್ಷಕರು ಇಲ್ಲದಿದ್ದರೆ ಅವರಿಗೆ ಭತ್ಯೆಯನ್ನು ಕೊಡಲಾಗುತ್ತದೆ. ಅಲ್ಲಿ ಸಹ ಶಿಕ್ಷಕರು ಆ ಕಾರ್ಯವನ್ನು ನಿರ್ವಹಿಸುತ್ತಾರೆ. 69 ಸ್ಥಳಗಳಲ್ಲಿ ಆ ಸಮಸ್ಯೆ ಇದೆ. ಅವರಿಗೆ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದ್ದು, ಸಹ ಶಿಕ್ಷಕರು ಕೆಲಸ ಮಾಡುತ್ತಿದ್ದರೆ ಅವರಿಗೆ ಭತ್ಯೆಯನ್ನು ಕೊಡಬೇಕೆನ್ನುವುದು ಇದೆ. ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇಲ್ಲದೆ ಸಹ ಶಿಕ್ಷಕರು ಆ ಕಾರ್ಯ ನಿರ್ವಹಿಸುತ್ತಿದ್ದರೆ ಅವರಿಗೆ ಹೆಚ್ಚಿನ ಭತ್ಯೆ ಕೊಡತಕ್ಕಂಥದ್ದು ಅಗತ್ಯ ಇದೆ. ಎಲ್ಲಿ ಅಂತಹ ಲೋಪದೋಷ ಆಗಿದೆ ಅದನ್ನು ಸರಿಪಡಿಸುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ವ್ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:-** ಇದು ಇಲಾಖೆ ಬಗ್ಗೆ ಚರ್ಚೆಯಲ್ಲ. ಇದು ಪ್ರಶ್ನೋತ್ತರ. ಸರ್ಕಾರ ಉತ್ತರ ಕೊಟ್ಟಿದೆ. ನಿಮ್ಮ ಉತ್ತರ ಸರಿಯಿಲ್ಲ ಎಂದು ಒಂದು ಹಕ್ಕುಚ್ಯುತಿಯನ್ನು ಕಳುಹಿಸಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯದ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಎಷ್ಟು ಮುಖ್ಯೋಪಾಧ್ಯಾಯರ ಹುದ್ದೆಯನ್ನು ಕೊಟ್ಟಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಇಲ್ಲವೇ ಇಲ್ಲ. ತಾವು ನಮ್ಮ ಸಹಾಯಕ್ಕೆ ಬರಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮೊದಲನೆ ಪ್ರಶ್ನೆಗೆ ಉತ್ತರವೇ ಕೊಟ್ಟಿಲ್ಲ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, 543 ಖಾಸಗಿ ಅನುದಾನಿತ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ. 469 ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಭಾರ ಮುಖ್ಯ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರ ಕೊಡುತ್ತಿದ್ದಾರೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ನಿಮಿಷ ಕುಳಿತುಕೊಂಡರೆ ನಾನು ಹೇಳುತ್ತೇನೆ.

**ಸಭಾಪತಿಯವರು:-** ಈ ಶಿಕ್ಷಣ ಸಂಸ್ಥೆಯ ಪ್ರಶ್ನೆ ಬಂದಾಗ, ನಮ್ಮ ಸದನದಲ್ಲಿ ಸುಮಾರು 12-13 ಜನ ನನ್ನನ್ನೂ ಸೇರಿಸಿದರೆ 14 ಜನ ನಾವೆಲ್ಲರು ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರದಿಂದ ಬಂದವರು. ನಮಗೆ ಆ ವಿಷಯದ ಮಾಹಿತಿ ತುಂಬಾ ಇರುತ್ತವೆ. ಆದರೆ, ಒಬ್ಬರು ಪ್ರಶ್ನೆ ಕೇಳಿದಾಗ ಅದು ನನ್ನ ಪ್ರಶ್ನೆ ಎಂದು ಎಲ್ಲರೂ ಎದ್ದುಬಿಟ್ಟರೆ ನಾನು ಸದನ ನಡೆಸುವುದಕ್ಕಾಗುವುದಿಲ್ಲ. ಹಾಗಾಗಿ ಎಲ್ಲಾ ಪ್ರಶ್ನೆಗಳಿಗೂ ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಪ್ರಶ್ನೆ ಕೇಳಿದವರಿಗೆ ಮಾತ್ರ ಉಪ ಪ್ರಶ್ನೆ ಕೇಳುವುದಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ. ದಯವಿಟ್ಟು ಸಹಕರಿಸಿ, ಇಲ್ಲದಿದ್ದರೆ ನನಗೆ ಸದನ ನಡೆಸುವುದಕ್ಕಾಗುವುದಿಲ್ಲ. ಇದೊಂದೆ ಪ್ರಶ್ನೆ ಸಾಕು ಎನ್ನುವುದಾದರೆ ಮಂತ್ರಿಗಳಿಗೆಲ್ಲಾ ಉತ್ತರವನ್ನು ಮಂಡಿಸಿ ಹೊರಟು ಹೋಗಿ, ಏನು ಉತ್ತರ ಕೊಡಬೇಕಾಗಿಲ್ಲ ಎಂದು ಹೇಳುತ್ತೇನೆ. ನಾನು ಎಲ್ಲಾ ಪ್ರಶ್ನೆಗಳಿಗೂ

ಉತ್ತರ ಕೊಡಿಸಬೇಕು. ಕೇವಲ ಶಿಕ್ಷಣ ಇಲಾಖೆಯದ್ದು ಮಾತ್ರವಲ್ಲ, ಇವತ್ತು ಏನೇನು ಲಿಸ್ಟ್ ಆಗಿದೆ ಅಷ್ಟೂ ಪ್ರಶ್ನೆಗಳಿಗೂ ನಾನು ಸದನದಲ್ಲಿ ಉತ್ತರ ಕೊಡಿಸಬೇಕು. ನಿಮಗೆ ಅವರು ಕೊಡುವ ಉತ್ತರ ಸರಿಯಿಲ್ಲ ಎನ್ನುವುದಾದರೆ ಒಂದು complaint ರೀತಿಯಲ್ಲಿ ನನ್ನ ಕಛೇರಿಗೆ ಕಳುಹಿಸಿ ಕೊಡಿ. ನಾನು ಏನೋ ಕೇಳಿದರೆ ಅವರು ಇನ್ನೇನೋ ಹೇಳಿದ್ದಾರೆ, ಇದರ ಬಗ್ಗೆ ನನಗೆ ಅನ್ಯಾಯ ಆಗಿದೆ, ನ್ಯಾಯ ದೊರಕಿಸಿ ಕೊಡಿ ಎಂದು complaint ಕೊಡಿ ನಾನು ಸಚಿವರನ್ನು ಕರೆಯಿಸಿ ಮಾತನಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಮೂರು ಉಪ ಪ್ರಶ್ನೆಗಳನ್ನು ಕೇಳುತ್ತೇನೆ ಎಂದು ಹೇಳಿದ್ದೆ. ನಾನು ಈಗ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಆ ಪ್ರಶ್ನೆಗೂ ಸರಿಯಾದ ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಸರಿಯಿದೆಯೋ ಇಲ್ಲವೋ ಎಂಬುದನ್ನು ಹೇಳುತ್ತಾರೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಮೊದಲನೆ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. 543 ಖಾಸಗಿ ಅನುದಾನಿತ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿವೆ. ಇರತಕ್ಕಂಥ ವ್ಯತ್ಯಾಸ 74 ಮಾತ್ರ. ರಾಜ್ಯದಲ್ಲಿ ಈಗಾಗಲೇ ಒಟ್ಟು 469 ಸರ್ಕಾರಿ ಪ್ರೌಢಶಾಲೆಗಳಿವೆ. ಅಲ್ಲಿ ಪ್ರಭಾರ ಭತ್ಯೆಯನ್ನು ಕೊಡುತ್ತಿದ್ದೇವೆ. ಎಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿದ್ದು ಯಾರು ಕಾರ್ಯನಿರ್ವಹಿಸುತ್ತಾರೆ ಅವರಿಗೆ ಪ್ರಭಾರ ಭತ್ಯೆಯನ್ನು ನಾವು ಕೊಡುತ್ತೇವೆ. ಆದರೆ ಎಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇಲ್ಲದೆ ಮುಖ್ಯ ಶಿಕ್ಷಕರ ಹುದ್ದೆ ಕಾರ್ಯನಿರ್ವಹಿಸುವ ಸಹ ಶಿಕ್ಷಕರು ಏನಿದ್ದಾರೆ ಅಂಥವರು ಹೆಚ್ಚು ಕಡಿಮೆ 74 ಜನರಿದ್ದಾರೆ. ಅವರಿಗೆ ನಾವೇನಾದರೂ ಭತ್ಯೆ ಕೊಡದಿದ್ದರೆ, ಏಕೆಂದರೆ ಆ ಹುದ್ದೆ ಖಾಲಿ ಇರುವುದಿಲ್ಲ. ಹುದ್ದೆಯ ಕಾರ್ಯಭಾರವನ್ನು ಅವರು ಮಾಡುತ್ತಿದ್ದಾರೆ. ಅದಕ್ಕೆ ನಿಯಮಾನುಸಾರ ಏನು ಭತ್ಯೆ ಇದೆ ಅದನ್ನು ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ಅಕಸ್ಮಾತ್ ಯಾರಿಗೆ ಸಿಕ್ಕಿಲ್ಲ ಅವರು ಮನವಿ ಸಲ್ಲಿಸಿರುವ ಮಾಹಿತಿ ಇದ್ದರೆ ನಾವೇ ವೆರಿಫೈ ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು:-** ಒಂದು ಪ್ರಶ್ನೆಗೆ 10 ನಿಮಿಷ ಕೊಡುವುದಕ್ಕಾಗುವುದಿಲ್ಲ. ನನ್ನ ಹತ್ತಿರ ಅಷ್ಟು ಸಮಯವಿಲ್ಲ. 18 ಪ್ರಶ್ನೆಗೆ 180 ನಿಮಿಷ ಆಗುತ್ತದೆ. ಈಗ ನನ್ನ ಹತ್ತಿರ ಅಷ್ಟು ಸಮಯವಿಲ್ಲ 60 ನಿಮಿಷ ಇದೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಹುದ್ದೆ ಮಂಜೂರಾತಿ ಇಲ್ಲದೆ ಕಾರ್ಯನಿರ್ವಹಿಸತಕ್ಕಂಥ ಮುಖ್ಯ ಶಿಕ್ಷಕರು ಯಾರಾದರೂ ಇದ್ದರೆ ಅವರಿಗೆ ಈ ಭತ್ಯೆ ಸಿಗದಿದ್ದರೆ ಅದನ್ನು ತಲುಪಿಸುವಂತಹ ಪ್ರಯತ್ನ ಮಾಡುತ್ತೇವೆ.

ಚುಕ್ಕೆ ಪ್ರಶ್ನೆ ಸಂಖ್ಯೆ:431
ಉತ್ತರ ಲಗತ್ತಿಸಲಾಗಿದೆ

**ಶ್ರೀ ಬಸವರಾಜ್ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)(ಶ್ರೀ ಎನ್.ಎಸ್.ಬೋಸ್‌ರಾಜುರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 2011-12ನೇ ಸಾಲಿನಲ್ಲಿ 20 ನೀರು ಶುದ್ಧೀಕರಣ ಘಟಕಗಳು, 2012-13ನೇ ಸಾಲಿನಲ್ಲಿ 343 ನೀರು ಶುದ್ಧೀಕರಣ ಘಟಕಗಳು, 2013-14ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ 113 ನೀರು ಶುದ್ಧೀಕರಣ ಘಟಕಗಳನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಮಂತ್ರಿಯಾಗುವುದಕ್ಕಿಂತ ಮೊದಲೇ ಬಹಳಷ್ಟು ಆಸಕ್ತಿ ವಹಿಸಿ ಶುದ್ಧ ನೀರಿನ ಘಟಕವನ್ನು ಪ್ರಾರಂಭ ಮಾಡಬೇಕು, ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ತರಬೇಕು ಎಂದು ಬಹಳ ಪ್ರಯತ್ನ ಮಾಡಿ ಅವರು ಸಾಕಷ್ಟು ಮುತುವರ್ಜಿ ವಹಿಸಿ ಮಾಡಿದ್ದಾರೆ. ಅದಲ್ಲದೆ, ಅವರು ದೇಶದಲ್ಲೇ ಮಾದರಿಯಾಗಿ ಇವತ್ತು ಇಡೀ ದೇಶದ ತುಂಬಾ ಶುದ್ಧ ನೀರಿನ ಘಟಕವನ್ನು ಸ್ಥಾಪನೆ ಮಾಡುವಂಥ ಕೆಲಸ ಆಗುತ್ತಿದೆ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನು?

**ಶ್ರೀ ಬಸವರಾಜ್ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಕೇಳುವ ಪ್ರಶ್ನೆ ಏನೆಂದರೆ, ಅವರು ಅಷ್ಟು ಆಸಕ್ತಿಯನ್ನು ವಹಿಸಿ ಸಾಕಷ್ಟು ಶುದ್ಧ ನೀರಿನ ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು 7000 ನೀರಿನ ಘಟಕಗಳನ್ನು ನಾವು ಇದುವರೆಗೆ ಮಂಜೂರು ಮಾಡಿದ್ದೇವೆ ಎನ್ನುವ ಮಾತು ಸಭೆಯಲ್ಲಿ, ಪತ್ರಿಕೆಗಳಲ್ಲಿ ಮತ್ತು ಮಾನ್ಯ ಸಚಿವರ ಉತ್ತರದಲ್ಲೂ ಕೂಡ ಇದೆ. ಆದರೆ ರಾಯಚೂರು ಜಿಲ್ಲೆಯ ಮಟ್ಟಿಗೆ ನಾನು ಹೇಳಬೇಕಾದರೆ ಅವರು ಎಷ್ಟು ಶುದ್ಧ ನೀರಿನ ಘಟಕ ಪ್ರಾರಂಭ ಆಗಿವೆ ಎಂದು ಹೇಳಿದ್ದಾರೆ ಅಷ್ಟು ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಕೊಟ್ಟಿರುವ ಉತ್ತರದಲ್ಲಿ ಆಗಿದೆ ಎಂದು ಹೇಳಿದ್ದೀರಿ. ಆದರೆ ಇವರು ಆಗಿಲ್ಲ ಎಂದು ಹೇಳುತ್ತಿದ್ದಾರೆ. ಅದನ್ನು ನೀವು ಸ್ಪಷ್ಟಪಡಿಸಿ.

(ಮುಂದು)

ಶ್ರೀ ಹೆಚ್.ಕೆ.ಪಾಟೀಲ್(ಮುಂದು. .)

ಸನ್ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮತ್ತು ಸನ್ಮಾನ್ಯ ಬೋಸ್‌ರಾಜ್‌ರವರು ಈ ಪ್ರಶ್ನೆ ಕೇಳುವಂತಹ ಸಂದರ್ಭದಲ್ಲಿ ಏನು ಅವರಿಗೆ ಕೆಲವು ಆತಂಕಗಳಿವೆ, ಏನು ಆಗಬೇಕೆಂದು ಅಪೇಕ್ಷೆ ಪಡುತ್ತಿದ್ದಾರೆ, ಎನ್ನುವುದು ಸ್ಪಷ್ಟವಾಗುತ್ತಿದೆ. ಈಗಾಗಲೇ ನಾನು ಸಂಬಂಧಪಟ್ಟ ಸಿಇಓ ರವರಿಗೆ ಮಾತನಾಡಿದ್ದೇನೆ. ತಾವು ಹೇಳುತ್ತಿರುವುದು ನಿಜ. ಈ ಪ್ರಶ್ನೆಯಲ್ಲಿ ಕೇಳಿದಂತೆ ಒಂದು ಕಂಪನಿಯವರು ಸುಮಾರು 30 ಘಟಕಗಳನ್ನು ಅಳವಡಿಸಿದ್ದಾರೆ. ಆದರೆ, ಅವುಗಳು ಹಲವಾರು ಕಾರಣಗಳಿಂದ ಕೆಲಸ ಮಾಡುತ್ತಿಲ್ಲ. ಸ್ವಲ್ಪ ಬೇಜಾಬ್ದಾರಿ ಕಂಪನಿಯಂತೆ ಕಾಣುತ್ತದೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು, ಅವರು ತಾಂತ್ರಿಕವಾಗಿ ಏನು ತಪ್ಪನ್ನು ಎಸಗಿದ್ದಾರೆ, ಅದಕ್ಕಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ, ಇತ್ತೀಚೆಗೆ ಸನ್ಮಾನ್ಯ ನದಾಫ್‌ರವರ ನೇತೃತ್ವದ ಕಮಿಟಿಯನ್ನು ನಿಮ್ಮ ರಾಯಚೂರಿಗೆ ಕಳುಹಿಸಿದ ಮೇಲೆ ಅವರು ಈ ವಿಚಾರದಲ್ಲಿ ವಿಶೇಷ ಆಸಕ್ತಿವಹಿಸಿ, ಈಗಾಗಲೇ 180 ಘಟಕಗಳನು ಯಶಸ್ವಿಯಾಗಿ ನಡೆಯುತ್ತಿವೆ. ಇನ್ನು 30 ಘಟಕಗಳು ಅವುಗಳು ಸರಿಯಾಗಿ ಕೆಲಸ ನಿರ್ವಹಿಸಿಬೇಕು, ಅ ರೀತಿಯಲ್ಲಿ ನಡೆಸುವುದಕ್ಕೆ ಏನೇನು ಹೆಜ್ಜೆಯನ್ನಿಡಬೇಕು, ಅದನ್ನು ನಾವು ಮಾಡುತ್ತೇವೆ. ಇದು ಒಂದು ವಿಚಾರ.

ಎರಡನೆಯದಾಗಿ, ಮುಂದೆ ಆಗುವಂತಹ ನಮ್ಮ ಘಟಕಗಳ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ನಮ್ಮ ಸರ್ಕಾರ 7 ಸಾವಿರ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ನಿರ್ಣಯ ಮಾಡಿದೆ. ಕೆಲಸಗಳು ಯುದ್ಧೋಪಾಧಿಯಲ್ಲಿ ನಡೆದಿವೆ. ಆದಾಗ್ಯೂ ಈ ವಿಳಂಬ ಧೋರಣೆ ದ್ರೋಹ ಏನಿದೆ, ಅದು ಅಲ್ಲಲ್ಲಿ ಸ್ವಲ್ಪ ಅಡ್ಡ ಬರುತ್ತಿದೆ. ಇದಕ್ಕೆ ಸ್ವಲ್ಪಮಟ್ಟಿಗೆ ನಮ್ಮ ಚುನಾವಣೆಗಳು ಅಡ್ಡ ಬಂದಿರಬಹುದು. ಅದು ಏನೇ ಇರಲಿ, ಆ 7 ಸಾವಿರ ಘಟಕಗಳನ್ನು ಪೂರ್ಣಗೊಳಿಸುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆ, ಆ ನಿಟ್ಟಿನಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀಯುತ ಅಮರನಾಥ ಪಾಟೀಲ್‌ರವದ್ದಾಗಿದ್ದು, ಅವರು ಕೇಳಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೆ, ನಾನು ಇನ್ನು ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ಕುಡಿಯುವ ನೀರಿನ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಅದೇ ವಿಚಾರವಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 7 ಸಾವಿರ ಘಟಕಗಳನ್ನು ಅಳವಡಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ನಾನು ಕೇಳಿರುವ ಪ್ರಶ್ನೆಗಳಲ್ಲಿಯೇ ಇನ್ನೊಂದು ಪ್ರಶ್ನೆ ಇದ್ದು, ಅದಕ್ಕೆ ಉತ್ತರ ಕೊಟ್ಟಿರುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದು, ಮಾನ್ಯ ಸಚಿವರು ಅದನ್ನು ಗಮನಿಸಬೇಕು. 2ನೇ ಪ್ರಶ್ನೆಗೆ ತಾವು ಉತ್ತರ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಪತಿಯವರೆ, ಎರಡನೇ ಪ್ರಶ್ನೆಯನ್ನು ಕೇಳಲಿಕ್ಕೆ ನಮಗೆ ಅವಕಾಶವಿಲ್ಲವೆಂದರೆ ಹೇಗೆ? ಇವತ್ತು ನಮ್ಮಲ್ಲಿ ಕೃಷ್ಣ ಮತ್ತು ತುಂಗಾಭದ್ರಾ ಕುಡಿಯುವ ನೀರಿನ ಬಗ್ಗೆ ಈಗಾಗಲೇ ನಾವು ಒಂದು ಪ್ರಶ್ನೆಯನ್ನು ಕೇಳಿದ್ದೇವೆ. ಅದರಲ್ಲಿಯೇ ಉಪ ಪ್ರಶ್ನೆ ಇದೆ. ಇವತ್ತು ಮಾನ್ಯ ಸಚಿವರು ರಾಯಚೂರು ಜಿಲ್ಲೆಯ . . .

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ಕುಳಿತುಕೊಳ್ಳಿ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ತುಂಗಾಭದ್ರಾ ಮತ್ತು ಕೃಷ್ಣ ಕಾಲುವೆಗಳ ನೀರನ್ನು ಆಧಾರವಾಗಿಟ್ಟುಕೊಂಡು ಏನು ಮಲ್ಟಿ ವಿಲೇಜ್ ಸ್ಕೀಮ್‌ಗಳನ್ನು ನಾವು ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ, ಅವುಗಳಿಗೆ ಸಾಕಷ್ಟು ಅನುದಾನ ಕೊಡುವುದರಲ್ಲಿ ನಮಗೆ ಸಾಧ್ಯವಾಗಿಲ್ಲ. 2 ಕೋಟಿ 70 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿರುವುದೇನೋ ನಿಜ. ಆದರೆ, ಕೆಲಸ ಪೂರ್ಣವಾಗಿಲ್ಲ. ಇನ್ನು ಅನುದಾನ ಒದಗಿಸಬೇಕಾಗಿದೆ. ಏನು ಕೊಡಬೇಕಾಗಿರುವ ಅನುದಾನ ಬಾಕಿ ಇದೆ, ಅದನ್ನು ಆದಷ್ಟು ಬೇಗ ಇದೇ ಆರ್ಥಿಕ ವರ್ಷದಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರದಲ್ಲಿ ಒಂದೇ ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ಇವತ್ತು ಏನು ತುಂಗಾಭದ್ರಾ ಮತ್ತು ಕೃಷ್ಣ ನದಿಯಲ್ಲಿ ಸುಮಾರು

ನೂರಾರು ಕಿಲೋ ಮೀಟರ್‌ಗಟ್ಟಲೇ, ಅಲ್ಲಿ ಹೊಳೆಯಲ್ಲಿ, ನದಿಯಲ್ಲಿ ನೀರು ಇರುವುದಿಲ್ಲ. ಇರತಕ್ಕಂತಹ ಎಲ್ಲಾ ಮಲ್ಟೀ ವಿಲೇಜಸ್ ಸ್ಕೀಮ್‌ಗಳು ., . .

**ಸಭಾಪತಿಯವರು:–** ಅದಕ್ಕೂ ಇದಕ್ಕೂ ಏನು ಸಂಬಂಧ?

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಚಿವರು ನೀರಾವರಿ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು. ಏಕೆಂದರೆ, ಟ್ಯಾಂಕ್‌ಗಳಿಗೂ ಸಹ ಕುಡಿಯುವ ನೀರು ಹತ್ತುವುದಿಲ್ಲ. ಅಷ್ಟು ದೂರ ನೀರು ಹೋಗುವಂತಹ ಕೆಲಸ ಆಗಿದೆ. ಆದ್ದರಿಂದ, ಸ್ವಲ್ಪ ನೀರನ್ನು ಬಿಡುಗಡೆ ಮಾಡಿದರೆ ಈ ಎಲ್ಲಾ ಮಲ್ಟೀ ವಿಲೇಜ್ ಸ್ಕೀಮ್‌ಗಳು ರಿವೈವ್ ಆಗಿ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಲಿಕೊಳ್ಳಲಿಕ್ಕೆ ಇಚ್ಛೆಪಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ ನಮ್ಮ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಿದ್ದು, ಕುಡಿಯುವ ನೀರಿಗೆ ಆದ್ಯತೆ ಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಕೆ.ಪಾಟೀಲ್:– ಬ್ಯಾರೇಜ್‌ಗಳಲ್ಲಿ ನೀರು ಇದೆಯೋ ಇಲ್ಲವೋ ಗೊತ್ತಿಲ್ಲ. ಭೀಮಾ ಬ್ಯಾರೇಜ್‌ಗಳಲ್ಲಿಯೂ ಸಹಿತ ನೀರು ಖಾಲಿಯಾಗಿದೆ. ಬಹಳ ಕಠಿಣವಾದ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಮಹಾರಾಷ್ಟ್ರಕ್ಕೆ ನೀರು ಬಿಡುಗಡೆಗೆ ಪ್ರಯತ್ನ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದು, ಆದಷ್ಟು, ಬೇಗೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 427**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಏನೆಂದರೆ, ಕಲಬುರಗಿ ವಿಮಾನ ನಿಲ್ದಾಣ ಎನ್ನುವುದಕ್ಕಿಂತ 'ಪುಷ್ಪಕ ವಿಮಾನ ನಿಲ್ದಾಣದ ಭಾಗ-3' ಎಂದು ಅದಕ್ಕೆ ತಕ್ಕ ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. ಅಂದರೆ ಪಾರ್ಟ್-3, ಬೇರೆ ಬೇರೆ ಅಂದರೆ, ಮೊದಲನೆಯವರಿಗೆ ಗುತ್ತಿಗೆ ಹೋಯಿತು, ಎರಡನೆಯವರಿಗೆ ಗುತ್ತಿಗೆ ಹೋಯಿತು. ಈಗ ಮೂರನೆಯವರಿಗೆ ಗುತ್ತಿಗೆ ಹೋಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಹೊಸ ಉತ್ತರವನ್ನು ಕೊಟ್ಟಿದ್ದಾರೆ.

ನಾನು ಈ ಗೊಂದಲಗಳ ಸಲುವಾಗಿ ಪ್ರಶ್ನೆ ಕೇಳಿದ್ದೇನೆ. ಇದು ವಿಮಾನ ನಿಲ್ದಾಣ ವಿನ್ಯಾಸದ ಕಾಮಗಾರಿಗಳ ಹಾಗೂ ಇತರೆ ತಾಂತ್ರಿಕ ಮಂಜೂರಾತಿಯನ್ನು ಕೇಂದ್ರದ ವಿಮಾನಯಾನ ಇಲಾಖೆಯಿಂದ ಪಡೆಯಲಾಗಿದೆಯೇ ಎನ್ನುವುದಕ್ಕೆ ಪಡೆಯಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಎರಡನೆಯ ಪ್ರಶ್ನೆ ಸದರಿ ವಿಮಾನ ನಿಲ್ದಾಣದ ಕಾಮಗಾರಿಗಾಗಿ ಇಲ್ಲಿಯವರೆಗೆ ಆದಂತಹ ವೆಚ್ಚ ಎಷ್ಟು ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಅವರು ನಿಖರವಾದಂತಹ ಉತ್ತರವನ್ನು ಕೊಟ್ಟಿಲ್ಲ. ಕೇವಲ ಭೂಸ್ವಾಧೀನದ ಬಗ್ಗೆ ನಮೂದು ಮಾಡಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಇಲ್ಲಿಯವರೆಗೆ ಆದಂತಹ ಕಾಮಗಾರಿಗಳ ವಿವರಗಳು. ಅದಕ್ಕೆ ಆದಂತಹ ವೆಚ್ಚ ಎಷ್ಟು ಎನ್ನುವ ಬಗ್ಗೆ ನಿಖರವಾದಂತಹ ಉತ್ತರವನ್ನು ಒದಗಿಸಿಕೊಡಬೇಕು. ಇದು ಒಂದು ವಿಚಾರ. ಇದರ ಜೊತೆಗೆ ಮೂಲವಾದಂತಹ ಈ ವಿಮಾನ ನಿಲ್ದಾಣದ ಕಾಮಗಾರಿಯ ಪ್ಲಾನ್ ಆಗಿದೆ, ಅದರ ಅಂದಾಜು ಪಟ್ಟಿಯನ್ನು ಸಹಿತ ಒದಗಿಸಿಕೊಡಬೇಕು. ಮೂಲ ಅಂದಾಜು ಪಟ್ಟಿ ಮತ್ತು ಇಲ್ಲಿಯವರೆಗೆ ಆದಂತಹ ಕಾಮಗಾರಿಗಳ ಪಟ್ಟಿ ಮತ್ತು ಅದಕ್ಕೆ ಎಷ್ಟು ವೆಚ್ಚವಾಗಿದೆ ಎನ್ನುವುದರ ಬಗ್ಗೆ ಉತ್ತರವನ್ನು ಕೊಡಬೇಕು.

ಮತ್ತೆ, ಇದರ ಜೊತೆಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾನು ನೇರವಾದ ಪ್ರಶ್ನೆಗಳನ್ನು ಕೇಳಿದ್ದೇನೆ. ಈಗ ನಾನು ಉಪ ಪ್ರಶ್ನೆಗಳನ್ನು ಕೇಳಲಿಕ್ಕೆ ಬಯಸುತ್ತೇನೆ. ಇದಕ್ಕಿಂತ ಮೊದಲು ಲೋಕೋಪಯೋಗಿ ಇಲಾಖೆಯಿಂದ ಈ ಒಂದು ಕಾಮಗಾರಿಯನ್ನು ನಾವು ಕೈಗೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದರ ಜೊತೆ ಹಿಂದೆ ಆದಂತಹದ್ದು, ಹಿಂದೆ Management Consultants ಎನ್ನುವಂತಹ ಒಂದು IDEC ಕಂಪನಿಗೆ ಕೊಟ್ಟಿದ್ದರು. ಈಗ ಅದನ್ನು ಮೆ॥ ರೈಟ್ಸ್

ಎನ್ನುವ ಕಂಪನಿಗೆ ಕೊಟ್ಟಿದ್ದಾರೆ. ಮ್ಯಾನೇಜ್‌ಮೆಂಟ್ ಮತ್ತು ಸೂಪರ್‌ವಿಷನ್ ನಡೆಸುವ ಸಲುವಾಗಿ ಹಿಂದೆ ಆದಂತಹ IDEC ಕಂಪನಿಗೆ ಎಷ್ಟು ಅಮೌಂಟ್ ಕೊಟ್ಟಿದ್ದಾರೆ? ಈಗ ಮೆ॥ ರೈಟ್ಸ್ ಎನ್ನುವವರಿಗೆ ಅಪಾಯಿಂಟ್ ಮಾಡಿಕೊಂಡು ತಾಂತ್ರಿಕ ಸಹಾಯ ಮತ್ತು ಮೂರನೇ ವ್ಯಕ್ತಿ ಪರಿವೀಕ್ಷಕರನ್ನಾಗಿ ನೇಮಿಸಲಾಗಿದೆ. ಇವರ ಜೊತೆ ಇರುವಂತಹ ಅಗ್ರಿಮೆಂಟ್ ವಿವರ ಏನು, ಇವರಿಗೆ ಎಷ್ಟು ಮೊತ್ತವನ್ನು ಕೊಟ್ಟಿದ್ದಾರೆನ್ನುವ ಬಗ್ಗೆ ವಿವರ ಬೇಕು. ಮತ್ತೆ ಇವರು ಎಷ್ಟು ಅವಧಿಯವರೆಗೆ ಕಾರ್ಯನಿರ್ವಹಿಸುತ್ತಾರೆ ಮತ್ತು ಮುಖ್ಯ ಸಲಹೆಗಾರರು ಯಾರು? ಗುಲ್ಬರ್ಗದಲ್ಲಿ ಇವರ ಕಚೇರಿ ಎಲ್ಲಿದೆ, ಮತ್ತು ಇವರ ವಿವರ ಎಲ್ಲಿದೆ ಎನ್ನುವುದರ ಬಗ್ಗೆ ವಿವರವನ್ನು ಕೊಡಬೇಕು?

**ಸಭಾಪತಿಯವರು:–** ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಒಂದೇ ಬಾರಿಗೆ ಎಲ್ಲವನ್ನು ಕೇಳಿಬಿಡುತ್ತೇನೆ. ಏಕೆಂದರೆ, ಅಮೇಲೆ ನನ್ನನ್ನು ಕುಳಿತುಕೊಳ್ಳುವುದಕ್ಕೆ ಹೇಳುತ್ತೀರಿ.

**ಸಭಾಪತಿಯವರು:–** ಇಲ್ಲಿ ಸಮಯದ ಪ್ರಶ್ನೆ ಬರುತ್ತದೆ. ನಾನು ಕುಳ್ಳಿರಿಸುವುದಿಲ್ಲ. ನಾನು 3–4 ನಿಮಿಷಗಳ ಅವಕಾಶ ಕೊಡುತ್ತೇನೆ. ನೀವು ಏನು ಬೇಕೋ ಅದನ್ನು ಕೇಳಿ.

**ಶ್ರೀ ಅಮರನಾಥ ಪಾಟೀಲ್:–** ನಾನು ಈಗ ಬಹಳ ಮಹತ್ವದ ವಿಷಯಕ್ಕೆ ಬರುತ್ತಿದ್ದೇನೆ.

**ಸಭಾಪತಿಯವರು:–** ಮುಂಚೆಯೇ ಬಹಳ ಮಹತ್ವದ ವಿಷಯವಾಗಿ ಹೇಳಬೇಕಾಗಿತ್ತು.

**ಶ್ರೀ ಅಮರನಾಥ ಪಾಟೀಲ್:–** ಕಲಬುರಗಿ ವಿಮಾನ ನಿಲ್ದಾಣಕ್ಕೆ ಈಗಾಗಲೇ ಲೋಕೋಪಯೋಗಿ ಇಲಾಖೆ ವತಿಯಿಂದ ಕಾಮಗಾರಿ ಟೆಂಡರ್ ಬಿಡ್ ಅನ್ನು flout ಮಾಡಿದ್ದಾರೆ. ಇದಕ್ಕೆ 72.28 ಕೋಟಿ ರೂಪಾಯಿಗಳನ್ನು 10–1–2016ಕ್ಕೆ ಸ್ವೀಕಾರ ಕೂಡ ಮಾಡಿದ್ದಾರೆ. ಈ ಬಿಡ್‌ನಲ್ಲಿ ಭಾಗವಹಿಸಿದಂತಹ ಬಿಡ್‌ದಾರರು ಯಾರು? ಮತ್ತೆ ಈ 72.28 ಕೋಟಿ ರೂಪಾಯಿಗಳಿಗೆ ನಿಮ್ಮ ಕ್ಯಾಬಿನೆಟ್ ಮಂಜೂರಾತಿ ದೊರಕಿದೆಯೇ? ಅದನ್ನು ತೆಗೆದುಕೊಂಡಿದ್ದೀರಾ ಎನ್ನುವ ಬಗ್ಗೆ ನನಗೆ ಮಾಹಿತಿಯನ್ನು ಕೊಡಬೇಕು. ಮತ್ತೆ ಈ ಬಿಡ್‌ನಲ್ಲಿ ಭಾಗವಹಿಸಿದಂತಹವರು ಯಾರು? ಅವರಿಗೆ ಈ ಏರ್‌ಪೋರ್ಟ್ ಕಾಮಗಾರಿಗಳಲ್ಲಿ ಎಷ್ಟು ಅನುಭವ ಇದೆ, ಮತ್ತೆ ಇದಕ್ಕೆ ಕಡಿಮೆ ಬಿಡ್ ಮಾಡಿದಂತಹವರು ಯಾರು? ಇದರ ಮಾಹಿತಿಯನ್ನು ಮಾನ್ಯ ಸಚಿವರು ಕೊಡಬೇಕು.

**ಸಭಾಪತಿಯವರು:–** ತಾವು ಬಹಳ ಉಪ ಪ್ರಶ್ನೆಗಳನ್ನು ಕೇಳಿದರೆ, ಅವರಿಗೆ ನೆನಪೇ ಉಳಿಯುವುದಿಲ್ಲ. ಆದ್ದರಿಂದ, ತಾವು ಅದನ್ನು ಬರೆದಾದರೂ ಕೊಡಿ. ಬರೆದು ಕೊಟ್ಟರೆ ಅವರು ಉತ್ತರವನ್ನು ಕೊಡುತ್ತಾರೆ. ಇಷ್ಟೊಂದು ಪ್ರಶ್ನೆಗಳನ್ನು ಕೇಳಿದರೆ ಅವರು ಏನು ಮಾಡುತ್ತಾರೆಂದು ಹೇಳಿ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಾನು ಕೇಳಿದಂತಹ ಮಾಹಿತಿಗಳ ಬಗ್ಗೆ ನೋಟ್ ಮಾಡಿಕೊಂಡಿದ್ದಾರೆ. ಇನ್ನು ಬಾಕಿ ಉಳಿದಂತಹ ಕಾಮಗಾರಿಯನ್ನು 72.28 ಕೋಟಿ ರೂಪಾಯಿಗಳಿಗೆ ಅಂದಾಜು ಮಾಡಿದ್ದೀರಿ. ಇದರಲ್ಲಿ ಯ್ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ, ಮತ್ತು ಇದಕ್ಕೆ ಎಷ್ಟೆಷ್ಟು ಅಂದಾಜು ಮಾಡಿದ್ದೀರಿ ಎನ್ನುವುದರ ಬಗ್ಗೆ ಮಾಹಿತಿಯನ್ನು ಕೊಡಿ.

**ಸಭಾಪತಿಯವರು:–** ಇದಕ್ಕೆ ಉತ್ತರ ಬೇಡವೇ? ಅವರು ಉತ್ತರವನ್ನು ಕೊಡುತ್ತಾರೆ ಕುಳಿತುಕೊಳ್ಳಿ.

**ಶ್ರೀ ಅಮರನಾಥ ಪಾಟೀಲ್:–** ರನ್‌ವೇ ನಿರ್ಮಾಣ ಕಾಮಗಾರಿಗೆ ಬಿಡ್ ಕರೆಯಲಾಗಿದೆ ಎಂದು ಹೇಳುತ್ತಾರೆ. ಆದರೆ, ಅಲ್ಲಿ ಈಗಾಗಲೇ ರನ್‌ವೇ ಆಗಿದೆ. ಅದಕ್ಕೋಸ್ಕರ ನಾನು ಕೇಳುವುದೇನೆಂದರೆ ಈ ಬಾಕಿ 72.28 ಕೋಟಿ ರೂಪಾಯಿಗಳಲ್ಲಿ ನೀವು ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೀರಿ, ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಬೇಕು. ಮಾನ್ಯ ಸಭಾಪತಿಯವರೆ, ನನಗೆ ಇನ್ನೊಂದು ಅವಕಾಶವನ್ನು ಕೊಡಬೇಕು.

**ಶ್ರೀ ಆರ್.ರೋಷನ್‌ಬೇಗ್**:– ಮಾನ್ಯ ಸಭಾಪತಿಯವರೆ, ಕಲಬುರಗಿ ವಿಮಾನ ನಿಲ್ದಾಣಕ್ಕೆ ಕ್ಯಾಬಿನೆಟ್ ಮಂಜೂರಾತಿಯನ್ನು ಕೊಟ್ಟಿದೆ. 72.28 ಕೋಟಿ ರೂಪಾಯಿಗಳಿಗೆ ಕ್ಯಾಬಿನೆಟ್ ಮಂಜೂರಾತಿ ಸಿಕ್ಕಿದೆ. ಮತ್ತೆ ಇದಕ್ಕೆ ಇನ್ನು ಖರ್ಚು ಏನು ಬೇಕಾಗಿದೆ, ಅದನ್ನು ಕೊಡಲಿಕ್ಕೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯವರು ಮುಂದೆ ಬಂದಿದ್ದಾರೆ. ನಾವು ಕಲಬುರಗಿ ವಿಮಾನ ನಿಲ್ದಾಣವನ್ನು ಪೂರ್ಣಗೊಳಿಸುತ್ತೇವೆ. ನಾವು 50% ಖರ್ಚು ಮಾಡಲಿಕ್ಕೆ ನಾವು ತಯಾರಿದ್ದೇವೆಂದು ಎಂದುವರು ಹೇಳಿದ್ದಾರೆ. ಹೈಟೆಕ್ ಬಗ್ಗೆ ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ ಎಂದು ತಾವು ಕೇಳಿದ್ದೀರಿ, ಎಷ್ಟು ಖರ್ಚಾಯಿತು ಎನ್ನುವ ಮಾಹಿತಿಯನ್ನು ನಾಳೆ ಬೆಳಿಗ್ಗೆ ನಿಮಗೆ ಮಾಹಿತಿಯನ್ನು ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:–** ರೈಟ್ಸ್‌ಗೆ ಎಷ್ಟು ಕೊಟ್ಟಿದ್ದೀರಿ?

**ಶ್ರೀ ಆರ್.ರೋಷನ್ ಬೇಗ್:-** ಮೆ॥ ರೈಟ್ಸ್ ಎನ್ನುವಂತಹ ಒಂದು ಸಂಸ್ಥೆ ಇದೆ. ರೈಟ್ಸ್ ಸಂಸ್ಥೆಯನ್ನು ತಾಂತ್ರಿಕ ಸಹಾಯ ಮತ್ತು ಮೂರನೇ ವ್ಯಕ್ತಿ ಪರಿವೀಕ್ಷಕರನ್ನಾಗಿ ನೇಮಿಸಲಾಗಿದೆ. Airport Authority of India ರವರು ಸೂಪರ್‌ವಿಷನ್ ಮಾಡುತ್ತಾರೆ. ಅವರು ವೀಕ್ಲಿ ಬೇಸಿಸ್‌ನಲ್ಲಿ ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ಸೂಪರ್‌ವಿಷನ್‌ಮಾಡುತ್ತಾರೆ. ಈಗ ಲೋಕೋಪಯೋಗಿ ಇಲಾಖೆಯವರು ಟೆಂಡರ್ ಫೈನಲ್ ಮಾಡುತ್ತಿದ್ದಾರೆ. ತಾವು ಈ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೀರಿ. ಯಾವ್ಯಾವ ಬಿಡ್ಡರ್ಸ್ ಎಷ್ಟೆಷ್ಟು ಬಿಡ್ ಅನ್ನು ಕೋಟ್ ಮಾಡಿದ್ದಾರೆನ್ನುವುದು ನಮಗೆ ಗೊತ್ತಿಲ್ಲ. ದಿನಾಂಕ ಇನ್ನು ಒಂದೆರಡು ಮೂರು ದಿವಸದಲ್ಲಿ ಗೊತ್ತಾಗುತ್ತದೆ.

**ಶ್ರೀ ಅಮರನಾಥ ಪಾಟೀಲ್:-** 72.28 ಕೋಟಿ ರೂಪಾಯಿಗಳು ಯಾವುದರ ಸಲುವಾಗಿ ಅಂದಾಜು ಮಾಡಲಾಗಿದೆ.

**ಮುಂದು**. . .

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಮರನಾಥ ಪಾಟೀಲ್:-** ಕನಿಷ್ಠಪಕ್ಷ ಏನೇನು ಮಾಡಿದ್ದೀರಿ ಎನ್ನುವ ಅಂದಾಜು ಪಟ್ಟಿಯನ್ನಾದರೂ ಕೊಡಿ, 72 ಕೋಟಿ ಯಾವ ಕಾಮಗಾರಿ ಸಲುವಾಗಿ ವೆಚ್ಚವಾಗಿದೆ?

**ಶ್ರೀ ಆರ್.ರೋಷನ್‌ಬೇಗ್:-** ಅದು Airbus A320 runway ನಲ್ಲಿ land ಆಗಬೇಕೆಂದು ಹೇಳಿ, Airbus A320 land ಆಗಬೇಕಾದರೆ ಎಷ್ಟು runway ಬೇಕಾಗಿದೆ, ಅಲ್ಲಿ terminal ಕಟ್ಟಿದಂತಹ ಸಂದರ್ಭದಲ್ಲಿ ಅದನ್ನು ಪೂರ್ತಿಯಾಗಿ ನಿರ್ಮಾಣ ಮಾಡಿರಲಿಲ್ಲ. ಹಾಗಾಗಿ terminal ಅನ್ನು complete ಆಗಿ ಕಟ್ಟಬೇಕು ಜೊತೆಗೆ air traffic control ಕೂಡ ಕಟ್ಟಬೇಕು. Air traffic control, terminal building and runway complete ಮಾಡಬೇಕಾಗಿದೆ. ಈ ಮೂರು ಕಾಮಗಾರಿಗಳು ಕೂಡ complete ಆಗುತ್ತವೆ ಎನ್ನುವ ವಿಶ್ವಾಸ ನಮಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, Gulbarga airport is a very trickiest point. ನಿಮಗೂ ಅದರ ಸಮಸ್ಯೆ ಅರ್ಥವಾಗಿದೆ. ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಬಹಳಷ್ಟು ಕಳಕಳಿಯಿಂದ ಹಲವಾರು ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ತಾವು ಒಂದು ಸಣ್ಣ ಕೆಲಸ ಮಾಡಬಹುದೇ? ಈ ಸದನ ಮುಗಿದ ತಕ್ಷಣ, ಇವತ್ತು ಅಥವಾ ನಾಳೆ-ನಾಡಿದ್ದರಲ್ಲಿ ಒಂದು ದಿವಸ ಅವರನ್ನು ತಮ್ಮ ಕಛೇರಿಗೆ ಕರೆದು ಆ ಕಾಮಗಾರಿಗಳಲ್ಲಿ ಏನು ಪ್ರಗತಿಯಾಗಿದೆ, ಆ ರೀಜನ್‌ನ ಅನುಕೂಲಕ್ಕೆ ತಕ್ಕಂತೆ ಮಾನ್ಯ ಸದಸ್ಯರ ಅಪೇಕ್ಷೆಗಳೇನಿವೆ ಎಂಬುದನ್ನು ತಿಳಿದುಕೊಂಡು ಅದರ ಬಗ್ಗೆ ತಾವು ಚರ್ಚೆ ಮಾಡಿದರೆ ಒಳ್ಳೆಯದೆನಿಸುತ್ತದೆ. ಏಕೆಂದರೆ ಅವರು ಕೇಳುತ್ತಿದ್ದಂತಹ ಪ್ರಶ್ನೆಗಳನ್ನು ನೋಡುತ್ತಿದ್ದಾಗ ಅದಕ್ಕೆ ತಮ್ಮಿಂದ ಉತ್ತರ ಕೊಡಿಸುವಂತಹ ಅಗತ್ಯತೆ ಇದೆ ಎನ್ನುವುದು ಸ್ಪಷ್ಟವಾದರೂ, ನನ್ನ ಬಳಿ ಸಮಯ ಇಲ್ಲದ ಕಾರಣದಿಂದ ಹಾಗೂ ನಿಮಗೂ ಸಹ ಅದನ್ನು ಅರ್ಥ ಮಾಡಿಕೊಂಡು ಇಲ್ಲಿಯೇ ಉತ್ತರ ಕೊಡುವುದು ಕಷ್ಟವಾಗಿರುವುದರಿಂದ ಅದಕ್ಕೆ ಸಂಬಂಧಿಸಿದಂತೆ ತಾವು ಒಂದು ಮೀಟಿಂಗ್ ಮಾಡಿದರೆ ಅದರಿಂದ ತುಂಬಾ ಲಾಭವಾಗುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ಆರ್.ರೋಷನ್‌ಬೇಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾಳೆ ಬೆಳಿಗ್ಗೆ 10.30 ಗಂಟೆಗೆ ನನ್ನ ಕಛೇರಿಗೆ ಬಂದರೆ ಅದರ ಬಗ್ಗೆ ನಾನು details ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದರಿ ವಿಮಾನ ನಿಲ್ದಾಣದ ವಿನ್ಯಾಸದಲ್ಲಿ ಏನಾದರೂ ಮಾರ್ಪಾಡುಗಳನ್ನು ಅಥವಾ ಬದಲಾವಣೆಗಳನ್ನು ಸೂಚಿಸಲಾಗಿದೆಯೇ ಎನ್ನುವಂತಹ ಮಾತುಗಳನ್ನು ನಾನು ಕೇಳಿದೆ. ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಇತ್ತೀಚೆಗೆ ಅಂದರೆ, ಜನವರಿ ತಿಂಗಳ ಮೊದಲ ವಾರದಲ್ಲಿ ಕೇಂದ್ರದ ಯೋಜನೆಗಳ ಬಗ್ಗೆ review meeting ಆಯಿತು. ಸಂಸದರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಭೇಟಿ ಕೊಟ್ಟಿದ್ದರು. "ಹೊಸ ವರ್ಷ ಖರ್ಗೆ ಸಿಡಿಮಿಡಿ, ಏರ್‌ಪೋರ್ಟ್‌ಗೆ ಹೊಸ ವಿಘ್ನಗಳು," ಇಂತಹ ಹತ್ತು ಹಲವಾರು ವಿಘ್ನಗಳು ಇವತ್ತು ಆ ಏರ್‌ಪೋರ್ಟ್‌ಗೆ ಬರುತ್ತಿವೆ. ಇವರು ಇವತ್ತು Airbus ಹಾರಿಸುವುದಕ್ಕೆ ಹೊರಟಿದ್ದಾರೆ. ಟ್ರ್ಯಾಕ್ ಇಲ್ಲದೆಯೇ ನೆಲದ ಮೇಲೆ ರೈಲು ಬಿಡುವವರನ್ನು ನಾವು ನೋಡಿದ್ದೇವೆ, ಆಕಾಶದಲ್ಲಿ ಪುಷ್ಪಕ ವಿಮಾನವನ್ನು ಮಾನ್ಯ ಸಚಿವರು ಹೇಗೆ ಹಾರಿಸುತ್ತಾರೆಯೋ ನನಗೆ ಗೊತ್ತಿಲ್ಲ.

**ಶ್ರೀ ಆರ್.ರೋಷನ್‌ಬೇಗ್:-** ನಾಳೆ ಬೆಳಿಗ್ಗೆ ನಮ್ಮ ಕಛೇರಿಗೆ ಬಂದರೆ ಈ ಬಗ್ಗೆ ವಿವರವಾಗಿ ಚರ್ಚಿಸಬಹುದಾಗಿದೆ.

**ಸಭಾಪತಿಯವರು:-** ನಾಳೆ ಬೆಳಿಗ್ಗೆ ಅವರ ಕಛೇರಿಗೆ ಹೋಗಿ, ಅವರು ಆ ಬಗ್ಗೆ ವಿವರಗಳನ್ನು ಕೊಡುತ್ತಾರೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಏನಾಗಿದೆ ಎಂದರೆ, Airports Authority ಯವರು ಬಂದು ಕೆಲವು ಮಾರ್ಪಾಡುಗಳ ಬಗ್ಗೆ ಸಲಹೆ ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಅಮರನಾಥ ಪಾಟೀಲ್‌ರವರೇ, ಇದು ಪ್ರಶ್ನೋತ್ತರ ಅವಧಿಯಾಗಿರುವುದರಿಂದ ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರನ್ನು ಭೇಟಿಯಾಗಿ ಚರ್ಚಿಸಲು ಬೇರೆ ದೇಶದಿಂದ ಬೆಂಗಳೂರಿಗೆ ಒಂದು ಟೀಮ್ ಬಂದಿರುವುದರಿಂದ ಅವರ ಇಲಾಖೆಗೆ ಸಂಬಂಧಿಸಿದ 2 ಪ್ರಶ್ನೆಗಳನ್ನು ಮೊದಲು ತೆಗೆದುಕೊಂಡು ನಂತರ ಇನ್ನುಳಿದ ಪ್ರಶ್ನೆಗಳನ್ನು ಮತ್ತೆ ಕ್ರಮವಾಗಿ ತೆಗೆದುಕೊಳ್ಳಲಾಗುತ್ತದೆ. ಈಗ ಮಾನ್ಯ ಸಂದೇಶ್ ನಾಗರಾಜ್ ಅವರ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುತ್ತದೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 296**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಕಳೆದ ವರ್ಷದ ಒಂದು ಅಧಿವೇಶನದಲ್ಲಿ ಕೂಡ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಆ ಸಂದರ್ಭದಲ್ಲಿ ಸರ್ಕಾರದಿಂದ ನನಗೆ ಯಾವ ಉತ್ತರ ಬಂದಿತ್ತೋ, ಅದೇ ಉತ್ತರ ಇವತ್ತು ಕೂಡ ಬಂದಿದೆ. ಅದರಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಮಾನ್ಯ ಸಚಿವರು ಹಿರಿಯರು, ಬುದ್ಧಿವಂತರು ಮತ್ತು ಈ ಸರ್ಕಾರದಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಆದರೂ ಇವತ್ತು ಅವರು ಕೈಗಾರಿಕೆಗಳಿಗೆ ಕೊಡುವಷ್ಟು ಗಮನವನ್ನು ಪ್ರವಾಸೋದ್ಯಮದ ಕಡೆಗೆ ಕೊಡದಿರುವುದು ನಮ್ಮ ದುರಾದೃಷ್ಟವೆಂದು ನಾನು ಭಾವಿಸಿಕೊಂಡಿದ್ದೇನೆ. ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಅದರಲ್ಲಿ ಯಾವುದೇ ಕ್ರಮ ಆಗಿಲ್ಲ ಎನ್ನುವಂತಹ ವಿಚಾರ ಸರ್ಕಾರದ ಈ ಉತ್ತರದಿಂದ ನಮಗೆ ಸ್ಪಷ್ಟವಾಗುತ್ತಿದೆ. ಪ್ರವಾಸಿಗರಿಗೆ ರಕ್ಷಣೆಯೂ ಇಲ್ಲ, ಎಚ್ಚರಿಕೆ ಫಲಕಗಳು ಸಹ ಇಲ್ಲ. ಅದರಿಂದಾಗಿ ಸಂಭವಿಸುತ್ತಿರುವಂತಹ ದುರಂತಗಳಿಗೆ ಸಂಬಂಧಿಸಿದಂತೆ ಎರಡು-ಮೂರು ಉದಾಹರಣೆಗಳನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ದಿನಾಂಕ:14.09.2015ರಲ್ಲಿ ಮುತ್ತತ್ತಿಯಲ್ಲಿ ಬೆಂಗಳೂರಿನ ಮೂವರು ಯುವಕರ ಸಾವು, ಸಂತೋಷ್ (22), ವಿಜಯ್(27), ಪ್ರಸನ್ನ(26) ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಪುನಃ ದಿನಾಂಕ:01.11.2015ರಲ್ಲಿ ಮುತ್ತತ್ತಿಯಲ್ಲಿ ಬೆಂಗಳೂರಿನ ಇಬ್ಬರು ಯುವಕರ ಸಾವು, ಹರ್ಷವರ್ಧನ(25), ಹರಿಕೃಷ್ಣ(26) ಎಂದು ವರದಿಯಾಗಿದೆ. ದಿನಾಂಕ:01.02.2016ರಲ್ಲಿ ಬರಚುಕ್ಕಿ ಜಲಪಾತದಲ್ಲಿ ಜಾರ್ಖಂಡ್ ಯುವತಿ ನೇಹಾ(25) ಸಾವು ಎಂದು ವರದಿಯಾಗಿದೆ. ದಿನಾಂಕ:07.02.2016ರಲ್ಲಿ ಗಗನಚುಕ್ಕಿ ಜಲಪಾತದಲ್ಲಿ ಬೆಂಗಳೂರಿನ ಇಬ್ಬರು ಆಟೋ ಚಾಲಕರ ಸಾವು. ದಿನಾಂಕ:16.02.2016ರಲ್ಲಿ ಮುತ್ತತ್ತಿಯಲ್ಲಿ ಬನ್ನೇರುಘಟ್ಟದ ಭುವನೇಶ್ ಸಾವು. ಈ ರೀತಿಯಾಗಿ ಇನ್ನೂ ಬೇಕಾದಷ್ಟು ದುರಂತಗಳು ಮತ್ತು ಅದರಿಂದ ಆಗಿರುವಂತಹ ಪ್ರಾಣಹಾನಿಯನ್ನು ಹೇಳಿಕೊಂಡು ಹೋಗಬಹುದು. ಸಂಗಮದಲ್ಲಿ ಮತ್ತು ಬಲಮುರಿ ಕ್ಷೇತ್ರದಲ್ಲಿ ಕೂಡ ಬಹಳಷ್ಟು ಪ್ರಾಣ ಹಾನಿಗಳಾಗಿವೆ. ನಾನು ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಆ ವಿಚಾರಗಳ ಬಗ್ಗೆ ತಮಗೆ ಸಾಕಷ್ಟು ವಿವರವಾಗಿ ಮಾಹಿತಿ ಇರುತ್ತದೆ. ಆದ್ದರಿಂದ ಪ್ರವಾಸೋದ್ಯಮಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಒತ್ತಾಯಿಸುತ್ತೇನೆ.

ಗಗನಚುಕ್ಕಿ ಮತ್ತು ಬರಚುಕ್ಕಿ ಜಲಪಾತಕ್ಕೆ ಪ್ರತಿ ದಿವಸ ಸಾವಿರಾರು ಮಂದಿ ಪ್ರವಾಸಿಗರು ಭೇಟಿ ಕೊಡುತ್ತಾರೆ. ಆದರೆ, ಅಲ್ಲಿಗೆ ಹೋದವರು ಸುರಕ್ಷಿತವಾಗಿ ವಾಪಸ್ ಬರುವಂತಹ ಪರಿಸ್ಥಿತಿ ಇವತ್ತಿಲ್ಲ. ಹೀಗಾಗಿ ಅಲ್ಲಿಗೆ ಭೇಟಿ ಕೊಟ್ಟವರು ತಮ್ಮ ಜೀವದ ಮೇಲಿನ ಹಂಗನ್ನು ತೊರೆದು ಹೋಗಬೇಕಾದಂತಹ ಅನಿವಾರ್ಯತೆ ಇದೆ. ಏಕೆಂದರೆ ಅಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಒಂದು ಬೋರ್ಡ್ ಇಲ್ಲ, ಅಕಸ್ಮಾತ್ ಕಾಲು ಜಾರಿ ನೀರೊಳಗೆ ಬಿದ್ದವರನ್ನು ರಕ್ಷಿಸಲು ಈಜು ಬರುವಂತಹ ಸಿಬ್ಬಂದಿ ಕೂಡ ಇರುವುದಿಲ್ಲ. ಇಂತಹ ಜಾಗದಲ್ಲಿ ನೀರಿಗಿಳಿಯಬಾರದು ಎನ್ನುವಂತಹ ಫಲಕಗಳು ಅಲ್ಲೆಲ್ಲಿಯೂ ಕಂಡುಬರುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ಎಲ್ಲ ಕಡೆಯೂ ಅಸಡ್ಡೆಯನ್ನು ತೋರಿರುವುದು ಸ್ಪಷ್ಟವಾಗುತ್ತಿದೆ. ಒಬ್ಬ ಗಾರ್ಡ್‌ನ್ನು ನಿಯೋಜಿಸಿರುವುದಾಗಿ ಸರ್ಕಾರದ ಉತ್ತರದಲ್ಲಿ ತಿಳಿಸಲಾಗಿದೆ. ಆ ಕ್ಷೇತ್ರಕ್ಕೆ ಒಬ್ಬ ಗಾರ್ಡ್‌ನ್ನು ನಿಯೋಜಿಸಿದರೆ ಸಾಕಾಗುವುದಿಲ್ಲ, ಆ ಗಾರ್ಡ್ ಕೂಡ ಎಲ್ಲಿರುತ್ತಾರೆಯೋ ಗೊತ್ತಾಗುವುದಿಲ್ಲ. ಆದ್ದರಿಂದ ಅಂತಹ ಜಾಗಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗಾರ್ಡ್‌ಗಳನ್ನು ನಿಯೋಜಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಪ್ರವಾಸೋದ್ಯಮದ ಬಗ್ಗೆ ಒಂದು ಸಣ್ಣ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಕೆ.ಎಸ್.ಟಿ.ಡಿ.ಸಿ.ಯಲ್ಲಿ ಒಂದು ಟೆಂಡರ್‌ನ್ನು ಕರೆಯಲಾಗಿದೆ. ಕೆ.ಎಸ್.ಟಿ.ಡಿ.ಸಿ. ಇರುವುದು ಪ್ರವಾಸೋದ್ಯಮಕ್ಕೋಸ್ಕರ, ಆ ಟೆಂಡರ್‌ನ್ನು ಕರೆದು ಸುಮಾರು 6 ತಿಂಗಳಾದರೂ ಅದನ್ನು ಓಪನ್ ಮಾಡದೆ ಇಟ್ಟುಕೊಂಡಿದ್ದಾರೆ. ಈ ರೀತಿಯಾಗಿ ಪ್ರವಾಸೋದ್ಯಮಕ್ಕೆ ಯಾರೂ ಸಹ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದಿಷ್ಟೆ, ಪ್ರತಿ ವರ್ಷ ಪ್ರವಾಸಿಗರು ಸಾಯುತ್ತಿದ್ದು, ಸರಾಸರಿ ದಿನಕ್ಕೊಬ್ಬರಂತೆ ಪ್ರವಾಸಿಗರು ಇಂತಹ ದುರಂತಗಳಿಗೆ ತುತ್ತಾಗುತ್ತಿರುವುದಾಗಿ ಅಂದಾಜಿಸಲಾಗಿದೆ. ಇದನ್ನು ತಪ್ಪಿಸುವ ದಿಕ್ಕಿನಲ್ಲಿ ಸರ್ಕಾರ ಗಮನ ಕೊಡುವುದರ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಯ ಕಡೆಗೂ ಗಮನ ಹರಿಸಬೇಕೆಂದು ನಾನು ಕಳಕಳಿಯಿಂದ ವಿನಂತಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ಸನ್ಮಾನ್ಯ ಸಭಪತಿಯವರೇ, ಗೌರವಾನ್ವಿತ ಸದಸ್ಯರ concern ಅನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಈ ಹಿಂದೆ ಕೇಳಲಾಗಿದ್ದ ಪ್ರಶ್ನೆಗೆ ನೀಡಿರುವ ಉತ್ತರವನ್ನೇ ಈ ಬಾರಿ ಕೂಡ ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರೇನು ತಿಳಿಸಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ. ಕೆಲವು ಅಂಕಿಅಂಶಗಳು ಒಂದೇ ರೀತಿ ಬರಬಹುದು. ಉದಾಹರಣೆಗೆ ಕೇಂದ್ರ ಸರ್ಕಾರದಿಂದ

ಬಿಡುಗಡೆಯಾದಂತಹ ಹಣ ಎಂದಾಗ ಅದೇ ಅಂಕಿಅಂಶಗಳು ಬರಬೇಕಲ್ಲವೆ, ಅದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ನಾನು ಮಾನ್ಯ ಸದಸ್ಯರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ, ಕಳೆದ ಒಂದು ವರ್ಷದಲ್ಲಿ ಅಲ್ಲಿ 28 ಸಾವುಗಳು ಸಂಭವಿಸಿವೆ ಎಂಬುದನ್ನು ನಾನು ಸಹ ಒಪ್ಪುತ್ತೇನೆ. ಸರ್ಕಾರದಿಂದ ನಾವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಬರಚುಕ್ಕಿಯಲ್ಲಿ ಒಂದು ಅಭಿವೃದ್ಧಿ ಸಮಿತಿಯನ್ನು ಮಾಡಿಕೊಂಡು ಅವರೇ maintain ಮಾಡುತ್ತಿದ್ದು, ಅವರು 10 ಸೆಕ್ಯುರಿಟಿ ಗಾರ್ಡ್‌ಗಳನ್ನು ನಿಯೋಜಿಸಿದ್ದಾರೆ. ದೇಶದಲ್ಲಿ ಮೊದಲನೆಯ ಬಾರಿ ನಮ್ಮ ಇಲಾಖೆಯಿಂದ, ನಮ್ಮ important concerns ಏನೆಂದರೆ, ನಮ್ಮ tourist destinations ನಲ್ಲಿ security and safety ಕೊರತೆ ಇದೆ. ಹೆಣ್ಣುಮಕ್ಕಳ ಸುರಕ್ಷತೆಯ ವಿಚಾರದಲ್ಲಿ ಕೂಡ ಕೊರತೆ ಇದೆ. ಅದಕ್ಕಾಗಿ ಗೃಹ ಇಲಾಖೆಯ ಸಹಕಾರವನ್ನು ಪಡೆದುಕೊಂಡು ಗೃಹ ರಕ್ಷಕ ದಳ ಸಿಬ್ಬಂದಿಗೆ ತರಬೇತಿ ಕೊಟ್ಟು, ಅವರಿಗೆ minimum powers ಕೊಟ್ಟು 175 ಜನರನ್ನು ಬೇರೆ ಬೇರೆ tourist destinations ಗೆ ಹಾಕಿದ್ದೇವೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ಪ್ರದೇಶಕ್ಕೆ ಸಹ ಬೇರೆ ಬೇರೆ destinations ಗೆ ಒಬ್ಬೊಬ್ಬರಂತೆ ಮೂರು–ನಾಲ್ಕು ಜನರನ್ನು ನಿಯೋಜಿಸಿದ್ದೇವೆ. ಇನ್ನೂ ಸುಮಾರು 253 ಜನರಿಗೆ ತರಬೇತಿಯನ್ನು ಕೊಡುತ್ತಿದ್ದೇವೆ.

ಇವತ್ತು ಮುಖ್ಯವಾಗಿ ನಮ್ಮ ಬರಚುಕ್ಕಿಯಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ ಈಗಾಗಲೇ 2.79 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೇರೆ ಬೇರೆ ಅಭಿವೃದ್ಧಿ ಕೆಲಸಗಳು ಮಂಜೂರಾಗಿದ್ದು, ಆ ಕೆಲಸಗಳು ಕೂಡ ಆಗಿವೆ. ಒಂದು ತೊಂದರೆ ಏನಾಗಿದೆ ಎಂದರೆ, ಗಗನಚುಕ್ಕಿಯಲ್ಲಿ ಸಮಸ್ಯೆ ಏನಾಯಿತೆಂದರೆ, ಈ ಕೆಲಸ ಮೊದಲು ನಮ್ಮ ಅರಣ್ಯ ಇಲಾಖೆಯಲ್ಲಾಗುತ್ತಿತ್ತು. ಹಾಗಾಗಿ ಆ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ಮಾಡಿ ಆ ಕೆಲಸವನ್ನು ಭೂಸೇನಾ ನಿಗಮದ (Land Army Corporation) ಮುಖಾಂತರ ಮಾಡಬೇಕೆಂದು ತಿಳಿಸಿದ್ದಾರೆ. ಅದಕ್ಕೂ ಸಹ ಅನುಮತಿ ಕೊಟ್ಟು, ಅಲ್ಲಿನ ಕೆಲಸಕ್ಕಾಗಿ ಸುಮಾರು 1.40 ಲಕ್ಷ ರೂಪಾಯಿಗಳನ್ನು ಕಳೆದ ಒಂದು ವರ್ಷದಲ್ಲಿ ನಾವು ಬಿಡುಗಡೆ ಮಾಡಿದ್ದೇವೆ. ಹಾಗಾಗಿ ಇನ್ನೂ ಕೆಲಸ ಮಾಡಬೇಕಾಗಿದೆ. ಅವು ಬಹಳ ಪ್ರಮುಖವಾದ ಪ್ರವಾಸಿ ತಾಣಗಳಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಅಲ್ಲಿಗೆ ಭೇಟಿ ಕೊಡುತ್ತಾರೆ. ಮಂಡ್ಯ ಡೆಪ್ಯೂಟಿ ಕಮಿಷನರ್‌ರವರಿಗೆ 45 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆದರೆ ದುರ್ದೈವದಿಂದ ಇನ್ನೂ ಆ ಹಣ ಉಪಯೋಗವಾಗಿಲ್ಲ

ಎಂಬುದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. 2014-15ನೇ ಸಾಲಿನಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾವೇ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಆ ಸಂದರ್ಭದಲ್ಲಿ approximately 45 lakhs ಗಳನ್ನು ನಾವು security purpose ಗಾಗಿ ಬಿಡುಗಡೆ ಮಾಡಿದ್ದೇವೆ. ಆದರೆ ಆ ಹಣ ಇನ್ನೂ ಉಪಯೋಗವಾಗಿಲ್ಲ. ಈಗಾಗಲೇ ನಾವು ಅಪರ ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಿದ್ದೇನೆ. ಮಂಡ್ಯ ಡಿ.ಸಿ.ಯವರಿಗೆ ಸೂಕ್ತವಾದ ನಿರ್ದೇಶನ ನೀಡಿ ಆ ಹಣ ಉಪಯೋಗವಾಗಬೇಕೆಂದು ತಿಳಿಸಿದ್ದೇನೆ. ಹಾಗಾಗಿ, security is most important ಎಂಬುದನ್ನು ನಾವು ಕೂಡ ಒಪ್ಪಿಕೊಂಡಿದ್ದು, ಅದರ ಬಗ್ಗೆ ನಾವು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೆಂದರೆ, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಸುಮಾರು 6 ತಿಂಗಳ ಹಿಂದೆ ಆಗಿರುವಂತಹ ಟೆಂಡರ್‌ನ್ನು ಶೀತಗೃಹದಲ್ಲಿಟ್ಟಿರುವುದಾಗಿ ಏನು ತಿಳಿಸಿದ್ದಾರೆ, ಆ ವಿಚಾರದಲ್ಲಿ ಇವತ್ತು ನಾನು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಿಗೆ ಆದೇಶವನ್ನು ಕೊಟ್ಟು, ಟೆಂಡರ್ ಓಪನ್ ಮಾಡಿ, ನ್ಯಾಯಬದ್ಧವಾಗಿ ಕಾಯಿದೆಯಂತೆ ಪಾರದರ್ಶಕವಾಗಿ ಅದರ ಬಗ್ಗೆ ನಿರ್ಣಯ ಮಾಡುವುದಕ್ಕೆ ಆದೇಶ ಕಳುಹಿಸಿಕೊಡುತ್ತೇನೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ತಮಗೂ ಸಹ ಗೊತ್ತಿರುವಂತೆ ಗಗನಚುಕ್ಕಿ ಮತ್ತು ಬರಚುಕ್ಕಿಯಲ್ಲಿ ಸುಮಾರು 400-500 ಎಕರೆ ಜಾಗ ಮಾನ್ಯ ಮಧುಸೂದನ್ ಅವರಿಂದ ಉಳಿದಿದೆ. ಅದು ತಮಗೆ ಗೊತ್ತಿಲ್ಲದಿರಬಹುದು, ಆ ವಿಚಾರ ಈಗ ಸದನದಲ್ಲಿ ಪ್ರಸ್ತಾಪ ಮಾಡುವುದು ಬೇಡ. ಅಲ್ಲಿ ಯಾವುದೇ ರೀತಿಯ ಪ್ರವಾಸೋದ್ಯಮ ವ್ಯವಸ್ಥೆಯನ್ನು ಮಾಡಿಲ್ಲ. ಪ್ರವಾಸಿಗರಿಗೆ ನಿಲ್ಲಲು ಸ್ಥಳವಿಲ್ಲ, ರೆಸ್ಟೋರೆಂಟ್‌ಗಳಿಲ್ಲ. ಆ ರೀತಿಯ ವ್ಯವಸ್ಥೆಗಳನ್ನೆಲ್ಲಾ ಅಲ್ಲಿ ಕಲ್ಪಿಸಬಹುದಾಗಿದೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ನಮ್ಮ guest ಆಗಿ ನಾವೇ ಅಲ್ಲಿಗೆ ಕರೆದುಕೊಂಡು ಹೋಗುತ್ತೇವೆ. ಅಲ್ಲಿ ಏನೇನು ವ್ಯವಸ್ಥೆಗಳನ್ನು ಮಾಡಿದ್ದೇವೆ ಎಂಬುದನ್ನು ತೋರಿಸುತ್ತೇವೆ, ಇನ್ನೂ ಏನೇನು ವ್ಯವಸ್ಥೆಗಳಾಗಬೇಕೆಂಬುದನ್ನು ಅವರು ನಮಗೆ ಆ ಸಂದರ್ಭದಲ್ಲಿ ತಿಳಿಸಬಹುದಾಗಿದೆ.

(ಮುಂದುವರೆದಿದೆ ...

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಂದೇಶ್ ನಾಗರಾಜ್:–** ನನಗೆ ತಿಳಿದಿರುವಂತೆ ಸುಮಾರು 400 ರಿಂದ 500 ಕೋಟಿ ರೂಪಾಯಿಗಳು ಬಂದಿದೆ, ಆದರೂ ಕೆಲಸ ಆಗಿಲ್ಲ.

**ಶ್ರೀ ಆರ್.ವಿ.ದೇಶಪಾಂಡೆ:–** 400, 500 ಕೋಟಿ ಎಲ್ಲಿಂದ ಬಂದಿದೆ? ಟೂರಿಸಂ ಇಲಾಖೆಯ ಬಜೆಟ್‌ನಲ್ಲಿಯೇ 500 ಕೋಟಿ ರೂಪಾಯಿಗಳನ್ನು ಇಟ್ಟಿಲ್ಲ. ಈ ರೀತಿ ಇರುವಾಗ ಯಾವ ರೀತಿ ಖರ್ಚು ಮಾಡಲಿ? ಇದೆಲ್ಲಾ wrong information.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಒಂದು ವರ್ಷದಿಂದಲೂ ಅಲ್ಲಿ ಏನೂ ಆಗಿಲ್ಲ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಸದನದ ಮೂಲಕ ಜನರಿಗೆ ತಪ್ಪು ಸಂದೇಶ ಹೋಗುವುದು ಬೇಡ. No 400 crores, no 500 crores and no 4 crores also is spent. ನಮ್ಮ ಸರ್ಕಾರ ಬಂದ ಮೇಲೆ 1 ಕೋಟಿ 42 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆಯನ್ನು 5 ಜನರು ಕೇಳಿದ್ದಾರೆ. ಶ್ರೀಮತಿ ತಾರಾ ಅನುರಾಧರವರು, ಶ್ರೀಯುತ ಐವನ್ ಡಿ'ಸೋಜ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ, ಶ್ರೀ ರಾಮಚಂದ್ರ ಗೌಡ.

**ಚುಕ್ಕೆ ಪ್ರಶ್ನೆ ಸಂಖ್ಯೆ 365+361+286+302+400**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ತಾರಾ ಅನುರಾಧ:-** ಮಾನ್ಯ ಸಭಾಪತಿಯವರೇ, 5 ಜನ ಹಿರಿಯರು ಪ್ರಶ್ನೆ ಕೇಳಿದ್ದಾರೆ, ಅದರಲ್ಲಿ ನಾನು ಒಂದು ಪ್ರಶ್ನೆಗೆ ಮಾತ್ರ 4 ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

ಮೊದಲನೆಯದಾಗಿ "ಇನ್‌ವೆಸ್ಟ್ ಕರ್ನಾಟಕ-2016" 15 ದೇಶಗಳ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ತುಂಬಾ ಅಚ್ಚುಕಟ್ಟಾಗಿ ನೆರವೇರಿಸಿದರು ಅದಕ್ಕಾಗಿ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ನಾನು ಕೇಳಿರುವಂತಹ (ಊ) ಪ್ರಶ್ನೆಗೆ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದೀರಿ, ಅದಕ್ಕೂ ಸಹ ಅಭಿನಂದಿಸುತ್ತೇನೆ. ಉತ್ತರದಲ್ಲಿ ಆಯಾ ಪ್ರಸ್ತಾವನೆಗಳಿಗೆ ಅನುಗುಣವಾಗಿ ಅಗತ್ಯಕ್ಕೆ ತಕ್ಕಂತೆ ಬಂಡವಾಳ ಹೂಡುವ ಕಂಪನಿಗಳಿಗೆ ಭೂಮಿ, ವಿದ್ಯುತ್, ನೀರು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಭೂಮಿಯನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಯಾವ ರೀತಿಯಾದಂತಹ ಕ್ರಮ ಕೈಗೊಳ್ಳುವುದು? ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕು.

ಎರಡನೆಯದಾಗಿ, ನೀರಿನ ಬಗ್ಗೆ ಹೇಳಬೇಕೆಂದರೆ, ಕೈಗಾರಿಕೆಗಳಿಗೆ ಎಷ್ಟು ಟಿಎಂಸಿ ನೀರು ಬೇಕಾಗುತ್ತದೆ? ಯಾವ ನೀರಾವರಿ ಯೋಜನೆಯಿಂದ ಕೈಗಾರಿಕೆಗಳಿಗೆ ನೀರನ್ನು ಒದಗಿಸುತ್ತಿದ್ದೀರಿ? ಅದರ ಬಗ್ಗೆ ತಿಳಿಸಬೇಕು.

ಇನ್ನು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ರಾಜ್ಯದಲ್ಲಿ ವಿದ್ಯುತ್ತೇ ಇಲ್ಲ. ಅದರಲ್ಲಿಯೂ ರಾಜಧಾನಿಯಲ್ಲಿಯೇ ವಿದ್ಯುತ್ ಕಡಿತವಾಗಿದೆ. ಇನ್ನು "ಕತ್ತಲಲ್ಲೇ ರಾಜ್ಯ" ಎಂದು ಎಲ್ಲಾ ಪತ್ರಿಕೆಗಳಲ್ಲಿಯೂ ಹಾಗೂ ಮಾಧ್ಯಮಗಳಲ್ಲಿ ಬರುತ್ತಿದೆ. ಆ ವಿದ್ಯುತ್ತನ್ನು ಯಾವ ರೀತಿ ಒದಗಿಸಲಾಗುವುದು ಎಂದು ತಿಳಿಸಬೇಕು.

ಇನ್ನು ಮುಖ್ಯವಾಗಿ ಬಂಡವಾಳ ಹೂಡಿಕೆ ಮಾಡಿ ಕೈಗಾರಿಕೆ ಪ್ರಾರಂಭಗೊಂಡು ಉದ್ಯೋಗವನ್ನು ಸೃಷ್ಟಿ ಮಾಡಲು ಎಷ್ಟು ಸಮಯದ ಮಿತಿಯನ್ನು ಹಾಕಿಕೊಳ್ಳಲಾಗಿದೆ? ಇವುಗಳ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕು.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮೂಲಭೂತ ಸೌಕರ್ಯ ಎಂದರೆ ಏನು? ಜಮೀನು, ನೀರು, ವಿದ್ಯುಚ್ಛಕ್ತಿ. ಮಾನವ ಸಂಪನ್ಮೂಲ. ಭೂಮಿಯ ಅವಶ್ಯಕತೆಗೆ ಕೆ.ಐ.ಎ.ಡಿ.ಬಿ. ಗೆ ಅರ್ಜಿ ಹಾಕಿದರೆ ಆ Industrial Estate ನಲ್ಲಿ ಜಾಗ ಇದ್ದರೆ ನಾವೇ ಕೊಡುತ್ತೇವೆ. ಅದು single unit complex, ಅಂಥದ್ದು acquire ಮಾಡಿ ಅವುಗಳಲ್ಲಿಯೂ ಕೊಡುತ್ತೇವೆ. ಇನ್ನು ಕೆಲವೊಮ್ಮೆ ಅವರದೇ ಜಮೀನು ಇರುತ್ತದೆ. ಭೂಸುಧಾರಣೆ ಕಾಯಿದೆ ಸೆಕ್ಷನ್ 109ರ ಪ್ರಕಾರ ಸರ್ಕಾರ ಕೈಗಾರಿಕೆಗಳಿಗೆ ಭೂಮಿ ತೆಗೆದುಕೊಳ್ಳಬೇಕೆಂದರೆ ಬಹಳ ಸಮಸ್ಯೆಗಳಿತ್ತು. ಅದಕ್ಕೆ ಸಾಕಷ್ಟು ಶ್ರಮ ಹಾಗೂ ಸಮಯ ವ್ಯರ್ಥವಾಗುತ್ತಿತ್ತು. ಹಾಗಾಗಿ ಅದರ ಬಗ್ಗೆ ಸರ್ಕಾರ ಸೂಕ್ತವಾದಂತಹ ನಿರ್ದೇಶನವನ್ನು ಡೆಪ್ಯುಟಿ ಕಮೀಶನರ್ ಅವರಿಗೆ ಕೊಟ್ಟಿದೆ. ಒಂದು checklist ಮಾಡಿದೆವೆ. ಡೆಪ್ಯುಟಿ ಕಮೀಶನರ್‌ರವರು ಏನು documents ಕೇಳಿರುತ್ತಾರೆ, ಅಷ್ಟನ್ನು ಕೊಟ್ಟರೆ ಅದಕ್ಕೆ ಅವರು ಮಾನ್ಯತೆ ನೀಡಬೇಕು. ಅವರ consent ಸಹ ಇರುತ್ತದೆ. ಏಕೆಂದರೆ ಜಮೀನಿನ ಮಾಲೀಕರು ಹಾಗೂ ಕೈಗಾರಿಕೆ ಪ್ರಾರಂಭ ಮಾಡುವಂಥವರು ಇಬ್ಬರೂ ಸೇರಿ ಒಪ್ಪಂದದಿಂದ ಮಾಡಿಕೊಂಡಿರುತ್ತಾರೆ. ಅಷ್ಟೇ ಅಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಪರ್ಮಿಶನ್ ಕೊಟ್ಟಮೇಲೆ conversion ಇಲ್ಲ. ಏಕೆಂದರೆ automatic conversion ಆಗುತ್ತದೆ.

ಇಷ್ಟೇ ಅಲ್ಲದೆ ಮತ್ತೊಂದು ಅನುಕೂಲವನ್ನು ಮಾಡಿಕೊಡುತ್ತಿದ್ದೇವೆ. ಏನೆಂದರೆ, ಕೆಲವು ಕಡೆ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರುಗಳಿವೆ. ಹಾಗಾಗಿ ಸಣ್ಣ ಕೈಗಾರಿಕೆಗಳಿರಬಹುದು, ಗುಡಿ ಕೈಗಾರಿಕೆಗಳಿರಬಹುದು, ಯಾರಿಗೂ ನಾವು expose ಮಾಡಬಾರದು ಎಂಬ ದೃಷ್ಟಿಯಿಂದ ಚೆಕ್‌ಲಿಸ್ಟ್ ಪ್ರಕಾರ ಉದ್ಯೋಗ ಮಿತ್ರ ಪತ್ರಿಕೆಯ ಮುಖಾಂತರ ನಾವು ಅವರ ಅಪ್ಲಿಕೇಶನ್ ಡಿ.ಸಿ.ಗೆ ಕಳಿಸುತ್ತೇವೆ. ಡಿ.ಸಿ. ಮತ್ತು ಉದ್ಯೋಗ ಮಿತ್ರ ಪತ್ರಿಕೆಯ ಎಂ.ಡಿ. ಅವರಿಬ್ಬರಿಗಷ್ಟೇ ಸಂಪರ್ಕವಿರುತ್ತದೆ. ಅದರ clearance ಆದನಂತರ, papers will be handed over by Udyog Mitra to the concerned Industry. ಅಷ್ಟೇ ಅಲ್ಲದೆ ನಾವು ಆನ್‌ಲೈನ್ ಮಾಡುವುದಕ್ಕೂ ಸಹ ಪ್ರಯತ್ನ ಮಾಡುತ್ತಿದ್ದೇವೆ, ಏಪ್ರಿಲ್ ಅಥವಾ ಮೇ ತಿಂಗಳಿನೊಳಗೆ software ready ಆಗುತ್ತದೆ. Software ready ಆದನಂತರ this applications will be also made online. ಆದರೆ ಇದಕ್ಕೆಲ್ಲಾ

ಸ್ವಲ್ಪ ಸಮಯ ಬೇಕಾಗುತ್ತದೆ. ಹಾಗಾಗಿ ಇದರ ಬಗ್ಗೆ ಹೆಚ್ಚು ಪಾರದರ್ಶಕತೆ ತರುವುದಕ್ಕೆ ಒಂದು ಪ್ರಯತ್ನ ನಡೆಯುತ್ತಿದೆ.

**(ಈ ಹಂತದಲ್ಲಿ ಉಪಸಭಾಪತಿಯವರಾದಂತಹ ಮಾನ್ಯ ಮರಿತಿಬ್ಬೇಗೌಡರು ಸಭಾಪತಿಯವರ ಪೀಠವನ್ನಲಂಕರಿಸಿದರು)**

ಇನ್ನು ನೀರಿನ ಬಗ್ಗೆ ಹೇಳಬೇಕೆಂದರೆ, ಬಿಜಾಪುರ, ಬಾಗಲಕೋಟೆಯಲ್ಲಿ ಕೃಷ್ಣ ನದಿಯಿಂದ ಕೈಗಾರಿಕೆಗಳಿಗೋಸ್ಕರವೆ ನೀರನ್ನು ಮೀಸಲಿಟ್ಟಿದ್ದಾರೆ. ಕೆಲವು ಸಲ underground water ಕೂಡ use ಮಾಡಿಕೊಳ್ಳಬೇಕಾಗುತ್ತದೆ. ಆ ಸಂದರ್ಭಕ್ಕೆ ತಕ್ಕಂತೆ ಅದು depend ಆಗಿ ನೀರಿನ ಬಳಕೆ ಆಗುತ್ತದೆ.

ಇನ್ನು ಮೂರನೆಯದಾಗಿ ವಿದ್ಯುತ್ ಬಗ್ಗೆ ಹೇಳಿದಿರಿ. ನೀವು ಹೇಳದಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇಲ್ಲ. ಶರಾವತಿಯಲ್ಲಿ ಸಮಸ್ಯೆ ನಿರ್ಮಾಣವಾಗಿರುವುದರಿಂದ ಸ್ವಲ್ಪ ವಿದ್ಯುತ್ತಿನ ತೊಂದರೆಯುಂಟಾಗಿತ್ತು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರ ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತಿದೆ. ಬರುವ ಮೂರ್ನಾಲ್ಕು ದಿವಸದೊಳಗೆ ಶರಾವತಿಯಲ್ಲಿ ಏನು ಸಮಸ್ಯೆ ಉಂಟಾಗಿದೆ ಅದನ್ನು ಸರಿಪಡಿಸಲಾಗುತ್ತದೆ. ಅದೃಷ್ಟವಶಾತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಯಾವುದೇ ಹಾನಿಯುಂಟಾಗಿಲ್ಲ. ಅಷ್ಟೇ ಅಲ್ಲದೆ ಇತ್ತೀಚೆಗೆ ಬಳ್ಳಾರಿಯಲ್ಲಿ ವಿದ್ಯುತ್ ಯೂನಿಟ್ ಪ್ರಾರಂಭವಾಗಿದೆ. ಹಾಗಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಜೂನ್, ಜುಲೈ 2016ರೊಳಗೆ grid ಬರುತ್ತಿದೆ. In addition, non convention power ಬರುತ್ತದೆ. ಜೂನ್, ಜುಲೈ ತಿಂಗಳಿನಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಇರುವುದಿಲ್ಲವೆಂದು ನಾನು ಭಾವಿಸಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ "ಇನ್‌ವೆಸ್ಟ್ ಕರ್ನಾಟಕ 2016" ಒಂದು ದೊಡ್ಡ ಕೈಗಾರಿಕಾ ಉದ್ಯೋಗ ಮೇಳವನ್ನು ನಡೆಸಲಾಯಿತು. ಬಹುಶಃ ಇಷ್ಟು ದೊಡ್ಡ ಮೇಳ ಇದೂವರೆಗೂ ಕರ್ನಾಟಕ ರಾಜ್ಯದಲ್ಲಿ ಆಗಿರಲಿಲ್ಲ ಎಂಬುದು ನನ್ನ ಭಾವನೆ. ಇದು ರಾಜ್ಯದ ಚರಿತ್ರೆಯಲ್ಲಿ ಸೇರಿಕೊಂಡಿದೆ. ಅದನ್ನು ನಾವು ಒಪ್ಪಿಕೊಳ್ಳಬೇಕು. ಏಕೆಂದರೆ ಸುಮಾರು 65,688.00 ಕೋಟಿ ರೂಪಾಯಿಗಳ ಬಂಡವಾಳದ

ಜೊತೆಯಲ್ಲಿ 41,096 ಲಕ್ಷ ಉದ್ಯೋಗ ಸೃಜನೆಯಾಗುವಂತಹ ಒಂದು ಕೆಲಸವನ್ನು ಮಾಡಲಾಗಿದೆ. ಆದಕಾರಣ ನಾನು ರಾಜ್ಯಸರ್ಕಾರಕ್ಕೆ ಹಾಗೂ ಸಂಬಂಧಪಟ್ಟಂತಹ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ.

ಮಾನ್ಯ ಸಭಾಪತಿಯವರೇ, ನನ್ನ ಒಂದು ಕಳಕಳಿ ಏನೆಂದರೆ, ಈ ಹಿಂದೆ ಈ ರೀತಿಯಾಗಿ ಅನೇಕ ಕಾರ್ಖಾನೆಗಳು ಬಂದಿವೆ. ಹಿಂದೆ ಕೂಡ Karnataka Global Investors Meet ಆಗಿದೆ. ಆಗ ಉದ್ಯೋಗ ಕೊಡುತ್ತೇವೆಂದು ಹೇಳಿ ಕಾರ್ಖಾನೆಯ establishment ಆದನಂತರ ಅವರು ಉದ್ಯೋಗ ಕೊಡುವುದಕ್ಕೆ ಬರುವುದಿಲ್ಲ. ಹಾಗಾಗಿ ಇದರ ಬಗ್ಗೆ ತಾವು ಉದ್ಯೋಗ ಮಿತ್ರದ ಮುಖಾಂತರ ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದಿರಿ. ನನ್ನ ಕಳಕಳಿ ಏನೆಂದರೆ, ಉದ್ಯೋಗ ಮಿತ್ರ ಏನಿದೆ ಅದು whether it is a Government Agency or it is a Private Agency? ಏಕೆಂದರೆ, ಇದಕ್ಕೆ ಯಾರಾದರು ಒಬ್ಬರಿಗೆ responsible ಇರಬೇಕಾಗುತ್ತದೆ. ನಾನು ನೋಡಿರುವ ಪ್ರಕಾರ ಶೇಕಡ 75ರಷ್ಟು ಕೈಗಾರಿಕೆಗಳು ನಗರದ ಸುತ್ತ ಮುತ್ತ ಇವೆ. ಅಂದರೆ ಬೆಂಗಳೂರಿನ ಸುತ್ತ-ಮುತ್ತ ಇವೆ. ರಾಜ್ಯದಲ್ಲಿರುವ ಇತರ 30 ಜಿಲ್ಲೆಗಳಲ್ಲಿಯೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎಂದು ಹೇಳುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಬನ್ನಿ. ಅಲ್ಲಿ ಉದ್ಯೋಗ ಕೊಡುವಂತಹ ಕಾರ್ಖಾನೆಗಳನ್ನು ಕೊಡಿ. ನಮ್ಮಲ್ಲಿ Mangalore Refinery and Petrochemicals Limited ಇದೆ, Udupi Power Corporation Limited ಇದೆ, Mangalore Chemicals and Fertilizers ಇದೆ. ಅವರು ಸಾರ್ವಜನಿಕರ ಜಾಗವನ್ನು ತೆಗೆದುಕೊಂಡು ಸುಮಾರು 100, 200 ಜನರಿಗೂ ಸಹ ಕೆಲಸವನ್ನು ಕೊಡಲಿಲ್ಲ. ಈಗ ಬೆಂಗಳೂರಿನಲ್ಲಿ ನಾನು ನೋಡುತ್ತಿದ್ದೇನೆ ಸುಮಾರು 10 ರಿಂದ 20 ಎಕರೆ ಜಾಗದಲ್ಲಿ ಸುಮಾರು 150 ರಿಂದ 200 ಜನರಿಗೆ ಉದ್ಯೋಗ ಕೊಡುತ್ತಿರುವುದನ್ನು ನೋಡಿದ್ದೇನೆ. ಅಂತಹ ಉದ್ದಿಮೆಗಳನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೂ ಸಹ ಕೊಡಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ Air connectivity ಇದೆ, Sea connectivity ಇದೆ National Highway ಇದೆ. ಎಲ್ಲಾ ರೀತಿಯಾದಂತಹ ಮೂಲಭೂತ ಸೌಕರ್ಯಗಳು ಇರುವಂತಹ ಜಿಲ್ಲೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಕೈಗಾರಿಕೆಗಳು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಸರ್ಕಾರ ರೈತರಿಂದ 3 ರಿಂದ 4 ಸಾವಿರ ಎಕರೆ ಭೂಮಿಯನ್ನು ತೆಗೆದುಕೊಂಡು 100 ರಿಂದ 125 ಜನರಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳಿ ಕೇವಲ 25 ಜನರಿಗೂ ಸಹ ಉದ್ಯೊಗವನ್ನು ಕೊಡಲಿಲ್ಲ. ಹಾಗಾಗಿ ಉದ್ಯೋಗ ಮೋಸ ಆಗುತ್ತದೆ.

41,000 ಜನರಿಗೆ ಉದ್ಯೋಗವನ್ನು ಸೃಷ್ಟಿಮಾಡಲಾಗುವುದು ಎಂಬ ಆಕಾಂಕ್ಷೆ ಏನಿದೆ, ಅದು ಸರಿ ಇದೆ. ಆದರೆ ಇದನ್ನು ಸರಿಯಾದ ರೀತಿಯಲ್ಲಿ implement ಮಾಡುವುದಕ್ಕೆ, ಸರಿಯಾದಂತಹ ಏಜೆನ್ಸಿಯನ್ನು ಅಥವಾ ಸರ್ಕಾರ ಇದಕ್ಕೆ monitoring ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಹಾಗೂ ಕರ್ನಾಟಕದಲ್ಲಿ ಇಷ್ಟು ದೊಡ್ಡ Investors Meet ಅನ್ನು ಆಯೋಜಿಸಿದ್ದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಕೈಗಾರಿಕೆಗಳಿಗೋಸ್ಕರ ಯಾರು ಜಮೀನನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ನಮ್ಮ ಕೆ.ಐ.ಡಿ.ಬಿ. ವತಿಯಿಂದ ಕಡ್ಡಾಯವಾಗಿ ಅವರಿಗೆ ಒಂದು ಕೆಲಸವನ್ನು ಕೊಡಬೇಕೆಂದು ನಾವೇ ನಿರ್ಣಯ ಮಾಡಿದ್ದೇವೆ. ಆ ಪ್ರಕಾರ ಹಲವಾರು ಕಡೆ ಕೈಗಾರಿಕೆಗಳು ಬಂದಾಗ ಮಾನ್ಯ ಮುಖ್ಯಮಂತ್ರಿಗಳವರಿಂದ job appointment letter ಕೊಟ್ಟಿದೇವೆ. ಈಗ ಇರುವಂತಹ ಪ್ರಶ್ನೆ ಏನೆಂದರೆ, Karnataka Global Investors Meet ನಲ್ಲಿ ಕೇವಲ Bangalore Urban, Bangalore Rural ಗೆ ಈ projects ಗಳು ಬಂದಿಲ್ಲ. ಬಾಗಲಕೋಟೆ, ಬಿಜಾಪುರ, ಮಂಗಳೂರು ಇಂತಹ ಅನೇಕ ಕಡೆಗಳಲ್ಲಿ ಕೈಗಾರಿಕೆಗಳು ಬಂದಿವೆ. ಇದರ ಬಗ್ಗೆ ವಿವರಣೆ ಕೊಡಬೇಕೆಂದರೆ ಅರ್ಧ ಗಂಟೆ ಕಾಲಾವಕಾಶ ಬೇಕಾಗುತ್ತದೆ. ಉತ್ತರದಲ್ಲಿ ಅವುಗಳ ಬಗ್ಗೆ ಎಲ್ಲಾ ವಿವರಗಳನ್ನು ನೀಡಲಾಗಿದೆ. ಮಾನ್ಯ ಸದಸ್ಯರು ಅದನ್ನು ಪರಿಶೀಲಿಸಬಹುದು.

(ಮುಂದು)

**(101) 04–03–2016 ಸಿಎಸ್:ವಿಎಸ್ 6:00**

**ಶ್ರೀ ಆರ್.ವಿ.ದೇಶಪಾಂಡೆ(ಮುಂದು):–**

ಬೆಂಗಳೂರಿನಿಂದ 2 Tier Cities ಗಳಿಗೆ ಕೈಗಾರಿಕೆಗಳು ಹೋಗಬೇಕೆನ್ನುವ ಪ್ರಯತ್ನ ನಡೆಯುತ್ತಿದೆ. ಈಗ ಇನ್‌ಫೋಸಿಸ್ ಹುಬ್ಬಳ್ಳಿಗೆ ಹೋಗಿದೆ. ಧಾರವಾಡದಲ್ಲಿ Smart City Project, Incubation Centre, IT Park, clear ಮಾಡಿದ್ದೇವೆ. ಅದಕ್ಕೆ MoU ಆಗಿದೆ. ಕೈಗಾರಿಕೆಗಳು ಬರಬೇಕು, ಸಾಕಷ್ಟು ಉದ್ಯೋಗ ಸೃಷ್ಟಿಯಾಗಬೇಕು, ಜನರ ಕೈಯಲ್ಲಿ wealth create ಆಗಬೇಕು ಎನ್ನುವದು ನಮ್ಮ ಅಂತಿಮವಾದ ಉದ್ದೇಶ. 2000ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮೊದಲ ಬಾರಿಗೆ Global Investors Meet ನಡೆಸಿತ್ತು. ಅದರಂತೆ ಈಗ ಪ್ರತಿಯೊಂದು ರಾಜ್ಯವು ಸಹ Investors Meet ನಡೆಸುತ್ತಿದೆ. ಇದರಿಂದ ಪಾರದರ್ಶಕತೆ ಬಂದಿದ್ದು, ಬಂಡವಾಳ ಇಲ್ಲದೆ ಪ್ರಗತಿ ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ. ನನ್ನ ಮಾಹಿತಿ ಪ್ರಕಾರ ನಮ್ಮ Global Investors Meet ನಲ್ಲಿ ಕೇವಲ MoU ಗೆ ಮಾತ್ರ ನಾವು ಸಹಿ ಮಾಡಿಲ್ಲ. Single Window Agency, High Power Committee, District Committee, Tourism Committee, Power Committeeಯಲ್ಲಿ, for the first time, 1 ಲಕ್ಷ 77 ಸಾವಿರ ಕೋಟಿಯ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದೇವೆ. Our State had conducted Global Investors Meet in the year 2000 also. 25000 ಕೋಟಿ ಬಂಡವಾಳ ಬಂದಿತ್ತು. Most of the project are cleared. MoU ಮಾಡಬಾರದು ಎಂದಲ್ಲ, ನಾವು ಸಹ MoU ಗಳನ್ನು ಮಾಡಿದ್ದೇವೆ. 122 MoUs have been signed. 1 ಲಕ್ಷ 27 ಸಾವಿರ ಕೋಟಿ ಬಂಡವಾಳ ಹೂಡಿಕೆ ಇದೆ. I have given a deadline. 200 ಕೋಟಿ ಮೇಲೆ ಇದ್ದ MoUಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ, along with the concerned Joint Director of the

District. ಮೇ 15ರೊಳಗೆ initial steps ತೆಗೆದುಕೊಂಡು ನಮ್ಮ ಕಡೆ ಪ್ರಸ್ತಾವ ತೆಗೆದುಕೊಂಡು ಬರಬೇಕು ಎಂದು ಹೇಳಿದ್ದೇವೆ. ಯಾವುದೇ initial steps ತೆಗೆದುಕೊಳ್ಳಲಿಲ್ಲವೆಂದರೆ ಮುಂದೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎನ್ನುವುದನ್ನು ನಾನಿಲ್ಲಿ ಹೇಳುವುದಿಲ್ಲ, but we will not hesitate to take action. ಹಾಗಾಗಿ ನಾವು MoU ಗಳನ್ನು ಮಾಡಿಕೊಂಡಿದ್ದೇವೆ, proposals ಮಾಡಿದ್ದೇವೆ, ಅಂದರೆ proposals ಗಳಿಗೆ ಬಂಡವಾಳ ಬರಬೇಕಾದರೆ ಸರ್ಕಾರದಿಂದಲೂ ಕೂಡ ಉತ್ತೇಜನವನ್ನು ನೀಡಬೇಕಾಗುತ್ತದೆ. ಉದ್ಯೋಗ ಸೃಷ್ಟಿಯ ದೃಷ್ಟಿಯಿಂದ ಈ ಎಲ್ಲಾ ಪ್ರಾಜೆಕ್ಟ್‌ಗಳು ಬಂದಲ್ಲಿ 1 ಲಕ್ಷ 27 ಸಾವಿರ ಕೋಟಿ ಮತ್ತು 4 ಲಕ್ಷ 82 ಸಾವಿರದಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. If all the projects are implemented, 1.27 ಲಕ್ಷ ಕೋಟಿ ಉದ್ಯೋಗ ಸೃಷ್ಟಿಯಾಗುತ್ತದೆ, ಇದೆಲ್ಲ ಆಗಲಿ. ಹಿಂದಿನ ಅನುಭವನಗಳನ್ನೆಲ್ಲ ನೋಡಿದಾಗ ಸ್ವಲ್ಪ ತೊಂದರೆ ಇದೆ. ಆದರೂ, we are trying to concentrate. ಇವೆಲ್ಲ ಬರಬೇಕೆನ್ನುವ ಒಂದು ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಇವತ್ತು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸಹ ಕೈಗಾರಿಕೆಗಳು ಬರಬೇಕು. We are giving thrust on 2 tier cities. ಗುಲ್ಬರ್ಗಾ, ಯಾದಗಿರಿ, ಬೆಳಗಾವಿ, ಧಾರವಾಡ, ಮಂಗಳೂರು, ಕರಾವಳಿ, ಮೈಸೂರು ಮಂಡ್ಯ, ಕೊಪ್ಪಳ, ಇರಬಹುದು. ತುಮಕೂರಿನ ವಸಂತನರಸಪುರದಲ್ಲಿಯೂ ಸಹ ಕೈಗಾರಿಕೆಗಳು ಬರುತ್ತಿವೆ. ಹಾಗಾಗಿ ನಾವು ಸಹ ಕೈಗಾರಿಕೆಗಳನ್ನು ಬೆಂಗಳೂರಿನಿಂದ convince ಮಾಡಿ ಹೆಚ್ಚು ದೂರಕ್ಕೆ ಹಾಕುವ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಹಿಂದುಳಿದ ಪ್ರದೇಶಗಳು ಸಾಕಷ್ಟಿವೆ. ಬೆಂಗಳೂರಿನ ವಾತಾವರಣ, ವಾಹನದಟ್ಟಣೆ ತಡೆಗಟ್ಟಲು ಈ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, 2000 ನೇ ಸಾಲಿನಲ್ಲಿ ಮತ್ತು ಅದರ ಹಿಂದೆಯೂ ಸಹ Investors Summit ನಡೆಸಲಾಗಿತ್ತು. ಅದನ್ನು GIM ಎಂದು ಕರೆಯಲಾಗುತ್ತಿತ್ತು. ಈ Investors Summit ಗಳಿಂದ ನಾವು ಏನು ಪಾಠವನ್ನು ಕಲಿತಿದ್ದೇವೆ ಅದರ ಆಧಾರದ ಮೇಲೆ ಈ Global Investors Meet ಅನ್ನು ಆಯೋಜನೆ ಮಾಡಲಾಗಿತ್ತೇ? ಅದರಲ್ಲಿ ಸಾಕಷ್ಟು ಹಣ investment ಆಗುತ್ತದೆ ಎಂದು ಹೇಳುವುದರ ಜೊತೆಗೆ 20–30% investment ಆಗಿಲ್ಲ ಎನ್ನುವ ಮಾತನ್ನು ಸಹ ಹೇಳುತ್ತಿದ್ದರು. ಹಾಗೆಯೇ ಅದರ ಕೊರತೆಗಳೇನು ಎನ್ನುವುದನ್ನು ತಿಳಿದುಕೊಂಡಿದ್ದೇವೆಯೇ ಎನ್ನುವುದು ಮತ್ತೊಂದು ವಿಚಾರ. ಈ Global Investors Meet ಪ್ರತಿ ವರ್ಷ ನಡೆಸಲಾಗುವುದೇ? ಅಥವಾ 2–3 ವರ್ಷಗಳಿಗೊಮ್ಮೆ ನಡೆಸಲಾಗುವುದೇ? ಮೂರನೆಯದಾಗಿ ತುಂಬಾ ಸಂದರ್ಭಗಳಲ್ಲಿ ಇಲಾಖೆಗಳ ಮಧ್ಯೆ ಕೋ–ಆರ್ಡಿನೇಷನ್ ಇಲ್ಲದೆ ಇರುವುದರಿಂದ ಯಾರು ಬಂಡವಾಳ ಹೂಡಿಕೆಗೆ ಆಸಕ್ತಿಯನ್ನು ತೋರಿಸಿದ್ದಾರೆ ಅವರು 2–3 ತಿಂಗಳುಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಏಕೆಂದರೆ ಇದಕ್ಕೆ ಲೈಸೆನ್ಸ್ ನೀಡುವಂತಹ ಪ್ರೋಸಸ್ ತುಂಬಾ ಇಲಾಖೆಗಳಿಗೆ ಅನ್ವಯ ಆಗಿರುವಂಥದ್ದು. ಈ ಎಲ್ಲಾ ಇಲಾಖೆಗಳ ನಡುವೆ ಸಂಯೋಜನೆಯನ್ನು ಮಾಡಲಿಕ್ಕೆ ಸಮನ್ವಯವನ್ನು ಸಾಧಿಸಲಿಕ್ಕೆ ಉದ್ಯೋಗ ಮಿತ್ರ ವಿಫಲ ಹೊಂದಿದೆ. I am sorry to say this. ಅದನ್ನು ಮಾಡಲಿಕ್ಕೆ ಆಗುತ್ತಿಲ್ಲ. Single Window Agency ರೀತಿಯಲ್ಲಿ ಕೆಲಸ ಮಾಡಬೇಕಾಗಿದ್ದರೂ ಸಹ ಅದನ್ನು ಮಾಡಲಿಕ್ಕೆ ಆಗುತ್ತಿಲ್ಲ. ಎಕೆಂದರೆ ಇಲ್ಲಿ ಅನೇಕ ಇಲಾಖೆಗಳ ಸಮನ್ವಯದ ಕೊರತೆ ಇದೆ. ಹಿಂದೆ ಒಂದು additional window ಆಗಿದೆ ಎನ್ನುವ ಮಾತನ್ನು ಹೇಳುತ್ತಿದ್ದರು. Single Window ಆಕೆಲಸವನ್ನು ಮಾಡಬೇಕಾಗಿತ್ತು. ಆದರೆ ಉದ್ಯೋಗ ಮಿತ್ರ has become an additional window. ಈ ಕೊರತೆಗಳಿಂದ ಉದ್ಯೋಗ ಸೃಷ್ಟಿಯಾಗಬೇಕು, ಆರ್ಥಿಕ ಚಟುವಟಿಕೆಗಳಾಗಬೇಕು,

ಪ್ರಗತಿಯಾಗಬೇಕು ಎನ್ನುವುದನ್ನೆಲ್ಲ ನಾವು ಒಪ್ಪಿಕೊಳ್ಳುತ್ತೇವೆ. ಬಹಳ ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಯೋಜನಾಬದ್ಧವಾಗಿ 6 ತಿಂಗಳ ಅವಧಿಯಲ್ಲಿ ಇದನ್ನು ಬಹಳ ಚೆನ್ನಾಗಿ ಆರ್ಗನೈಸ್ಡ್ ಮಾಡಲಾಗಿದೆ. ಅದಕ್ಕಾಗಿ ಸರ್ಕಾರಕ್ಕೆ ನನ್ನ ಅಭಿನಂದನೆಗಳು. ಈಗ ಸಚಿವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗಿ ಇದ್ದುದಕ್ಕಿಂತ ಈಗ ಬಹಳ ಖುಷಿಯಾಗಿದ್ದಾರೆ ಎಂದು ನನಗನಿಸುತ್ತಿದೆ. ನನ್ನ ಪ್ರಶ್ನೆ ಏನೆಂದರೆ 3–4 ತಿಂಗಳುಗಳ ಅವಧಿಗೆ ಸಚಿವರು ಇಲಾಖೆಯ ಮುಖ್ಯಸ್ಥರಾಗಿ ಬರುತ್ತಿರುವ 1.77 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಮತ್ತು 1980 ಬೇರೆ ಬೇರೆ ಯೋಜನೆಗಳು ಇದರ ಜೊತೆಗೆ ಸುಮಾರು 122 MoUಗಳು. There must be a quarterly meeting to take stock of the situation. ಏಕೆ ಆಗಿಲ್ಲ, ಏನು ಆಗಿಲ್ಲ ಎನ್ನುವುದನ್ನು ನೋಡುವಂತಹ ಪ್ರಯತ್ನಗಳು ಆಗುತ್ತಿವೆಯೇ? ಈ ರೀತಿಯ Investors Meet ಎಷ್ಟು ವರ್ಷಕ್ಕೊಮ್ಮೆ ಆಯೋಜನೆ ಮಾಡಲಾಗುವುದು? ಎನ್ನುವುದನ್ನು ದಯಮಾಡಿ ಹೇಳಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೇ, ಇವತ್ತಿನ ಈ ಎಲ್ಲಾ ಅಜೆಂಡಾವನ್ನು ನೀವು ಮುಗಿಸುವಿರಾ?

**ಉಪಸಭಾಪತಿಯವರು:–** ತಾವೆಲ್ಲರೂ ಸಹಕಾರ ನೀಡಿದಲ್ಲಿ ಮುಗಿಸಬಹುದು.

**ಶ್ರೀ ಕವಟಗಿ ಮಠ ಮಹಾಂತೇಶ್ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಾದಂತಹ ಬೆಳಗಾವಿ ಜಿಲ್ಲೆ, ಕಾರವಾರ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಿಗೆ ಮತ್ತು ಹುಬ್ಬಳ್ಳಿ ಧಾರವಾಡಗಳಿಗೆ ಬರುತ್ತಿರುವ ಯೋಜನೆಗಳ ಲಿಸ್ಟ್ ನೋಡಿದೆ. ಬೆಳಗಾವಿ ಜಿಲ್ಲೆಗೆ ಮತ್ತು ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಿಗೆ ಸಾಕಷ್ಟು ಉದ್ಯೋಗಗಳು ಬರುತ್ತಿಲ್ಲ ಎನ್ನುವುದು ನನ್ನ ಅನಿಸಿಕೆ. ಅದರ ಬಗ್ಗೆ ದಯಮಾಡಿ ಸಚಿವರು ಕ್ಲಾರಿಫೈ ಮಾಡಬೇಕು. ಈ Investors Meet ಎಂದು ತಾವೇನು ಮಾಡಿದ್ದಿರಿ, ಅದಕ್ಕೆ ನನ್ನ ಧನ್ಯವಾದಗಳು

ಹಾಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಇಂತಹ ಪ್ರಮುಖವಾದ ಇಲಾಖೆಯನ್ನು ಹೊಂದಿರುವವರು 2 ವರ್ಷಗಳ ಹಿಂದೆಯೇ ಈ ಖಾತೆಯನ್ನು ವಹಿಸಿಕೊಳ್ಳಬೇಕಾಗಿತ್ತು, ಸನ್ಮಾನ್ಯ ದೇಶಪಾಂಡೆಯವರು ಬಹಳ ತಡವಾಗಿ ಈ ಇಲಾಖೆಗೆ ಬಂದಿದ್ದಾರೆ ಎನ್ನುವ ಮಾತನ್ನು ಬಹಳ ಖೇದದಿಂದ ಹೇಳಬಯಸುತ್ತೇನೆ. 2 ವರ್ಷದ ಹಿಂದೆ ಅವರಿಗೆ ಖಾತೆ ಹಂಚಿಕೆ ಆಗಿದ್ದರೆ ಇಷ್ಟು ಹೊತ್ತಿಗೆ ಕೈಗಾರಿಕೆಗಳು ಬಂದೇ ಬಿಡುತ್ತಿದ್ದವು, ಏಕೆ ಅವರಿಗೆ ಹಿಂದೆಯೇ ಈ ಖಾತೆ ನೀಡಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಇವತ್ತು 1 ಲಕ್ಷ 77 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಬರುತ್ತಿದೆ. 1 ಲಕ್ಷ 70 ಸಾವಿರ ಉದ್ಯೋಗ ಸೃಷ್ಟಿಯಾಗುತ್ತಿದೆ. ಹಾಗಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಯಾವ ಪ್ರಮುಖ ಉದ್ದಿಮೆಗಳು ಬರುತ್ತಿವೆ ಎನ್ನುವ ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕು. ಕೃಷ್ಣಾ ಬೇಸಿನ್ ಮತ್ತು ದೂಧಗಂಗಾ ಮತ್ತು ಘಟಪ್ರಭಾ ಈ ಯೋಜನೆಗಳಿಗೆ water allocation ಮಾಡುವ ಬಗ್ಗೆ ಸರ್ಕಾರ ಬದ್ಧವಾಗಿದೆಯೇ ಎನ್ನುವುದನ್ನು ಕೂಡ ತಿಳಿಸಬೇಕಾಗುತ್ತದೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ವಿಶಾಲ ಕರ್ನಾಟಕ ಆಗುವುದಕ್ಕೆ ಮುಂಚೆಯೇ ಸನ್ಮಾನ್ಯ ನಿಜಲಿಂಗಪ್ಪನವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಶರಾವತಿ ಯೋಜನೆಯಲ್ಲಿ ಅತ್ಯಧಿಕವಾದ ವಿದ್ಯುತ್ ಬಂದಂತಹ ಸಂದರ್ಭದಲ್ಲಿ ಇದೇ ರೀತಿಯ ಒಂದು ಕಾರ್ಯಕ್ರಮವನ್ನು ಮಾಡಿದ್ದರು. ಅದು ವ್ಯವಸ್ಥಿತವಾಗಿ ಸರಿಯಾಯಿತು. ಆದರೆ ಇವತ್ತು ಸರ್ಕಾರ ಇದನ್ನು ಕರೆದಿರುವ ಪರಿಸ್ಥಿತಿಯಲ್ಲಿ ನಗರಗಳು ಬೆಳೆಯುತ್ತಿರುವುದನ್ನೆಲ್ಲ ನೋಡಿದಾಗ ನಗರಗಳಿಗೆ ಇತಿಮಿತಿಯೇ ಇಲ್ಲ. ಸರ್ಕಾರ ಏನಾದರೂ ನಗರಗಳ ಬೆಳವಣಿಗೆಗೆ ಇತಿಮಿತಿಯನ್ನು ಹಾಕಲಾಗುವುದೇ? ಇದರಲ್ಲಿ ರಾಜ್ಯಸರ್ಕಾರದ ಸಹಭಾಗಿತ್ವ ಇದೆಯೇ? ಸಹಭಾಗಿತ್ವ ಇದ್ದಲ್ಲಿ ರಾಜ್ಯಸರ್ಕಾರದಿಂದ ಎಷ್ಟು ಹಣವನ್ನು ವಿನಿಯೋಗಿಸಲಾಗುತ್ತಿದೆ ಎನ್ನುವುದನ್ನು ಸಚಿವರು

ತಿಳಿಸಬೇಕು. ಏಕೆಂದರೆ ಇವತ್ತು ಬೆಂಗಳೂರು ಇಷ್ಟು ವಿಶಾಲವಾಗಿ ಬೆಳೆಯುತ್ತಿದೆ, ಪರಿಸರ ಹದಗೆಡುತ್ತಿದೆ. ಬೆಂಗಳೂರಿನ 1 ಕಿ.ಮೀ ಸುತ್ತಲೂ ಉದ್ಯಾನವನವನ್ನಾದರೂ ಮಾಡಬಹುದಿತ್ತು, ಅದನ್ನು ಯಾವ ಸರ್ಕಾರಗಳು ಸಹ ಮಾಡಲಿಲ್ಲ. ಇದನ್ನೆಲ್ಲ ಮಾಡದೇ ಕೇವಲ ಕೈಗಾರಿಕೆಗಳನ್ನೇ ಮಾಡಿಕೊಂಡು ಕುಳಿತಲ್ಲಿ ನಾವೆಲ್ಲ imbalanced ಆಗಿಬಿಡುತ್ತೇವೆ.

**ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಕೈಗಾರಿಕಾ ಸಚಿವರು):–** ಮಾನ್ಯ ಸಭಾಪತಿಗಳೇ, ಈ MoU ಮಾಡಿಕೊಂಡಂತಹದ್ದರಲ್ಲಿ ರಾಜ್ಯಸರ್ಕಾರ ಯಾವುದೇ ಹಣವನ್ನು ವಿನಿಯೋಗಿಸುತ್ತಿಲ್ಲ. ಸರ್ಕಾರ facilitate ಮಾಡುತ್ತದೆ, ಸರ್ಕಾರ ಅಗತ್ಯ ಮೂಲಭೂತಸೌಕರ್ಯಗಳನ್ನು ನೀಡುವುದಕ್ಕೆ ಪ್ರಯತ್ನವನ್ನು ಮಾಡುತ್ತದೆ. ಆದರೆ ಇದನ್ನೆಲ್ಲ ಉಚಿತವಾಗಿ ನೀಡುವುದಿಲ್ಲ. ಎರಡನೆಯದಾಗಿ joint partnership ರೀತಿಯಲ್ಲಿ ಮಾಡಬಾರದೆಂದೆನೂ ಇಲ್ಲ. ನಮ್ಮ ಪ್ರವಾಸೋದ್ಯಮದಲ್ಲಿ ನಾವು PPP Model ಕಾರ್ಯರೂಪಕ್ಕೆ ತಂದಿದ್ದೇವೆ. ಅದನ್ನು ಕೇಂದ್ರಸರ್ಕಾರ ಸಹ ಮಾಡುತ್ತಿದೆ. ತಾವು ಕೇಳಿರುವ ಹಾಗೆ ಬೆಳಗಾವಿಯಲ್ಲಿ 13 ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಲಾಗಿದೆ. ಬಳ್ಳಾರಿಯಲ್ಲಿ 17 ಆಗಿದೆ. ಬಾಗಲಕೋಟೆ ಮತ್ತು ಬಿಜಾಪುರದಲ್ಲಿ ಆಗಿದೆ. ಚಿಕ್ಕಮಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಆಗಿವೆ. ಚಿಕ್ಕೋಡಿಯಲ್ಲಿ ಇನ್ನೊಂದು ಕೈಗಾರಿಕೆ ಬಂದಿದೆ. ತುಮಕೂರಿನಲ್ಲಿ ಕೈಗಾರಿಕೆ ಸ್ಥಾಪಿಸಿ ಎಂದು ಬಂಡವಾಳ ಹೂಡಿಕೆದಾರರಿಗೆ ಬಲವಂತ ಮಾಡುವುದಕ್ಕೆ ಆಗುತ್ತದೆಯೆ? ಕೈಗಾರಿಕೆ ನಡೆಸುವವರಿಗೆ ಎಲ್ಲಿ ಬಂಡವಾಳ ಹಾಕಬೇಕು, ಎಲ್ಲಿ ಯೋಜನೆ ಪ್ರಾರಂಭಿಸಬೇಕೆನ್ನುವುದರ ಬಗ್ಗೆ ನಮಗಿಂತಲೂ ಹೆಚ್ಚು ಬುದ್ಧಿವಂತಿಕೆ ಇರುತ್ತದೆ. ನಾವು ಇಲ್ಲಿ push ಮಾಡಬಹುದು, ಬೆಂಗಳೂರು ಬಿಟ್ಟು ಆಕಡೆ ಈ ಕಡೆ ಹೋಗಿ ಎಂದು ಹೇಳಬಹುದು. ಈಗ ತುಮಕೂರು ಸಾಕಷ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ. ಆ ದಿಕ್ಕಿನಲ್ಲಿ ನಾವು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಇದು ಎಷ್ಟು ವರ್ಷಗಳ ಯೋಜನೆ ಎಂದು ಕೇಳಿದರು. ಇದು ಇಷ್ಟು ವರ್ಷ ಅಷ್ಟು ವರ್ಷ

ಎಂದು ಹೇಳುವುದಕ್ಕೆ ಆಗುವುದಿಲ್ಲ, ಸಂದರ್ಭಾನುಸಾರ ಅವಶ್ಯಕತೆಗಳನ್ನು ಗಮನಿಸಿ ಮಾಡಬೇಕಾಗುತ್ತದೆ.

ಎರಡನೆಯದಾಗಿ ನಾವು ಎಲ್ಲಿ MoU ಸಹಿ ಮಾಡಿದ್ದೇವೆ. Wherever the project has more than 200 crore investment, we have designated a senior officer to be in touch with the investor along with the Joint Director to ensure that the project is implemented. 15th May is the deadline. If initial steps are not taken, the Government will take its own decision. ಈಗಾಗಲೇ Additional Chief Secretaryಯವರಿಗೆ ನಿರ್ದೇಶನ ನೀಡಿದ್ದೇವೆ. Ministers will also review. ಏಕೆಂದರೆ ಕೆಲವು ಸಲ facilitation ಮಾಡಬೇಕಾಗುತ್ತದೆ. ಸಮಸ್ಯೆಗಳನ್ನು ಹೋಗಲಾಡಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಿಮ್ಮೆಲ್ಲರ ಸಹಕಾರದಿಂದ ಈ ಕೆಲಸವನ್ನು ಮಾಡಿದ್ದೇವೆ. ನನಗೆ ವಿಶ್ವಾಸ ಇದೆ, ಆದಷ್ಟು ಬೇಗ ಈ ಎಲ್ಲಾ ಯೋಜನೆಗಳನ್ನು ಜಾರಿಗೊಳಿಸಲು ಪ್ರಯತ್ನ ಪಡಲಾಗುವುದು.

(ಮುಂದು)

**ಪ್ರಶ್ನೆ ಸಂಖ್ಯೆ: 315**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಗಳೆ, ಇದೇ ಪ್ರಶ್ನೆಯನ್ನು ನಾನು 3-7-2015ರಂದು ಕೇಳಿದೆ. ಅದೇ ಉತ್ತರವನ್ನು ಇವತ್ತು ಕೊಟ್ಟಿದ್ದಾರೆ. ಆದರೆ ಕೆಲವೊಂದು ದಿನಾಂಕಗಳನ್ನು ಮಾತ್ರ ಬದಲಾವಣೆ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕ್ಷರ ದಾಸೋಹ ಯೋಜನೆಯ ಅಡಿಯಲ್ಲಿ ಅಗ್ನಿನಂದಕ (ಫೈರ್ ಪ್ರೂಫ್) ಏಪ್ರಾನ್ ಖರೀದಿಯ ಅವ್ಯವಹಾರದಲ್ಲಿ ಅಧಿಕಾರಿಗಳು ಶಾಮೀಲಾಗಿರುವ ಬಗ್ಗೆ ಕೇಳಿದೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಉಪ ಬಂಧೀಖಾನೆಯ ಅಧೀಕ್ಷಕರಾದ ಗುರುರಾಜ ಎನ್ನುವವರು ಸರ್ಕಾರಿ ನೌಕರರಾಗಿ ಚಂದ್ರಕಲಾ ಸೇಲ್ಸ್ ಎನ್ನುವ ಏಜೆನ್ಸಿಯ ಕೆಳಗೆ 150 ರೂ.ಗಳಿಗೆ ಸಿಗುವ ನಕಲಿ ಫೈರ್ ಪ್ರೂಫ್ ಏಪ್ರಾನ್‌ನ್ನು 999ರೂ.ಗಳಿಗೆ ಮಾರಿದ್ದಾರೆ. ಈ ಬಗ್ಗೆ ಅಧಿಕಾರಿಗಳ ಮೊಬೈಲ್ ನಂಬರ್ ಸಹ ಆ ಬಿಲ್‌ನಲ್ಲಿ ಇದೆ. ಹಿಂದೆ ಕೇಳಿದ ಪ್ರಶ್ನೆಗೆ ಇನ್ನು ತನಿಖೆಯಲ್ಲಿ ಇದೆ ಎಂದು ಹೇಳಿದ್ದಾರೆ. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರವಾರ ಇವರನ್ನು ಒಳಗೊಂಡಂತೆ ಜಂಟಿ ತನಿಖಾ ತಂಡವನ್ನು ದಿನಾಂಕ:8-4-2015ರಂದು ರಚಿಸಿದ್ದು, ತನಿಖಾ ತಂಡದ ವರದಿ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಇನ್ನೊಂದು ಕಡೆ ತನಿಖಾ ತಂಡವು ಕಾರಾಗೃಹ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಅವ್ಯವಹಾರ ಮಾಡಿದ್ದಾರೆ ಅಥವಾ ಇಲ್ಲ ಎಂಬ ಕುರಿತಾಗಿ ತನಿಖೆ ಮಾಡುವುದು ಆ ಸಮಿತಿಯ ವ್ಯಾಪ್ತಿಯ ಪರಿಮಿತಿ ಮೀರಿದ್ದಾಗಿದೆ ಎಂದು ಹೇಳುತ್ತಾರೆ. ಜಿಲ್ಲಾಪಂಚಾಯಿತಿ ಸಿಇಓ ಮತ್ತು ಬೇರೆ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಯೋಗ್ಯವಾದ ತನಿಖೆಯನ್ನು ಯಾವಾಗ ಮಾಡುತ್ತೀರಿ ಎನ್ನುವ ನಿಖರವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಗಳೆ, ಜಿಲ್ಲಾ ಪಂಚಾಯಿತಿಯಲ್ಲಿ ಈ ವಿಷಯವಾಗಿ ಚರ್ಚೆ ನಡೆದು, ಜಿಲ್ಲಾ ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಣವನ್ನು ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ತಮಗೆ ತಿಳಿದ ಹಾಗೆ ಶಿರಸಿ ಮತ್ತು ಕಾರವಾರಗಳಲ್ಲಿ ಸುಮಾರು 2 educational districts ಗಳು ಇವೆ. ಆ ಎರಡು education districts ಗಳಿಗೆ Apronಗೆ ಎಂದು ಹಣವನ್ನು ಏನು ಒದಗಿಸುತ್ತೇವೆ ಅದನ್ನು ಅಕ್ಷರ ದಾಸೋಹ ಅಧಿಕಾರಿಗಳ ಮೂಲಕ ಆ ಶಾಲೆಗೆ ಆ

ಹಣವನ್ನು ಕೊಡಲಾಗುತ್ತದೆ. ಇದು ತಾಲ್ಲೂಕು ಹಂತದಲ್ಲಿ ನಡೆಯುವುದಿಲ್ಲ, ಶಾಲಾ ಹಂತದಲ್ಲಿಯೇ ಖರೀದಿ ಮಾಡಲು ಕೊಡಲಾಗುತ್ತದೆ. 4533ಜನ ಅಡಿಗೆ ಸಿಬ್ಬಂದಿಗಳು ಇದ್ದಾರೆ. ಈ ಸಿಬ್ಬಂದಿಗಳಿಗೆ ಶಾಲಾ ಹಂತದಲ್ಲಿಯೇ ಖರೀದಿ ಮಾಡಿ ಕೊಡಲಾಗಿದೆ ಎಂದು ನಮಗೆ ಕೊಟ್ಟಿರುವ ವರದಿಯಲ್ಲಿ ಇದೆ. ಶಾಲಾ ಹಂತದಲ್ಲಿ ಮುಖ್ಯೋಪಾಧ್ಯಾಯರು ಮತ್ತು ಅಕ್ಷರ ದಾಸೋಹ ಅಧಿಕಾರಿಗಳ ಜಂಟಿ ಖಾತೆಯಲ್ಲಿ ಈ ಹಣ ಇರುತ್ತದೆ. ಶಾಲಾ ಹಂತದಲ್ಲಿಯೇ ಖರೀದಿ ಮಾಡಲಾಗಿದೆ. ಸುಮಾರು 50 ರಿಂದ 86 ಸಂಸ್ಥೆಗಳಿಂದ ಶಾಲಾ ಹಂತದಲ್ಲಿ ಖರೀದಿ ಮಾಡಿದ್ದಾರೆ. ತನಿಖಾ ವರದಿಯಲ್ಲಿ ಸುಮಾರು ಒಂದು ಜಾಸ್ತಿ ಜಾಸ್ತಿ ಮಾಡಿದೆ, ಉಳಿದ 50 ರಿಂದ 86 ಸಂಸ್ಥೆಗಳು ಶಾಲಾ ಹಂತದಲ್ಲಿಯೇ ಖರೀದಿ ಮಾಡಿವೆ. 250 ರಿಂದ ಸುಮಾರು 950 ರೂ.ಗಳವರೆಗೆ ಕ್ವಾಲಿಟಿ ಆಧಾರದ ಮೇಲೆ ಪ್ರತಿ ಶಾಲೆಯವರು ಪ್ರತ್ಯೇಕವಾಗಿ ಖರೀದಿ ಮಾಡಿದ್ದಾರೆ ಎನ್ನುವ ವರದಿಯನ್ನು ಕೊಟ್ಟಿದ್ದಾರೆ. ನಾವು ತನಿಖೆ ಮಾಡಲು ಹೇಳಿದಾಗ, ತನಿಖೆ ಮಾಡಿ ಅವರು ನಮಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗ ನಾನು ಯೋಚನೆ ಮಾಡುತ್ತಿರುವುದು ನಮ್ಮ ಇಲಾಖೆಯಿಂದಲೇ ಪ್ರತ್ಯೇಕವಾದ ತನಿಖೆಯನ್ನು ಮಾಡಿಸಿ ಅದರಲ್ಲಿ ಅಲ್ಲಿ ಕ್ವಾಲಿಟಿ ಪ್ರಕಾರ ಕೊಟ್ಟಿದಾರೆಯೇ ನೋಡಬೇಕು. ಏಕೆಂದರೆ ಕೆಲವಕ್ಕೆ 500 ರೂ.ಗಳನ್ನು ಹಾಕಿದ್ದಾರೆ, ಕೆಲವಕ್ಕೆ 800 ರೂ.ಗಳನ್ನು ಹಾಕಿದ್ದಾರೆ, ಕೆಲವು 900 ರೂ.ಗಳ ಏಪ್ರಾನ್ ಇವೆ. ಇವು ಅಡಿಗೆಯವರಿಗೆ ಕೊಟ್ಟಿರುವಂತಹ ಏಪ್ರಾನ್‌ಗಳು. ಕಡಿಮೆ ಬೆಲೆಯ ಏಪ್ರಾನ್‌ಗಳನ್ನು ಜಾಸ್ತಿ ಹಣ ಕೊಟ್ಟು ಕೊಂಡುಕೊಂಡಿದ್ದಾರೆ ಎನ್ನುವ ಆಪಾದನೆ ಇದೆ. ಇದು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಬಂದಿದೆ. ಅದನ್ನು ತನಿಖೆಗೆ ಒಳಪಡಿಸಿರುವುದು ಅಲ್ಲಿಯ Chief Executive Officer. ಜಿಲ್ಲಾ ಪಂಚಾಯಿತಿಯ CEO ಅವರು ಕಾರವಾರ ಮತ್ತು ಶಿರಸಿಯ ಡಿಡಿಪಿಐ ಗಳಿಗೆ ಜವಾಬ್ದಾರಿ ಕೊಟ್ಟು ತನಿಖೆ ಮಾಡಿ ವರದಿ ಕೊಡಿ ಎಂದು ಹೇಳಿದ್ದಾರೆ. ಅವರು ಈ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಪ್ರಶ್ನೆಯನ್ನು ನೋಡಿದ ಮೇಲೆ ನಾನು ಯೋಚನೆ ಮಾಡುತ್ತಿರುವುದು ಪ್ರತ್ಯೇಕವಾಗಿ ನಮ್ಮ ಇಲಾಖೆ ವತಿಯಿಂದ ತನಿಖೆ ನಡೆಸಿ ಅದರಲ್ಲಿ ಏನಾದರು ಅವ್ಯವಹಾರ ನಡೆದಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಗಳೆ, ಗುರುರಾಜ ಎನ್ನುವವರ ಹೆಸರು ಕೂಡಾ ಬಂದಿದೆ. ಇನ್ನು ಎಷ್ಟು ದಿನಗಳಲ್ಲಿ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಿಗದಿತವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಘಟನೆ ನಡೆದು ಈಗಾಗಲೆ ಒಂದು ವರ್ಷವಾಗಿದೆ. ಇನ್ನು ಎಷ್ಟು ಸಮಯ ಬೇಕು ಎನ್ನುವುದನ್ನು ತಿಳಿಸಬೇಕು.

**ಶ್ರೀ ಕಿಮ್ಮನೆ ರತ್ನಾಕರ:-** ತನಿಖೆ ಮಾಡಿರುವುದು ಜಿಲ್ಲಾ ಪಂಚಾಯಿತಿಯವರು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಇದರಲ್ಲಿ ಜಿಲ್ಲಾ ಪಂಚಾಯಿತಿಯವರು ಶಾಮೀಲಾಗಿದ್ದಾರೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಗಳೆ, ಈಗ ಆಗಿರುವುದು ಜಿಲ್ಲಾಪಂಚಾಯಿತಿಯ ತೀರ್ಮಾನದಂತೆ ನಡೆದಿರುವ ತನಿಖೆ. ಆ ಮಟ್ಟದಲ್ಲಿ ಆಗಿರುವ ತನಿಖೆ ಬಗ್ಗೆ ನಮಗೆ ಸಮಾಧಾನವಿಲ್ಲ. ಜಿಲ್ಲಾ ಪಂಚಾಯಿತಿಯ ಸಿಇಓ ರವರ ಮೇಲೆಯೇ ಅವರು ಆಪಾದನೆ ಮಾಡಿದ್ದಾರೆ.

(ಮುಂದು)

**ಶ್ರೀ ಕಿಮ್ಮನೆ ರತ್ನಾಕರ್:–** ಇವತ್ತೇ ನಾನು ಆದೇಶ ಮಾಡುತ್ತೇನೆ. ಉನ್ನತ ಅಧಿಕಾರಿಗಳ ಮೂಲಕ ತನಿಖೆ ನಡೆಸಿ ತಕ್ಷಣ ಮಾಹಿತಿ ಕೊಡುವಂತೆ ಮಾಡುತ್ತೇನೆ. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 292

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದು, ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದ ನಂತರ ಗ್ರಾಮ ಪಂಚಾಯಿತಿಗಳಿಗೆ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅಧಿಕಾರ ಕೊಟ್ಟಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿದ್ದೆನು. 2ನೆಯದಾಗಿ ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ ಲೆಕ್ಕಶೀರ್ಷಿಕೆಯಡಿ ಅನುಷ್ಠಾನಗೊಳಿಸಲಾಗುವುದು; ಇದರ ವಿವರ ನೀಡುವುದು ಎಂಬ ಪ್ರಶ್ನೆಯನ್ನು ಕೇಳಿದ್ದೆನು. ಅವರು ಲೆಕ್ಕ ಶೀರ್ಷಿಕೆಯಲ್ಲಿ ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕ ಪಂಚಾಯತ್ ರಾಜ್ 2ನೇ ತಿದ್ದುಪಡಿ ಪ್ರಕಾರ ಗ್ರಾಮ ಪಂಚಾಯಿತಿಗಳ ಅವಧಿ 5 ವರ್ಷ ಎಂದು ಕೊಟ್ಟಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಮತ್ತು ವಾಟರ್ ಮನ್, ಜವಾನರು ಹಾಗೂ ಸ್ವಚ್ಛತೆ ಮಾಡಲು ಕೆಲಸಗಾರರು ಇರುತ್ತಾರೆ. ಕುಡಿಯುವುಕ್ಕೆ ನೀರಿನ ಅಭಾವ ಹೆಚ್ಚಿರುತ್ತದೆ. ಕೊಳವೆ ಬಾವಿಗಳನ್ನು ಕೊರೆಸಿದರೂ ನೀರು ಇರುವುದಿಲ್ಲ. ಬೇರೆ ಬೇರೆ ಕಡೆಯಿಂದ ಪೈಪ್‌ಲೈನ್ ಮಾಡಬೇಕಾಗುತ್ತದೆ. ನೀರು ಇರುವ ಕಡೆಯಿಂದ ನೀರು ತರಲು ಹೆಚ್ಚಿನ ಹಣ ಕೂಡ ಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಗ್ರಾಮದ ಸವಿಯನ್ನು ಉಂಡವರು. ಗ್ರಾಮದಲ್ಲಿ ಯಾವ್ಯಾವ ರೀತಿ ಅಭಿವೃದ್ಧಿ ಹೊಂದಬೇಕೆಂದು ಮಾನ್ಯ ಸಚಿವರಿಗೆ ತಿಳಿದಿರುವ ವಿಷಯ. ನಮ್ಮ ಮಹಾತ್ಮ ಗಾಂಧಿಯವರ ಕನಸು ಕೂಡ ಗ್ರಾಮದ ಅಭಿವೃದ್ಧಿ ಹೊಂದುವುದಾಗಿದ್ದು, ಮಾನ್ಯ ಸಚಿವರ ಕನಸು ಕೂಡ ಗ್ರಾಮದ ಕಡೆ ಮುಖ ಮಾಡಿದೆ. ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನ ಕೊಟ್ಟರೆ ಹೆಚ್ಚಿನ ರೀತಿ ಅಭಿವೃದ್ಧಿಯಾಗುತ್ತದೆ ಎಂದು ಮನವಿ ಮಾಡುತ್ತೇನೆ. ಈಗ ಕೊಡುವ ಅನುದಾನ ನಿಜವಾಗಲೂ ಸಾಕಾಗುವುದಿಲ್ಲ.

**ಉಪ ಸಭಾಪತಿಯವರು:-** ನಿಮಗೆ ಏನು ಬೇಕು ಎಂದು ಉಪ ಪ್ರಶ್ನೆ ಕೇಳಿ, ಇಂತಹದ್ದು ಆಗಬೇಕೆಂದು ಕೇಳಿ.

**ಶ್ರೀಮತಿ ಜಯಮ್ಮ:-** ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಿಂದೆ ವಿದ್ಯುತ್ ಅಭಾವದ ಬಗ್ಗೆ

ಮಾತನಾಡಿದ್ದೇನೆ, ಅಲ್ಲಿ ಸ್ವಿಚ್ ಆನ್ ಆಗಿದ್ದು ಆಫ್ ಮಾಡುವುದೇ ಇಲ್ಲ. ಅದಕ್ಕೆ ಸ್ವಿಚ್ ಆನ್ ಅಂಡ್ ಆಫ್ ಮಾಡಲು ಅವಕಾಶ ಕಲ್ಪಿಸಬೇಕೆಂದು ಕೇಳಿದ್ದೆನು. ಅದನ್ನು ಮಾಡಿಕೊಟ್ಟರೆ ಕರೆಂಟ್ ಉಳಿತಾಯವಾಗುತ್ತದೆ ಮತ್ತು ಜನರಿಗೆ ಉಪಕಾರವಾಗುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಳ್ಳುತ್ತೇನೆ. ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಬಂದಮೇಲೆ ಪಂಚಾಯತಿ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಹೆಚ್ಚುಗೊಳಿಸಿದ್ದೇವೆ. ಪಂಚಾಯತಿ ಸದಸ್ಯರ ಜವಾಬ್ದಾರಿಗಳನ್ನು ಹೆಚ್ಚು ಮಾಡಿರುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ಎಂದು ಭಾವಿಸಿಕೊಳ್ಳುತ್ತೇನೆ. ಕರ್ನಾಟಕ ಗ್ರಾಮ ಸ್ವರಾಜ್ಯ ಕಾನೂನಿನ ಮುಖಾಂತರ ನಮ್ಮ ಪೀಠಿಕೆ ಆಗಲೀ, ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಗಲೀ, ಎಲ್ಲವುಗಳ ಮೂಲಕ ಹರಿದು ಬರುವ ಹಕ್ಕು ಮತ್ತು ಜವಾಬ್ದಾರಿಗಳನ್ನು ತಿಳಿಸುವ ಪ್ರಯತ್ನವನ್ನು ಹೆಚ್ಚೆಚ್ಚು ಮಾಡುತ್ತೇವೆ. ಆ ಷೆಡ್ಯೂಲ್‌ನಲ್ಲಿ ಇರುವ ಜವಾಬ್ದಾರಿಗಳೇನು, ಕಾನೂನಿನಲ್ಲಿ ಇರುವ ಜವಾಬ್ದಾರಿಗಳೇನು ಹಾಗೂ ಯಾವ್ಯಾವ ಲೆಕ್ಕ ಶೀರ್ಷಿಕೆಯಡಿ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವ ವಿವರಗಳನ್ನು ಸಹ ಮತ್ತೆ ಕ್ರೋಢೀಕರಣ ಮಾಡಿ ನಮ್ಮ ಪ್ರಧಾನ ಕಾರ್ಯದರ್ಶಿಗಳು ಮಾನ್ಯ ಸದಸ್ಯರಿಗೆ ಕಳುಹಿಸುವಂತೆ ಸೂಚನೆ ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ: 440

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ಆರ್. ಧರ್ಮಸೇನಾ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದು, ಮೈಸೂರು ಮತ್ತು ಚಾಮರಾಜನಗರದಲ್ಲಿ ಮನೆಗಳನ್ನು ಕಟ್ಟುವುದರಲ್ಲಿ ವಸತಿ ಇಲಾಖೆ ಹಿಂದೆ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಳಿದಂತಹ ತಾಲ್ಲೂಕುಗಳಲ್ಲಿ ಮನೆಗಳನ್ನು ಕಟ್ಟಿ, ನಿವೇಶನಗಳನ್ನು ಹಂಚುವ ಕೆಲಸ ಮಾಡಿದರೆ ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ. ಅದರಂತೆ ಬಹಳಷ್ಟು ಜನರಿಗೆ ಮರಳಿನ ಸಮಸ್ಯೆ ಇದೆ. ಅಲ್ಲದೇ ಎಮ್-ಸ್ಯಾಂಡ್ ಬಗ್ಗೆ ಸಾಮಾನ್ಯ ಜನರಿಗೆ ಅರಿವಿಲ್ಲ. ಹಾಗಾಗಿ ಮಾನ್ಯ ವಸತಿ ಸಚಿವರು ಮೈಸೂರಿನಲ್ಲಿ 50 ಮನೆಗಳನ್ನು ಕಟ್ಟುವ ಬಗ್ಗೆ ತಿಳಿಸಿದ್ದು, ಚಾಮರಾಜನಗರಲ್ಲಿ ಒಂದು ಮನೆಯನ್ನು ಕಟ್ಟುವ ಬಗ್ಗೆ ಮಾಹಿತಿ ಇಲ್ಲ. ಹಾಗಾಗಿ ಉಳಿದ ತಾಲ್ಲೂಕುಗಳಲ್ಲಿ ಮನೆಗಳನ್ನು ಕಟ್ಟಿದರೆ ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಂ.ಹೆಚ್. ಅಂಬರೀಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮೈಸೂರು ಮತ್ತು ಚಾಮರಾಜನಗರದ ಬಗ್ಗೆ ಇರುವ ಕಾಳಜಿಗೆ ನಾನು ಅಭಿನಂದಿಸುತ್ತೇನೆ. ನಮಗೂ ಕೂಡ ಅಭಿಮಾನ ಇದೆ. ಜೊತೆಗೆ ಬಡವರ ಬಗ್ಗೆ ಅನೇಕ ಕೆಲಸ ಮಾಡಿ ಒಳ್ಳೆಯ ಹೆಸರು ತೆಗೆದುಕೊಳ್ಳಬೇಕೆಂದು ನನಗೂ ಆಸೆ ಇದೆ. ಅಲ್ಲಿ ನಿವೇಶನಗಳು ಕಷ್ಟ ಇದೆ, ಲ್ಯಾಂಡ್ ಅಕ್ವಿಸಿಷನ್ ಕಷ್ಟ ಇದೆ. ನೀರಿನ ಸಮಸ್ಯೆ ಎಲ್ಲಾ ಕಡೆ ಇರುವುದರಿಂದ ಟೌನ್ ಮುನಿಸಿಪಾಲಿಟಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಮಾತನಾಡಿ ಆದಷ್ಟು ಬೇಗ ಮಾಡುತ್ತೇನೆ. ಅಲ್ಲಿ ಎರಡು ಹಂತಗಳಲ್ಲಿ ಮಾಡುತ್ತಿದ್ದು, ಒಂದು ಹಂತದ್ದೇ ಖರ್ಚಾಗಿಲ್ಲ. ಆದರೂ ಎರಡನೆ ಹಂತವನ್ನು ತೆಗೆದುಕೊಳ್ಳುತ್ತೇವೆ. 1ನೇ ಹಂತದ ಮೀಸಲಾತಿ ಬಗ್ಗೆ ಕೇಳಿದ್ದು, ಅದನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ನಮ್ಮ ಇಲಾಖೆಯಲ್ಲಿ ಎಸ್.ಸಿ ಮತ್ತು ಎಸ್.ಟಿಯವರಿಗೆ ಹೆಚ್ಚು ಶೇಕಡಾವಾರು ಕೊಟ್ಟಿದ್ದೇನೆ. ಎಲ್ಲಾ ಕಡೆ 18 ಪರ್ಸೆಂಟ್ ಇದ್ದರೆ ನಾವು 22, 24 ಪರ್ಸೆಂಟ್ ಕೊಟ್ಟಿದ್ದೇವೆ. ಈ ರೀತಿ ಬಡವರಿಗಾಗಿ ಕೆಲಸ ಮಾಡಬೇಕೆಂದು ಇದೆ. ಮೈಸೂರಿನಲ್ಲಿ ಕೆಂಚಲಗೂಡು, ಚಾಮರಾಜನಗರದ ಪಂಜನಹಳ್ಳಿಯಲ್ಲಿ ಕ್ರಮವಾಗಿ 180 ಎಕರೆ ಮತ್ತು 71 ಎಕರೆಯಲ್ಲಿ ಮಾಡುತ್ತಿದ್ದೇವೆ. ಅಲ್ಲಿ 13 ನಿವೇಶನಗಳ ಹಂಚಿಕೆ ಮಾಡಿದ್ದು ಬಂದಿರುವ ಅರ್ಜಿಗಳು 13 ಆಗಿವೆ.

100 ಪರ್ಸೆಂಟ್ ಪೂರ್ಣಗೊಳಿಸಿದ್ದೇವೆ. ಈ ರೀತಿ ಇರುವಾಗ ಬೇಡಿಕೆ ಪೂರ್ಣಗೊಳಿಸುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ: 304

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ರೊಬೋಮೇಟ್ ಮತ್ತು ಆ್ಯಪ್ ಅಳವಡಿಸುವ ವಿಚಾರ ಸರ್ಕಾರದ ಮುಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದಾರೆ. ಮುಂದೆ ಕೇಳಿರುವ ಪ್ರಶ್ನೆಗಳಿಗೆ ಉದ್ಭವಿಸುವುದಿಲ್ಲ ಎಂದು ಉತ್ತರಗಳನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು. ಮಂಗಳೂರಿಗೆ ಹೋಗಿರುವ ಸಂದರ್ಭದಲ್ಲಿ ಎಂ.ಟಿ. ಎಜ್ಯುಕೇರ್ ಚಾರಿಟಬಲ್ ಟ್ರಸ್ಟ್‌ನಿಂದ ಮಕ್ಕಳಿಗಾಗಿ ವಿಡಿಯೋ ಪಾಠದ ಆ್ಯಪ್ ಅನ್ನು ಅವರೇ ಉದ್ಘಾಟನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಮಾತನಾಡಿರುವ ಬಗ್ಗೆ 'ಭೋದಕರಿಗೆ ಜ್ಞಾನದ ಕೊರತೆ ' 'ಕಿಮ್ಮನೆ ಖೇದ' ಎಂಬ ಉಲ್ಲೇಖ ಪ್ರಕಟವಾಗಿದೆ. ಆ ಹಿನ್ನೆಲೆಯನ್ನು ಗಮನಿಸಿದಾಗ ವಿಶೇಷವಾದ ಆ್ಯಪ್ ಅನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಅಳವಡಿಸುವಾಗ ಸರ್ಕಾರಿ ಶಾಲೆಗಳನ್ನು ಆ್ಯಪ್ ಅಳವಡಿಸಲು ಸರ್ಕಾರ ಏಕೆ ಮುಂದಾಗುತ್ತಿಲ್ಲ? ಇದರಿಂದ ಬಡ ಮಕ್ಕಳಿಗೂ, ಹಳ್ಳಿಗಳಲ್ಲಿರುವ ಸಿಬಿಎಸ್‌ಸಿ ಶಾಲೆಗಳಲ್ಲಿ ಎಲ್ಲಾ ಸೌಲಭ್ಯಗಳು ಸಿಗುತ್ತಿವೆ.

(ಮುಂದು)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಆದರೆ, ಸರ್ಕಾರಿ ಶಾಲೆಗಳಲ್ಲಿ ಇಂತಹ ಒಂದು ಬದಲಾವಣೆ ತರುವ ವಿಚಾರ ಸರ್ಕಾರದ ಮುಂದಿಲ್ಲವೇ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. 'ನಾನು ಕೇಳಿದ ಪ್ರಶ್ನೆಗಳಿಗೆ ಶಿಕ್ಷಕರಿಗೆ ಸರಿಯಾಗಿ ಉತ್ತರ ಕೊಡುವುದಕ್ಕೆ ಬರಲಿಲ್ಲ, ಬೋಧಕರಿಗೆ ಜ್ಞಾನದ ಕೊರತೆ ಇದೆ' ಎಂದು ಮಾನ್ಯ ಶಿಕ್ಷಣ ಸಚಿವರು ಹೇಳಿರುವುದು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಹೊಸ ಅವಿಷ್ಕಾರಗಳನ್ನು ತರುವುದಕ್ಕೆ ಸರ್ಕಾರ ಯಾಕೆ ಮುಂದಾಗುತ್ತಿಲ್ಲ ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕಿಮ್ಮನೆ ರತ್ನಾಕರ:-** ಸನ್ಮಾನ್ಯ ಸಭಾಪತಿಯವರೇ, ವಾಸ್ತವದಲ್ಲಿ ಖಾಸಗಿ ಕಂಪನಿಯವರು ರೋಬೋ ಮ್ಯಾಟರ್ ಅನ್ನು ತಯಾರು ಮಾಡಿ ಅದನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡುತ್ತಿದ್ದಾರೆ. ಅದನ್ನು ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪಾಠವನ್ನು ಕೇಳಿ ತಿಳಿದುಕೊಳ್ಳಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರಿ ಶಾಲೆಗಳಲ್ಲಿ ಹೊಸ ಅವಿಷ್ಕಾರವನ್ನು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಸರ್ಕಾರ ನಿಜಕ್ಕೂ ಆ ನಿಟ್ಟಿನಲ್ಲಿ ಬಹಳ ಉತ್ಸುಕವಾಗಿದೆ. ಆದರೆ, ಅದಕ್ಕೆ ತಗಲುವ ವೆಚ್ಚವನ್ನು ಸಹ ನೋಡಬೇಕಾಗುತ್ತದೆ. ಇದರ ಬಗ್ಗೆ ನಾನು ಅಧ್ಯಯನ ಮಾಡಿದ್ದೇನೆ ಮತ್ತು ಮಾಹಿತಿಯನ್ನು ಸಹ ಪಡೆದುಕೊಂಡಿದ್ದೇನೆ. ತುಂಬ ಜನ ಖಾಸಗಿಯವರು ಬಂದು ನಾವು ಈ ರೀತಿ ಮಾಡುತ್ತೇವೆಂದು ಹೇಳಿದ್ದಾರೆ ಅದರ ಸಾಧಕಬಾಧಕಗಳನ್ನು ತಿಳಿದುಕೊಳ್ಳುವ ಸಲುವಾಗಿ ನಾನು ಅವರನ್ನು ನಮ್ಮ ಇಲಾಖೆಗೆ ಕಳುಹಿಸಿಕೊಟ್ಟಿದ್ದೇನೆ. ಸರ್ಕಾರ ಖಾಸಗಿಯವರು ಮಾಡಿದಂತೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಖಾಸಗಿಯವರು ಮಾಡಿರುವುದನ್ನು ನಾನು ನೋಡಿದ್ದೇನೆ ಅದು ತುಂಬಾ ಉಪಯುಕ್ತವಾಗಿದೆ. ಬೆಳಿಗ್ಗೆ ಶಾಲೆಯಲ್ಲಿ ಪಾಠ ಮಾಡಿರುತ್ತಾರೆ. ಸಂಜೆ ಮಕ್ಕಳು

ಮನೆಗೆ ಹೋದ ಮೇಲೆ ಪುಸ್ತಕದ ಸಹಾಯವಿಲ್ಲದೆ ಇಂಟರ್‌ನೆಟ್‌ನ್ನು ಆನ್ ಮಾಡಿದರೆ, ರೆಕಾರ್ಡ್ ಮಾಡಿಕೊಂಡಿರುವುದನ್ನು ನಮ್ಮ ಮುಂದೆ ಬರುತ್ತದೆ ಮತ್ತು ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹೇಳುತ್ತದೆ. ಏನಾದರೂ ಗೊಂದಲಗಳು ಅಥವಾ ಸಮಸ್ಯೆಗಳು ಇದ್ದರೆ ಅವುಗಳನ್ನು ಬಗೆಹರಿಸುತ್ತದೆ. ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಇಡೀ ಪಠ್ಯಕ್ರಮವೇ ಅದರಲ್ಲಿದೆ. It is very beautiful App. ಅದು ಬಹಳ ಉಪಯುಕ್ತವಾಗಿದೆ. ಇದನ್ನು ತೆಗೆದುಕೊಂಡರೆ ಸರ್ಕಾರಕ್ಕೆ ಎಷ್ಟು ವೆಚ್ಚ ಬರುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ನಮ್ಮದೇ ಸ್ಟುಡಿಯೋ ಇರುವುದರಿಂದ ಮಾಹಿತಿ ಪಡೆದುಕೊಳ್ಳುವುದಕ್ಕೆ ನಾನು ಅವರನ್ನು ಕಳುಹಿಸಿಕೊಟ್ಟಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಉಲ್ಲೇಖ ಮಾಡಿರುವ ವಿಷಯ ಸತ್ಯವಾದ ವಿಚಾರವಾಗಿದೆ. ಸರ್ಕಾರಿ ಬೋಧಕವರ್ಗದವರನ್ನು ಮಾತ್ರ ಉದ್ದೇಶಿಸಿ ನಾನು ಆ ಮಾತುಗಳನ್ನು ಹೇಳಿಲ್ಲ. ಒಟ್ಟಾರೆ ಬೋಧಕ ವರ್ಗದಲ್ಲಿ ಜ್ಞಾನದ ಮಟ್ಟ ಕಡಿಮೆಯಿದೆ ಎಂದು ನಾನು ಹೇಳಿರುವುದು ಸತ್ಯ. ಆಗಿನ ಘಟನೆಯನ್ನು ಆಧರಿಸಿ ನಾನು ಆ ಮಾತುಗಳನ್ನು ಹೇಳಿದ್ದೆ. ನಾನು ಒಂದು ಶಾಲೆಗೆ ಭೇಟಿ ನೀಡಿದ್ದೆ. ಆ ಶಾಲೆಯ ಶಿಕ್ಷಕಿಯೊಬ್ಬರು ಕನ್ನಡ ಎಂ.ಎ., ಪದವಿಯನ್ನು ಪಡೆದುಕೊಂಡಿದ್ದರು. ಆಕೆಯನ್ನು ಉದ್ದೇಶಿಸಿ 'ಎಷ್ಟು ಜನರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?' ಎನ್ನುವ ಪ್ರಶ್ನೆಯನ್ನು ಕೇಳಿದೆ. ಆಕೆಗೆ ಶಿವರಾಮಕಾರಂತರ ಹೆಸರೇ ಗೊತ್ತಿಲ್ಲ. ಆಕೆ ಆ ಭಾಗದವರಾಗಿದ್ದರೂ ಅವರ ಹೆಸರನ್ನು ಹೇಳಲಿಲ್ಲ. ಈ ಘಟನೆಯ ಹಿನ್ನೆಲೆಯಲ್ಲಿ ನಾನು ಆ ರೀತಿ ಹೇಳಿರುವುದು ನಿಜ. ಈ ಒಂದು ಘಟನೆಯನ್ನು ಇಡೀ ಸಮೂಹಕ್ಕೆ ಅನ್ವಯಿಸುವುದು ಸರಿಯಲ್ಲ. ನಾನು ಯಾವ ಶಾಲೆಗಳಿಗೆ ಭೇಟಿ ನೀಡಿದ್ದೇನೆ ಆ ಶಾಲೆಗಳಲ್ಲಿ ನಾನು ಈ ವಿಚಾರವನ್ನು ಬರೆಸಿದ್ದೇನೆ ಕಾರಣವೇನೆಂದರೆ ಮಕ್ಕಳಲ್ಲಿಯೂ ಸಹ ಸಾಮಾನ್ಯಜ್ಞಾನದ ಬೆಳವಣಿಗೆಯಾಗುವುದು ಅತೀ ಮುಖ್ಯವಾಗಿದೆ.

**ಉಪ ಸಭಾಪತಿಯವರುಃ–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಸರ್ಕಾರಿ ಶಾಲೆಗಳಲ್ಲಿಯೂ ಇದನ್ನು ಅಳವಡಿಸಿಕೊಳ್ಳಲಾಗುತ್ತದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸೀಮಿತವಾಗಿ ಉತ್ತರ ಹೇಳಿದರೆ ಸಾಕು.

**ಶ್ರೀ ಕಿಮ್ಮನೆ ರತ್ನಾಕರಃ–** ಸನ್ಮಾನ್ಯ ಸಭಾಪತಿಯವರೇ, ಆ ರೀತಿಯ ಯಾವುದೇ ಪ್ರಸ್ತಾವನೆ ಇಲ್ಲ. ಆ ನಿಟ್ಟಿನಲ್ಲಿ ಯೋಚನೆ ಮಾಡುತ್ತಿದ್ದೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಶಾಲೆಗಳಲ್ಲಿ smart board ಮತ್ತು smart class ಪರಿಕಲ್ಪನೆ ಬಂದಿದೆ. ಸರ್ಕಾರಿ ಶಾಲೆಗಳಲ್ಲಿ ಅವುಗಳನ್ನು ಅಳವಡಿಸುವ ನಿಟ್ಟಿನಲ್ಲಿ ಸರ್ಕಾರ ಯಾಕೆ ಚಿಂತನೆ ಮಾಡಬಾರದು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕಿಮ್ಮನೆ ರತ್ನಾಕರಃ–** ಸನ್ಮಾನ್ಯ ಸಭಾಪತಿಯವರೇ, ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ ಎನ್ನುವ ಉತ್ತರವನ್ನು ನಾನು ನೀಡಿದ್ದೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, The Government Schools will be closed one day. ಸರ್ಕಾರಿ ಶಾಲೆಗಳಿಗೆ ಬರುತ್ತಿರುವ ಮಕ್ಕಳ ಸಂಖ್ಯೆಯನ್ನು ಗಮನಿಸಿದರೆ, The days are not far off that our Government schools will be closed.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:373**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿ.ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ವಿತರಿಸುವ ಮೂಲಕ ನೇಕಾರರ ಬವಣೆಯನ್ನು ನೀಗಿಸಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇತ್ತು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 25ನೇ ತಾರೀಖಿಗೆ ಒಂದು ಸಭೆ ಮಾಡಿ ಮಕ್ಕಳ ಸಮವಸ್ತ್ರ ಪೂರೈಕೆಗಾಗಿ ಕೆ.ಎಸ್.ಟಿ.ಐ.ಡಿ.ಸಿ.ಯ ಮೂಲಕ ಬಟ್ಟೆಗಳನ್ನು ಖರೀದಿ ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಹಿಂದೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿಯೂ ಈ ರೀತಿಯ ಸಮಸ್ಯೆ ಬಂದಾಗ ಅವರು ಸಹ ದಿನಾಂಕ:03.12.2012ರಲ್ಲಿ ಇದೇ ರೀತಿಯ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, 'ನೇಕಾರರಿಗೆ ಆದ್ಯತೆಯನ್ನು ನೀಡುವ ಅವಶ್ಯಕತೆ ಇದೆ. ಅವರ ಜೀವನಮಟ್ಟ ತುಂಬಾ ಕಡಿಮೆಯಿದೆ. ಅವರುಗಳು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಅದಕ್ಕಾಗಿ ವಿದ್ಯುತ್‌ಚಾಲಿತ ಮಗ್ಗಗಳಿರಬಹುದು ಅಥವಾ ಕೈಮಗ್ಗಗಳಿರಬಹುದು ಅವುಗಳಿಗೆ ಆದ್ಯತೆಯನ್ನು ನೀಡಬೇಕುಎ ಎಂದು ಮಾನ್ಯ ಮುಖ್ಯಮಂತ್ರಿಗಳು ಆದೇಶವನ್ನು ನೀಡುತ್ತಾರೆ. ಅ ಆದೇಶದಲ್ಲಿ 'ದಿನಾಂಕ:10.06.2015ರೊಳಗೆ ಸಂಬಂಧಪಟ್ಟ ಇಲಾಖೆಯ ಜೊತೆಗೆ 5 ವರ್ಷಗಳಿಗೆ ಸೀಮಿತವಾಗಿ ಎಂ.ಓ.ಯು ಮಾಡಿಕೊಳ್ಳಿ' ಎಂದು ಹೇಳಿರುತ್ತಾರೆ. ನಂತರ, ಅಪರ ಮುಖ್ಯಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕೆಯವರು ದಿನಾಂಕ:09.12.2015ರಂದು ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರಿಗೊಂದು ಪತ್ರವನ್ನು ಬರೆಯುತ್ತಾರೆ. ಮಾನ್ಯ ಶಿಕ್ಷಣ ಸಚಿವರು ಇಲಾಖೆಯನ್ನು ಒಂದು ವ್ಯವಸ್ಥಿತ ಹಂತಕ್ಕೆ ತೆಗೆದುಕೊಂಡು ಹೋಗುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 'ಎಂ.ಓ.ಯು. ಮಾಡಿಕೊಳ್ಳಿ' ಎಂದು ಆದೇಶ ಮಾಡಿದ್ದರೂ ಆ ಆದೇಶವನ್ನು ಪರಿಗಣಿಸದೇ "ಬಟ್ಟೆ ಸರಬರಾಜು ಮಾಡುವ ಸಾಮರ್ಥ್ಯದ ಖಚಿತತೆ ಇಲ್ಲದಿರುವುದನ್ನು ಗಮನಿಸಿದ್ದು, ಎಂ.ಓ.ಯು. ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ" ಎಂದು ಉತ್ತರವನ್ನು ನೀಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇಂತಹ

ದಿನಾಂಕದೊಳಗೆ ಎಂ.ಓ.ಯು. ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ, ಇಲಾಖೆಯವರು ಈ ರೀತಿ ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಎಂ.ಡಿ.ಯವರು ಮತ್ತು ನಿರ್ದೇಶಕರು ಪತ್ರ ಬರೆದು 'ನಮ್ಮಲ್ಲಿ ಏನಾದರೂ ನ್ಯೂನ್ಯತೆಗಳು ಇದ್ದರೆ ನಮಗೆ ತಿಳಿಸಿ. ನೇಕಾರರ ಬವಣೆ ಹೇಳತೀರದಷ್ಟಾಗಿದೆ. ಅವರ ಬವಣೆಯನ್ನು ಗಮನಿಸಿದರೂ ಸಹ ನೀವು ಯಾಕೆ ಎಂ.ಓ.ಯು. ಮಾಡಿಕೊಳ್ಳುತ್ತಿಲ್ಲ' ಎಂದು ಕೇಳಿದ್ದಾರೆ. ಕಳೆದ 4–5 ವರ್ಷಗಳಿಂದ ಇದೇ ರೀತಿ ಹೇಳಿಕೊಂಡು ಬರುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಆದೇಶದ ಪ್ರಕಾರ ಎಂ.ಓ.ಯು. ಮಾಡಿಕೊಂಡು ನೇಕಾರರ ಬವಣೆಯನ್ನು ನೀಗಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುವ ಚಿಂತನೆ ಸರ್ಕಾರಕ್ಕೆ ಇದೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಜವಳಿ ಇಲಾಖೆಯ ಮಂತ್ರಿಗಳು ಜೊತೆಯಾಗಿ ಕುಳಿತು ಕಳೆದ 4–5 ವರ್ಷಗಳಿಂದ ಉಂಟಾಗಿರುವ ಗೊಂದಲವನ್ನು ನಿವಾರಿಸದಿದ್ದರೆ, ಸಾಲ ತೆಗೆದುಕೊಂಡಿರುವ ನೇಕಾರರು ಬೀದಿಗೆ ಬಿದ್ದಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಆದೇಶವನ್ನು ತಕ್ಷಣವೇ ಪಾಲನೆ ಮಾಡಲಾಗುತ್ತದೆಯೇ ಅಥವಾ ನಾವು ಬೇರೆ ಕಡೆ ಖರೀದಿ ಮಾಡಲಾಗುತ್ತದೆಯೇ ಎನ್ನುವುದರ ಬಗ್ಗೆ ಸ್ಪಷ್ಟತೆಯನ್ನು ಬಯಸುತ್ತಿದ್ದೇನೆ.

**ಶ್ರೀ ಕಿಮ್ಮನೆ ರತ್ನಾಕರಃ–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಕೆಲವು ಪ್ರಮುಖವಾದ ವಿಷಯಗಳ ಬಗ್ಗೆಪ್ರಸ್ತಾಪ ಮಾಡಿದ್ದಾರೆ. ನೇಕಾರರಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಇದು ನೇಕಾರರ ಸಂಘಟನೆಗಳಿಗೆ ನೇರವಾಗಿ ತಲುಪಬೇಕೆನ್ನುವುದು ಸರ್ಕಾರದ ಇಚ್ಛೆಯೂ ಆಗಿದೆ. ಗೌರವಾನ್ವಿತ ಮುಖ್ಯಮಂತ್ರಿಗಳ ಆದೇಶವನ್ನು ನಾವು ಖಂಡಿತವಾಗಿಯೂ ಪಾಲನೆ ಮಾಡಬೇಕಾಗಿದೆ. ಅವರ ಆದೇಶವನ್ನು ಪಾಲನೆ ಮಾಡದಿದ್ದರೆ ನಾನು ಮಂತ್ರಿಯಾಗಿರುವುದಕ್ಕೆ ಸಾಧ್ಯವಾಗುವುದಿಲ್ಲ. ಖಂಡಿತವಾಗಿಯೂ ನಾವು ಅವರ ಆದೇಶವನ್ನು ಪಾಲನೆ ಮಾಡುತ್ತೇವೆ. ಅವರ ಜೊತೆಗೆ ಪುನಃ ಚರ್ಚೆ ಮಾಡಲಾಗುತ್ತದೆ. ವಾಸ್ತವವಾಗಿ ಏನು ನಡೆದಿದ್ದೆಯೆಂದರೆ, ಹಿಂದೆ ಆಕ್ಟೋಬರ್, ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ಸಮವಸ್ತ್ರ ತಯಾರು ಮಾಡುವುದಕ್ಕೆ ಆರ್ಡರ್ ಕೊಡುತ್ತಿದ್ದರು. ಆದರೆ, ಈಗ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಿನಲ್ಲೇ ನೇಕಾರರ ಸಂಘಕ್ಕೆ ಆರ್ಡರ್ ಕೊಡುತ್ತಿದ್ದೇವೆ. ಸುಮಾರು

400 ನೇಕಾರರ ಸಂಘಗಳಿವೆ. ಅವರಿಗೆ ಮುಂಚಿತವಾಗಿಯೇ 'ನಮಗೆ ಇಷ್ಟು ಪ್ರಮಾಣದಲ್ಲಿ ಸಮವಸ್ತ್ರ ಬೇಕು' ಎನ್ನುವ ಆರ್ಡರ್ ಕೊಡಬೇಕಾಗುತ್ತದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ' We have to go on with the production. ಜೂನ್ ತಿಂಗಳಿನಲ್ಲಿ ನಮಗೆ ಬಟ್ಟೆ ಬೇಕು' ಎಂದು ಆರ್ಡರ್ ಕಳುಹಿಸಿಕೊಟ್ಟರೆ ನಮಗೆ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ 'ನಮಗೆ ಬಟ್ಟೆ ತಯಾರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಟೆಂಡರ್ ಕರೆಯುವುದಕ್ಕೆ ನಮಗೆ ಅವಕಾಶ ಕೊಡಿ' ಎನ್ನುವ ಉತ್ತರ ಬರುತ್ತದೆ. ಈ ಅನುಭವ ನನಗೆ ಒಂದೆರಡು ಬಾರಿ ಆಗಿದೆ. That has been rejected. ಏಕೆಂದರೆ, ಅವರಿಗೆ ಟೆಂಡರ್ ಕರೆಯುವುದಕ್ಕೆ ಅವಕಾಶವನ್ನು ನೀಡುವುದಕ್ಕೆ ಬದಲಾಗಿ ನಾವೇ ಟೆಂಡರ್ ಕರೆಯಬಹುದಾಗಿದೆ. ಸರ್ಕಾರ ನೇಕಾರರ ಪರವಾಗಿ ನಿಲ್ಲುತ್ತದೆ. ಅವರಿಗೆ ಪೂರಕವಾಗಿರುವ ಎಂ.ಓ.ಯು. ಅನ್ನು ನಾವು ಖಂಡಿತ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೂ ಚರ್ಚೆ ಮಾಡುತ್ತೇವೆ.

(ಮುಂದುವರಿದಿದೆ)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇಲಾಖೆಯವರು ಎಷ್ಟು ಸಮವಸ್ತ್ರ ಬೇಕು ಎನ್ನುವ ಆರ್ಡರ್‌ನ್ನು ಮುಂಗಡವಾಗಿಯೇ ಕೊಡಬೇಕಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಆರ್ಡರ್ ಕೊಟ್ಟರೆ ಮುಂದಿನ ವರ್ಷಕ್ಕೆ ಬಟ್ಟೆಗಳು ಉಳಿಯಬಹುದು. ಬಟ್ಟೆಗಳು ಉಳಿದರೂ ಏನಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಆರ್ಡರ್ ಕೊಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಪ್ರತಿವರ್ಷ ಸರ್ಕಾರ ಇದೇ ಉತ್ತರವನ್ನು ಕೊಡುತ್ತಿದೆ.

**ಶ್ರೀ ಕಿಮ್ಮನೆ ರತ್ನಾಕರಃ–** ಸನ್ಮಾನ್ಯ ಸಭಾಪತಿಯವರೇ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿಯೇ 'ಇಷ್ಟು ಬಟ್ಟೆ ಬೇಕು' ಎನ್ನುವುದ ಆರ್ಡರ್ ಕೊಟ್ಟಿರುತ್ತೇವೆ. ಆದರೆ ಅವರು ಮಾರ್ಚ್ ತಿಂಗಳಿನಲ್ಲಿ 'ನಮಗೆ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ' ಎನ್ನುವ ಉತ್ತರವನ್ನು ಕೊಡುತ್ತಾರೆ. ಆ ಪ್ರಮಾಣದಲ್ಲಿ ಬಟ್ಟೆಯನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದಾದರೆ ಸಂಬಂಧಪಟ್ಟ ಅಧಿಕಾರಿಗಳು ಡಿಸೆಂಬರ್ ತಿಂಗಳಿನಲ್ಲಿಯೇ ನಮಗೆ ತಿಳಿಸಬೇಕಾಗುತ್ತದೆ. ಆದರೆ, ಅವರು ತುಂಬಾ ತಡವಾಗಿ ಮಾರ್ಚ್ ತಿಂಗಳಿನಲ್ಲಿ ತಿಳಿಸುತ್ತಾರೆ.

**ಶ್ರೀ ವಿ.ಸೋಮಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಬೇರೆ ಬೇರೆ ಆಸೆಗಳನ್ನು ಇಟ್ಟುಕೊಂಡು ಈ ರೀತಿ ಮಾಡಬಹುದು. ಇದರಿಂದ ನೇಕಾರರಿಗೆ ಅನ್ಯಾಯವಾಗುತ್ತದೆ.

**ಉಪ ಸಭಾಪತಿಯವರುಃ–** ಮಾನ್ಯ ಸೋಮಣ್ಣನವರೇ, ಮಾನ್ಯ ಸಚಿವರು ಅದನ್ನು ಸರಿಪಡಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ.

**ಶ್ರೀ ವಿ.ಸೋಮಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳ ಮೇಲೆ ಮಾನ್ಯ ಸಚಿವರು ಪ್ರಭಾವವನ್ನು ಬೀರದಿದ್ದರೆ, ಅವರು ಸಹ ಹಾರಿಕೆಯ ಉತ್ತರವನ್ನು ನೀಡಬೇಕಾಗುತ್ತದೆ. ಆ ರೀತಿ ಆಗುವುದು ಬೇಡವೆನ್ನುವುದು ನನ್ನ ಸಲಹೆಯಾಗಿದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:15**

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಆಶ್ರಯ ಯೋಜನೆ ಎನ್ನುವುದು ಈಗ 'ವಾಜಪೇಯಿ ವಸತಿ ಯೋಜನೆ' ಎಂದು ಬದಲಾವಣೆಯಾಗಿದೆ. 2001-02ನೇ ಸಾಲಿನಲ್ಲಿ ಸುಮಾರು 2407 ಮನೆಗಳನ್ನು, 2002-03ನೇ ಸಾಲಿನಲ್ಲಿ 58 ಮನೆಗಳನ್ನು ನಿರ್ಮಾಣ ಮಾಡಿರುವುದನ್ನು ಬಿಟ್ಟರೆ, 2003-04 ರಿಂದ 2010-11ನೇ ಸಾಲಿನವರೆಗೆ 'ಶೂನ್ಯ' ಎಂದರೆ ಒಂದೇ ಒಂದು ಮನೆಯನ್ನು ವಿಜಯಪುರ ನಗರದಲ್ಲಿ ನಿರ್ಮಾಣ ಮಾಡಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. 2011-12ರಲ್ಲಿ 54, 2012-13ರಲ್ಲಿ 54, 2013-14ರಲ್ಲಿ 18 ಮತ್ತು 2014-15ರಲ್ಲಿ 36 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಈಗ 2015-16 ಜನವರಿ ತಿಂಗಳವರೆಗೆ 157 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಸುಮಾರು 3 ಲಕ್ಷ ಜನಸಂಖ್ಯೆಯಿರುವ ಮತ್ತು ಕಳೆದ ಒಂದೂವರೆ ವರ್ಷಗಳ ಹಿಂದೆಯಷ್ಟೇ ನಗರಸಭೆಯಾಗಿ ಮೇಲ್ದರ್ಜೆಗೇರಿದ ವಿಜಯಪುರ ನಗರದಲ್ಲಿ ಆಶ್ರಯ ಮನೆಗಳ ನಿರ್ಮಾಣವೇ ಆಗಿಲ್ಲ ಇದಕ್ಕೆ ಭೂಸ್ವಾಧೀನ ಆಗದೇ ಇರುವುದು ಕಾರಣವೋ ಅಥವಾ ವಿಜಯಪುರ ನಗರದಲ್ಲಿ ದಲಿತರು, ಹಿಂದುಳಿದವರು, ಆರ್ಥಿಕವಾಗಿ ಹಿಂದುಳಿದವರು ಮತ್ತು ಬಡವರು ಇಲ್ಲವೇ? ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕಾಗಿದೆ.

**ಡಾ:ಎಂ.ಹೆಚ್.ಅಂಬರೀಷ್:-** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರವನ್ನು ನೀಡಿದ್ದೇನೆ. 2010-11ನೇ ಇಸವಿಯಲ್ಲಿ ವಾಜಪೇಯಿ ವಸತಿ ಯೋಜನೆ ಎಂದು ಆಶ್ರಯ ಯೋಜನೆಯ ಹೆಸರನ್ನು ಬದಲಾಯಿಸಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಎನ್ನುವ ಪ್ರಶ್ನೆ 'ವಿಜಯಪುರ ನಗರದಲ್ಲಿ 54 ಮನೆಗಳನ್ನು ನಿರ್ಮಾಣ ಮಾಡಲಾಗಿದೆ' ಎಂದು ಉತ್ತರವನ್ನು ನೀಡಿದ್ದೇನೆ. ಮಾನ್ಯ ಯತ್ನಾಳ್‌ರವರು ನನಗಿಂತ ಹಿರಿಯ ಸದಸ್ಯರಾಗಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಮನೆ ನೀಡುವಾಗ ಯಾವ ಮಾನದಂಡವನ್ನು ಅನುಸರಿಸಲಾಗುತ್ತದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಮಹಿಳಾ ಅಥವಾ ಪುರುಷ ಅರ್ಜಿದಾರರು ವಸತಿಯನ್ನು ಪಡೆದುಕೊಳ್ಳುವುದಕ್ಕೆ ಅರ್ಹರಾಗಿರುತ್ತಾರೆ. ಅರ್ಜಿದಾರರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ವಾರ್ಷಿಕ ಆದಾಯ 87,600 ಕ್ಕಿಂತ ಕಡಿಮೆ ಇರಬೇಕಾಗುತ್ತದೆ. ಅರ್ಜಿದಾರರು

ವಸತಿ ರಹಿತ ಅಥವಾ ಗುಡಿಸಲು ವಾಸಿಯಾಗಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಮಾನ್ಯ ಸದಸ್ಯರ ಉದ್ದೇಶವೇನೆಂದು ನನಗೆ ಅರ್ಥವಾಗುತ್ತಿದೆ. ಇದರಲ್ಲಿ ಏನಾದರೂ ಅವ್ಯವಹಾರವಾಗಿದೆಯೇ? ಒಂದೇ ಮನೆಯವರಿಗೆ ಎರಡೆರಡು ಮನೆಗಳನ್ನು ಹಂಚಿಕೆ ಮಾಡಲಾಗಿದೆಯೇ, ಲಂಚ ತೆಗೆದುಕೊಂಡು ಕೊಟ್ಟಿದ್ದಾರೆಯೇ ಅಥವಾ ಯಾರದೋ ಪ್ರಭಾವಕ್ಕೆ ಒಳಗಾಗಿ ಮನೆಗಳನ್ನು ಹಂಚಿಕೆ ಮಾಡಿದ್ದಾರೆಯೇ ಎನ್ನುವ ಅನುಮಾನ ಅವರನ್ನು ಕಾಡುತ್ತಿರಬಹುದು. ಒಂದು ವೇಳೆ ಈ ರೀತಿ ಯಾವುದಾದರೊಂದು ಪ್ರಕರಣವನ್ನು ನಮ್ಮ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

**ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್):–** ಸನ್ಮಾನ್ಯ ಸಭಾಪತಿಯವರೇ, ನನ್ನ ಮೂಲ ಪ್ರಶ್ನೆ ಏನೆಂದರೆ, ಈ ಯೋನೆಯಡಿಯಲ್ಲಿ ಮನೆಗಳು ನಿರ್ಮಾಣವೇ ಆಗಿಲ್ಲ. 2001–02ನೇ ಸಾಲಿನಲ್ಲಿ ಸುಮಾರು 2407 ಮನೆಗಳನ್ನು, 2002–03ನೇ ಸಾಲಿನಲ್ಲಿ 58 ಮನೆಗಳನ್ನು ನಿರ್ಮಾಣ ಮಾಡಿರುವುದನ್ನು ಬಿಟ್ಟರೆ, 2003–04 ರಿಂದ 2010–11ನೇ ಸಾಲಿನವರೆಗೆ 'ಶೂನ್ಯ' ಎಂದರೆ ಒಂದೇ ಒಂದು ಮನೆಯನ್ನು ವಿಜಯಪುರ ನಗರದಲ್ಲಿ ನಿರ್ಮಾಣ ಮಾಡಿಲ್ಲ. ಇದಕ್ಕೆ ಕಾರಣವೇನು? ಏನು ಸಮಸ್ಯೆಯುಂಟಾಗಿದೆ? ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ವಿಜಯಪುರಕ್ಕೆ ಮನೆಗಳನ್ನೇ ಮಂಜೂರು ಮಾಡಿಲ್ಲವೋ ಅಥವಾ ಬೇರೆ ಏನಾದರೂ ಸಮಸ್ಯೆಗಳಿವೆಯೋ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಡಾ:ಎಂ.ಹೆಚ್.ಅಂಬರೀಷ್:–** ಸನ್ಮಾನ್ಯ ಸಭಾಪತಿಯವರೇ, ಆಶ್ರಯ ಮನೆ ಯೋಜನೆಗೆ ಅಲ್ಲಿನ ಸಂಬಂಧಪಟ್ಟ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅವರು ಸಹಿ ಹಾಕಿಕಳುಹಿಸಿಕೊಟ್ಟರೆ ಮಾತ್ರ ನಾನು ಮಂಜೂರು ಮಾಡುವುದಕ್ಕೆ ಅಧಿಕಾರವಿದೆ. ಆದ್ದರಿಂದ 2015–16ರಲ್ಲಿ 700 ಮನೆಗಳನ್ನು ಹಂಚಿಕೆ ಮಾಡಿದ್ದೇವೆ. ಇಲ್ಲಿಯವರೆಗೆ 299 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಫಲಾನುಭವಿಗಳನ್ನು ಶಾಸಕರೇ ಆಯ್ಕೆ ಮಾಡುವುದರಿಂದ ಪಕ್ಷದ ದೃಷ್ಟಿಕೋನದಿಂದ ನಮ್ಮವರು ತಮ್ಮವರು ಎನ್ನುವ ಆಸೆ ಇದ್ದೇ ಇರುತ್ತದೆ. ಸರ್ಕಾರ ಈ ಮನೆಗಳು ಬಡವರಿಗೆ ದೊರೆಯಬೇಕೆನ್ನುವ ಉದ್ದೇಶದಿಂದ ಹಂಚಿಕೆ ಮಾಡಲಾಗಿದೆ. ನಿವೇಶನಗಳನ್ನು ಒದಗಿಸುವ ಬಗ್ಗೆ ನಾವು ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮಾಡಿದ್ದೇವೆ. ಎಲ್ಲ ಸಿ.ಇ.ಓ. ಗಳಿಗೆ ಹೇಳಿದ್ದೇವೆ. ನಮ್ಮ ಒಂದು ವೆಬ್‌ಸೈಟ್‌ನಲ್ಲಿ ಎಲ್ಲರ ಸೆಲ್‌ಫೋನ್ ನಂಬರ್ ಕೊಟ್ಟಿದ್ದೇವೆ.

ಅಧಿಕಾರಿ/ನೌಕರರಿಗೆ ಎಲ್ಲ ರೀತಿಯ ತರಬೇತಿಗಳನ್ನು ಕೊಟ್ಟು ಈ ಕೆಲಸವನ್ನು ಮಾಡಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಬೇಕೆನ್ನುವ ಉದ್ದೇಶವನ್ನು ಹೊಂದಿರುವುದರಿಂದ ನಮಗೆ ಯಾವುದೇ ರೀತಿಯ ಕೊರತೆ ಕಂಡು ಬರುತ್ತಿಲ್ಲ. ಮಾನ್ಯ ಯತ್ನಾಳ್‌ರವರು ನಾಲ್ಕು ಪಾಲು ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ನಾಲ್ಕು ಪಾಲನ್ನು ನಾವು ಮಾಡಿಲ್ಲ ನಮ್ಮ ಇಲಾಖೆಯವರು ಮಾಡಿದ್ದಾರೆ. ಇದನ್ನು ಮಾಡುವುದಕ್ಕೆ ರಾಜಕಾರಣಿಗಳು ಅಥವಾ ಮಂತ್ರಿಗಳು ಇರುವುದಿಲ್ಲ ಡೆಪ್ಯುಟಿ ಕಮೀಶನರ್, ಅಸಿಸ್ಟೆಂಡ್ ಕಮೀಶನರ್, ತಹಸೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್ ಇರುತ್ತಾರೆ. ರಾಜಕಾರಣಿಗಳು ಇದರಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಮಿಟಿಗಳನ್ನು ಮಾಡಲಾಗಿದೆ. ಆ ಕಮಿಟಿ ಮೀಟಿಂಗ್ ನಡೆಸುತ್ತಿರುತ್ತದೆ. ನಮ್ಮಿಂದ ಏನಾದರೂ ತೊಂದರೆಯಾಗಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಸರಿಪಡಿಸುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ:55**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಸನ್ಮಾನ್ಯ ಸಭಾಪತಿಯವರೇ, **'ಶೌಚಾಲಯ ಕಟ್ಟುವ** ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು ಅದಕ್ಕೆ ದಿನಾಂಕವನ್ನು ನಿಗದಿಪಡಿಸಲಾಗಿದೆಯೇ? ನಿರ್ಮಾಣದಲ್ಲಿ ಗುಣಮಟ್ಟವನ್ನು ಪ್ರಶ್ನೆ ಮಾಡಿ ಯಾರಾದರು ದೂರುಗಳನ್ನು ಕೊಟ್ಟಿದ್ದಾರೆಯೇ? ದೂರುಗಳು ಬಂದಿದ್ದಾರೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?' ಎನ್ನುವ ಪ್ರಶ್ನೆಗಳಿಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮೊಟ್ಟಮೊದಲಿಗೆ ನಾನು ಕೂರ್ಗ್ ಜಿಲ್ಲೆಯವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಕಾರಣವೇನೆಂದರೆ, 2015–16 ನೇ ಸಾಲಿನಲ್ಲಿ 6757 ಶೌಚಾಲಯಗಳನ್ನು ಕಟ್ಟಿದ್ದರೆ ಅವರ ಜಿಲ್ಲೆ ನೂರಕ್ಕೆ ನೂರರಷ್ಟು ಬಯಲು ಶೌಚ ಮುಕ್ತವಾಗುತ್ತಿತ್ತು. ಈಗಾಗಲೇ 6757ರಲ್ಲಿ ಸುಮಾರು 5746 ಶೌಚಾಲಯಗಳನ್ನು ಕೂರ್ಗ್ ಜಿಲ್ಲೆಯಲ್ಲಿ ಕಟ್ಟಿದ್ದಾರೆ. ಇನ್ನೂ 1011 ಶೌಚಾಲಯಗಳನ್ನು ಕಟ್ಟಬೇಕಾಗಿದೆ. ಈ ಮಾರ್ಚ್‌ನಲ್ಲಿ ಸುಮಾರು 500ಕ್ಕಿಂತ ಹೆಚ್ಚು ವರ್ಕ್ ಆರ್ಡರ್ ಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಅರಣ್ಯ ಭೂಮಿ ಆಗಿರುವುದರಿಂದ ಸ್ಥಳದ ಸಮಸ್ಯೆ ಇದೆ. ಕೆಲವು ಕಡೆಗಳಲ್ಲಿ ಈಗಾಗಲೇ ನಾವು Prefabricated Toilets ನ್ನು ನಿರ್ಮಾಣ ಮಾಡುವುದರ ಮೂಲಕ ಎಲ್ಲಿ ಸಮಸ್ಯಾತ್ಮಕ ಸ್ಥಳಗಳಿವೆ ಅಲ್ಲಿ ಪೂರ್ಣವಾಗಿ ಶೌಚಾಲಯ ಯುಕ್ತ ಮಾಡುವುದಕ್ಕೆ Prefabricated Toilets ನ್ನು ಮಾಡಬೇಕೆನ್ನುವ ಚಿಂತನೆ ಮಾಡಿದ್ದೇವೆ.

(ಮುಂದುವರಿದಿದೆ)

(ಪೀಠದಲ್ಲಿ ಉಪಸಭಾಪತಿಗಳ ಉಪಸ್ಥಿತಿ)

ಶ್ರೀ ಹೆಚ್.ಕೆ.ಪಾಟೀಲ್(ಮುಂದುವರೆದಿದೆ)

ಸಿಇಓ ಅವರಿಗೆ ಸೂಚನೆ ಕೊಟ್ಟಿದ್ದೇವೆ. 1011 ಶೌಚಾಲಯಗಳಾದರೆ ಕೊಡುಗು ಜಿಲ್ಲೆಯನ್ನು ಬಯಲು ಬಹಿರ್ದೆಶೆ ಮುಕ್ತ ಜಿಲ್ಲೆ ಎಂದು ಘೋಷಣೆ ಮಾಡುತ್ತೇವೆ. ಆದಷ್ಟು ಮಾರ್ಚ್‌ನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಆಗದಿದ್ದರೆ, ಮೇ ತಿಂಗಳ ಹೊತ್ತಿಗೆ ಶೇಕಡ 100 ರಷ್ಟು ಶೌಚಾಲಯಯುಕ್ತ ಆಗುತ್ತದೆ.

**<u>ಪ್ರಶ್ನೆ ಸಂಖ್ಯೆ : 392</u>**

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಚಿವರು ಉತ್ತರದಲ್ಲಿ, 875 ಹಣ ದುರುಪಯೋಗದ ಪ್ರಕರಣಗಳಿವೆ ಎಂದು ಹೇಳಿದ್ದಾರೆ, ಇದರಲ್ಲಿ ಒಟ್ಟು ಎಷ್ಟು ಹಣ ದುರುಪಯೋಗ ಆಗಿದೆ ತಿಳಿಸಬೇಕು. ತಾವು ಉತ್ತರದಲ್ಲಿ, ಉತ್ತರದ ಜೊತೆ ಸಿಡಿ ಇದೆ ಎಂದು ಹೇಳಿದ್ದೀರಿ. ಆದರೆ ನನಗೆ ಸಿಡಿ ತಲುಪಿಲ್ಲ. ಮತ್ತೆ, ಪ್ರಮಾಣ ಪತ್ರದ ಬಗ್ಗೆ ನೋಡಿದಾಗ, ಎಷ್ಟು ಹಣ ಬಿಡುಗಡೆ ಆಗಿದೆಯೋ ಅದಕ್ಕಿಂತ ಹೆಚ್ಚು ಹಣವನ್ನು ತೋರಿಸಿ U.C., (Utilisation Certificate) ಸಲ್ಲಿಸಿದ್ದೀರಿ. ಅಂದರೆ ರಾಜ್ಯ ಸರ್ಕಾರದ ಹಣವನ್ನು ಸೇರಿಸಿ ಇದನ್ನು ಮಾಡುತ್ತಿದ್ದೀರಾ? ಹಾಗಾದರೆ ಇದರಲ್ಲಿ ರಾಜ್ಯ ಸರ್ಕಾರದ ಪಾಲು ಏನು? ಅಥವಾ ಹಿಂದಿನ ವರ್ಷಗಳಲ್ಲಿ U.C., ಕೊಟ್ಟಿಲ್ಲದೇ ಅದರ ಬಾಕಿಯನ್ನೂ ಸೇರಿಸಿ ಕೊಟ್ಟಿದ್ದೀರಾ? 2012-13ರಲ್ಲಿ ರೂ.1231.94 ಕೋಟಿ ಬಿಡುಗಡೆಯಾಗಿದ್ದರೆ, ಸುಮಾರು ರೂ. 1476 ಕೋಟಿ ಪ್ರಮಾಣ ಪತ್ರ ಸಲ್ಲಿಸಿದ್ದೀರಿ. 2013-14ರಲ್ಲಿ ಸುಮಾರು ರೂ.1596 ಕೋಟಿ ಬಿಡುಗಡೆಯಾಗಿದ್ದರೆ, ಸುಮಾರು ರೂ.2084 ಕೋಟಿಗಳಿಗೆ ಪ್ರಮಾಣ ಪತ್ರ ಸಲ್ಲಿಸಿದ್ದೀರಿ. ಈ ರೀತಿ ಜಾಸ್ತಿ ಮೊತ್ತ ಇದೆ. ಇದು ಏನು? ಮಾನ್ಯ ಸಭಾಪತಿಗಳೆ, ಯಾವ ಜಿಲ್ಲೆಗಳಲ್ಲಿ ಎಷ್ಟು ದುರುಪಯೋಗದ ಪ್ರಕರಣಗಳು ಇದೆ ಎಂದು ನೋಡಿದಾಗ, ಬೀದರ್-32, ಚಿಕ್ಕಬಳ್ಳಾಪುರ-59, ಚಿತ್ರದುರ್ಗ-71, ದಾವಣಗೆರೆ- 224, ಗದಗ-38, ಕೊಡಗು-50, ಶಿವಮೊಗ್ಗದಲ್ಲಿ-50 ಮತ್ತು ಯಾದಗಿರಿ-64 ಪ್ರಕರಣಗಳು ಆಗಿವೆ. ಆರೇಳು ಜಿಲ್ಲೆಗಳಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ದುರುಪಯೋಗ ಆಗುತ್ತಿದೆ ಎಂದರೆ, ಈ ಜಿಲ್ಲೆಗಳಲ್ಲಿ Ombudsman ಗಳೆಂದು ಯಾರಿದ್ದಾರೋ ಅವರು "ಓಂ" ಎಂದು ಸುಮ್ಮನೆ ಕುಳಿತಿದ್ದಾರೋ ಅಥವಾ ಬೇರೆ ಏನಾದರೂ ಮಾಡುತ್ತಿದ್ದಾರೆಯೇ? Third party inspection ಮಾಡುವ ಜವಾಬ್ದಾರಿ ಇರುವಂತಹ ಅಧಿಕಾರಿಗಳು ಯಾರಿದ್ದಾರೆ ಅವರು ಇನ್ಸ್‌ಪೆಕ್ಷನ್ ಮಾಡುತ್ತಿಲ್ಲವೇ?

**ಶ್ರೀ ಹೆಚ್.ಕೆ.ಪಾಟೀಲ್:-**ಎಲ್ಲೆಲ್ಲಿ ಎಷ್ಟೆಷ್ಟು ಹಣ ದುರುಪಯೋಗ ಆಗಿದೆ ಎಂದು ನೀವು ಅಂಕಿ ಅಂಶಗಳನ್ನು ಓದಿದಿರಿ. ಅವು ಅನುಬಂಧ -2 ರಲ್ಲಿದೆ. ಗದಗನಲ್ಲಿ ಎಷ್ಟು ದುರುಪಯೋಗದ ಪ್ರಕರಣಗಳು ಇದೆ ಎಂದು ಓದಿದಿರಿ?

**ಶ್ರೀ ಗೋ.ಮಧುಸೂದನ್:-** ಗದಗದಲ್ಲಿ 7 ಪ್ರಕರಣಗಳಷ್ಟೇ ಇವೆ. ನಾನು 38 ಎಂದು ಓದಿದೆ, ಕ್ಷಮಿಸಿ. ಕಲ್ಬುರ್ಗಿಯಲ್ಲಿ 38 ಇವೆ. ನೀವು ಇರುವ ಕಡೆ ಹೆಚ್ಚು ಪ್ರಕರಣಗಳು ಇರುವುದಕ್ಕೆ ಸಾಧ್ಯವಿಲ್ಲ. ಅದೂ ಕೂಡ ನಿಮಗೆ ಗೊತ್ತಾಗದೆಯೇ ಆಗಿರಬಹುದು. ದಾವಣಗೆರೆಗೆ ಹೋಲಿಸಿಕೊಂಡರೆ ನಿಮ್ಮ ಜಿಲ್ಲೆಯದೇನೂ ಇಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:-** ನೀವು ತಪ್ಪು ಓದುವವರೇ ಅಲ್ಲ. ಅದು ಹೇಗೆ ತಪ್ಪಾಯಿತು ಎಂದು ನಾನು ನೋಡುತ್ತಾ ಹೋದೆ. ಮಾನ್ಯ ಸಭಾಪತಿಗಳೆ, ಮಾನ್ಯ ಮಧುಸೂದನ್‌ರವರ ಉದ್ದೇಶವನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಯುಸಿ ಕೊಡುವುದರಲ್ಲಿ ವ್ಯತ್ಯಾಸ ಆಗಿದೆಯೇ, ತಪ್ಪಾಗಿದೆಯೇ ಎಂದು ಕೇಳಿದರು. ಕೆಲವು ಸಂದರ್ಭಗಳಲ್ಲಿ ಮೇಲ್ನೋಟಕ್ಕೆ ಸದುದ್ದೇಶಕ್ಕೆಂದು ಕಂಡುಬಂದರೂ ಕೆಲವರ ಬೇಜವಾಬ್ದಾರಿಕೆಯನ್ನು ಕಾಣುತ್ತೇವೆ. ಆ ಹಿನ್ನೆಲೆಯಲ್ಲಿ ನೀವು ಈ ಪ್ರಶ್ನೆಯನ್ನು ಗಂಭೀರವಾಗಿ ಕೇಳಿದ್ದೀರಿ ಎಂದು ನಾನು ಭಾವಿಸುತ್ತೇನೆ. ಅನುದಾನ ಬಿಡುಗಡೆ ಆಗಿದ್ದಕ್ಕಿಂತ ಯುಟಿಲೈಸೇಷನ್ ಜಾಸ್ತಿ ಆಗಿದೆ. ಕೆಲವು ಸಂದರ್ಭಗಳಲ್ಲಿ O.B., (Opening Balance) ಇರುತ್ತದೆ. ಈ ಯೋಜನೆಯಲ್ಲಿ ಭಾರತ ಸರ್ಕಾರ ಶೇಕಡ 90 ರಷ್ಟು ಮತ್ತು ಕರ್ನಾಟಕ ಸರ್ಕಾರ ಶೇಕಡ 10 ಕೊಡುತ್ತದೆ. ಆದ್ದರಿಂದ, ಬಿಡುಗಡೆಗಿಂತ ಒಟ್ಟು ನಮ್ಮ ಕೆಲಸ ಏನು ಆಗಿರುತ್ತದೆಯೋ ಆ ಸಂದರ್ಭದಲ್ಲಿ ಹೆಚ್ಚುವರಿಯಾಗಿದ್ದರೆ ಅದೇನೂ ತಪ್ಪಲ್ಲ. O.B., ಗೆ ಸಂಬಂಧಪಟ್ಟಂತೆ ಭಾರತ ಸರ್ಕಾರದ ಫಂಡ್ ಇರುತ್ತದೆ. ಆದ್ದರಿಂದ ಅದು ಹೆಚ್ಚಿರಬಹುದು. ಈ ಸಂದರ್ಭದಲ್ಲಿ ನಾನು ಅದರ ಬಗ್ಗೆ ಹೆಚ್ಚಿಗೆ ನೋಡಿಲ್ಲ. ಆದರೆ ನಿಮ್ಮ apprehension ಏನಿದೆ, ಅದು ತಪ್ಪಿನಿಂದಾಗಿರುವಂಥದ್ದಲ್ಲ. 2ನೇದಾಗಿ, ತಾವು ದುರುಪಯೋಗ ಆಗಿರುವುದರ ಬಗ್ಗೆ ಮಾಹಿತಿ ಕೇಳಿದ್ದೀರಿ. ಒಟ್ಟು 2012-13ನೇ ಸಾಲಿನಲ್ಲಿ 141 ಪ್ರಕರಣಗಳು, 2013-14ರಲ್ಲಿ 310 ಪ್ರಕರಣಗಳು, 2014-15ರಲ್ಲಿ 424 ಪ್ರಕರಣಗಳು, 2015-16ರಲ್ಲಿ 287 ಪ್ರಕರಣಗಳೂ ಸೇರಿದಂತೆ ಒಟ್ಟು 1162 ಪ್ರಕರಣಗಳಲ್ಲಿ ಹಣ ದುರುಪಯೋಗ ಆಗಿರುವಂಥದ್ದು ದಾಖಲಾಗಿವೆ. ಇವುಗಳಲ್ಲಿ ಈಗಾಗಲೇ ನಾವು ಕಳೆದ 3 ವರ್ಷಗಳಲ್ಲಿ 297 ಅಧಿಕಾರಿಗಳ ಮೇಲೆ, ನೌಕರುದಾರರ ಮೇಲೆ ಇಲಾಖಾ ವಿಚಾರಣೆಯನ್ನು ಕೈಗೊಂಡಿದ್ದೇವೆ. 163 ಅಧಿಕಾರಿಗಳನ್ನು ಅಮಾನತ್ತಿಲ್ಲಿರಿಸಿದ್ದೇವೆ, ಇತರ ಕ್ರಮಗಳು ಪ್ರಾರಂಭವಾಗಿವೆ. 105 ಅಧಿಕಾರಿಗಳ ಮೇಲೆ ಹಾಗೂ 50 ಜನ ಅಧಿಕಾರೇತರರು ಅಂದರೆ ಅಧ್ಯಕ್ಷರಿರಬಹುದು ಮತ್ತೊಬ್ಬರು ಇರಬಹುದು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡಿದ್ದೇವೆ. ಒಟ್ಟಾರೆ 615 ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

ರೂ. 2 ಕೋಟಿ 58 ಲಕ್ಷ ಈ ಪ್ರಕರಣಗಳಲ್ಲಿ ಲೋಪವಾಗಿದೆ, ದುರುಪಯೋಗ ಆಗಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಈಗಾಗಲೇ ಸರ್ಕಾರ ಅದರ ವಸೂಲಾತಿ ಸಲುವಾಗಿ ಕ್ರಮ ಕೈಗೊಂಡಿದ್ದು ರೂ. 1 ಕೋಟಿ 43 ಲಕ್ಷ ಗಳನ್ನು ವಸೂಲಿ ಮಾಡಿದೆ, ಸರ್ಕಾರಕ್ಕೆ ಜಮೆ ಆಗಿದೆ. ಉಳಿದಿರುವುದರ ಬಗ್ಗೆ ಕಾನೂನಾತ್ಮ ಕಾರ್ಯಕ್ರಮಗಳನ್ನು ಮುಂದುವರೆಸುತ್ತಿದ್ದೇವೆ. ಮತ್ತೆ ತಾವು, ಸಿಡಿ ಕೇಳಿದಿರಿ. ಆ ಸಿಡಿಯನ್ನು ಸಭಾಪತಿಗಳ ಮೂಲಕ ನಿಮಗೆ ಕಳುಹಿಸಿ ಕೊಡುತ್ತೇನೆ.

(ಈ ಹಂತದಲಿ ಸಿಡಿಯನ್ನು ಮಾನ್ಯ ಮಧುಸೂದನ್‌ರವರಿಗೆ ತಲುಪಿಸಲಾಯಿತು)

**ಶ್ರೀ ಗೋ.ಮಧುಸೂದನ್:-** ನೀವು ಎಲ್ಲಾ ವಿಷಯವನ್ನು ಹೇಳಿದಿರಿ. ತುಂಬಾ ಪ್ರಮುಖವಾದ ಯೋಜನೆ ಇದಾಗಿದೆ. ಈ ನರೇಗಾ ಯೋಜನೆಯಲ್ಲಿ ದುರುಪಯೋಗ ಆಗಿರುವ ಹಣ ಸುಮಾರು 22 ಕೋಟಿ ಎಂದು ಹೇಳಿದಿದರಿ. ರೂ. 1 ಕೋಟಿ 43 ಲಕ್ಷ ಮಾತ್ರ ಇಲ್ಲಿಯ ತನಕ ವಾಪಸ್ಸು ಪಡೆಯುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಿದಿರಿ. ಅಂದರೆ, ಶೇಕಡ 5 ರಷ್ಟು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇನ್ನು ಶೇಕಡ 95 ರಷ್ಟು ಹಣವನ್ನು ನಮ್ಮ ಕೈಯಲ್ಲಿ ವಸೂಲು ಮಾಡುವುದಕ್ಕೆ ಆಗುತ್ತಿಲ್ಲ ಎಂದರೆ, ಇದರಲ್ಲಿ ಬಹಳ ದೊಡ್ಡ ಸಮಸ್ಯೆ ಇದೆಯೇ? ಇಷ್ಟು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ, ಅಷ್ಟು ದೊಡ್ಡ ಪ್ರಮಾಣದಲ್ಲಿ ಅಧ್ಯಕ್ಷರು ಅಥವಾ ಅಧಿಕಾರೇತರರ ಮೇಲೆ ಕ್ರಮ ಕೈಗೊಂಡಿದ್ದೀರಿ. ಇಷ್ಟಾದರೂ ಸಹ ರೂ. 20 ಕೋಟಿ ಹಣವನ್ನು ನಮ್ಮ ಕೈಯಲ್ಲಿ ವಾಪಸ್ಸು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ ಎಂದರೆ ಇದರ ಬಗ್ಗೆ ತಾವು ಇನ್ನೂ ಗಂಭೀರವಾಗಿ ಚಿಂತನೆ ಮಾಡಬೇಕು ಎಂದು ಕಳಕಳಿಯ ಮನವಿ ಮಾಡುತ್ತೇನೆ.

**ಶ್ರೀ ರಾಮಚಂದ್ರಗೌಡ:-** ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಉಡುಪಿ, ಇಲ್ಲಿ ಯಾವುದೇ ಹಣವನ್ನು ದುರುಪಯೋಗ ಮಾಡಿಲ್ಲ. ಈ ಜಿಲ್ಲೆಯವರಿಗೆ ಅಭಿನಂದನೆಯನ್ನಾದರೂ ಸಲ್ಲಿಸಿ, ಷಹಬಾಷ್‌ಗಿರಿಯನ್ನು ಕೊಡಿ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಮಧುಸೂದನ್‌ರವರು ರೂ. 22 ಕೋಟಿ ವಸೂಲಿ ಮಾಡುವುದು ಅಷ್ಟು ಕಠಿಣವೇ ಎಂದು ಕೇಳಿದರು. ನಿಮಗೆ ಗೊತ್ತಿದೆ, ನಾವೇ ಈ ಸದನದಲ್ಲಿ ರೂ.624 ಕೋಟಿ ಅವ್ಯವಹಾರ ಆಗಿದೆ ಎಂದು ಸಿಎಜಿ ಕೊಟ್ಟ ವರದಿ ಹಿನ್ನೆಲೆಯಲ್ಲಿ ಅದನ್ನು ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ.

ಆದರೆ ಒಂದು ಸಮಾಧಾನ ಏನೆಂದರೆ, ಏನು ಹಣ ದುರುಪಯೋಗದ ಪ್ರಕರಣಗಳಿದ್ದವೋ ಅವು ಬಹಳಷ್ಟು ಮಟ್ಟಿಗೆ ತಗ್ಗಿ ಹೋಗಿವೆ. ಆದಾಗ್ಯೂ ಕೆಲವು ಕಡೆ ಅಲ್ಲಲ್ಲಿ ನಡೆಯುತ್ತಿವೆ, ಅದಕ್ಕೂ ಸಹ ಲಗಾಮು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇತ್ತೀಚಿಗೆ ನಾವು EFMS, total transparency, IMIS ಇವುಗಳನ್ನು ಮಾಡಿದರ ಕಾರಣ, ಆ ತಂತ್ರಜ್ಞಾನವನ್ನು ಉಪಯೋಗ ಮಾಡಿಕೊಂಡು ಇವತ್ತು ಈ ಯೋಜನೆಯಲ್ಲಿ ಅವ್ಯವಹಾರಕ್ಕೆ ತಡೆ ಹಾಕಲಾಗಿದೆ.

(ಮುಂದು . . .)

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಚ್.ಕೆ.ಪಾಟೀಲ್(ಮುಂದು):-**

ಆ ಕಾರಣವೇ ನಮಗೆ ಇವತ್ತು ಕೇಂದ್ರ ಸರ್ಕಾರದವರು Information, Communication and Technology ನಲ್ಲಿ No.1 prize ನ್ನು ಕೊಟ್ಟಿದ್ದಾರೆ. ಅದಕ್ಕೆ ಈ ಎಲ್ಲಾ ಸಾಧನೆಗಳು ಕಾರಣ. ಮಾನ್ಯ ಸದಸ್ಯರು ಇವುಗಳನ್ನು ಇನ್ನೂ ಕಡಿಮೆಗೊಳಿಸಬೇಕು ಎನ್ನುವ ಮಾತನ್ನು ಕೇಳಿದ್ದಾರೆ. ಜನರಲ್ಲಿ ಜಾಗೃತಿ ಆದಾಗ ಮಾತ್ರ ಇದನ್ನು ಕಡಿಮೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಹೊಸದಾಗಿ ಪಂಚಾಯಿತಿಗೆ ಈಗ ಆಯ್ಕೆಯಾಗಿದ್ದಾರೆ. ಅವರೆಲ್ಲರಲ್ಲಿ ವಿನಂತಿ ಮಾಡುವುದೇನೆಂದರೆ, ನೀವು ಕಾನೂನು ಬಿಟ್ಟು ಹೋಗಬೇಡಿ, ಕಾನೂನು ಪ್ರಕಾರ ಹೋಗಿ, ನಿಮಗೆ ಹಣ ಸಾಕಷ್ಟು ಇದೆ. ನಾನು ಒಂದು ಸಂದರ್ಭದಲ್ಲಿ ಹೇಳಬೇಕಾಗುತ್ತದೆ. 1514 ಕೋಟಿ ರೂಪಾಯಿಗಳನ್ನು ಈಗಾಗಲೇ ನಾವು ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಸುಮಾರು 800 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ರಾಜ್ಯ ಸರ್ಕಾರ 700 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿದೆ. ಕೆಲಸ ನಿಧಾನವಾಗಬಾರದು. ಕಳೆದ ಅಧಿವೇಶನದಲ್ಲಿ ಮಾತನಾಡುವಾಗ ಈ ಕಾರ್ಯಕ್ರಮದಲ್ಲಿ ಹಿನ್ನಡೆ ಉಂಟಾಗಿದೆ, ಹಣ ಖರ್ಚಾಗುತ್ತಿಲ್ಲ ಎಂದು ನಮ್ಮ ಸರ್ಕಾರವನ್ನು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯ, ಆಗ್ರಹ ಮಾಡುತ್ತಾ ಈಗಾಗಲೇ ಕೆಲಸಗಳನ್ನು ಮುಂದುವರೆಸಿದ್ದೇವೆ. ಹಣಕಾಸು ಬರುತ್ತದೆ ಎನ್ನುವ ಭರವಸೆ ಇದೆ. ಹಣ ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರು ನಮಗೆ ಭರವಸೆ ಕೊಟ್ಟಿದ್ದಾರೆ. ಈ ಕೆಲಸ ಇನ್ನೂ ಜೋರಾಗಿ ಮಾಡುತ್ತೇವೆ. ಮಾನ್ಯ ರಾಮಚಂದ್ರಗೌಡರು ಹೇಳತಕ್ಕಂಥ ಸಲಹೆ ಮೆಚ್ಚಬೇಕಾದ್ದು. ಏಕೆಂದರೆ, ನಾವು ಹಣ ದುರುಪಯೋಗ ಮಾಡಿದವರ ಬಗ್ಗೆ ಬಹಳ ಮಾತನಾಡುತ್ತೇವೆ. ಯಾರು ಶಿಸ್ತಿನಿಂದ ಇರುತ್ತಾರೆ ಅವರ ಬಗ್ಗೆ ಯಾರು ಚಕಾರ ಎತ್ತುವುದಿಲ್ಲ. ಅವರನ್ನು appreciate ಮಾಡುವುದಿಲ್ಲ, recognize ಮಾಡುವುದಿಲ್ಲ. ಈ ಸಲ ನಾವು 'ಗಾಂಧಿ ಗ್ರಾಮ ಪುರಸ್ಕಾರ' ಎನ್ನುವ ಪ್ರಶಸ್ತಿ ಕೊಡುತ್ತೇವೆ ಆ ಸಂದರ್ಭದಲ್ಲಿ ಯಾವುದೇ ಪ್ರಕರಣ ಇಲ್ಲದಿರತಕ್ಕಂಥ

ಪಂಚಾಯಿತಿಗಳಿಗೆ ಆ ಪ್ರಶಸ್ತಿ ಕೊಡುವಂತಹ ಸಂದರ್ಭದಲ್ಲಿ ಅದು ಒಂದು ಪ್ರಮುಖ ಅಂಶವನ್ನಾಗಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇವೆ.

ಪ್ರಶ್ನೆ ಸಂಖ್ಯೆ:363
ಉತ್ತರ ಲಗತ್ತಿಸಲಾಗಿದೆ

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ನಾನು ಕೇವಲ ನನ್ನ ಜಿಲ್ಲೆಯ ವಿಚಾರವಾಗಿ ನೋಡಿದರೆ 151 ಶಾಲೆಗಳಲ್ಲಿ 116 ಶಾಲೆಗಳು ಶಿಥಿಲ ಸ್ಥಿತಿಯಲ್ಲಿವೆ ಎಂದು ನಮಗೆ ಮಾಹಿತಿ ಇದೆ. ಇದನ್ನು ನೋಡಿದರೆ ರಾಜ್ಯದ ಸರ್ಕಾರಿ ಶಾಲೆಗಳ ಪರಿಸ್ಥಿತಿ ಏನಿರಬಹುದು? ಅದರಲ್ಲಿ ನಾನು ನನ್ನ ಜಿಲ್ಲೆಯ ಒಂದು ಶಾಲೆಯಲ್ಲಿ ಇನ್ಸ್‌ಪೆಕ್ಷನ್ ಮಾಡಿ ನೋಡಿದೆ. ಆ ಶಾಲೆಗಳನ್ನು ನಡೆಸುವುದಕ್ಕಿಂತ ಮುಚ್ಚುವುದೇ ಬಹಳ ಉತ್ತಮ ಎಂದು ಅನಿಸುತ್ತದೆ. ಏಕೆಂದರೆ ಒಂದೊಂದು ಶಾಲಾ ಕೊಠಡಿಯಲ್ಲಿ 7 ತರಗತಿಗಳನ್ನು ನಡೆಸುತ್ತಿದ್ದಾರೆ. ಎಷ್ಟೋ ಮಕ್ಕಳು ರಸ್ತೆಯಲ್ಲಿ ಮರದ ಕೆಳಗಡೆ ಕುಳಿತುಕೊಂಡು ಓದಿದರೆ ಅವರಿಗೆ ಶಿಕ್ಷಣ ಎಲ್ಲಿಂದ ಸಿಗುತ್ತದೆ? ಏಳು ತರಗತಿಗೆ ಒಂದು-ಎರಡು ಶಿಕ್ಷಕರುಗಳಿದ್ದಾರೆ. ಏಕೆಂದರೆ ಕೊಠಡಿಗಳಿಲ್ಲ. ಕೇಳಿದರೆ ಮಕ್ಕಳು ಬರುವುದಿಲ್ಲ ಎಂದು ಹೇಳುತ್ತಾರೆ. ಕೊಠಡಿ ಇದ್ದರೆ ಮಕ್ಕಳು ಬರುತ್ತಾರೆ. ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಎಲ್ಲವನ್ನು ಸರ್ಕಾರದ ಮೇಲೆ ಹಾಕುವುದಲ್ಲ, ನಾನು ಮಾನ್ಯ ಸಚಿವರ ಹತ್ತಿರ ಒಂದು ಸಲ ಹೇಳಿದ್ದೆ, ಬೇಕಾದಷ್ಟು ಐಟಿ-ಬಿಟಿ ಕಂಪನಿಗಳು ಮುಂದೆ ಬರುತ್ತಿವೆ, ಒಂದು ವರ್ಷದಲ್ಲಿ ಸರ್ಕಾರಿ ಶಾಲೆಗಳನ್ನು ಕಟ್ಟಿಸುವುದಕ್ಕೋಸ್ಕರ ಅವರ ಹತ್ತಿರ ಮಾತನಾಡಿ ಜಿಲ್ಲಾವಾರು ಮಾಡಿದರೆ ಬಹಳ ಉತ್ತಮವಾಗುತ್ತದೆ. ಏಕೆಂದರೆ 151 ಶಾಲೆಗಳಲ್ಲಿ 115 ಶಾಲೆಗಳು ಶಿಥಿಲಗೊಂಡಿವೆ ಎಂದರೆ ಮುಂದೆ ಪರಿಸ್ಥಿತಿ ಏನು ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಅದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ನನ್ನ ಜೊತೆ ಕಳೆದ ಎರಡು ವರ್ಷಗಳಿಂದಲೂ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಇವರು ಕೇಳಿರುವ ಮೂಲತಃ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಸುಮಾರು ಉರ್ದು ಶಾಲೆಗಳಿಗೆ ಕೇಂದ್ರದಿಂದ ಬರತಕ್ಕಂಥ ಹಣ ಎಷ್ಟಿದೆ ಮತ್ತು ಎಷ್ಟು ತಲುಪಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಮೂಲಭೂತವಾಗಿ ಸುಮಾರು 2010 ರಿಂದ ಇಲ್ಲಿಯವರೆಗೆ ಬಂದಿರತಕ್ಕಂಥ ಹಣ 13 ಕೋಟಿ 66 ಲಕ್ಷ ರೂಪಾಯಿ. ಚಾಲ್ತಿ ಸಾಲಿನವರೆಗೆ ಅದನ್ನು ಸಂಪೂರ್ಣವಾಗಿ ಬಳಕೆ ಮಾಡಿದ್ದೇವೆ. ಅವರು ಸುಮಾರು 370 ಪ್ರಪೋಸಲ್ಸ್ ಕೇಳುತ್ತಾರೆ. ಅದನ್ನು ನಾವು ರೆಸಲ್ಯೂಷನ್ ಮಾಡಿ 370

ಪ್ರಪೋಸಲ್ಸ್ ಕೊಟ್ಟಿದ್ದೆವು, ಅದರೊಳಗೆ 95 ಅಪ್ರೂವ್ ಆಗಿತ್ತು. ಆದರೆ 67 ಪ್ರಪೋಸಲ್‌ಗಳಿಗೆ ಹಣ ಬಿಡುಗಡೆಯಾಗಿದೆ. 67 ಪ್ರಪೋಸಲ್‌ಗಳಿಗೆ ಸುಮಾರು 13 ಕೋಟಿ 66 ಲಕ್ಷ ರೂಪಾಯಿ ಬಳಕೆಯಾಗಿದೆ. ಯಾವುದೇ ಹಣ ಉಳಿದಿಲ್ಲ. ಅದು ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥದ್ದು. ಗೌರವಾನ್ವಿತ ಸದಸ್ಯರು ಹೇಳಿರತಕ್ಕಂಥ ನೋವಿನಲ್ಲಿ ನಾನು ಕೂಡ ಇದ್ದೇನೆ. ರಾಜ್ಯದಲ್ಲಿ ಸುಮಾರು 50,000 ಶಾಲೆಗಳಿವೆ. ಎಲ್ಲವನ್ನು ನಾವು ಅಪ್‌ಡೇಟ್ ಮಾಡಬೇಕಾದರೆ ಸುಮಾರು 6500 ಕೋಟಿ ರೂಪಾಯಿ ಬೇಕಾಗುತ್ತದೆ. ಶಾಲೆಗಳು ಈ ವರ್ಷ ಶಿಥಿಲಗೊಂಡಿರುವುದಿಲ್ಲ. ಹತ್ತಾರು ವರ್ಷಗಳಿಂದ ಹಾಗೆ ಬಂದಿವೆ. ಅದೇ ರೀತಿ ಪದವಿ ಪೂರ್ವ ಕಾಲೇಜುಗಳಿಗೆ ಸುಮಾರು 1800 ಕೋಟಿ ರೂಪಾಯಿ ಬೇಕಾಗುತ್ತದೆ.

**ಉಪಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಅಲ್ಪಸಂಖ್ಯಾತರ ಸರ್ಕಾರಿ ಶಾಲೆಗಳ ಸ್ಥಿತಿಗತಿ ಬಗ್ಗೆ ಅವರು ಕೇಳಿರುವುದು. ದಯವಿಟ್ಟು ಅದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿ. ಅಲ್ಪಸಂಖ್ಯಾತ ಮಕ್ಕಳು ಓದುತ್ತಿರುವ ಸರ್ಕಾರಿ ಶಾಲೆಗಳಲ್ಲಿ ಬಹಳಷ್ಟು ಮೂಲಸೌಲಭ್ಯಗಳ ಕೊರತೆ ಇದೆ. ಇದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಹೇಳಿ. ಒಟ್ಟಾರೆ ಸರ್ಕಾರಿ ಶಾಲೆಗಳ ಬಗ್ಗೆ ಬೇಡ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಅವರು ಹೇಳುವಾಗ ಅಷ್ಟನ್ನು ಮಾತ್ರ ಹೇಳಲಿಲ್ಲ. ಇನ್ನೂ ಹೆಚ್ಚಾಗಿ ಹೇಳಿದರು. ಸದನಕ್ಕೆ ಮಾಹಿತಿ ಕೊಡುವ ಉದ್ದೇಶದಿಂದ ನಾನು ಹೇಳಿದೆ. ಸರ್ಕಾರಿ ಶಾಲೆಯಲ್ಲಿ ಓದುವುದಕ್ಕಿಂತ ಮನೆಯಲ್ಲಿರುವುದು ಉತ್ತಮ ಎನ್ನುವ ಮಾಹಿತಿಯನ್ನು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಎಷ್ಟು ಶಾಲೆಗಳು ಏನಾಗಿವೆ ಎಂಬ ಮಾಹಿತಿಯನ್ನು ಹೇಳಿದರು. ಇಡೀ ಸದನಕ್ಕೆ ಪರಿಸ್ಥಿತಿ ಏನು ಎನ್ನುವುದು ಗಮನಕ್ಕೆ ತರುವುದು ನನ್ನ ಜವಾಬ್ದಾರಿ ಎನ್ನುವ ಕಾರಣಕ್ಕಾಗಿ ನಾನು ಹೇಳಿದೆ. ಉತ್ಸಾಹ ಪೂರಿತವಾಗಿ voluntary ಆಗಿ ನಾನು ಅದನ್ನು ಹೇಳಲಿಲ್ಲ. ನನ್ನ ಉದ್ದೇಶವೇನೆಂದರೆ, ಬೇರೆ ರೀತಿಯ ಸಂದೇಶ ಹೋಗಬಾರದು. ಖಂಡಿತ ಆ ರೀತಿ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ನಾನು ಕೂಡ ಒಪ್ಪಿಕೊಳ್ಳುತ್ತಿದ್ದೇನೆ. ನಾನು ಈಗಾಗಲೇ ನಾಲ್ಕೈದು ಬಾರಿ ಕಂಪನಿಗಳ ಹತ್ತಿರ ಹೋಗಿದ್ದೇನೆ.

ಇನ್ಫೋಸಿಸ್‌ರವರ ಚೇಂಬರ್‌ಗೆ ನಾನೇ ಹೋಗಿದ್ದೇನೆ. ವಿಪ್ರೋ ಕಂಪನಿಯ ಜೊತೆ ನಾನೇ ನೇರವಾಗಿ ಮಾತನಾಡಿದ್ದೇನೆ. ಅಕ್ಷರ ಫೌಂಡೇಷನ್‌ಗೆ ನಾನೇ ಹೋಗಿದ್ದೇನೆ. ಅವರು ಏನು ಮಾಡುತ್ತಾರೆಂದರೆ, qualitative education ಗೆ ಬಂಡವಾಳ ಹೂಡುವುದಕ್ಕೆ ಬರುತ್ತಾರೆಯೇ ಹೊರತು ಇನ್‌ಫ್ರಾಸ್ಟ್ರಕ್ಚರ್ ಸುದ್ದಿಗೆ ಅವರು ಬರುವುದಿಲ್ಲ. ಶೌಚಾಲಯ ನಿರ್ಮಾಣ ಮಾಡುವುದಕ್ಕೆ ಸ್ವಲ್ಪ ಜನ ಮುಂದೆ ಬರುತ್ತಿದ್ದಾರೆ. ಅವರ ಸಹಾಯವನ್ನು ನಾವು ಬಳಸಿಕೊಳ್ಳುತ್ತಿದ್ದೇವೆ. ಖಂಡಿತವಾಗಿಯೂ ಕಂಪನಿಗಳ ಜೊತೆ ನಾನು ಮಾತನಾಡಿದ್ದೇನೆ. ಒಳ್ಳೆಯ ಜಾಗಗಳಲ್ಲಿ ಶಾಲಾ ಕಟ್ಟಡಗಳಿವೆ. ಅದರ ಬಗ್ಗೆ ಕೂಡ ನಾನು ಕಂಪನಿಗಳ ಜೊತೆ ಮಾತನಾಡಿದ್ದೇನೆ. ತುಂಬಾ ಒಳ್ಳೆಯ ಜಾಗಗಳಲ್ಲಿ ಶಾಲೆಗಳು ಇವೆ. ಕಾಪೌಂಡ್ ಇಲ್ಲ, ನೀರು ಇಲ್ಲ, ಸೋರುತ್ತದೆ, we are not having funds to reconstruct it. ಆದರೆ ನಾನು ಕಂಪನಿಗಳ ಜೊತೆ ಮಾತನಾಡುತ್ತಿದ್ದೇನೆ. ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಪ್ರಯತ್ನ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 376**
**ಉತ್ತರ ಲಗತ್ತಿಸಲಾಗಿದೆ**

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಅತ್ಯಂತ ಸೊಗಸಾದ ಉತ್ತರವನ್ನು ನೀಡಿದ್ದಾರೆ. ನಾನು ಇತ್ತೀಚೆಗೆ ಕರ್ನಾಟಕದಲ್ಲಿ ಜರುಗಿದ ಅಂತರಾಷ್ಟ್ರೀಯ ಚಲನಚಿತ್ರೋತ್ಸವಗಳಿಗೆ ಖಾಯಂ ಆಗಿ ಒಂದು ನಿರ್ದೇಶನಾಲಯ ಮತ್ತು ಕನಿಷ್ಠ 25.00 ಕೋಟಿಗಳ ವಾರ್ಷಿಕ ಅನುದಾನಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಬೇಕೆಂಬ ಅಭಿಪ್ರಾಯಗಳನ್ನು ದೇಶಿ ಮತ್ತು ವಿದೇಶಿ ಅತಿಥಿಗಳು ವ್ಯಕ್ತಪಡಿಸಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಸಚಿವರು ಸರ್ಕಾರದ ಗಮನಕ್ಕೆ ಬಂದಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಒಂದು ವೇಳೆ ಇದು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಚಲನಚಿತ್ರ ರಂಗದ ಹಿತದೃಷ್ಟಿಯಿಂದ ಇದನ್ನು ಪರಿಗಣಿಸಲಾಗುವುದೇ ಎನ್ನುವಂಥ ಪ್ರಶ್ನೆಯನ್ನು ಸಹ ಕೇಳಿದ್ದೆ. ಇದರ ಸಾಧಕ-ಬಾಧಕಗಳನ್ನು ಚರ್ಚಿಸಿ, ಸರ್ಕಾರ ಸೂಕ್ತ ನಿರ್ಧಾರವನ್ನು ಕೈಗೊಳ್ಳುತ್ತದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಸಚಿವರು ಇಷ್ಟೆಲ್ಲಾ ಸಹಕಾರವನ್ನು ನೀಡಿದ್ದರಿಂದಲೇ ಬೆಂಗಳೂರಿನಲ್ಲಿ 8ನೇ ಅಂತರಾಷ್ಟ್ರೀಯ ಚಿತ್ರೋತ್ಸವ ಇಷ್ಟೊಂದು ಯಶಸ್ವಿಯಾಗುವುದಕ್ಕೆ ಕಾರಣವಾಯಿತು. ಮಾನ್ಯ ಸಚಿವರಿಗೆ ಅದರ ಎಲ್ಲಾ ಸಾಧಕ-ಬಾಧಕಗಳು ಗೊತ್ತಿದೆ. ಒಂದು ಚಿತ್ರೋತ್ಸವ ಆಗಬೇಕೆಂದರೆ ಒಂದು ಇಡೀ ವರ್ಷ ಕೆಲಸವನ್ನು ಮಾಡಬೇಕಾಗುತ್ತದೆ. ಆ ಇಡೀ ವರ್ಷ ಚಿತ್ರೋತ್ಸವದ ಹಿಂದೆ ಪ್ರಪಂಚದಲ್ಲಿ ತಯಾರಾಗುವ ಎಲ್ಲಾ ಚಿತ್ರಗಳನ್ನು ಗಮನಿಸಬೇಕಾಗುತ್ತದೆ. ಚಲನಚಿತ್ರ ವಾಣಿಜ್ಯ ಮಂಡಳಿಯ ಹಿಂದಿನ ಅಧ್ಯಕ್ಷರಾಗಿ ನನ್ನ ಸಹೋದರಿ ತಾರಾ ಅನೂರಾಧರವರು ಕೆಲಸವನ್ನು ನಿರ್ವಹಿಸಿದ್ದಾರೆ. ಅವರಿಗೂ ಸಹ ಅದರ ಸಂಕಷ್ಟ ಅರ್ಥವಾಗುತ್ತದೆ. ಒಂದೊಂದು ಕಡೆ ಏನಾಗುತ್ತದೆ ಎಂದರೆ, ಒಂದು ಮಾತನ್ನು ಹೇಳುತ್ತೇನೆ. ನಮಗೆ ಬೇಕಾಗಿರತಕ್ಕಂಥಾದ್ದು, Directorate of Festivals ಸ್ಥಾಪನೆ ಮಾಡಲಿಕ್ಕೆ ಏನು ತೊಂದರೆ ಇದೆ? ಒಂದು ವೇಳೆ Directorate of Festivals ಸ್ಥಾಪನೆ ಮಾಡಲು ತೊಂದರೆ ಆಗುವುದಾದರೆ, ಕನಿಷ್ಠ ಕೇರಳ ರಾಜ್ಯದಲ್ಲಿ ಇರುವ ಹಾಗೆ ಒಂದು ಸೆಲ್ ಅನ್ನಾದರೂ ಕೂಡ ಸ್ಥಾಪನೆ ಮಾಡುತ್ತೀರಾ ಎಂದು ಸರ್ಕಾರವನ್ನು ಕೇಳುತ್ತೇನೆ. ಇದೊಂದು ಪ್ರಶ್ನೆಗೆ ಸರ್ಕಾರದಿಂದ ತಾವು ಉತ್ತರವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. (ಮುಂದು)

**ಶ್ರೀ ಆರ್.ರೋಷನ್ ಬೇಗ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈ ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಕೇರಳಾ ಮಾದರಿಯಲ್ಲಿ ಇಲ್ಲಿಯೂ ಸಹ ಒಂದು ಸೆಲ್ ಮಾಡುತ್ತೀರಾ ಎಂದು ಕೇಳಿದ್ದಾರೆ. ನಾನು ಮಾನ್ಯ ಸದಸ್ಯರಿಗೆ ಒಂದು ಆಶ್ವಾಸನೆಯನ್ನು ಕೊಡುತ್ತೇನೆ. ನಮ್ಮ ವಾರ್ತಾ ಇಲಾಖೆಯಲ್ಲಿ ನಾವು ಒಂದು ಸೆಲ್ ಅನ್ನು ಕ್ರಿಯೇಟ್ ಮಾಡುತ್ತೇವೆ. Bengaluru International Film Festival ಗೆ ಯಾವ ತರಹ ಕಾರ್ಯ ನಿರ್ವಹಿಸಬೇಕೆಂಬುದಕ್ಕೆ ಒಂದು ಘಟಕವನ್ನು ಈ ವರ್ಷದಿಂದಲೇ ಪ್ರಾರಂಭ ಮಾಡುತ್ತೇವೆ. ಅವರು ಬಹಳ ನೆಮ್ಮದಿಯಾಗಿರಬೇಕು. ಈ ವರ್ಷ ವಿಧಾನಸೌಧದ ಮುಂಭಾಗದಲ್ಲಿ ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆಯನ್ನು ಮಾಡಲು ನಾವು ಸುಮಾರು 5 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಶ್ರೀಮತಿ ಜಯ ಬಚ್ಚನ್‌ರವರು, ಶ್ರೀ ಸಂಜಯ್ ಲೀಲಾ ಬನ್ಸಾಲಿಯವರು, ಶ್ರೀ ಅಶೋಕ್ ಅಮೃತ್‌ರಾಜ್ ಮುಂತಾದ ದೊಡ್ಡ ವ್ಯಕ್ತಿಗಳು ಈ ಕಾರ್ಯಕ್ರಮಕ್ಕೆ ಬಂದಿದ್ದರು. ಕೆಲವು foreign producers ಮತ್ತು directors ಸಹ ಬಂದಿದ್ದರು. ಬಹಳ ಯಶಸ್ವಿಯಾಗಿ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮ ನಡೆಯಿತು. ಮುಂದಿನ ದಿನಗಳಲ್ಲಿ ನಮ್ಮ ರಾಜ್ಯ ಸರ್ಕಾರದ್ದು ಮತ್ತು ವಾರ್ತಾ ಇಲಾಖೆಯ ಒಂದು ಕನಸು ಏನೆಂದರೆ, ಬೆಂಗಳೂರು ಒಂದು destination ಆಗಬೇಕು. International Film Festival ಯಾವ ತರಹ ಗೋವಾದಲ್ಲಿ ಆಗಿದೆ, ಗೋವಾದಲ್ಲಿ ಮೊನ್ನೆ ನಡೆದಿದ್ದು 46ನೇ film festival. ನಮ್ಮಲ್ಲಿ ಇತ್ತೀಚೆಗೆ ನಡೆದದ್ದು 8ನೇ film festival. ಮುಂದಿನ ದಿನಗಳಲ್ಲಿ ಹೆಚ್ಚಿನ ರೀತಿಯಲ್ಲಿ ಬಹಳ ಚೆನ್ನಾಗಿ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿದ ಉತ್ತರಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದು ವಿಚಾರವಾಗಿ ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಗೋವಾದಲ್ಲಿ ಚಲನಚಿತ್ರೋತ್ಸವಕ್ಕಾಗಿ 18 ಕೊಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ನಮ್ಮಲ್ಲಿ ನಡೆದ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, 8 ವರ್ಷದ ಕೂಸು ಸೇರಿದಂತೆ ಈ ಚಲನಚಿತ್ರೋತ್ಸವ

ಕುರಿತಂತೆ ಇಡೀ ಪ್ರಪಂಚ ಮಾತನಾಡುತ್ತಿದೆ. ಇದು ಅತ್ಯಂತ ಯಶಸ್ವಿಯಾದಂಥಹ ಒಂದು ಚಲನಚಿತ್ರೋತ್ಸವ. ಮಾರುಕಟ್ಟೆಯನ್ನು ವಿಸ್ತರಣೆ ಮಾಡಿ ನಮ್ಮ ಸಿನಿಮಾಗಳು ಬೇರೆ ಕಡೆ ಹೋಗಬೇಕಾಗಿದೆ. ಕೇರಳಾ ಫೆಸ್ಟಿವಲ್‌ಗೆ 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಕಲ್ಕತ್ತಾದಲ್ಲಿ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದ್ದರಿಂದ, ಇದರ ಬಗ್ಗೆ ಒಂದಿಷ್ಟು ಗಮನಹರಿಹಸಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಆರ್.ರೋಷನ್ ಬೇಗ್:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನಾನು 6 ತಿಂಗಳ ಹಿಂದೆ France ಗೆ ಹೋಗಿದ್ದೆ. Cannes Film Festival ಎಂದು International Film Festival ಆಗಿದ್ದು, ನಾನು ಅಲ್ಲಿಗೆ ಹೋಗಿ ಬಂದೆ. ಅಲ್ಲಿ ನನ್ನ ಗಮನಕ್ಕೆ ಏನು ಬಂತು ಎಂದರೆ International Film Festival ಬರಲಿ, Indian International Film Festival, Cannes Film Festival, ಈ ರೀತಿಯ ಫೆಸ್ಟಿವಲ್‌ಗಳು ಏನಾಗುತ್ತವೆ, ಅವುಗಳಿಗೆ ಸರ್ಕಾರದ ವತಿಯಿಂದ ಒಂದು ನಯಾ ಪೈಸೆ ಖರ್ಚು ಮಾಡುವುದಿಲ್ಲ. ಅಲ್ಲಿ ಬೇರೆ ಬೇರೆ ಕಂಪನಿಗಳು sponsor ಮಾಡುತ್ತವೆ. ಆ ರೀತಿಯಲ್ಲಿ ನಾವು ಮುಂದಿನ ದಿನಗಳಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೆ, International Film Festival ಗೆ . . .

**ಉಪ ಸಭಾಪತಿಯವರು:** ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಶ್ರೀಮತಿ ಜಯಮಾಲ ರವರೆ, ಕುಳಿತುಕೊಳ್ಳಿ.

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳು**

**ಚುಕ್ಕೆ ಪ್ರಶ್ನೆ ಸಂಖ್ಯೆ: 186**

**(ಉತ್ತರವನ್ನು ಒದಗಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ರವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ನನ್ನ ಮೊದಲ ಪ್ರಶ್ನೆ ಏನೆಂದರೆ, ಬೇರೆ ಬೇರೆ ಕಾರ್ಯಾಚರಣೆಗಳಲ್ಲಿ ಅಥವಾ ಯುದ್ಧದಲ್ಲಿ ತೀರಿಕೊಂಡರೆ (ಆಗಬಾರದು) ಯೋಧರಿಗೆ ಕೊಡುವಂತಹ ವಿಶೇಷ ಪರಿಹಾರದ ಬಗ್ಗೆ ನಮ್ಮಲ್ಲಿ ಮಾನದಂಡಗಳಿವೆಯೇ? ಇಲ್ಲದಿದ್ದರೆ, ಇನ್ನು ಮುಂದಿನ ದಿನಗಳಲ್ಲಿ ಎಲ್ಲರಿಗೂ ಸಮಾನವಾಗಿ ಈ ಒಂದು ಪರಿಹಾರ ಕೊಡುವುದಕ್ಕಾಗಿ ಒಂದು ಮಾನದಂಡವನ್ನು ರಚನೆ ಮಾಡುತ್ತೀರಾ? ಏಕೆಂದರೆ, ಇತ್ತೀಚೆಗೆ ಇಡೀ ದೇಶದ ಗಮನಸೆಳೆದಂತಹ ಸಿಯಾಚಿನ್ ಹಿಮಪಾತ ಏನಿದೆ, ಅಲ್ಲಿ ಮೃತರಾದಂತಹ ಯೋಧರಿಗೆ 25 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ, ಕೊಟ್ಟಿಲ್ಲ, ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅದೇ ರೀತಿ ಅದರ ನಂತರ ಸದಾಶಿವ ಮೊರೆಯವರು ತೀರಿಕೊಂಡರು. ಅವರಿಗೆ ತಾವು 20 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದ್ದೀರಿ. ಹಿಂದೆ ತೀರಿಕೊಂಡಂತಹ ಯೋಧರಿಗೆ ಕೊಟ್ಟಿರುವಂತಹದ್ದು 5 ಲಕ್ಷ, 2 ಲಕ್ಷ, 3 ಲಕ್ಷ ಈ ರೀತಿಯಲ್ಲಿ ಕೊಟ್ಟಿದ್ದೀರಿ. ಹಾಗಾಗಿ, ಮುಂದಿನ ದಿನಗಳಲ್ಲಿ Peacetime Operations ಮತ್ತು Special Operations ಇದಕ್ಕೆ ಕೊಡುವಂತಹ ಪರಿಹಾರದ ಬಗ್ಗೆ ತಾವು ಒಂದು ಮಾನದಂಡವನ್ನು ರೂಪಿಸುವಂತಹ ಅವಶ್ಯಕತೆ ಇದೆ. ಹೆಚ್ಚು ಪ್ರಚಾರ ಸಿಕ್ಕಿತು, ಹೆಚ್ಚು ಟೆಲಿವಿಷನ್‌ನಲ್ಲಿ ಬಂತು ಎಂದು ಹೇಳಿದ ತಕ್ಷಣ ನಾವು ಭಾವುಕರಾಗಿ ಹೆಚ್ಚು ಹಣವನ್ನು ಘೋಷಣೆ ಮಾಡಿಬಿಡುತ್ತೇವೆ. ಆದರೆ, ಒಬ್ಬ ಸೈನಿಕ ಎಲ್ಲಿ ತೀರಿಕೊಂಡರೆ, ಹೇಗೆ ತೀರಿಕೊಂಡರೂ ಸಹ ಅದು ದೇಶಕ್ಕಾಗಿ ಮಾಡಿದಂತಹ ಬಲಿದಾನ. ಎಲ್ಲರನ್ನೂ ಸಹ ಸಮಾನವಾಗಿ ಕಾಣಬೇಕೆನ್ನುವ ದೃಷ್ಟಿಯಿಂದ ಆ ಪರಿಹಾರದ ಬಗ್ಗೆ ಒಂದು ಮಾನದಂಡವನ್ನು ರೂಪಿಸುವಂತಹ ಅವಶ್ಯಕತೆ ಇದೆ. ಎರಡನೆಯದಾಗಿ, ತಾವು ಏನು ಪರಿಹಾರವನ್ನು ಕೊಡುತ್ತೀರಿ, ಅದನ್ನು ವಿಶೇಷ ಪರಿಹಾರವೆಂದು ಕರೆಯಿರಿ. ಅದಕ್ಕೆ ಅಭ್ಯಂತರವಿಲ್ಲ. ಆದರೆ, ಇಲ್ಲಿ ಅದನ್ನು ಅನುಗ್ರಹ

ಪೂರ್ವಕ ಅನುದಾನ ಎಂದು ಹೇಳಿದ್ದೀರಿ. ನಾವು ಕೊಡುತ್ತಿರುವಂತಹದ್ದು ಪರಿಹಾರ. ಅವರು ಕೇಳಿರುವಂತಹದ್ದು ಪರಿಹಾರ ಆದರೆ, ಇಲಾಖೆ ಕೊಡುತ್ತಿರುವಂತಹ ಹೆಸರುಗಳಿವೆ. 'ಅನುಗ್ರಹ ಪೂರ್ವಕ ಅನುದಾನ' ಎಂದು ಇದೆ. ಅದನ್ನು ತಾವು ಸ್ವಲ್ಪ ಬದಲಾವಣೆ ಮಾಡಿಕೊಂಡು ಅವರ ವಿಶೇಷ ಸೇವೆ, ತ್ಯಾಗ ಬಲಿದಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ತಾವು ದಯವಿಟ್ಟು ವಿಶೇಷ ಪರಿಹಾರ ಎಂದು ಕೊಡಬೇಕೆನ್ನುವುದು ನನ್ನ ಎರಡನೆಯ ವಿನಂತಿ.

3ನೆಯದಾಗಿ, 2011ರಲ್ಲಿ ಆಗಿರುವಂತಹ Operation Falcon ರಲ್ಲಿ ತೀರಿದವರು. ಅವರಿಗೆ ಅರ್ಜಿ ಸ್ವೀಕೃತವಾಗಿಲ್ಲ. ಪರಿಶೀಲನೆಯಲ್ಲಿದೆ. ಮೊದಲನೆಯ ಕಂತನ್ನು ಕೊಟ್ಟಿದ್ದೇವೆ. ಎರಡನೆಯ ಕಂತನ್ನು ಕೊಟ್ಟಿಲ್ಲ. 5 ವರ್ಷ ಬೇಕು, 4 ವರ್ಷ ಬೇಕೆಂದು ಪ್ರಮಾಣಿಕವಾಗಿ ಹೇಳಬೇಕು. ಕೊಟ್ಟಿರುವುದು 3 ಲಕ್ಷ ರೂಪಾಯಿಗಳು. ಅದರಲ್ಲಿ ಎರಡು ಕಂತುಗಳಲ್ಲಿ ನೀಡಲಾಗಿದೆ. ರೂಪಾಯಿ 1.50 ಲಕ್ಷ ರೂಪಾಯಿಗಳು ಬಾಕಿ ಉಳಿದಿರುತ್ತದೆ. ಯಾವ ಕಾರಣಕ್ಕೋಸ್ಕರ ಬಾಕಿ ಉಳಿದಿದೆ? ನಮ್ಮ ಮಿಲಿಟರಿ ಸೇವೆಯಲ್ಲಿ Regimental Records ಎಂದು ಇರುತ್ತದೆ. ತಮಗೆ ಯಾವುದೇ ಮಾಹಿತಿ ಬೇಕಿದ್ದರೂ ಸಹ ಸಿಗುತ್ತದೆ. You just apply to Regimental Records; they will give you every detail. Next of kin ಯಾರು ಎಂದು ಹೇಳುವುದನ್ನು ವೆರಿಫೈ ಮಾಡುವುದನ್ನು ಬಿಟ್ಟರೆ ಬೇರೆ ಯಾವ ಮಾಹಿತಿಯ ಅಗತ್ಯವೂ ಇಲ್ಲ. ಆದರೆ, ಇಲ್ಲಿ ತಮ್ಮ ಉತ್ತರವನ್ನು ನೋಡಿದರೆ, ಪರಿಶೀಲನೆಯಲ್ಲಿದೆ, ಪರಿಶೀಲನೆಯಲ್ಲಿದೆ, ಎಂದು ಹೇಳಿದ್ದೀರಿ. ಹಾಗಾಗಿ, ತಮ್ಮಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಸೈನಿಕರು ವಿವಿಧ ಕಾರಣಗಳಿಗೋಸ್ಕರ ತಮ್ಮ ಪ್ರಾಣಾರ್ಪಣೆ ಮಾಡುತ್ತಾರೆ, ನಾವು ಏನು ಪರಿಹಾರವನ್ನು ಕೊಡುತ್ತೇವೆ, ಅದನ್ನು ಸರಿಯಾದ ಸಮಯದಲ್ಲಿ ಕೊಟ್ಟರೆ ಅದಕ್ಕೆ ಒಂದು ಬೆಲೆ, ಗೌರವ ಇರುತ್ತದೆ. ಈ ಬಗ್ಗೆ ಸನ್ಮಾನ್ಯ ಸದಸ್ಯರಾದ ಶ್ರೀಯುತ ಬಿ.ಜೆ.ಪುಟ್ಟಸ್ವಾಮಿಯವರು ಇವತ್ತು ಬೆಳಿಗ್ಗೆ ಉಲ್ಲೇಖ ಮಾಡಿದರು. ಅವರು ಅದಕ್ಕಾಗಿ ಪರದಾಡುವಂತಹ ಸಂಗತಿ, ಅವರು ಅದಕ್ಕಾಗಿ ಆಫೀಸ್‌ಗಳಿಗೆ ಅಲೆದಾಡುವಂತಹ ಸಂಗತಿ, ಪರಿಶೀಲನೆಯಲ್ಲಿದೆ ಎಂದು ಹೇಳುವ ಮೂಲಕ ಸಂಬಂಧಪಟ್ಟ ಅಧಿಕಾರಿಗಳು ತೊಂದರೆ ಮಾಡುವ ಸಂಗತಿ. ಈ ರೀತಿಯಲ್ಲಿ ಮಾಡದೇ ಸಮಾನ

ಮಾನದಂಡ ಇಟ್ಟುಕೊಂಡು ಅವರಿಗೆ ಸರಿಯಾದ ಸಮಯದಲ್ಲಿ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, 2011 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ 9 ಜನ ಯೋಧರು ವೀರ ಮರಣವನ್ನು ಹೊಂದಿದ್ದಾರೆ. 2011 ರಲ್ಲಿ 3 ಜನರು, ಕರ್ನಲ್ ನಂಜಪ್ಪ, ಎಲ್ ಅವಿಲ್ದಾರ್ ಗಿರೀಶ್, Madras Regiment ನವರು ಮತ್ತು ಗನ್ನರ್ ಅಶೋಕ್ ಮಾಯಣ್ಣನವರ್, ಎಲ್.ಬಿ.ಹೆಚ್.ಯೋಗಾನಂದ, ಮತ್ತು ಕರ್ನಲ್ ನಿರಂಜನ್ ರವರು ಇತ್ತೀಚೆಗೆ ಅಂದರೆ 2016 ರಲ್ಲಿ ವೀರ ಮರಣ ಹೊಂದಿದ್ದಾರೆ. ಮತ್ತೆ ಸಿಯಾಚಿನ್‌ನಲ್ಲಿ 3 ಜನರು ಅಂದರೆ, ಸಿಪಾಯಿ ಮಹೇಶ್, ಸುಬೇದಾರ್ ನಾಗೇಶ್, ಲ್ಯಾಂಡ್ಸ್ ನಾಯಕ್, ಹನುಮಂತಪ್ಪ ಕೊಪ್ಪದ್ ಮತ್ತು ಸಿಪಾಯಿ ಸದಾಶಿವ ಮಾರುತಿ ರವರು ಮರಣ ಹೊಂದಿರುತ್ತಾರೆ. 2011 ರಲ್ಲಿ ಪರಿಹಾರ ಕೊಟ್ಟಿರುವಂತಹದ್ದು ಕೇವಲ 2 ಲಕ್ಷ ರೂಪಾಯಿಗಳು. ಏತಕ್ಕೆ ಆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾನು ಹಿಂದಿನ ವಿಷಯಕ್ಕೆ ಹೋಗುವುದಿಲ್ಲ. ಆದರೆ, ಇತ್ತೀಚೆಗೆ ನಮ್ಮ ಸರ್ಕಾರ ಬಂದ ಮೇಲೆ ನಾವು ಅದನ್ನು 5 ಲಕ್ಷ ರೂಪಾಯಿಗಳಿಗೆ ಎಕ್ಸ್‌ಗ್ರೇಷಿಯಾ ಎಂದು ಹೇಳಿ ಹೆಚ್ಚು ಮಾಡಿದ್ದೇವೆ. ಅದರ ಜೊತೆಗೆ ಇತ್ತೀಚೆಗೆ ಸಿಯಾಚಿನ್‌ನಲ್ಲಿ ಮಡಿದಂತಹವರಿಗೆ 5 ಲಕ್ಷ ರೂಪಾಯಿಗಳ ಎಕ್ಸ್‌ಗ್ರೇಷಿಯಾ ಜೊತೆಗೆ 25 ಲಕ್ಷ ರೂಪಾಯಿಗಳನ್ನು ಮುಖ್ಯಮಂತ್ರಿಗಳ ನಿಧಿಯಿಂದ ಕೊಟ್ಟಿರುವಂತಹದ್ದಾಗಿದ್ದು, ನಾವು ಈಗಾಗಲೇ ಅ ಹಣವನ್ನು ಅವರಿಗೆ ಪಾವತಿ ಮಾಡಿದ್ದೇವೆ. ಅದರಲ್ಲಿ ಯಾವುದೇ ರೀತಿಯಲ್ಲಿ ಪರಿಶೀಲನೆ ಮಾಡುವಂತಹದ್ದು ಇಲ್ಲ. ಇದರ ಜೊತೆಗೆ ನಾವು ಅವರಿಗೆ 4 ಎಕರೆ ಭೂಮಿ, ಮತ್ತು ಒಂದು ಸೈಟ್ ಅನ್ನು, ಮತ್ತು ಅವರ ಮನೆಯವರಿಗೆ ಒಂದು ಕೆಲಸವನ್ನು ಕೊಡುವಂತಹದ್ದು ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡವಂತಹದ್ದನ್ನು ಸಹ ಪ್ರಕಟಣೆ ಮಾಡಿದ್ದೇವೆ. ಇದನ್ನು ನಾವು ಪರಿಶೀಲನೆಯಲ್ಲಿ ಇದೆ ಎಂದು ಹೇಳುವಂತಹದ್ದಾಗಿದೆ. ಇತ್ತೀಚೆಗೆ ನಡೆದಂತಹ ಪ್ರಕರಣಗಳ ಸಂಬಂಧ ಹಣವನ್ನು ನಾವು ಈಗಾಗಲೇ ಅವರುಗಳಿಗೆ ತಲುಪಿಸಿದ್ದೇವೆ. ಸೈಟ್ ಕೊಡುವಂತಹದ್ದು, ಜಮೀನು ಕೊಡುವಂತಹದ್ದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಅವರು ಅದನ್ನು ಹುಡುಕಿದ ತಕ್ಷಣ, ಅದನ್ನು ಅವರಿಗೆ ನಾವು ಕೊಡುತ್ತೇವೆ.

ತಾವು ಇದಕ್ಕೆ ಮಾನದಂಡ ಇದೆ ಎನ್ನುವ ಬಗ್ಗೆ ಪ್ರಶ್ನೆ ಕೇಳಿದ್ದೀರಿ. ಕೇಂದ್ರ ಸರ್ಕಾರ ಇದಕ್ಕೆ ಈಗಾಗಲೇ ರಕ್ಷಾ ಮಂತ್ರಾಲಯದಲ್ಲಿ ಇದಕ್ಕೆ ಮಾನದಂಡಗಳನ್ನು ಕೊಟ್ಟಿದ್ದಾರೆ. ಅದಕ್ಕೆ ತೀರ್ಮಾನ ಮಾಡುವಂತಹವರು ಸಹ ಅವರೇ ಆಗಿದ್ದಾರೆ. ಸರ್ಟಿಫೈ ಮಾಡುವಂತಹವರು ಅವರೇ ಆಗಿದ್ದಾರೆ. Conduct of Court of Inquiry ಎಂದು ತಮಗೆ ಗೊತ್ತಿರಬಹುದು. ಅವರು ತೀರ್ಮಾನ ಮಾಡಿ ನಮಗೆ ಸೂಚನೆಯನ್ನು ಕೊಡುತ್ತಾರೆ. ಅಲ್ಲಿಯವರೆಗೂ ನಾವು ಕಾಯುವುದಕ್ಕೆ ಹೋಗುವುದಿಲ್ಲ. ಈಗ ನಾವು ಹೊಸದಾಗಿ ಏನು ಮಾಡಿದ್ದೇವೆಂದರೆ ನಮ್ಮ ಎಕ್ಸ್‌ಗ್ರೇಷಿಯಾ ಅಮೌಂಟ್ ಅನ್ನು ಅಮೇಲೆ ಕೊಡಬೇಕು. Court of Inquiry ಆದ ಮೇಲೆ, ಅವರು ಸರ್ಟಿಫೈ ಮಾಡಿದ ಮೇಲೆ ನಾವು ಕೊಡಬೇಕು. ಆದರೆ, ನಾವು ಅಲ್ಲಿಯವರೆಗೆ ಕಾಯುವುದು ಬೇಡವೆಂದು ಹೇಳಿ, ಇತ್ತೀಚೆಗೆ ಏನು ತೀರಿಕೊಂಡಿದ್ದಾರೆ, ಅವರಿಗೆ ನಾವು ಈಗಾಗಲೇ ಪರಿಹಾರವನ್ನು ಕೊಟ್ಟುಬಿಟ್ಟಿದ್ದೇವೆ. ಆದ್ದರಿಂದ, ಆ ಒಂದು ಮಾನದಂಡವನ್ನು ಕಾದುಕೊಂಡು ಕುಳಿತರೆ ಆಗುವುದಿಲ್ಲವೆಂದು . . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನದಂಡ ಎಂದರೆ, ಅದು ಕೊಡುವುದರ ಬಗ್ಗೆ ಅಲ್ಲ. ಎಷ್ಟು ಕೊಡುತ್ತೇವೆ, ಏನು ಕೊಡುತ್ತೇವೆ ಎನ್ನುವುದಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕೊಡುತ್ತಾರೆ.

**ಡಾ|| ಜಿ.ಪರಮೇಶ್ವರ್:-** ನಮ್ಮ ರಾಜ್ಯದಲ್ಲಿ ನಾವು ಮಾಡಿಕೊಂಡಿರುವುದೇನೆಂದರೆ ಎಕ್ಸ್‌ಗ್ರೇಷಿಯಾ 5 ಲಕ್ಷ ರೂಪಾಯಿಗಳು, ಜಮೀನಿನ ಬದಲಿಗೆ ನಗದು ಕೇಳಿದರೆ 1 ಲಕ್ಷ ರೂಪಾಯಿಗಳು. ಮನೆಯ ಬದಲಿಗೆ ಆಫೀಸರ್‌ಗಳಿಗೆ ಮತ್ತು ಜೆ.ಸಿ.ಓ.ಗಳಿಗೆ ನಗದು ಅನುದಾನ 6 ಲಕ್ಷ ರೂಪಾಯಿಗಳು. ಮತ್ತು ಇತರರಿಗೆ 4.50 ಲಕ್ಷ ರೂಪಾಯಿಗಳು. ಆಫೀಸರ್‌ಗಳಿಗೆ ಮತ್ತು ಜೆಸಿಓ.ಗಳಿಗೆ 60x40 ಅಳತೆಯ ನಿವೇಶನ. ಇತರರಿಗೆ 30x40 ಅಳತೆಯ ನಿವೇಶನ. ಮತ್ತೆ ಅವರ ಅವಲಂಬಿತರಿಗೆ ಉಚಿತ ಬಸ್‌ಪಾಸ್ ಎನ್ನುವಂತಹದ್ದು ಇದ್ದು, ಅದನ್ನು ಕೊಡುತ್ತಿಲ್ಲ.

ಮುಂದು. . .

(ಉಪ ಸಭಾಪತಿಯವರ ಉಪಸ್ಥಿತಿ)

ಡಾ:ಜಿ.ಪರಮೇಶ್ವರ್(ಮುಂದುವರೆದುದು ...

ಮನೆ ಕಂದಾಯ ಮರುಪಾವತಿಗೆ, ಆಫೀಸರ್ಸ್ ಜೆಸಿಓ ಗಳಿಗೆ ರೂ. 2000/- ಮತ್ತು ಇತರರಿಗೆ ರೂ. 500/- ಹೆಣ್ಣು ಮಕ್ಕಳ ಮದುವೆ ಸಂದರ್ಭದಲ್ಲಿ ರೂ. 20,000/- ಅನುದಾನ ನೀಡುವುದು. ಇದು ನಮ್ಮ ಸೈನಿಕ ನಿರ್ದೇಶನಾಲಯದಲ್ಲಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಮಾಡಿಕೊಂಡಿರುವುದು. ಆದ್ದರಿಂದ ಅದರಲ್ಲಿ ಯಾವುದೇ ವಿಳಂಬ ಆಗದಂತೆ ನಿಯಮದ ಪ್ರಕಾರ ಅವರಿಗೆ ಅದನ್ನು ಮಂಜೂರು ಮಾಡಲಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಕರ್ನಲ್ ನಿರಂಜನ್ ಅವರು ತೀರಿಕೊಂಡಿದ್ದು ದಿನಾಂಕ: 3ನೇ ಜನವರಿ 2016ರಲ್ಲಿ, ಅವರ ಕುಟುಂಬದವರಿಗೂ ಸಹ ರೂ. 25 ಲಕ್ಷಗಳನ್ನು ನೀಡಲಾಗುತ್ತದೆಯೇ?

**ಡಾ:ಜಿ.ಪರಮೇಶ್ವರ್:-** ಹೌದು, ಅವರಿಗೂ ಕೊಡುತ್ತೇವೆ. ಆ ಪ್ರಕಟಣೆ ಮಾಡಿದ್ದೇವೆ. ಆದರೆ ಅವರು ತಮ್ಮ ಪದ್ಧತಿಯಲ್ಲಿರುವ ವಿಧಿವಿಧಾನಗಳನ್ನು ನೆರವೇರಿಸುವ ಸಲುವಾಗಿ ಕೇರಳಕ್ಕೆ ಹೋಗಿದ್ದು, ಅಲ್ಲಿಂದ ವಾಪಸ್ ಬಂದ ಮೇಲೆ ಕೇಳುವುದಾಗಿ ತಿಳಿಸಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಇನ್ನು ಮುಂದೆ ಈ ರೀತಿ ಮೃತಪಟ್ಟ ಎಲ್ಲ ಯೋಧರಿಗೂ 25 ಲಕ್ಷ ರೂಪಾಯಿಗಳನ್ನು ಕೊಡುವುದು ಸರ್ಕಾರದ ನಿರ್ಣಯವೇ?

**ಡಾ:ಜಿ.ಪರಮೇಶ್ವರ್:-** ಸದ್ಯಕ್ಕೆ ಅದನ್ನು ನಾವು ನಿರ್ಣಯ ಎಂದು ಮಾಡಿಲ್ಲ. ಏಕೆಂದರೆ ಮುಖ್ಯಮಂತ್ರಿಗಳು ಅವರ ನಿಧಿಯಿಂದ ಕೊಡುವಂಥದ್ದು, ಆ ಸಂದರ್ಭ ನೋಡಿಕೊಂಡು ನಾವು ಕೊಡುತ್ತೇವೆ. Ex-gratia amount ಹಿಂದೆ ಏನು 1 ಲಕ್ಷ, 2 ಲಕ್ಷ ರೂಪಾಯಿಗಳನ್ನು 2011ರಲ್ಲಿದ್ದಂತಹ ಬಿ.ಜೆ.ಪಿ. ಸರ್ಕಾರದವರು ಕೊಟ್ಟಿದ್ದಾರೆ. ಈಗ ಅದನ್ನು ನಾವು ಬದಲಾವಣೆ ಮಾಡಿ ರೂ. 5.00 ಲಕ್ಷಗಳ ಪರಿಹಾರವನ್ನು ನೀಡುವ ನಿರ್ಣಯವನ್ನೇನು ಮಾಡಿದ್ದೇವೆ, ಅದನ್ನು ಖಂಡಿತವಾಗಿಯೂ ಮುಂದುವರೆಸುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈಗ 25 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಮುಂದೆ ಕೊಡದಿದ್ದರೆ ಅದನ್ನು ಕೆಲವರಿಗೆ ಕೊಟ್ಟು, ಕೆಲವರಿಗೆ ಕೊಡದಿರುವಂತಹ ಪರಿಸ್ಥಿತಿ

ನಿರ್ಮಾಣವಾಗುತ್ತದೆ. ಆದ್ದರಿಂದ ಆ ರೀತಿ ಆಗುವುದು ಬೇಡವೆಂಬ ಉದ್ದೇಶದಿಂದ ಈ ವಿಚಾರವನ್ನು ಕೇಳುತ್ತಿದ್ದೇನೆ.

**ಡಾ:ಜಿ.ಪರಮೇಶ್ವರ್:–** ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಶ್ರೀ ಸಹದೇವ್ ಮಾರುತಿ ಮೋರೆ ಎಂಬ ಒಬ್ಬ ಯೋಧ ಕಾಶ್ಮೀರ ಉಗ್ರಗಾಮಿಗಳ ಜೊತೆಯಲ್ಲಿ ಹೋರಾಟ ಮಾಡಿ ನಿಧನ ಹೊಂದಿದ್ದು, ಅವರ ಕುಟುಂಬದವರಿಗೂ ಕೂಡ 25 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಲಾಗಿದೆ. ಹೀಗಾಗಿ ಈ ನಿರ್ಣಯದಿಂದ ಹಿಂದೆ ಹೋಗುವಂತಹ ಪ್ರಶ್ನೆ ಬಹುತರವಾಗಿ ಉದ್ಭವಿಸುವುದಿಲ್ಲ ಎನ್ನುವುದನ್ನು ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 347**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ನೀಡಿರುವ ಉತ್ತರದ ರೀತ್ಯಾ 2013–14ನೇ ಸಾಲಿನಲ್ಲಿ ಹಾಗೂ 2014–15ನೇ ಸಾಲಿನಲ್ಲಿ ಒಟ್ಟು 4173 ಅತ್ಯಾಚಾರ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿವೆ. ಅದರಲ್ಲಿ ಮಹಿಳೆಯರ ಮೇಲೆ 2002 ಅತ್ಯಾಚಾರಗಳು ಅಪ್ರಾಪ್ತರ ಮೇಲೆ 2177 ಅತ್ಯಾಚಾರದ ಪ್ರಕರಣಗಳು ವರದಿಯಾಗಿವೆ. ಈ ಒಟ್ಟು 4173 ಪ್ರಕರಣಗಳಲ್ಲಿ ಕೇವಲ 89 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಇದರ ಜೊತೆಗೆ ಬಾಕಿ ಇರುವಂತಹ ಪ್ರಕರಣಗಳ ಸಂಖ್ಯೆ 2438 ಆಗಿದೆ. ಇನ್ನು ಉಳಿದಂಥದ್ದು 1553 ಪ್ರಕರಣಗಳಾಗಿದ್ದು, ಬಹುಶಃ ಅವರು ಆ ಅಂಕಿಅಂಶವನ್ನು ಕೊಟ್ಟಿಲ್ಲ. ಇದನ್ನು ಲೆಕ್ಕಾಚಾರ ಹಾಕಿದರೆ 1553 ಪ್ರಕರಣಗಳು acquittal ಆಗಿವೆ. ಇದರಲ್ಲಿ 1735 ಪ್ರಕರಣಗಳೇನು acquittal and conviction ಆಗಿರುವುದರಲ್ಲಿ ಶೇಕಡಾವಾರು ಪ್ರಮಾಣವನ್ನು ನೋಡಿದರೆ conviction ಆಗಿರುವುದು ಕೇವಲ ಶೇಕಡ 4 ರಿಂದ 5 ಇರಬಹುದು. ಇಷ್ಟು low rate conviction ಆಗಿರುವುದಕ್ಕೆ ಕಾರಣವೇನು? ನಾವು ಇವತ್ತು ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಒಂದು ಕಡೆ ಆ ಬಗ್ಗೆ ಅರಿವನ್ನು ಮೂಡಿಸುವಂಥದ್ದು, ಮತ್ತೊಂದು ಕಡೆ ಯಾರು ತಪ್ಪಿತಸ್ಥರಿದ್ದಾರೆ, ಅವರಿಗೆ 100ಕ್ಕೆ 99ರಷ್ಟು conviction ಆದರೆ ಮಾತ್ರ ಇದರಲ್ಲಿ ಸಿಕ್ಕಿಹಾಕಿಕೊಂಡರೆ ಕಷ್ಟ ಎನ್ನುವ ಸಂದೇಶ ಸಾರ್ವಜನಿಕರಲ್ಲಿ ಹೋಗುತ್ತದೆ. ಆದರೆ conviction rate ಈ ರೀತಿ ಏಕೆ ಕಡಿಮೆಯಾಗುತ್ತಿದೆ ಎನ್ನುವ ವಿಚಾರದ ಬಗ್ಗೆ ನಾನು ಪ್ರಶ್ನೆ ಹಾಕುತ್ತಿಲ್ಲ; ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತೇನೆ, ಒಬ್ಬ ಹಿರಿಯ ಐ.ಪಿ.ಎಸ್. ಅಧಿಕಾರಿ who is a Commissioner of Mangalore ಅವರು ಏನು ಹೇಳಿದ್ದಾರೆ ಎಂದರೆ, ಸರ್ ನಾವು ಚಾರ್ಜ್‌ಶೀಟ್ ಹಾಕಿದ ಮೇಲೆ there ends the matter. ನಮ್ಮದೇನೂ ಪಾತ್ರ ಇಲ್ಲ ಎಂಬುದನ್ನು on record ಹೇಳಿರುವುದು ನಮ್ಮ ದಾಖಲೆಯಲ್ಲಿದೆ. ನಾನು ಮಾನ್ಯ ಗೃಹ ಸಚಿವರಿಗೆ ಪತ್ರವನ್ನು ಬರೆದಿದ್ದೇನೆ. ಪೊಲೀಸರು ಪ್ರಕರಣದ ಬಗ್ಗೆ ಚಾರ್ಜ್ ಶೀಟ್ ಹಾಕಿದ ಮೇಲೆ ಮುಗಿಯಿತು ಎಂದರೆ, who has to bring the witnesses? Who has to produce the materials which were seized? ಈ ಸಂದರ್ಭದಲ್ಲಿ ನಾನು ಇಷ್ಟನ್ನು ಮಾತ್ರ ಕೇಳಬಯಸುತ್ತೇನೆ, ಈ conviction rate reverse ಆಗಲಿಕ್ಕೆ,

acquittal rate 1 ಅಥವಾ 2%ಗೆ ಬಂದು, conviction rate 95 ಅಥವಾ 98% ಆಗುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದು ನನ್ನ ಮೊದಲನೆಯ ಉಪ ಪ್ರಶ್ನೆಯಾಗಿದೆ.

ಇನ್ನು ಎರಡನೆಯದಾಗಿ ಏನು acquittals ಇವೆ, ನನ್ನ ಮಾಹಿತಿ ಪ್ರಕಾರ ಯಾವುದೇ acquittal case ನಲ್ಲಿ appeals have not been filed. Invariably conviction ಹಾಕಿರುವಂತಹ ಎಲ್ಲ ಪ್ರಕರಣಗಳಲ್ಲಿ appeals have been filed. Are you going to prefer appeals in all the cases?

ಇನ್ನು ಮೂರನೆಯದಾಗಿ ಈ ರೀತಿ ಅತ್ಯಾಚಾರಕ್ಕೆ ಒಳಗಾಗಿರತಕ್ಕಂತಹ ಸಂತ್ರಸ್ಥರು ಅಂದರೆ victims ಯಾರಿದ್ದಾರೆ, ಇವರಿಗೆ ಕಾಲಮಿತಿಯಲ್ಲಿ ಕಾನೂನಿನ ಅಡಿಯಲ್ಲಿ ಸಿಗುವಂತಹ ಪರಿಹಾರ, ಅವರು ಮೈನರ್ ಆಗಿದ್ದರೆ 4.5 ಲಕ್ಷ, ಮೇಜರ್ ಆಗಿದ್ದರೆ 3.00 ಲಕ್ಷ ಪರಿಹಾರವನ್ನು ನೀಡಬೇಕಾಗುತ್ತದೆ. ಏಕೆಂದರೆ ಈ ರೀತಿ ಅತ್ಯಾಚಾರಕ್ಕೆ ಒಳಗಾಗಿರುವಂತಹ ಬಹುತೇಕ ಜನ ಶೋಷಿತ ವರ್ಗಕ್ಕೆ ಸೇರಿರುವಂಥವರಾಗಿದ್ದಾರೆ. ಹಾಗಾಗಿ ಸರ್ಕಾರ ಈ 3 ಉಪ ಪ್ರಶ್ನೆಗಳಿಗೆ ಪರಿಣಾಮಕಾರಿಯಾದಂತಹ ಉತ್ತರ ನೀಡಬೇಕೆಂದು ಮತ್ತು ಕ್ರಮಗಳನ್ನು ಜರುಗಿಸಬೇಕೆಂದು ನಾನು ವಿನಂತಿಸುತ್ತೇನೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, "ಅತ್ಯಾಚಾರ, ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿ" ಎಂದು ಇದಕ್ಕಾಗಿಯೇ ಸರ್ಕಾರದಲ್ಲಿ ಒಂದು ಸಮಿತಿಯನ್ನೇನು ರಚನೆ ಮಾಡಿದ್ದೇವೆ ಅದಕ್ಕೆ ಮಾನ್ಯ ಉಗ್ರಪ್ಪನವರು ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಈ ವಿಚಾರದಲ್ಲಿ ಅವರೇ ಸಲಹೆ ಕೊಡಬೇಕು. ಅಲ್ಲದೆ ಅವರು ಅಡ್ವೋಕೇಟ್ ಇದ್ದಾರೆ, ವಿಷಯವನ್ನು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡುತ್ತಾರೆ. ಇಡೀ ರಾಜ್ಯದಲ್ಲಿ ಈಗಾಗಲೇ 9 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬಹಳ ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಆ ಜಿಲ್ಲೆಗಳಿಗೆ ಭೇಟಿ ಕೊಟ್ಟು, ಅಲ್ಲಿನ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಅಲ್ಲಿ ಆಗಿರುವಂತಹ short comings ಏನಿದೆ, lacunas ಏನಿದೆ, ಕಾನೂನಿನಲ್ಲಿ ಏನೆಲ್ಲಾ ಇದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ಈ 9 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಒಂದು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅವರು ಸರ್ಕಾರಕ್ಕೆ ಸಲಹೆ

ಕೇಳುತ್ತಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಆದರೆ, ಅವರೇ ನಮಗೆ ಸಲಹೆ ಕೊಡಬೇಕು. ಅದಕ್ಕಾಗಿಯೇ ನಾವು ಈ ಸಮಿತಿಯನ್ನು ರಚನೆ ಮಾಡಿ ನೀವು ಸಲಹೆ ಕೊಡಿ ಎಂದು ಕೇಳಿದ್ದೇವೆ. ಅವರು ಏನು ಸಲಹೆ ಕೊಡುತ್ತಾರೆಯೋ ಅದನ್ನು ನಾವು ಚಾಚೂ ತಪ್ಪದೆ, ಖಂಡಿತವಾಗಿಯೂ ಕಾರ್ಯಗತ ಮಾಡುತ್ತೇವೆ. ಆದರೆ ಒಂದಂತೂ ನಿಜ, ಸರ್ಕಾರ ಈ ವ್ಯವಸ್ಥೆಯಲ್ಲಿ ...

**ಉಪ ಸಭಾಪತಿಯವರು:-** ಅವರು ಮುಂದೆ ಅಂತಿಮವಾಗಿ ಕೊಡಬೇಕಾದ ಶಿಫಾರಸ್ಸುಗಳನ್ನೆಲ್ಲಾ ಈ ದಿನವೇ ಹೇಳಿಬಿಟ್ಟಿದ್ದಾರೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದಾರೆ, ಆದರೆ ಒಂದು ವಿಚಾರವನ್ನು ಒಪ್ಪಿಕೊಳ್ಳಬೇಕಾಗುತ್ತದೆ. Convictions ಬಹಳ ಕಡಿಮೆ ಆಗಿದೆ. ಕಾರಣ ಏನೇ ಇರಲಿ, ಉದಾಹರಣೆಗೆ 2015ಕ್ಕೆ ಮಹಿಳೆಯರ ಮೇಲಿನ 672 ಪ್ರಕರಣಗಳಲ್ಲಿ conviction ಇರುವ ಪ್ರಕರಣಗಳ ಸಂಖ್ಯೆ ಕೇವಲ ಶೂನ್ಯ. ಮಕ್ಕಳ ಮೇಲೆ ಅಂದರೆ, ಅಪ್ರಾಪ್ತರ ಮೇಲೆ 850 ಪ್ರಕರಣಗಳು ವರದಿಯಾಗಿದ್ದು, ಅದರಲ್ಲಿ conviction ಆಗಿರುವುದು ಕೇವಲ ಒಂದು ಪ್ರಕರಣದಲ್ಲಿ ಮಾತ್ರ. ಅದಕ್ಕೆ ಕಾರಣಗಳು ಕೂಡ ಇವೆ. ಆದರೆ ಸರ್ಕಾರ ಇದನ್ನು ಆಗಲೇ ಗಮನಿಸಿ 29 ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಿ ಅವುಗಳಲ್ಲಿ ಆ trials ಎಲ್ಲಾ ಮಾಡಬೇಕು ಎನ್ನುವ ಆದೇಶವನ್ನು ಕೂಡ ಈಗಾಗಲೇ ಸರ್ಕಾರ ಹೊರಡಿಸಿದೆ. ಇದರ ಜೊತೆಗೆ ಈ ವಿಚಾರಗಳು ಬಹಳ ಸೂಕ್ಷ್ಮವಾಗಿರುವುದರಿಂದ ಎನ್‌ಕ್ವೈರಿ ಮಾಡುವುದಕ್ಕೆ 6 ತನಿಖಾ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಕೂಡ ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಜೊತೆಗೆ ಅತ್ಯಾಚಾರಿಗಳ ವಿರುದ್ಧ ಠಾಣೆಗಳಲ್ಲಿ ಈಗಾಗಲೇ ಕಡ್ಡಾಯವಾಗಿ ರೌಡಿ ಶೀಟ್‌ಗಳನ್ನು ತೆರೆಯಲಾಗುತ್ತಿದೆ.

ಇಂತಹ ಸುಮಾರು ಐದಾರು ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ ನಾವು ಈಗಾಗಲೇ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ, Sexual Harassment of Women at Workplace (Prevention, Prohibition and Redressal) Act, 2013 Protection of Women from Domestic Violence Act 2005,

Indecent Representation of Women (Prohibition) Act, 1986, and Protection of Children from Sexual Offences Act, 2012, ಈ ಎಲ್ಲ ಕಾಯಿದೆಗಳನ್ನು ರಚಿಸಲಾಗಿದೆ. ಆ ಕಾಯ್ದೆಗಳಡಿಯಲ್ಲಿ ಈ ಪ್ರಕರಣಗಳನ್ನು ತೆಗೆದುಕೊಂಡು ಬರುವುದಕ್ಕೆ ಕೂಡ ನಾವೀಗ ಸೂಚನೆಗಳನ್ನು ಕೊಟ್ಟಿದ್ದೇವೆ.

(ಮುಂದುವರೆದಿದೆ...

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಜಿ.ಪರಮೇಶ್ವರ್(ಮುಂದು):-**

ಮೊದಲನೆಯದಾಗಿ, ನಮ್ಮ ಇಲಾಖೆಯಲ್ಲಿ Forensic Science Laboratory ನಲ್ಲಿ ತಡವಾಗುತ್ತಿದೆ ಎಂಬ ಮಾಹಿತಿ ನನಗೆ ಲಭ್ಯವಾಗಿದೆ. ಇತ್ತೀಚೆಗೆ ಅದನ್ನೂ ಕೂಡ ಅಪ್‌ಗ್ರೇಡ್ ಮಾಡಿ laboratory ಗಳನ್ನು establishment ಮಾಡಿ ಆದಷ್ಟು ಶೀಘ್ರವಾಗಿ ನಾವು forensic reports ಕಳುಹಿಸಬೇಕೆಂದು ಸೂಚನೆ ಕೊಡುವುದಕ್ಕೂ ಸಹ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆದುದರಿಂದ ಆದಷ್ಟು ಬೇಗ ಶಿಕ್ಷೆ ಆಗುವುದಕ್ಕೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ತೆಗೆದುಕೊಳ್ಳುತ್ತೇವೆ. ಜೊತೆಗೆ ಮಾನ್ಯ ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಏನೆಲ್ಲಾ ಸಲಹೆಗಳನ್ನು ಕೊಡುತ್ತಾರೋ ಖಂಡಿತವಾಗಿ ನಾವು ಚಾಚೂ ತಪ್ಪದೆ ಅದನ್ನು ಪಾಲಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಹೆಣ್ಣು ಮಕ್ಕಳ ಮತ್ತು ಮಕ್ಕಳ ಹತ್ಯಾಚಾರವನ್ನು ಬಹಳ ಹಗುರವಾಗಿ ತೆಗೆದುಕೊಳ್ಳಬೇಡಿ. ಕಾನೂನಿನ ಬಗ್ಗೆ ಭಯ ಎಲ್ಲಿದೆ ಸರ್? ಮಾನ್ಯ ಉಗ್ರಪ್ಪನವರು ಎಷ್ಟೊಂದು ಕಷ್ಟ ಪಡುತ್ತಿದ್ದಾರೆ ಜಿಲ್ಲೆ, ಜಿಲ್ಲೆಗಳಿಗೆ ಹೋಗಿ ವರದಿಯನ್ನೂ ಸಹ ಕೊಟ್ಟಿದ್ದಾರೆ. ಇನ್ನೂ ಸಲಹೆ ಕಾಯುತ್ತಿದ್ದೇವೆ, ಇನ್ನೂ ಸಲಹೆ ಕಾಯುತ್ತಿದ್ದೇವೆ ಎಂದರೆ ಇನ್ಯಾವಾಗ ಶಿಕ್ಷೆ ಕೊಡುತ್ತೀರಿ? ಅದರ ಬಗ್ಗೆ ಭಯ ಹುಟ್ಟಿಸಿ. 4,000 ಪ್ರಕರಣಗಳಲ್ಲಿ ಕೇವಲ 89 ಪ್ರಕರಣಗಳಿಗೆ ಮಾತ್ರ ಶಿಕ್ಷೆಯಾಗಿದೆ ಎಂದು ಮಾನ್ಯ ಉಗ್ರಪ್ಪನವರು ಹೇಳುತ್ತಿದ್ದಾರೆ. ಇದು ನಾಚಿಕೆಗೇಡಿನ ವಿಷಯ. ದಯವಿಟ್ಟು ಇದರ ಬಗ್ಗೆ ಜರೂರಾಗಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಪರಮೇಶ್ವರ್:-** ಮಾನ್ಯ ಸಭಪತಿಯವರೇ, ಕೊಟ್ಟಿರುವಂತಹ interim report ನಲ್ಲಿ ಶಿಫಾರಸ್ಸುಗಳನ್ನು criminal nature ನಲ್ಲಿ ಕೊಟ್ಟಿಲ್ಲ. ಅವರೇನು ಪ್ರತಿಯೊಂದು ಕೇಸುಗಳನ್ನು ಕೈಗೆತ್ತಿಕೊಂಡಿದ್ದಾರೆ, ಪ್ರತಿಯೊಂದು ಕೇಸುಗಳ ಆಧಾರದ ಮೇಲೆ ಒಂದೊಂದು ಕೇಸುಗಳಿಗೂ ಸಹ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾವು ಈಗಾಗಲೇ ಎಕ್ಸಾಮಿನ್ ಮಾಡಿ ಕ್ರಮ ಕೈಗೊಳ್ಳುತ್ತಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಗಮನಿಸಿರುವ ಹಾಗೆ, 97-98% acquittal ಆಗುವುದಕ್ಕೆ ಯಾರು investigating agency ಇದೆ ಅವರ accountability ಇಲ್ಲ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಒಬ್ಬ ಪೊಲೀಸ್ ಕಮೀಶನರ್ ಮಂಗಳೂರು, ಇವರು ಏನು ಹೇಳುತ್ತಾರೆಂದರೆ, ನಾವು ಚಾರ್ಜ್‌ಶೀಟ್ ಹಾಕಿದ ಮೇಲೆ ನಮ್ಮ ಕೆಲಸ ಮುಗಿಯಿತು ಎಂದು ಹೇಳುತ್ತಾರೆ. ಆದಕಾರಣ ಸರ್ಕಾರವನ್ನು ಈ ಮೂಲಕ ಒತ್ತಾಯಿಸುವುದೇನೆಂದರೆ, accountability on investigating agency ಮೇಲೆ ನೀವು ಬಿಟ್ಟರೆ ಏಕೆಂದರೆ acquittals ಇರುತ್ತವೆ. As a lawyer, I am well aware of this. ಆದರೆ ಇಷ್ಟು ಜಾಸ್ತಿ ಆಗುತ್ತಿರುವಂಥದ್ದಕ್ಕೆ in rape cases victim statement itself enough for conviction. ಇನ್ನು ಯಾವ ಹೇಳಿಕೆಯ ಅವಶ್ಯಕತೆಯು ಇಲ್ಲ as per the Supreme Court's Judgments. ಅದನ್ನೂ ಸಹ ನಿಮ್ಮ ಪೊಲೀಸ್ ಅಧಿಕಾರಿಗೆ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಏನರ್ಥ? ನಾನು ಹೇಳುವುದೇನೆಂದರೆ, ಹೆಣ್ಣು ಮಕ್ಕಳ ಮೇಲೆ ನಡೆಯುವಂತಹ ದೌರ್ಜನ್ಯವನ್ನು ಪರಿಣಾಮಕಾರಿಯಾಗಿ ತಡೆಯಬೇಕೆಂದರೆ, investigating agency ಮೂಲಕ ನ್ಯಾಯಾಲಯದಲ್ಲಿ ಹೆಚ್ಚು ಹೆಚ್ಚು ಶಿಕ್ಷೆ ಆಗುವಂತಹ ರೀತಿಯಲ್ಲಿ ಕ್ರಮ ಜರುಗಿಸಿದರೆ ಇದು ಪರಿಣಾಮಕಾರಿಯಾಗಿ ತಹಬಂದಿಗೆ ತರುವುದಕ್ಕೆ ಸಾಧ್ಯತೆ ಇದೆ.

**ಶ್ರೀ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, system correction ಆಗಬೇಕು. ಏಕೆಂದರೆ, ನಮ್ಮ ವ್ಯವಸ್ಥೆಯಲ್ಲಿ ಅನೇಕ lacuna ಗಳಿವೆ. ಮಾನ್ಯ ಸದಸ್ಯರು ಪೊಲೀಸ್ ಅಧಿಕಾರಿಗಳ ಉದಾಹಣೆಯನ್ನು ಕೊಟ್ಟರು. ಅಂಥದ್ದನ್ನು ನಾವು ಎಲ್ಲೆಲ್ಲಿ ಕ್ರಮ ತೆಗೆದುಕೊಳ್ಳಬೇಕು, ಎಲ್ಲೆಲ್ಲಿ ಸರಿಪಡಿಸಬೇಕು ಎಂಬುದನ್ನು ಖಂಡಿತವಾಗಿ ಗಮನಹರಿಸಿ ಅದನ್ನು ಸರಿಪಡಿಸುತ್ತೇವೆ. ಮಾನ್ಯ ಸದಸ್ಯರ ಸಲಹೆಗಳೇನಿವೆ, ಮುಂದೆ ಬರುವಂತಹ ಅವರ ಶಿಫಾರಸ್ಸುಗಳು ಏನಿವೆ, ನಾನು ಹೇಳಿದ್ದು ಒಂದು comprehensive ಆಗಿ ಬರುವಂತಹ ಶಿಫಾರಸ್ಸುಗಳು. ಕೇಸ್ ಮೇಲೆ ಕೊಟ್ಟಿರುವಂತಹ ಶಿಫಾರಸ್ಸುಗಳನ್ನು ಈಗಾಗಲೇ ನಾವು ಎಕ್ಸಾಮಿನ್ ಮಾಡುತ್ತಿದ್ದೇವೆ. ಆದರೆ ಇಂತಹ ಯಾವುದೇ ಒಂದು ಪ್ರಕರಣ ಬಂದಾಗ ಇಂತಹ ಒಂದು ಸಿಸ್ಟಂ ಇರಬೇಕು ಶಿಫಾರಸ್ಸುಗಳನ್ನು ಅವರು ಕೊಡುವುದೇ ಆದರೆ ಖಂಡಿತವಾಗಿ ಸರ್ಕಾರ ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, ಇದು

ಸಮಾಜಕ್ಕೆ ಒಂದು ರೀತಿಯ ಅವಮಾನವನ್ನು, ಅಗೌರವವನ್ನು ತರುವಂಥದ್ದು. ಹಾಗಾಗಿ ಇದನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಪ್ರಶ್ನೆ ಸಂಖ್ಯೆ 205**
**ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಇದು ಐದಾರು ವರ್ಷಗಳಿಂದ ನಡೆಯುತ್ತಿರುವಂತಹ ಘಟನೆ. ಉತ್ತರದಲ್ಲಿ 13 ಕೋಟಿ ಹಗರಣವನ್ನು ಮಾಡಿರುವಂಥದ್ದನು ತಿಳಿಸಿದ್ದಾರೆ. ಆದರೆ ಇದು ಸರಿ ಇಲ್ಲ. ಇದು ಸುಮಾರು 90 ಕೋಟಿ ರೂಪಾಯಿ ಹಗರಣವಾಗಿದೆ. 900 ಜನ ಸದಸ್ಯರಿಗೆ ಈ ಒಂದು ಸಂಘದವರು ಮೋಸ ಮಾಡಿದ್ದಾರೆ. ಇದರಿಂದ ಸೂಕ್ತವಾದಂತಹ ತನಿಖೆಯನ್ನು ಸಹ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಎರಡನೆಯದಾಗಿ, ಈ ಒಂದು ಪ್ರಕರಣದ ಬಗ್ಗೆ ಐದಾರು ವರ್ಷಗಳಿಂದ ಸುಮಾರು 250 ಕೇಸುಗಳು ದಾಖಲಾಗಿದೆ. 150 ಕೋರ್ಟಿನ ವಾರೆಂಟುಗಳು ಜಾರಿಯಾಗಿವೆ. ಸುಮಾರು 96 ಎಕರೆ ಜಮೀನನ್ನು ಖರೀದಿ ಮಾಡಿ, ಖರೀದಿಸಲಾಗಿದೆ ಎಂದು ಕಂದಾಯ ಸಚಿವರು ಸಹ ಲಿಖಿತ ಉತ್ತರದಲ್ಲಿ ನೀಡಿದ್ದಾರೆ. ಆದರೆ ಉತ್ತರದಲ್ಲಿ ಎಷ್ಟು ಜಮೀನು ಇದೆ ಎಂದು ತಿಳಿದುಬಂದಿಲ್ಲವೆಂದು ಹೇಳಿದ್ದಾರೆ. ಬಹುಶಃ ನಮ್ಮ ಅಧಿಕಾರಿಗಳು ಬರೆದುಕೊಟ್ಟಿರುವುದನ್ನು ಅವರು ತೆಗೆದುಕೊಂಡಿದ್ದಾರೆಂದು ಭಾವಿಸಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಶರಣ ಅವರೆ, ನಿಮಗೆ ಏನು ಬೇಕು ಎಂಬುದನ್ನು ನೇರವಾಗಿ ಕೇಳಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಕೊಟ್ಟಿರುವಂತಹ ಉತ್ತರಕ್ಕೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಸರ್ಕಾರ ಕೊಟ್ಟಿರುವಂತಹ ಉತ್ತರವನ್ನೇ ಓದುತ್ತಿದ್ದೀರಿ. ಆದರೆ ನಿಮಗೆ ಏನು ಬೇಕು ಎಂಬುದರ ಬಗ್ಗೆ ಉಪ ಪ್ರಶ್ನೆ ಕೇಳಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಉಪ ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ಕೂಡಲೇ ಸಂಪೂರ್ಣ ತನಿಖೆಗೆ ಆದೇಶ ಮಾಡಿ, ಸರ್ಕಾರಿ ಸಂಘದ ನೌಕರರಿಗೆ ಏನು ಅನ್ಯಾಯವಾಗಿದೆ ಅವರಿಗೆ ನ್ಯಾಯ ದೊರಕಿಸಿಕೊಡಬೇಕು, ಸೂಕ್ತವಾದಂತಹ ಕ್ರಮವನ್ನು

ತೆಗೆದುಕೊಳ್ಳಬೇಕು, ಆ ಸಂಘದ ಅಧ್ಯಕ್ಷರು ಮತ್ತು ಡೆವಲಪರ್ಸ್ ಏನಿದ್ದಾರೆ ಅವರಿಬ್ಬರ ಮೇಲೆ ಕ್ರಮ ತೆಗೆದುಕೊಂಡು ನ್ಯಾಯ ಒದಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಶ್ರೀ ಕೆ.ವಿ.ವೆಂಕಟೇಶ್ ಬಿನ್.ಲೇಟ್ ವೆಂಕಟರಾಮಯ್ಯ ಎಂಬುವಂಥವರು ವೆಂಕಟೇಶ್ವರ ಎಸ್ಟೇಟ್ ಅಂಡ್ ಬಿಲ್ಡರ್ಸ್ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ನೌಕರರ ಕಲ್ಯಾಣ ವೇದಿಕೆ. ಇದು ನಮ್ಮ ಸದನದ ನೌಕರರಿಗೆ ಬಂದಿದೆ. ಅವರು ಮೋಸ ಮಾಡಿ ಸುಮಾರು 13 ಕೋಟಿ ರೂಪಾಯಿ ಹಣವನ್ನು ವಸೂಲಿ ಮಾಡಿ ಬಾಗಲೂರು ಪೊಲೀಸ್ ಸ್ಟೇಷನ್‌ನಲ್ಲಿ ಪ್ರಕರಣ ದಾಖಲಾಗಿದೆ. ಇದರ ಬಗ್ಗೆ ತನಿಖೆ ನಡೆಯುತ್ತಿದೆ. ಅನೇಕ ವಿಚಾರಗಳು ತನಿಖೆ ಪೂರ್ಣಗೊಳ್ಳುವವರೆವಿಗೂ ನಮಗೆ ಗೊತ್ತಾಗುವುದಿಲ್ಲ. ತಾವೇನು ಕೇಳಿದ್ದೀರಿ, ಎಷ್ಟು ಜಮೀನಿದೆ, ಮತ್ತು ಸಂಪೂರ್ಣವಾಗಿ ಎಷ್ಟು ಹಣ ವಸೂಲಿ ಮಾಡಿದ್ದಾರೆ ಎಂಬುದನ್ನು ಕೇಳಿದ್ದೀರಿ. ಸುಮಾರು 13 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆಂದು ನಮ್ಮ ಪೊಲೀಸ್ ಠಾಣೆಯಲ್ಲಿ ಕೇಸನ್ನು ರಿಜಿಸ್ಟರ್ ಮಾಡಿರುವಂಥದ್ದು ಇದೆ. ಆದರೆ ತನಿಖೆ ಸಂಪೂರ್ಣ ಆದಮೇಲೆ, ಅಂದರೆ ತಾವೇನು ಹೇಳುತ್ತೀರಿ, ಸುಮಾರು 94 ಕೋಟಿ ರೂಪಾಯಿ ಹಣ ಆಗಿದೆ, ಅಥವಾ ನೂರಾರು ಎಕರೆ ಜಮೀನು ಆಗಿದೆ ಎಂದು ತಾವೇನು ಹೇಳುತ್ತಿದ್ದೀರಿ ಅದು ತನಿಖೆ ಆದಮೇಲೆಯೇ ಗೊತ್ತಾಗುತ್ತದೆ ವಿನಃ ತನಿಖೆಗೆ ಮುಂಚೆ ಗೊತ್ತಾಗುವುದಿಲ್ಲ. ಈಗ ಅದು ತನಿಖೆಯ ಹಂತದಲ್ಲಿರುವುದರಿಂದ ನಮಗೆ ಈಗ ಇರುವಂತಹ ಮಾಹಿತಿಗಳೇನಿವೆ ಇದನ್ನು ನಾವು ತನಿಖೆಯನ್ನು ಮುಂದುವರೆಸುತ್ತಿದ್ದೇವೆ ತನಿಖೆ ಸಂಪೂರ್ಣವಾದ ಮೇಲೆ ಮಾನ್ಯ ಸದಸ್ಯರಿಗೆ ಮಾಹಿತಿ ಸಿಗುತ್ತದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಎಷ್ಟು ದಿವಸದೊಳಗೆ ತನಿಖೆ ಪೂರ್ಣಗೊಳ್ಳುತ್ತದೆ ಎಂಬ ವಿಷಯವನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಪರಮೇಶ್ವರ್:-** ತನಿಖೆ ಇಷ್ಟೇ ದಿವಸದಲ್ಲಿ ಪೂರ್ಣಗೊಳ್ಳುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಂದಾಜು ಮಾಡಿ ಹೇಳುವುದಕ್ಕೆ ಆಗುವುದಿಲ್ಲ.

**ಚುಕ್ಕೆ ಪ್ರಶ್ನೆ ಸಂಖ್ಯೆ 283**
**ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಶ್ರೀಕಾಂತ್ ಲಕ್ಷ್ಮಣ್ ಘೋಟ್ನೇಕರ್:–** ಮಾನ್ಯ ಸಭಾಪತಿಯವರೇ ಕಾರವಾರ ಜಿಲ್ಲೆಯ ಅಂಕೋಲಾ ಪೋಲೀಸ್ ಠಾಣೆಯಲ್ಲಿ 2015ನೇ ಸಾಲಿನಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿ ಅಲ್ಲಿನ ಕಾನ್‌ಸ್ಟೇಬಲ್‌ಗಳ ದಿನ ಭತ್ಯೆಯನ್ನು ಯಾರಿಗೂ ನೀಡದೇ ಸ್ವಂತಕ್ಕೆ ಉಪಯೋಗಿಸಿ ಸಂಬಂಧಿಸಿದವರ ಹೆಸರಿನಲ್ಲಿ ಬೋಗಸ್ ಸಹಿಯೊಂದಿಗೆ ಸ್ವೀಕೃತ ರಶೀದಿ ತಯಾರಿಸಿ ಎಸ್.ಪಿ. ಕಛೇರಿಗೆ ಕಳುಹಿಸಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಮತ್ತೊಮ್ಮೆ ತನಿಖೆ ಮಾಡಿ, ಏಕೆಂದರೆ, ಈಗಾಗಲೇ ಬಡ್ತಿಯನ್ನು ಕೊಟ್ಟಿದ್ದೀರಿ. ಆದಕಾರಣ ಇನ್ನೊಮ್ಮೆ ಸೂಕ್ತ ತನಿಖೆ ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

(ಮುಂದು)

**ಶ್ರೀ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಗಳೆ, ಇದು ಬಹಳ ಸಿಂಪಲ್ ಕೇಸ್. 2015ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗಣೇಶ್ ಹೆಗಡೆ ಎನ್ನುವವರು ಎರಡು ಟೀಮ್‌ಗಳನ್ನು ಮಾಡಿ ಒಂದು ಅಂಕೋಲಾಕ್ಕೆ ಬಂದ್‌ಬಸ್ತಿಗೆ ಇನ್ನೊಂದು ಟೀಮ್‌ನ್ನು ಕಾರವಾರಕ್ಕೆ ನಿಯೋಜಿಸಿದ್ದಾರೆ. ಅಂಕೋಲಾದಲ್ಲಿ ಕಾರ್ಯನಿರತ ಅಧಿಕಾರಿಗಳಿಗೆ ಊಟದ ವ್ಯವಸ್ಥೆಯನ್ನು ಒಂದು ಹೊಟೇಲ್‌ನಲ್ಲಿ ಅವರೇ ಕಲ್ಪಸಿದ್ದಾರೆ. ಆದರೆ ಕಾರವಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಟೀಮ್‌ಗೆ ಪ್ರತಿ ದಿನದ ಊಟಕ್ಕೆ ಎಂದು 300 ರೂ.ಗಳನ್ನು ಕೊಟ್ಟಿದ್ದಾರೆ. ಇಲ್ಲಿ ಆಗಿರುವ confusion ಎಂದರೆ, ಒಬ್ಬ ದಫೇದಾರ ನಮಗೆ ಏಕೆ 300 ರೂ.ಗಳನ್ನು ಕೊಟ್ಟಿರುವುದಿಲ್ಲ ಎಂದು ಪ್ರಶ್ನೆ ಮಾಡಿದ್ದಾರೆ. ಹೊಟೇಲ್‌ನಲ್ಲಿ ಊಟ ಕೊಟ್ಟಿದ್ದರಿಂದ ಅವರಿಗೆ 300 ರೂ.ಗಳನ್ನು ಕೊಟ್ಟಿರುವುದಿಲ್ಲ. ಇವರಿಗೆ ಊಟ ಕೊಟ್ಟಿಲ್ಲ ಅದಕ್ಕೆ 300 ರೂ.ಗಳನ್ನು ಕೊಟ್ಟಿದ್ದಾರೆ. ಇಷ್ಟೆ ವ್ಯತ್ಯಾಸವಾಗಿರುವುದು. ಅದರ ಬಗ್ಗೆ ಈಗಾಗಲೇ ಎಸ್‌ಪಿ ಹಂತದಲ್ಲಿ ತನಿಖೆ ಮಾಡಿ ಏನು ಕಂಡುಬಂದಿಲ್ಲ ಎಂದು ಗಣೇಶ್ ಹೆಗಡೆಯವರಿಗೆ ಡಿವೈಎಸ್‌ಪಿ ಯಾಗಿ ಬಡ್ತಿ ಕೂಡಾ ಕೊಡಲಾಗಿದೆ. ಇಷ್ಟೆ ಅಲ್ಲಿ ಆಗಿರುವುದು.

**ಶ್ರೀ ಗೋ.ಮಧುಸೂದನ್:-** ಬಹುಷ: 300 ರೂ.ಗಳಷ್ಟು ಊಟ ಕೊಟ್ಟಿರುವುದಿಲ್ಲ, 150ರೂ.ಗಳಷ್ಟು ಊಟ ಕೊಟ್ಟಿರಬಹುದು ಇನ್ನು 150 ರೂ.ಗಳನ್ನು ಕೊಡಿ ಎಂದು ಕೇಳಿರಬಹುದು.

**ಉಪಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ರಾಮಚಂದ್ರಗೌಡರು ಮತ್ತು ಶ್ರೀ ಎಂ.ಶ್ರೀನಿವಾಸ್‌ರವರದು ಒಂದೇ ಪ್ರಶ್ನೆಯಾಗಿರುವುದರಿಂದ ಎರಡು ಪ್ರಶ್ನೆಗಳನ್ನು ಸೇರಿಸಿ ಕೇಳಿ.

**<u>ಪ್ರಶ್ನೆ ಸಂಖ್ಯೆ:194</u>**
**<u>ಪ್ರಶ್ನೆ ಸಂಖ್ಯೆ: 54</u>**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ(ಶ್ರೀ ಎಂ.ಶ್ರೀನಿವಾಸ್ ಪರವಾಗಿ):-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಬಹಳ ಸರಿಯಾಗಿ ಕೊಟ್ಟಿದ್ದಾರೆ. ಆ ಗಲಾಟೆಯ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಸಂಪೂರ್ಣ ಕೆಲಸವನ್ನು ಮಾಡಿದ್ದಾರೆ ಎನ್ನುವ ಮಾಹಿತಿ ನನಗೆ ಬಂದಿದೆ. ಇಂತಹ 272 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ ಶಿಕ್ಷೆ ಆಗಿರುವುದು ಕೇವಲ 70. ಅಂದರೆ 25% ಕೆಲಸವಾಗಿದೆ. ವೀಸಾ ಅವಧಿ ಮುಗಿದ ಮೇಲೆ ಅಕ್ರಮವಾಗಿ ಇಲ್ಲಿ ನೆಲೆಸಿರುವ ವಿದೇಶಿ ನಾಗರೀಕರ ಸಂಖ್ಯೆ 1156. ಇನ್ನು ಅವಧಿ ಇರುವ ಎಷ್ಟು ಜನ ವಿದೇಶಿಯರು ನಮ್ಮ ರಾಜ್ಯದಲ್ಲಿ ವಾಸವಾಗಿದ್ದಾರೆ? Foreign Regional Registration Office ನವರು ಮತ್ತು ಸ್ಥಳೀಯ ಪೊಲೀಸ್‌ನವರು ಸೂಕ್ತ ಮತ್ತು ಸಮಕ್ಷಮ ಸೇರಿಕೊಂಡು ಕೆಲಸ ಮಾಡಬೇಕು ಎಂದು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯ ಒಂದು ಮಾರ್ಗದರ್ಶನವನ್ನು ತಮಗೆ ಕೊಟ್ಟಿದೆ. Detention center ಅನ್ನು ಸ್ಥಾಪಿಸಬೇಕೆಂದು ನ್ಯಾಯಾಲಯ ಹೇಳಿದೆ. ಇದನ್ನು ಈಗಾಗಲೆ ಮಾಡಿದ್ದೀರಾ? ಪೊಲೀಸ್ ಇಲಾಖೆಯವರು ಮತ್ತು Foreign Regional Registration Office ನವರು ಈ ತೀರ್ಪು ಬಂದಮೇಲೆ ಯಾವಾಗಲಾದರು ಭೇಟಿ ಮಾಡಿ ಚರ್ಚೆ ಮಾಡಿದ್ದಾರೆಯೇ? ಇನ್ನೊಂದು ವಿಚಾರವನ್ನು ಸುಪ್ರಿಮ್ ಕೋರ್ಟ್ ಹೇಳಿದೆ, ಕಾಲೇಜುಗಳಲ್ಲಿ ಕೆಲವರನ್ನು ಅಕ್ರಮವಾಗಿ ಅಡ್ಮಿಟ್ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ವೀಸಾ ಇಲ್ಲ ಏನು ಇಲ್ಲ, ಅದನ್ನು ಪೊಲೀಸ್ ಇಲಾಖೆಯವರು ಪರೀಕ್ಷೆ ಮಾಡುತ್ತಿದ್ದಾರೆ. ಸುಪ್ರಿಮ್ ಕೋರ್ಟ್‌ನಿಂದ ಬಂದಿರುವಂತಹ ತೀರ್ಪಿನ ಕಾಪಿಯನ್ನು ಎಲ್ಲಾ ಕಾಲೇಜುಗಳಿಗೆ ತಾವು ಕಳುಹಿಸಿ ಕೊಟ್ಟಿದ್ದೀರಾ? ಸುಪ್ರಿಮ್ ಕೋರ್ಟ್ ಆದೇಶ ಈ ರೀತಿ ಇದೆ, ನಾವು ಎಲ್ಲಾ ಕಾಲೇಜುಗಳಿಗೆ ಬಂದು ಪರೀಕ್ಷೆ ಮಾಡುತ್ತೇವೆ ಎಂದು ಸುತ್ತೋಲೆಯನ್ನು ಕಳುಹಿಸಿದ್ದೀರಾ? ಸುತ್ತೋಲೆಯನ್ನು ಕಳುಹಿಸಿದ್ದರೆ ಕಾಲೇಜ್‌ನವರು ಏನು ಉತ್ತರವನ್ನು ಕೊಟ್ಟಿದ್ದಾರೆ? ತೀರ್ಪನ್ನು ಕಳೆದ ತಿಂಗಳು 18ನೇ ತಾರೀಖಿನಂದು ಕೊಟ್ಟಿದ್ದಾರೆ. ಸಮಯ ಕಡಿಮೆ ನಾನು ಹೇಳಿರುವುದೆಲ್ಲವನ್ನು ಮಾಡಲು ಆಗಿದೆಯೇ ಇಲ್ಲವೆ ನನಗೆ ಗೊತ್ತಿಲ್ಲ. ಹಾಗೆನಾದರೂ ಮಾಡಿದ್ದರೆ ಅದರ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

**ಶ್ರೀ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಅದರಲ್ಲಿಯು ವಿಶೇಷವಾಗಿ ಬೆಂಗಳೂರಿನಲ್ಲಿ ಸುಮಾರು 23,708 ಜನ ವಿದೇಶಿಯರು ವಾಸವಾಗಿದ್ದಾರೆ. ಅದರಲ್ಲಿ 1156 ಜನ overstay ಆಗಿದ್ದಾರೆ. ಅಂದರೆ ವೀಸಾ ಮುಗಿದಿದ್ದರೂ ಅವರು ಇನ್ನು ಇಲ್ಲಿ ಉಳಿದುಕೊಂಡಿದ್ದಾರೆ. 68 ರಾಷ್ಟ್ರಗಳ ವಿದೇಶಿಯರು ಇಲ್ಲಿ ವಾಸವಾಗಿದ್ದಾರೆ. ಅದರಲ್ಲಿ ಹೆಚ್ಚಾಗಿ 175 ಜನ ಕಾಂಗೋ ದೇಶದವರು, ಐವರಿಕೋಸ್ಟ್‌ನಿಂದ 98ಜನ, ನೈಜೇರಿಯಾದಿಂದ 98ಜನ, ಸುಡಾನ್‌ನಿಂದ 212ಜನ, ಹೇಮನ್‌ನಿಂದ 62ಜನ, ಇನ್ನು ಉಳಿದ ದೇಶದಿಂದ 10,12,15 ಜನ ವಿದೇಶಿಯರು ಇದ್ದಾರೆ ಅದೆಲ್ಲವನ್ನು ನಾನು ಓದಲು ಹೋಗುವುದಿಲ್ಲ. ತಾವು ಹೇಳಿರುವ ಪ್ರಕಾರ ಇವರ ಮೇಲೆ ಕ್ರಮ ತೆಗೆದುಕೊಳ್ಳಲು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ನಮ್ಮ ಇಲಾಖೆಯವರು ಮತ್ತು Foreign Regional Registration Office ನವರ ಜೊತೆಯಲ್ಲಿ ಈಗಾಗಲೇ ಸಂಪರ್ಕ ಮಾಡಿ, ಎರಡು-ಮೂರು ಸಭೆಗಳನ್ನು ಮಾಡಿ ಅವರಿಂದ ಮಾಹಿತಿಯನ್ನು ನಾವು ತೆಗೆದುಕೊಂಡಿದ್ದೇವೆ. Overstay ಆಗಿರುವವರ ಸಂಪೂರ್ಣ ಮಾಹಿತಿ ನಮಗೆ ಗೊತ್ತಾಗುವುದಿಲ್ಲ. ಅವರಿಂದ ಮಾಹಿತಿ ತೆಗೆದುಕೊಳ್ಳಬೇಕಾಗುತ್ತದೆ. ಅವರ ಜೊತೆಯಲ್ಲಿಯೇ ನಾವು ಕೆಲಸ ಮಾಡಬೇಕಾಗುತ್ತದೆ. ಈಗಾಗಲೆ ನಾವು 253 ಜನರನ್ನು deport ಮಾಡಿದ್ದೇವೆ. ಈ ವಿಚಾರವನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕಾಲೇಜು ಆಡಳಿತ ಮಂಡಳಿಯವರಿಗೂ ಈಗಾಗಲೇ ತಿಳಿಸಿದ್ದೇವೆ. ಯಾವ ಕಾಲೇಜಿನಲ್ಲಿ ಅಡ್ಮಿಟ್ ಮಾಡಿಕೊಳ್ಳುತ್ತಾರೆ ಆ ಕಾಲೇಜ್‌ನವರು ಆ ವಿದೇಶಿ ವಿದ್ಯಾರ್ಥಿ ಬಗ್ಗೆ ಅವರ ಲಿಮಿಟ್‌ನಲ್ಲಿ ಬರುವ ಪೊಲೀಸ್ ಠಾಣೆಗೆ ಮಾಹಿತಿಯನ್ನು ಕೊಡಬೇಕು ಮತ್ತು ಪೊಲೀಸ್ ಅಧಿಕಾರಿಗಳು ಆ ಕಾಲೇಜ್‌ಗೆ ಹೋಗಿ ಎಲ್ಲವನ್ನು ಪರೀಕ್ಷೆ ಮಾಡಬೇಕೆಂದು ಸೂಚನೆಯನ್ನು ಈಗಾಗಲೆ ನಾವು ಕೊಟ್ಟಿದೇವೆ. ಇತ್ತೀಚೆಗೆ ನಡೆದ ಘಟನೆ ನಮ್ಮ ಕಣ್ಣು ತೆರೆಸಿದೆ. ಇದು ಬಹಳ ಗಂಭೀರವಾದ ವಿಚಾರ. Tanzania ದೇಶದ ವಿದ್ಯಾರ್ಥಿ ಘಟನೆಯಾಗಿರುವುದು, ಸಂಜೆ 7-30ರ ಸಮಯದಲ್ಲಿ ದಂಪತಿಗಳು ನಡೆದುಕೊಂಡು ಹೋಗುವಾಗ ಸುಡಾನ್ ವಿದ್ಯಾರ್ಥಿಗಳು ಅವರಿಗೆ ಹೊಡೆದಿದ್ದಾರೆ, ಅಲ್ಲಿ ಅಪಘಾತವಾಗುತ್ತದೆ. ಸ್ಥಳದಲ್ಲಿಯೇ ಆ ಹೆಣ್ಣುಮಗಳು ತೀರಿಕೊಳ್ಳುತ್ತಾಳೆ. ಸ್ವಾಭಾವಿಕವಾಗಿ ಅಲ್ಲಿ public reaction ಆಗುತ್ತದೆ. ನಂತರ ಇನ್ನೊಂದು ಕಾರು ಬರುತ್ತದೆ. ಅದರಲ್ಲಿ Tanzania ವಿದ್ಯಾರ್ಥಿಗಳು ಇರುತ್ತಾರೆ. ಅವರಿಗೂ ಸುಡಾನ್ ವಿದ್ಯಾರ್ಥಿಗಳಿಗೂ ಯಾವುದೆ ಸಂಬಂಧವಿಲ್ಲ. ಹೊಡೆದವರು ಸುಡಾನ್ ವಿದ್ಯಾರ್ಥಿಗಳು. ಆದರೆ Tanzania ವಿದ್ಯಾರ್ಥಿಗಳು ನೋಡಲು ಸುಡಾನ್ ವಿದ್ಯಾರ್ಥಿಗಳ ತರಹ ಇರುವುದರಿಂದ ಸಾರ್ವಜನಿಕರು ಅವರಿಗೆ ಹೊಡೆದು ಅವರ ಕಾರಿಗೆ ಬೆಂಕಿ ಹಂಚಿದ್ದಾರೆ. ಅದು ಕೂಡಾ immediate reaction

ಆಗಿದೆ. ಅದಕ್ಕೆ ಬೇರೆ-ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿ, ಇದಕ್ಕೆ racist attack ಎಂದು ಬಣ್ಣ ಹಚ್ಚುವಂತಹ ಕೆಲಸವು ನಡೆಯಿತು. ಆದರೆ ಅದು ಸಂಪೂರ್ಣವಾಗಿ immediate reaction ಹೊರತು ಯಾವುದೆ ರೀತಿಯ racist attack ಅಥವಾ ಯಾವ ಘಟನೆ ನಡೆದಿರುವುದಿಲ್ಲ. ಇದರ ಬಗ್ಗೆ ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ವಿದೇಶದಿಂದ ಬಂದಂತಹ ವಿದ್ಯಾರ್ಥಿಗಳು overstay ಮಾಡುತ್ತಾರೆ, ಅವರನ್ನು ಪತ್ತೆ ಹಚ್ಚಿ deport ಮಾಡುವುದು, ಅವರ concerned embassies or high commissions ಅವರಿಗೆ ತಿಳಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, ಯಾವ ವಿದೇಶಿ ವಿದ್ಯಾರ್ಥಿಗಳು ಬರುತ್ತಾರೆ ಅವರ visa expiration date ಏನು ಇದೆ ಎನ್ನುವ ಮಾಹಿತಿ ಪೊಲೀಸ್ ಇಲಾಖೆಯ ಕಂಪ್ಯೂಟರ್‌ನಲ್ಲಿ ಇದ್ದರೆ ನಿಮಗೆ ಬಹಳ ಸುಲಭವಾಗುತ್ತದೆ.

**ಶ್ರೀ ಜಿ.ಪರಮೇಶ್ವರ:-** ಅದು Foreign Regional Registration Office ಏನಿದೆ, ಅವರೆ ನಮಗೆ ಕೊಡುತ್ತಾರೆ. ಅದನ್ನು regulate ಮಾಡುವವರು ಅವರೆ. ಮಾಹಿತಿ ಎಲ್ಲವು ಅವರ ಹತ್ತಿರ ಇರುತ್ತದೆ. ನಮ್ಮ ಇಲಾಖೆ ಜೊತೆಗೆ ಸಂಪರ್ಕ ಇಟ್ಟುಕೊಂಡರೆ ಆ ಮಾಹಿತಿನ ಲಭ್ಯವಾಗುತ್ತದೆ. ಮಾಹಿತಿ ತೆಗೆದುಕೊಂಡೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಉಪಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಇಲ್ಲಿಗೆ ಮುಗಿಯುತ್ತದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**<u>ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು</u>**

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ:4ನೇ ಮಾರ್ಚ್ 2016ರ ಸಮೂಹ 5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 120 ಪ್ರಶ್ನೆಗಳ ಪೈಕಿ 96 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಉಪಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

**ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ**

**ವಿಷಯ: ವೆಂಕಟಪ್ಪ ಆರ್ಟ ಗ್ಯಾಲರಿಗೆ ಬಾಡಿಗೆ ದರ ಕುರಿತು.**

**ಶ್ರೀಮತಿ ತಾರಾ ಅನುರಾಧ(ನಾಮನಿರ್ದೇಶನ ಹೊಂದಿದವರು): ಮಾನ್ಯ ಸಭಾಪತಿಗಳೆ,** ವೆಂಕಟ್ಟಪ್ಪ ಆರ್ಟ್ ಗ್ಯಾಲರಿಗೆ ದತ್ತು, ಒಪ್ಪಂದದಲ್ಲಿ ಬಾಡಿಗೆ ದರದ ಪ್ರಸ್ತಾಪ ಇಲ್ಲ, ಎಂಬ ವಿಷಯವನ್ನು ನೆನ್ನೆಯ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ನಗರದ ಹೃದಯ ಭಾಗದಲ್ಲಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ದತ್ತು ನೀಡುವ ಸಂಬಂಧ ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಇಲಾಖೆ ಹಾಗೂ ತಸ್ವೀರ್ ಫೌಂಡೇಷನ್ ಮಾಡಿಕೊಂಡಿದೆ ಎನ್ನಲಾದ ಪ್ರಸ್ತಾಪಿ ಒಪ್ಪಂದದಲ್ಲಿ ಬಾಡಿಗೆ ವಿಷಯದ ಪ್ರಸ್ತಾಪವೇ ಇಲ್ಲ ಎಂದು ತಿಳಿದುಬಂದಿದೆ. ಈ ನಿಟ್ಟಿನಲ್ಲಿ ಖಾಸಗೀಕರಣ ಮಾಡುವುದರಿಂದ ಗ್ಯಾಲರಿಯ ಬಾಡಿಗೆ ದರ ತುಟ್ಟಿಯಾಗಲಿದೆ ಎಂಬುದು ಕಲಾವಿದರ ಅಳಲು. ಬಾಡಿಗೆ ದರ ಕಡಿಮೆಯಿರುವುದರಿಂದ ಪ್ರಸ್ತುತ ಯುವ ಕಲಾವಿದರು, ಬಡ ಕಲಾವಿದರು, ಗ್ರಾಮೀಣ ಕಲಾವಿದರು ಬಂದು ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುತ್ತಾರೆ. ಖಾಸಗೀಕರಣ ಮಾಡುವುದರಿಂದ ಬಾಡಿಗೆ ದರ ಹೆಚ್ಚಾಗುತ್ತದೆ. ಇದರಿಂದಾಗಿ ಸಾವಿರಾರು ರೂಪಾಯಿ ಖರ್ಚು ಮಾಡುವ ಶಕ್ತಿ ಎಲ್ಲರಿಗೂ ಇರುವುದಿಲ್ಲ ಹೀಗಾಗಿ ಖಾಸಗೀಕರಣ ಬೇಡ ಎಂದು ಕಲಾವಿದರು ಆಗ್ರಹಿಸಿದ್ದಾರೆ. ಈ ಹಿನ್ನಲೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಹಾಗೀ ಪ್ರವಾಸೋದ್ಯಮ ಇಲಾಖೆಯವರು ಸದರಿ ಗ್ಯಾಲರಿಯ ನಿರ್ವಹಣೆಯನನ್ನು ಖಾಸಗೀಯವರಿಗೆ ನೀಡದೆ, ಸ್ವತ: ಸರ್ಕಾರದಿಂದಲೇ ಗ್ಯಾಲರಿಯನ್ನು ಅಭಿವೃದ್ಧಿಪಡಿಸಿ, ಕಲಾವಿದರಿಗೆ ಉಳಿಸಿಕೊಡಲು ಹಾಗೂ ಬಾಡಿಗೆಯ ವಿಚಾರವಾಗಿ ಒಂದು ಸೂಕ್ತ ನಿರ್ಧಾರ ತೆಗೆದುಕೊಂಡು ಬಡ, ಹಾಗೂ ಯುವ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಲು ಹಾಗೂ ಅವರುಗಳು ಉತ್ತಮವಾಗಿ ಬೆಳೆಯುವಂತೆ ಪ್ರೋತ್ಸಾಹಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ವಿಷಯ: **ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅತಿಥಿ ಉಪನ್ಯಾಸಕರುಗಳ ಬೇಡಿಕೆ ಕುರಿತು.**

**ಶ್ರೀ ಅಮರನಾಥ ಪಾಟೀಲ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅತಿಥಿ ಉಪನಸ್ಯಾಸಕರು ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಕಳೆದ ಹಲವು ವರ್ಷಗಳಿಂದ ಇಲಾಖೆಗೆ ಸಲ್ಲಿಸುತ್ತಾ ಬಂದಿದ್ದು, ಹಲವಾರು ಬಾರಿ ಧರಣಿ ಹೋರಾಟದ ಮುಖಾಂತರ ಸರಕಾರದ ಗಮನ ಸೆಳೆಯುವಂತಹ ಪ್ರಯತ್ನ ಮಾಡಿದ್ದು, ಸರ್ಕಾರದಿಂದ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ತಜ್ಞರ ಸಮಿತಿಯನ್ನು ರಚನೆ ಮಾಡಿ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಆಶ್ವಾಸನೆ ನೀಡಿರುವ ಹಿನ್ನಲೆಯಲ್ಲಿ ತಮ್ಮ ಧರಣಿ ಹೋರಾಟಗಳನ್ನು ಹಿಂಪಡೆದಿರುತ್ತಾರೆ. ಆದರೆ ಮೂರು ವರ್ಷಗಳು ಗತಿಸಿದರು ಇಲ್ಲಿಯವರೆಗೆ ತಜ್ಞರ ಸಮಿತಿ ರಚನೆಯಾಗಲಿ ಅಥವಾ ಅವರ ಬೇಡಿಕೆಗಳನ್ನು ಸ್ಪಂದಿಸದೆ ಇರುವ ವಿಷಯ ವಿಷಾದನೀಯ. ಇತ್ತೀಚೆಗೆ ರಾಜ್ಯ ವ್ಯಾಪ್ತಿ ಸುಮಾರು 15 ಸಾವಿರ ಅತಿಥಿ ಉಪನ್ಯಾಸಕರು ತಿಂಗಳುಗಟ್ಟಲೆ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದು, ನನ್ನ ಮತಕ್ಷೇತ್ರದ ವ್ಯಾಪ್ತಿಯ ಮಹಿಳಾ ಅತಿಥಿ ಉಪನ್ಯಾಸಕರು ಮುಖ್ಯ ರಸ್ತೆ ಮೇಲೆ ಶೂ ಪಾಲಿಶ್ ಮಾಡುವುದರ ಮುಖಾಂತರ ಬಹಳ ಗಂಭೀರವಾದ ಮುಷ್ಟಕರವನ್ನು ತಮ್ಮ ಈ ಕೆಳಕಂಡ ಬೇಡಿಕೆಗಾಗಿ ತಮ್ಮ ನ್ಯಾಯಯುತವಾದ ಹಕ್ಕೊತ್ತಾಯ ಕೈಗೊಂಡಿರುತ್ತಾರೆ.

1) ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸಲು ಹಾಗೂ ಶಾಶ್ವತ ಪರಿಹಾರ ಕಂಡುಹಿಡಿಯಲು ತಕ್ಷಣವೇ ತಜ್ಞರ ಸಮಿತಿ ರಚನೆ ಮಾಡುವುದು.
2) ಅತಿಥಿ ಉಪನ್ಯಾಸಕರ ಬೇಡಿಕೆಗಳು ಈಡೇರುವವರಗೆ(ತಜ್ಞರ ಸಮಿತಿ ರಚನೆಯಾಗಿ ವರದಿಯನ್ನು ಅಂಗೀಕೃತವಾಗಿ ಖಾಯಂಗೊಳಿಸುವವರೆಗೆ) ಮಾಸಿಕ ರೂ 25000/- ದಂತೆ ವೇತನವು ವರ್ಷದ 12 ತಿಂಗಳವರೆಗೆ ನೀಡಬೇಕು.
3) ಮಹಿಳಾ ಅತಿಥಿ ಉಪನ್ಯಾಸಕರಿಗೆ 3 ತಿಂಗಳು ವೇತನ ಸಹಿತ ಹೆರಿಗೆ ರಜೆ ಮಂಜೂರು ಮಾಡಬೇಕು. ಸದರಿ ಅತಿಥಿ ಉಪನ್ಯಾಸಕರು ಪ್ರಸ್ತುತ ರೂ.9500/- ರಿಂದ 11,500/- ಪಡೆಯುವ ಮಾಸಿಕ ವೇತನವು ಇವತ್ತಿನ ದುಬಾರಿ ಜೀವನದಲ್ಲಿ ಅತ್ಯಂತ ದುಸ್ತರವಾಗಿರುತ್ತದೆ. ಅಲ್ಲದೆ ಈಗಾಗಲೇ ಹಲವಾರು ಉಪನ್ಯಾಸಕರು ತಮ್ಮ ವಯೋಮಿತಿ ಮೀರುತ್ತಿದ್ದು, (ಈಗಾಗಲೇ 15 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದ್ದ) ಅವರ ನ್ಯಾಯಯುತವಾದಂತಹ ಬೇಡಿಕೆಯ ಕುರಿತು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ವಿಷಯ: **ಹುತಾತ್ಮರ ಸ್ಮಾರಕಗಳನ್ನು ಗ್ರಾಮ ಪಂಚಾಯತ್ ಆವರಣದಲ್ಲೇ ನಿರ್ಮಿಸಬೇಕೆನ್ನುವ ವಿಷಯದ ಬಗ್ಗೆ .**

-----

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಇತ್ತೀಚೆಗೆ ಸಿಯಾಚಿನ ಪ್ರದೇಶದಲ್ಲಿ ಹಿಮಪಾತದಲ್ಲಿ ಸಿಕ್ಕು ಹುತಾತ್ಮರಾದ ಶ್ರೀ ಹನುಮಂತಪ್ಪ ಕೊಪ್ಪದ ಇವರ ಸ್ಮಾರಕವನ್ನು ಧಾರವಾಡ ತಾಲ್ಲೂಕಿನ ಬೆಟದೂರು ಗ್ರಾಮದಲ್ಲಿ ಅಲ್ಲಿಯ ಗ್ರಾಮ ಪಂಚಾಯತ್ ಕಛೇರಿ ಆವರಣದಲ್ಲಿ ನಿರ್ಮಿಸಿದ್ದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹನಸಿ ಗ್ರಾಮ ಪಂಚಾಯತ್ ಕಛೇರಿ ಆವರಣದಲ್ಲಿ ಸಿಆರ್‌ಪಿಎಫ್ ಯೋಧ ಕೆ.ಕೊಟ್ರೇಶ್ ರವರ ಸಮಾಧಿಯನ್ನು 2005ರಲ್ಲೇ ನಿರ್ಮಿಸಿರುತ್ತಾರೆ. ಅಲ್ಲಿಗೆ ಭೇಟಿ ನಿಡುವ ಜನತೆಗೆ ನಮ್ಮ ಯೋಧರ ಬಲಿದಾನದ ಅರಿವಾಗುತ್ತದೆ. ಯುವಕರಲ್ಲಿ ರಾಷ್ಟ್ರಪ್ರೇಮ ಜಾಗರೂಕವಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹುತಾತ್ಮ ಯೋಧರ ಸ್ಮಾರಕಗಳನ್ನು ಸರ್ಕಾರಿ ಕಚೇರಿಗಳ ಆವರಣದಲ್ಲಿ ಅದರಲ್ಲೂ ಗ್ರಾಮ ಪಂಚಾಯತ್ ಕಛೇರಿಗಳ ಆವರಣದಲ್ಲಿ ನಿರ್ಮಿಸಬೇಕೆಂದು ಆದೇಶ ಹೊರಡಿಸಬೇಕೆಂದು ನಾನು ಅವರಲ್ಲಿ ವಿನರ್ಮತೆಯಿಂದ ಮನವಿ ಮಾಡುತ್ತೇನೆ. ಒಂದು ವೇಳೆ ಸ್ಮಾರಕಗಳನ್ನು ನಗರ ಪ್ರದೇಶದಲ್ಲಿ ನಿರ್ಮಿಸುವುದಾದರೆ ಅದನ್ನು ಜಿಲ್ಲಾಧಿಕಾರಿಗಳ ಕಛೇರಿ ಆವರಣದಲಾಗಲ್ಲಿ ಅಥವಾ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಕಛೇರಿ ಆವರಣದಲ್ಲಿ ನಿರ್ಮಿಸಬಹುದು. ಇದರಿಂದ ನಾವು ಹುತಾತ್ಮ ಯೋಧರಿಗೆ ಗೌರವಪೂರ್ವಕ ನಮನ ಸಲ್ಲಿಸಿದಂತಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ವಿಷಯ: ಶಿಕ್ಷಣ ಹಕ್ಕು ಕಾಯಿದೆ ಅಡಿಯಲ್ಲಿ ರಾಜ್ಯದ ಬಡ ಮಕ್ಕಳಿಗೆ ಶಿಕ್ಷಣ ನೀಡುವ ಕುರಿತು**

------

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಆಯ್ಕೆಯಾದವರು)**:- ಮಾನ್ಯ ಸಭಾಪತಿಗಳೆ, ಪ್ರಸ್ತುತ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಅಡಿಯಲ್ಲಿ ರಾಜ್ಯದ ಬಡ ಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ಸರ್ಕಾರ ತುಂಬಾ ವಿಳಂಬವಾಗಿ 15ದಿನಗಳ ಹಿಂದಷ್ಟೆ ಪೋಷಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಆದರೆ ಶಿಕ್ಷಣ ಇಲಾಖೆಯ ಮೇಲಾಧಿಕಾರಿಗಳ ನಿರ್ಲಕ್ಷತೆ ಹಾಗೂ ಅದಕ್ಷತೆಯಿಂದಾಗಿ ಎಲ್.ಕೆ.ಜಿ ತರಗತಿ ಪ್ರವೇಶಕ್ಕೆ 4ವರ್ಷ 10 ತಿಂಗಳು ಎಂದು ಆನ್‌ಲೈನ್‌ನಲ್ಲಿ ನಿಗದಿಪಡಿಸಿರುವುದರಿಂದ, ಅದಕ್ಕಿಂತ ಕೆಲವ ಎರಡು-ಮೂರು ತಿಂಗಳು ಮೇಲ್ಪಟ್ಟ ವಯಸ್ಸಿನ ಮಕ್ಕಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ತಿರಸ್ಕರಿಸುತ್ತಿರುವುದರಿಂದ ರಾಜ್ಯದ ಲಕ್ಷಾಂತರ ಬಡ ಕುಟುಂಬದ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಆದುದರಿಂದ ಶಿಕ್ಷಣ ಸಚಿವರು ಈ ಬಗ್ಗೆ ತಕ್ಷಣ ಆದ್ಯತೆ ಮೇರೆಗೆ ಗಮನಹರಿಸಿ, ಈ ಕಾನೂನುಬಾಹಿರ ಹಾಗೂ ಅವೈಜ್ಞಾನಿಕ ಆನ್‌ಲೈನ್ ಪದ್ಧತಿಯನ್ನು ಕೂಡಲೇ ರದ್ದುಪಡಿಸಿ, ನಿಗದಿತ ವಯಸ್ಸಿಗಿಂತ 3-4 ತಿಂಗಳು ಹೆಚ್ಚು ವಯಸ್ಸಾಗಿರುವ ಮಕ್ಕಳೂ ಸಹ ಶಿಕ್ಷಣದಿಂದ ವಂಚಿತರಾಗದಂತೆ ಇಲಾಖೆಯವರು ಲಿಖಿತ ಅರ್ಜಿಗಳನ್ನು ಪಡೆದು, ಈ ಸಮಸ್ಯೆಯನ್ನು ತಕ್ಷಣ ಪರಿಹರಿಸಬೇಕೆಂದು ಹಾಗೂ ಇಂತಹ ಮಕ್ಕಳು ಅರ್ಜಿ ಸಲ್ಲಿಸಲು 15 ದಿನ ಹೆಚ್ಚಿನ ಕಾಲಾವಕಾಶ ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ವಿಷಯಕ್ಕೆ ಪೂರಕವಾಗಿ ಹೇಳಬೇಕು ಎಂದರೆ, ಇದು ನಮ್ಮ ಅದಕ್ಷತೆ, ಬೇಜವಾಬ್ದಾರಿಯಿಂದ ಆಗಿರುವದಲ್ಲ. ಎಲ್.ಕೆ.ಜಿ ಮತ್ತು ಮೊದಲನೆಯ ತರಗತಿಗೆ admission ಮಾಡಿಕೊಳ್ಳುವ ವಿಚಾರದಲ್ಲಿ ಹೈಕೋರ್ಟ್ ಸ್ಟೇ ಕೊಟ್ಟತು. ಸ್ಟೇ ಆರ್ಡರ್ ಇದ್ದುದರಿಂದ ಎರಡು-ಮೂರು ತಿಂಗಳು ನಾವು ಏನು ತಯಾರಿ ಮಾಡಿಕೊಳ್ಳಲು ಆಗಲಿಲ್ಲ. ಎಲ್ಲ ಕಡೆಯು ಎಲ್.ಕೆ.ಜಿ ಗೂ ಕೊಡಬೇಕು ಎನ್ನುವ ಕಾಯಿದೆ ಏನು ಇತ್ತು, ಆ ಕಾಯಿದೆಯ ಎಲ್ಲಾ provision ಗಳನ್ನು ನೋಡದೆ ಅದನ್ನು move ಮಾಡಲಾಗಿತ್ತು. ಅದರ ಮೇಲೆ ಸ್ಟೇ ಸಿಕ್ಕಿತು. ಇದರಿಂದ ಎರಡು-ಮೂರು ತಿಂಗಳು ಏನು ಕೆಲಸ ಮಾಡಲು

ಆಗಲಿಲ್ಲ. ಇದು ನಮ್ಮ ಇಲಾಖೆಯ ನ್ಯೂನ್ಯತೆಗಳಿಂದ ಆಗಿರುವುದಲ್ಲ. But subsequent ಆಗಿ ನಮ್ಮ stand ಏನು ಇದೆ, Act ಏನು ಇದೆ, provision ಏನು ಇದೆ, ಅದನ್ನು ಹೈಕೋರ್ಟ್‌ಗೆ convince ಮಾಡಿದ ನಂತರ the stay was vacated. ಈಗ ನಾವು ಕಾಯಿದೆಗೆ ಪೂರಕವಾಗಿ ವಯಸ್ಸನ್ನು specify ಮಾಡಿದ್ದೇವೆ. 06-02-2014 Act ಏನು ಇದೆ ಅದಕ್ಕೆ ಪೂರಕವಾಗಿ ಮಾಡಿದ್ದೇವೆ. ನಾವೇ create ಮಾಡಿರವದಲ್ಲ. ಅದರಲ್ಲಿ ಅವಕಾಶವಿದ್ದರೆ ಬದಲಾವಣೆ ಮಾಡುತ್ತೇವೆ. ಕಾಯಿದೆ ಏನು ಇದೆ ಅದನ್ನು ನಾವು ಅನುಸರಿಸುತ್ತೇವೆ.

(ಮುಂದು)

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಅರಣ್ಯ ಮತ್ತು ಪರಿಸರ ಸಚಿವರಿಂದ ಕ್ರಮ ಕೈಗೊಳ್ಳುವ ಬಗ್ಗೆ ಉತ್ತರವನ್ನು ನಂತರದಲ್ಲಿ ಒದಗಿಸಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಾಳೆ ಕೊನೆ ದಿನ, ಉತ್ತರಗಳು ಬಂದಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಅಜೆಂಡಾದಲ್ಲಿರುವುದನ್ನು ಮೊನ್ನೆ–ನಿನ್ನೆ ತೆಗೆದುಕೊಳ್ಳಲಿಲ್ಲ.

**ಉಪ ಸಭಾಪತಿಯವರು:–** ಶೂನ್ಯವೇಳೆಯ ಉತ್ತರಗಳನ್ನು ಸದನದಲ್ಲಿ ಮಂಡಿಸುವುದು.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಎಸ್.ವಿ. ಸಂಕನೂರು, ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಮತ್ತು ಶ್ರೀ ಎಂ.ಕೆ ಪ್ರಾಣೇಶ್‌ರವರು ದಿನಾಂಕ 3/3/2016ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(4 ಹೇಳಿಕೆಗಳನ್ನು ಲಗತ್ತಿಸಿದೆ)

*ಖಾಸಗಿ ಸದಸ್ಯರ ನಿರ್ಣಯ*

**ಶ್ರೀ ಸಿ.ಹೆಚ್. ವಿಜಯಶಂಕರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ಕ್ಕೆ ಮತ್ತಷ್ಟು ತಿದ್ದುಪಡಿ ತರುವ ವಿಚಾರಕ್ಕೆ ಖಾಸಗಿ ಸದಸ್ಯರ ನಿರ್ಣಯದಲ್ಲಿ ಮಂಡನೆ ಮಾಡಿ ಸಾಕಷ್ಟು ವಿವರವಾಗಿ ಚರ್ಚೆ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಅಭಿಪ್ರಾಯವನ್ನು ಕೇಳಲು ಬಯಸುತ್ತೇನೆ. ನಾನು ಮಂಡಿಸಿರುವ ತಿದ್ದುಪಡಿ ಹಿನ್ನೆಲೆಯಲ್ಲಿ ಸರ್ಕಾರ ಅಭಿಪ್ರಾಯವನ್ನು ವ್ಯಕ್ತ ಮಾಡುವುದಾದರೆ ನನ್ನ ನಿರ್ಣಯವನ್ನು ಮರುಪರಿಶೀಲನೆ ಮಾಡಲು ತಯಾರಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ನಿರ್ಣಯಕ್ಕೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡ, ಸಂಬಂಧಿಸಿದ ಅಧಿನಿಯಮಕ್ಕೆ ಸರ್ಕಾರ ತಿದ್ದುಪಡಿ ತರಲು ತೀವ್ರವಾದ ಕ್ರಮ ಜರುಗಿಸುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹಿಂದೆ ಪಡೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಮಾನ್ಯ ಸಭಾಪತಿಯವರೇ, ಅರಣ್ಯ ಮತ್ತು ಅರಣ್ಯೇತರ ಎಂಬ ಬೇಧವಿಲ್ಲದೇ ಒಟ್ಟಾರೆ ಭೂಪ್ರದೇಶವನ್ನು ಗಮನದಲ್ಲಿಟ್ಟುಕೊಂಡು, ಅರಣ್ಯೇತರ ಎಂದರೆ ಕಂದಾಯ, ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ ಮತ್ತು ನಗರಾಭಿವೃದ್ಧಿ ಇಲಾಖೆಗಳು ಹಾಗೂ ಎಲ್ಲಾ ಸಾರ್ವಜನಿಕ ಸ್ಥಳಗಳು ಅಂದರೆ ಸರ್ಕಾರದ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಲಭ್ಯವಾಗುವ ಭೂಪ್ರದೇಶ ಮತ್ತು ಹಸರೀಕರಣಕ್ಕಾಗಿ ಲಭ್ಯವಿರುವ ಸಂಪನ್ಮೂಲಗಳಲ್ಲಿ ಅಗತ್ಯ ಹಣಕಾಸಿನ ಅನುಕೂಲತೆ ಕಲ್ಪಿಸಿಕೊಂಡು ಅದಕ್ಕೆ ಆದ್ಯತೆ ನೀಡಲು ಮರ ಸಂರಕ್ಷಣಾ ಅಧಿನಿಯಮದಡಿಯಲ್ಲಿ ಸಂಬಂಧಿಸಿದ ಇಲಾಖೆಗಳಿಗೆ ಹೊಣೆಗಾರಿಕೆ ನಿಗದಿಗೊಳಿಸುವುದಲ್ಲದೇ ಸರ್ಕಾರಿ ಕಛೇರಿಗಳ ಆವರಣಗಳಲ್ಲಿ ಲಭ್ಯವಿರುವ ಜಾಗಗಳಲ್ಲಿ ಕಡ್ಡಾಯವಾಗಿ ಸಸಿಗಳನ್ನು ನೆಟ್ಟು ಬೆಳೆಸಲು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರನ್ನಾಗಿಲು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಅಧಿನಿಯಮ 1976ಕ್ಕೆ ಮತ್ತಷ್ಟು ತಿದ್ದುಪಡಿ ತರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಖಾಸಗಿ ನಿರ್ಣಯದ ಮಹತ್ವವನ್ನು ಅರ್ಥಮಾಡಿಕೊಂಡು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಅಧಿನಿಯಮ 1976ಕ್ಕೆ ಮತ್ತಷ್ಟು ತಿದ್ದುಪಡಿ ತರಲು ತನ್ನ ಬದ್ಧತೆ ಹಾಗೂ ಒಪ್ಪಿಗೆಯನ್ನು ಸೂಚಿಸಿರುವ ಹಿನ್ನೆಲೆಯಲ್ಲಿ ನಾನು

ಮಂಡಿಸಿದ ಈ ಖಾಸಗಿ ನಿರ್ಣಯವನ್ನು ಹಿಂದೆ ತೆಗೆದುಕೊಳ್ಳಲು ಬದ್ಧನಾಗಿದ್ದೇನೆಂದು ತಿಳಿಸಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಧನ್ಯವಾದಗಳು.

**ಉಪ ಸಭಾಪತಿಯವರು:-** ಈಗಾಗಲೇ ಸಾಕಷ್ಟು ಸಮಯ ಆಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ನಾನು ಫೈಲ್ ಹೊತ್ತು ಹೊತ್ತು ಸಾಕಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಸೋಲಾರ್ ವಿಷಯದ ಬಗ್ಗೆ 3 ದಿವಸಗಳಿಂದ ತರುತ್ತಿದ್ದೇನೆ. ನಾಳೆ ಈ ವಿಷಯವನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಿ.

**ಶ್ರೀ ರಾಮಚಂದ್ರಗೌಡ:-** ಗಮನ ಸೆಳೆಯುವ ಸೂಚನೆಗಳ ವಿಷಯವನ್ನು ಗಮನ ಸೆಳೆಯುತ್ತೇವೆ, ಅದು ಕೇವಲ ಗಮನ ಸೆಳೆಯುವುದಷ್ಟೇ ಆಗಿದೆ.

**ಉಪ ಸಭಾಪತಿಯವರು:-** ಆ ರೀತಿ ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ನಾವು ಐದಾರು ನೋಟೀಸ್‌ಗಳನ್ನು ಕೊಟ್ಟಿದ್ದು, ಒಂದು ಬಂದಿದೆ, ಅದು ರೀಚ್ ಆಗುತ್ತಿಲ್ಲ. ತಾವು ದಯಮಾಡಿ ನಾಳೆ ತೆಗೆದುಕೊಳ್ಳುತ್ತೀರಾ?

**ಉಪ ಸಭಾಪತಿಯವರು:-** ತಾವು ಹೇಳಿದ ಸಮಸ್ಯೆ ಸಮಯದ ಅಭಾವದಿಂದ ಎಲ್ಲಾ ಸದಸ್ಯರಿಗೂ ಉಂಟಾಗಿದೆ. ಆದರೆ ಈ ದಿನ ಇರುವ ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330ರ ವಿಷಯಗಳನ್ನು ನಾಳೆ ಅಜೆಂಡಾದಲ್ಲಿ ತೆಗೆದುಕೊಳ್ಳುತ್ತೇವೆ. ಅದಕ್ಕೆ ಅವಕಾಶ ಕಲ್ಪಿಸಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಯವರೆಗೆ ಮುಂದೂಡುತ್ತೇನೆ.

**(ಸದನವು ರಾತ್ರಿ 8 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 5 ನೇ ಮಾರ್ಚ್ ಮಾಹೆ 2016ರ ಶನಿವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).**